ಜಮಖಂಡಿಯ ಕೆರೆಗಳು

ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ
ಚರಿತ್ರೆ ಅಧ್ಯಯನ ವಿಷಯದಲ್ಲಿ ಎಂ.ಫಿಲ್. ಪದವಿಗಾಗಿ
ಸಾದರಪಡಿಸಿದ ಸಂಶೋಧನ ಪ್ರಬಂಧ

- ಸಂಶೋಧಕರು -

ಕು. ಉಮಾದೇವಿ ಮ. ಹಂಚಿನಮನಿ
ಎಂ.ಎ.,ಬಿ.ಇಡಿ.

ಜಮಖಂಡಿ. ಜಿ. ಬಾಗಲಕೋಟ

ಮಾರ್ಗದರ್ಶಕರು :

ಡಾ॥ ಎಸ್. ಬಿ. ಬಿದಾದಾರ
ಪಿ.ಎ.,ಪಿ.ಎಚ್.ಡಿ.

ಶ್ರೀ ಬಿ. ಆರ್. ದರೂರ ಸಂಶೋಧನ ಕೇಂದ್ರ,
ಬಾರೂಗೇರಿ. ಜಿ. ಬೆಳಗಾವಿ

ಚರಿತ್ರೆ ವಿಭಾಗ

651-660

660

ಆರ್. ದರೂರ ಸಂಶೋಧನ ಕೇಂದ್ರ,
ಾರೂಗೇರಿ ಜಿ. ಬೆಳಗಾವಿ
ತೆ : ಕನ್ನಡ ವಿಶ್ವವಿದ್ಯಾಲಯ, ಹಂಪಿ

೨೦೦೯

ಪರಾಮರ್ಶೆಗೆ ಮಾತ್ರ

"ಸಿರಿಗನ್ನಡ" ಗ್ರಂಥಾಲಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ಪಿಲಸಿ ೨೭೬

ಶ್ರೀ.ಸಿ.ಕ.ಪ್ರಾಚ್ಯ.

660

AKSHARA GRANTHALAYA
ACC.NO. 130294

660

660

ವಿಶ್ವವಿದ್ಯಾಲಯ ಗ್ರಂಥಾಲಯ,
ಕ ಕ ವಿಶ್ವವಿದ್ಯಾಲಯ, ಹಂಪಿ

ಜಮಖಿಂಡಿಯ ಕೆರೆಗಳು

ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ
ಚರಿತ್ರೆ ಅಧ್ಯಯನ ವಿಷಯದಲ್ಲಿ ಎಂ.ಫಿಲ್. ಪದವಿಗಾಗಿ
ಸಾದರಪಡಿಸಿದ ಸಂಶೋಧನ ಸಂಪ್ರಬಂಧ

ಸಂಶೋಧಕರು

ಕು. ಉಮಾದೇವಿ ಮ. ಹಂಚಿನಮನಿ

ಎಂ.ಎ.,ಬಿ.ಇಡಿ.

ಜಮಖಂಡಿ. ಜಿ. ಬಾಗಲಕೋಟ

ಮಾರ್ಗದರ್ಶಕರು :

ಡಾ॥ ಎಸ್. ಬಿ. ಬಿರಾದಾರ

ಎಂ.ಎ.,ಪಿ.ಎಚ್.ಡಿ.

ಶ್ರೀ ಬಿ. ಆರ್. ದರೂರ ಸಂಶೋಧನ ಕೇಂದ್ರ,
ಹಾರೂಗೇರಿ. ಜಿ. ಬೆಳಗಾವಿ

ಚರಿತ್ರೆ ವಿಭಾಗ

ಅಧ್ಯಯನಾಂಗ

ಶ್ರೀ ಬಿ. ಆರ್. ದರೂರ ಸಂಶೋಧನ ಕೇಂದ್ರ,
ಹಾರೂಗೇರಿ ಜಿ. ಬೆಳಗಾವಿ

ಮಾನ್ಯತೆ : ಕನ್ನಡ ವಿಶ್ವವಿದ್ಯಾಲಯ, ಹಂಪಿ

೨೦೦೯

SS1.48209548?
UMA b

130294

ಘೋಷಣಾ ಪತ್ರ

ಬಾಗಲಕೋಟ ಜಿಲ್ಲೆಯ "ಜಮಖಂಡಿಯ ಕೆರೆಗಳು" ಎಂಬ ಶೀರ್ಷಿಕೆಯ ಸಂಪ್ರಬಂಧವನ್ನು ಡಾ. ಎಸ್. ಬಿ. ಬಿರಾದಾರ ಅವರ ಮಾರ್ಗದರ್ಶನದಲ್ಲಿ ನಾನು ಸಿದ್ಧಪಡಿಸಿದ್ದೇನೆ. ಹಾರೂಗೇರಿಯ ಶ್ರೀ ಬಿ. ಆರ್. ದರೂರ ಸಂಶೋಧನ ಕೇಂದ್ರದ ಮೂಲಕ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಚರಿತ್ರೆ ಅಧ್ಯಯನ ವಿಷಯದಲ್ಲಿ ಎಂ.ಫಿಲ್. ಪದವಿಗಾಗಿ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ನಿಬಂಧವನ್ನು ಈ ಮೊದಲು ಇಡಿಯಾಗಿಯಾಗಲಿ, ಬಿಡಿಯಾಗಿಯಾಗಲಿ ನಾನು ಪ್ರಕಟಿಸಿರುವುದಿಲ್ಲವೆಂದೂ ಹಾಗೂ ಯಾವುದೇ ಪದವಿಗಳಿಗಾಗಿ ಸಲ್ಲಿಸಿರುವುದಿಲ್ಲವೆಂದೂ ಈ ಮೂಲಕ ಪ್ರಮಾಣೀಕರಿಸುತ್ತೇನೆ.

ಸ್ಥಳ : ಹಾರೂಗೇರಿ
ದಿನಾಂಕ :೨೦-೬-೨೦೦೬

ಕು. ಉಮಾದೇವಿ ಮ. ಹಂಚಿನಮನಿ
ಸಂಶೋಧನ ವಿದ್ಯಾರ್ಥಿ
ಶ್ರೀ ಬಿ.ಆರ್. ದರೂರ
ಸಂಶೋಧನ ಕೇಂದ್ರ, ಹಾರೂಗೇರಿ.

ದೃಢೀಕರಣ ಪತ್ರ

ಕು. ಉಮಾದೇವಿ ಮ. ಹಂಚಿನಮನಿ ಇವರು "ಜಮಖಂಡಿಯ ಕೆರೆಗಳು" ಎಂಬ ಶೀರ್ಷಿಕೆಯ ಸಂಪ್ರಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಹಾರೂಗೇರಿಯ ಶ್ರೀ ಬಿ. ಆರ್. ದರೂರ ಸಂಶೋಧನ ಕೇಂದ್ರದ ಮೂಲಕ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಚರಿತ್ರೆ ಅಧ್ಯಯನ ವಿಷಯದಲ್ಲಿ ಎಂ.ಫಿಲ್. ಪದವಿಗಾಗಿ ಸಲ್ಲಿಸುತ್ತಿರುವ ಪ್ರಸ್ತುತ ನಿಬಂಧವನ್ನು ಇವರು ಈ ಮೊದಲು ಇಡಿಯಾಗಿಯಾಗಲಿ, ಬಿಡಿಯಾಗಿಯಾಗಲಿ ಎಲ್ಲಿಯೂ ಪ್ರಕಟಿಸಿಲ್ಲವೆಂದೂ ಯಾವುದೇ ಪದವಿಗಳಿಗಾಗಿ ಸಲ್ಲಿಸಿರುವುದಿಲ್ಲವೆಂದೂ ದೃಢೀಕರಿಸುತ್ತೇನೆ.

ಸ್ಥಳ : ಹಾರೂಗೇರಿ
ದಿನಾಂಕ :೨೦-೬-೨೦೦೬

ಡಾ. ಎಸ್. ಬಿ. ಬಿರಾದಾರ
ಮಾರ್ಗದರ್ಶಕರು,
ಶ್ರೀ ಬಿ. ಆರ್. ದರೂರ ಸಂಶೋಧನ
ಕೇಂದ್ರ, ಹಾರೂಗೇರಿ.
ಜಿ. ಬೆಳಗಾವಿ

ಪರಿವಿಡಿ

ಪುಟ ಸಂಖ್ಯೆ

ಅಧ್ಯಾಯ : ಒಂದು

ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಮತ್ತು ವೈಧಾನಿಕತೆ ೦೧–೦೫

ಅಧ್ಯಾಯ : ಎರಡು ೦೬–೩೬

ಕೆರೆಗಳ ನಿರ್ಮಾಣ ಮತ್ತು ಸಂರಕ್ಷಣೆ

೧. ಕೆರೆಗಳ ಉಗಮ

೨. ವಿವಿಧ ಕಾಲಘಟ್ಟಗಳಲ್ಲಿನ ಕೆರೆಗಳು

* ಪ್ರಾಚೀನ ಕಾಲ –
ಮೌರ್ಯರು, ಶಾತವಾಹನರು, ಕದಂಬರು,
ಗಂಗರು, ಬಾದಾಮಿ ಚಾಲುಕ್ಯರು, ರಾಷ್ಟ್ರಕೂಟರು,
ಕಲ್ಯಾಣದ ಚಾಲುಕ್ಯರು, ಹೊಯ್ಸಳರು

* ಮಧ್ಯಯುಗೀನ ಕಾಲ

* ಬ್ರಿಟಿಷರ ಕಾಲ ಮತ್ತು ಅನಂತರ ಕಾಲ (ಆಧುನಿಕ ಕಾಲ)

೩. ಕೆರೆಗಳ ನಿರ್ಮಾಪಕರು

೪. ಕೆರೆಗಳನ್ನು ನಿರ್ಮಿಸಲು ಬೇಕಾದ ಮುಖ್ಯ ಅಂಶಗಳು

೫. ಕೆರೆಗಳ ವರ್ಗೀಕರಣ

೬. ಕೆರೆಗಳ ಮುಖ್ಯ ಭಾಗಗಳು

* ಕೆರೆಯ ಏರಿ

* ತೂಬುಗಳು

* ಕೋಡಿ

* ಕಾಲುವೆಗಳು

* ಕೆರೆಯ ತಳ

* ಜಲಾನಯನ ಪ್ರದೇಶ

* ಅಚ್ಚು ಕಟ್ಟು ಪ್ರದೇಶ

೭ ಕೆರೆಗಳ ಸಂರಕ್ಷಣಾ ಕ್ರಮಗಳು

ಅಧ್ಯಾಯ : ಮೂರು ೩೭–೬೩

ಜಮಖಂಡಿಯ ಕೆರೆಗಳು

೧. ಕಟ್ಟಿಕೆರೆ

೨. ಕುಂಬಾರ ಕೆರೆ (ಮಾದಪ್ಪನ ಕೆರೆ)

೩. ಲಕ್ಕಣ ಕೆರೆ

೪. ಆನೆ ಕೆರೆ (ಅಗಸರ ಕೆರೆ)

೫. ರಾಮತೀರ್ಥ ಕೆರೆ

೬ ಗಾಣಗಿತ್ತಿ ಕೆರೆ

೭ ಗುಳ್ಳವನ ಕೆರೆ

* ಜಮಖಂಡಿ ಕೆರೆಯ ಇಂದಿನ ಸ್ಥಿತಿ–ಗತಿಗಳು

ಪುಟ ಸಂಖ್ಯೆ

ಅಧ್ಯಾಯ : ನಾಲ್ಕು ೬೪–೭೯

ಕೆರೆಗಳ ವಿವಿಧ ಆಯಾಮಗಳು

* ಸಾಮಾಜಿಕ
* ಧಾರ್ಮಿಕ
* ಸಾಂಸ್ಕೃತಿಕ
* ಆರ್ಥಿಕ
* ರಾಜಕೀಯ

ಅಧ್ಯಾಯ : ಐದು ೮೦–೮೩

ಸಮಾರೋಪ

ಅಧ್ಯಾಯ – 1

ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಮತ್ತು ವೈಧಾನಿಕತೆ

ಅಧ್ಯಾಯ – 1

ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಮತ್ತು ವೈಧಾನಿಕತೆ

ಪಿಠೀಕೆ :

ಯಾವುದೇ ಪ್ರದೇಶದ ಇತಿಹಾಸದ ಸರಿಯಾದ ಅರಿವು ಪಡೆಯಬೇಕಾದರೆ ಮುಖ್ಯವಾಗಿ ಆ ಪ್ರದೇಶದಲ್ಲಿರುವ ಕೆಲವು ಅಂಶಗಳ ಕುರಿತಾಗಿ ಅಧ್ಯಯನ ಮಾಡಬೇಕಾಗುತ್ತದೆ. ಇಂತಹ ಅಧ್ಯಯನವೊಂದನ್ನು ಮಾಡಲು ಜಮಖಂಡಿಯ ಕೆರೆಗಳ ಇತಿಹಾಸವನ್ನು ತಿಳಿಯಲು ಬೇಕಾದ ಮೂಲ ಇತಿಹಾಸದ ಅಧ್ಯಯನವನ್ನು ತಿಳಿಯುವ ಪ್ರಯತ್ನವನ್ನು ಈ ಪ್ರಬಂಧದಲ್ಲಿ ಮಾಡಲಾಗಿದೆ.

ಕೆರೆಯಂ ಕಟ್ಟಿಸು ಬಾವಿಯಂ ಸವೆಸು ದೇವಾಗಾರಂ ಮಾಡಿಸ।
ಜ್ಜೆರೆಯೊಳ್ಸಿಲ್ಕಿದನಾಥರಂ ಬಿಡಿಸು ಮಿತ್ರರ್ಗ್ಗಿಂಬುಕೆಯ್ ನಂಬಿದ।
ರ್ಗ್ಗೆರೆವೆಟ್ಟಾಗಿರು ಶಿಷ್ಟರಂ ಪೊರೆಯೆನುತ್ತಿಯೆಂತೆಲ್ಲವಂ ಪಿಂದೆ ತಾ।
ಯೇರೆದಳ್ವಾಲೇರೆವಂದು ತೊಟ್ಟು ಕಿವಿಯೊಳಂ ಲಕ್ಷ್ಮೀಧರಾಮಾತ್ಯಾನಾ॥

ಈ ಮೇಲಿನ ಉಲ್ಲೇಖಿತ ಪದ್ಯವನ್ನು ವಿಜಯನಗರ ಅರಸ ಪ್ರೌಢಪ್ರತಾಪ ದೇವರಾಯನ ಮಂತ್ರಿ ಲಕ್ಷ್ಮೀಧರನು ಕೂಸಾಗಿದ್ದಾಗ ಅವನ ತಾಯಿ ಹಾಡಿ ಹಾಲೆರೆಯುತ್ತಿದ್ದಳೆಂದು ಹಂಪೆಯ ಕಡಲೆಕಾಳು ಗಣೇಶನ ಗುಡಿಯ ಮುಂದಿನ ಅಗಸೆಯಲ್ಲಿರುವ ಶಾಸನವು ತಿಳಿಸುತ್ತದೆ[೧]. ಇದರಿಂದ ನಮಗೆ ಮುಖ್ಯವಾಗಿ ತಿಳಿದುಬರುವುದೆನೆಂದರೆ, ಮಧ್ಯಕಾಲೀನ ಭಾರತದಲ್ಲಿ ನೀರಾವರಿ ವ್ಯವಸ್ಥೆ, ಕೆರೆಯನ್ನು ಕಟ್ಟಿಸುವುದು, ಬಾವಿಗಳನ್ನು ತೋಡಿಸುವುದು ಅತಿ ಮುಖ್ಯವಾದ ಕೆಲಸವಾಗಿತ್ತೆಂದು ಸ್ಪಷ್ಟವಾಗಿ ತಿಳಿದು ಬರುತ್ತದೆ.

ಭಾರತದಲ್ಲಿ ಪ್ರಾಗೈತಿಹಾಸಿಕ ಕಾಲದಿಂದ ಮುಖ್ಯವಾಗಿ ತಮಿಳುನಾಡಿನಲ್ಲಿ ಕಂಡುಬರುವ ಬೃಹತ್ ಶಿಲಾಯುಗ ಸಂಸ್ಕೃತಿಯ ಕಾಲಘಟ್ಟದಿಂದ ಕೆರೆಯನ್ನು ಕಟ್ಟಿಸಿ ಜಲಸಂಗ್ರಹಿಸಿಕೊಂಡು ಅದರಿಂದ ವ್ಯವಸಾಯ ಮಾಡಿಕೊಂಡಿರುತ್ತಿದ್ದರು ಎಂಬುದನ್ನು ಪುರಾತತ್ವ ಶೋಧಗಳಿಂದ ತಿಳಿಯಬಹುದು. ಅನೇಕ ಪ್ರಾಚೀನ ಕೆರೆಗಳು ಇಂದಿಗೂ ಸಹ ಅತ್ಯಂತ ಸಮರ್ಪಕವಾಗಿ ಬಳಕೆಯಾಗುತ್ತಲಿವೆ. ಈ ಕಾರ್ಯ ಶತಮಾನಗಳಿಂದ ಸತತವಾಗಿ ಸಾಗುತ್ತಲೇ ಬಂದಿದೆ. ಅನೇಕ ಪ್ರಾಚೀನ ಕೆರೆಗಳು ಇಂದಿಗೂ ಸಹ ಅತ್ಯಂತ ಸಮರ್ಪಕವಾಗಿ ಪ್ರಾಚೀನ ಕಾಲದ ಕೆರೆ ನೀರಾವರಿಯ ಬಗ್ಗೆ ಅನೇಕ ಸಂಶೋಧನೆಗಳು ನಡೆಯುತ್ತಲಿವೆ. ಮುಖ್ಯವಾಗಿ ಕರ್ನಾಟಕದಲ್ಲಿರುವ ಪ್ರಮುಖ ಕರೆಗಳ ಕುರಿತಂತೆ ಹಲವಾರು ಗ್ರಂಥಗಳು ಹೊರಬಂದಿದ್ದು ಅವುಗಳ ಆಧಾರವಾಗಿಟ್ಟುಕೊಂಡು ಜಮಖಂಡಿಯ ಕೆರೆಗಳ ಕುರಿತಾದ ಮಹತ್ವದ

---

೧. 'ಹಂಪಿ ಪರಿಸರದ ಕೆರೆಗಳು' – ಸಿ. ಎಸ್. ವಾಸುದೇವನ್

ವಿಷಯಗಳನ್ನು ತಿಳಿಸುವ ಪ್ರಯತ್ನವನ್ನು ಈ ಪ್ರಬಂಧದಲ್ಲಿ ಮಾಡಲಾಗಿದೆ.

ಕೆರೆಗಳು ನೀರಾವರಿಗೆ ಮತ್ತು ಕುಡಿಯಲು ಹಾಗೂ ದನಕರುಗಳಿಗೆ ಅನುಕೂಲವಾಗಿವೆ. ಆದಿ ಇತಿಹಾಸದ ಕೆಲವು ಮುಖ್ಯ ಶಾಸನಗಳು ಕೆರೆಗಳನ್ನು ಕುರಿತು ಹಾಗೂ ಅವುಗಳಿಂದಾಗುವ ಉಪಯೋಗಗಳನ್ನು ಕುರಿತು ಉಲ್ಲೇಖಿಸುತ್ತವೆ. ಈ ಮೇಲೆ ತಿಳಿಸಿದ ವಿಷಯಕಷ್ಟೇ ಕೆರೆಗಳು ಮಹತ್ವದ ಪಾತ್ರವನ್ನು ವಹಿಸದೆ, ಜನರಿಗೆ ಇನ್ನೂ ಅತ್ಯವಶ್ಯಕ ಸೇವೆಗಳನ್ನು ಮಾಡುತ್ತಿವೆ. ಅವುಗಳೆಂದರೆ ಪ್ರವಾಹ ನಿಯಂತ್ರಣ, ಬರದ ಹತೋಟಿ, ಭೂಮಿಯೊಳಗಿನ ನೀರಿನ ಅಂತರ್ಜಲ ಮಟ್ಟದ ಹೆಚ್ಚಳ, ಮೀನುಗಾರಿಕೆ, ನೆರವು ಹಾಗೂ ಪರಿಸರದ ಶುಚಿತ್ವವನ್ನು ಕಾಪಾಡುತ್ತದೆ.

ಇತ್ತೀಚಿನ ದಿನಗಳಲ್ಲಿ ನದಿಗಳಿಂದ, ಕಾಲುವೆಗಳಿಂದ, ಕೆರೆ ನೀರಾವರಿ ಪ್ರದೇಶವು ಇಳಿಮುಖವಾಗುತ್ತಲಿವೆ. ಇದರಿಂದ ಕೆರೆಗಳ ನಿರ್ಮಾಣ ಸಂಖ್ಯೆಯ ಪ್ರಮಾಣವು ಕಡಿಮೆಯಾಗುತ್ತಿದೆ. ಇಂತಹ ಒಂದು ವ್ಯವಸ್ಥೆಯಲ್ಲಿ ಜಮಖಂಡಿಯ ಉತ್ತರ ಭಾಗದಲ್ಲಿ ಕೃಷ್ಣಾನದಿ ಮತ್ತು ದಕ್ಷಿಣಕ್ಕೆ ಘಟಪ್ರಭಾ ನದಿಗಳು ಹರಿಯುತ್ತಿದ್ದರೂ ಸಹ ಜಮಖಂಡಿ ನಗರದಲ್ಲಿ ಕೆರೆಗಳು ನಿರ್ಮಾಣಗೊಂಡಿರುವುದು ಕೆರೆಗಳ ಅಧ್ಯಯನಕ್ಕೆ ಇನ್ನಷ್ಟು ಅವಕಾಶವನ್ನು ಉಂಟುಮಾಡಿವೆ ಎಂದರೆ ತಪ್ಪಾಗಲಾರದು. ನಗರದ ಜನರಿಗೆ ಕೆರೆಗಳಿಂದ ಆಗುತ್ತಿರುವ ಉಪಯೋಗಗಳೇನು, ಎಂಬುದನ್ನು ತಿಳಿಯುವ ಉದ್ದೇಶದಿಂದ ಈ ಪ್ರಬಂಧದಲ್ಲಿ ಪ್ರತ್ಯೇಕವಾಗಿ ಜಮಖಂಡಿಯ ಕೆರೆಗಳ ಅಧ್ಯಯನವನ್ನು ಕೈಗೊಳ್ಳಲಾಗಿದೆ.

ಅಧ್ಯಯನದ ಉದ್ದೇಶ :

ಇತಿಹಾಸದಲ್ಲಿ ನಾವು ಅಧ್ಯಯನ ಮಾಡಬೇಕಾದರೆ ಹಲವಾರು ಆಧಾರಗಳು ಇತಿಹಾಸದ ಅಧ್ಯಯನಕ್ಕೆ ಸಹಾಯಮಾಡುತ್ತವೆ. ಅಂತೆಯೇ ಪ್ರಬಂಧದಲ್ಲಿ ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ಕೆರೆಗಳ ಇತಿಹಾಸದ ಅಧ್ಯಯನಕ್ಕೆ ಹಾಗೂ ಕೆರೆಗಳ ಪ್ರಾಮುಖ್ಯತೆಯನ್ನು ತಿಳಿಯಲು ನಮಗೆ ಹಲವಾರು ಶಾಸನಗಳು ಸಹಾಯಕವಾಗಿವೆ. ಈ ಶಾಸನಗಳ ಆಧಾರದ ಮೇಲೆ ಕೆರೆಗಳ ಕುರಿತಾದ ಹೊಸ ಸಂಗತಿಗಳನ್ನು ಬೆಳಕಿಗೆ ತರುವುದೇ ಈ ಅಧ್ಯಯನದ ಉದ್ದೇಶವಾಗಿದೆ. ಕರ್ನಾಟಕ ರಾಜ್ಯಾದ್ಯಂತ ಇಂದು ಸಾವಿರಾರು ಕೆರೆಗಳಿದ್ದು ಅವುಗಳ ಸಂಪೂರ್ಣ ಇತಿಹಾಸವನ್ನು ಕೆಲವು ಶಾಸನಗಳು ತಿಳಿಸುತ್ತವೆ. ಭಾರತದಲ್ಲಿ ಕೂಡ ಹಲವಾರು ಕೆರೆಗಳೂ ಕಂಡುಬರುತ್ತವೆಯಾದರೂ ಅವುಗಳ ಸಂಖ್ಯೆ ದಕ್ಷಿಣ ಭಾರತದಲ್ಲಿಯೇ ಹೆಚ್ಚಾಗಿವೆ. ಉತ್ತರ ಭಾರತವು ಹಿಮಾಲಯ ಪರ್ವತ ಶ್ರೇಣಿಗಳಿಂದ ಕೂಡಿದ್ದು, ಹಲವಾರು ನದಿಗಳ ಉಗಮ ಸ್ಥಾನಗಳಾಗಿವೆ. ಇದರಿಂದ ವರ್ಷವಿಡೀ ನದಿಗಳು ತುಂಬಿ ಹರಿಯುತ್ತಿರುವುದರಿಂದ ಅಲ್ಲಿ ನೀರಿನ ಸಂಗ್ರಹದ ಅವಶ್ಯಕತೆ ಕಂಡಿಬರುವುದಿಲ್ಲ. ದಕ್ಷಿಣ ಭಾರತದಲ್ಲಿ ಒಣ ಪ್ರದೇಶವೇ ಹೆಚ್ಚಾಗಿದ್ದು ನೀರಿನ ಸಂಗ್ರಹದ ಅವಶ್ಯಕತೆ ಹೆಚ್ಚಾಗಿರುವುದರಿಂದ ಇಲ್ಲಿ ಕೆರೆ, ಬಾವಿಗಳು ಹೆಚ್ಚಾಗಿ ಕಂಡುಬರುತ್ತವೆ. ಆದರೆ ಇತ್ತೀಚಿನ ದಿನಗಳಲ್ಲಿ ಕೆರೆಗಳ ರಕ್ಷಣೆಯಿಲ್ಲದೆ ಶಿಥಿಲವಾಗುತ್ತಿರುವುದಕ್ಕೆ ಕಾರಣವನ್ನು ತಿಳಿಯುವ ಉದ್ದೇಶವನ್ನು ಇಲ್ಲಿ ಮಾಡಲಾಗಿದೆ. ಕೆರೆಗಳಿಂದ ನೀರಾವರಿ ಬೆಳವಣಿಗೆ ಹಾಗೂ ಅವನತಿಗಳನ್ನು ಗುರುತಿಸುವುದು ಈ ಅಧ್ಯಯನದ ಉದ್ದೇಶವಾಗಿದೆ. ಈ ಅಧ್ಯಯನದಲ್ಲಿ ಕೆರೆಗಳ ರಚನೆ, ಅವುಗಳ ಜೀರ್ಣೋದ್ಧಾರ, ಜಲನಿರ್ವಹಣೆ ಹಾಗೂ ಅವುಗಳ ನಿರ್ಮಾಣದ ಹಣಕಾಸು ಪರಿಸ್ಥಿತಿಗಳ ಸಮಸ್ಯೆಗಳನ್ನು ನಮ್ಮ ಜನತೆ ಹೇಗೆ ಎದುರಿಸಿದರು ಎಂಬುದನ್ನು

ತಿಳಿಯುವ ಉದ್ದೇಶದಿಂದಲೇ ಈ ಅಧ್ಯಯನವನ್ನು ಕೈಗೊಳ್ಳಲಾಗಿದೆ.

ಇತ್ತೀಚೆಗೆ ಸರ್ಕಾರ ಹೊಸ ಕೆರೆಗಳನ್ನು ಕಟ್ಟಲು ಹಾಗೂ ಹಳೆಯ ಕೆರೆಗಳನ್ನು ಜೀರ್ಣೋದ್ಧಾರ ಮಾಡಲು ಪ್ರಯತ್ನಿಸುತ್ತಿವೆ. ಆದರೆ ಆ ಪ್ರಯತ್ನಗಳು ಇಂದಿನ ಜನರಿಗೆ ಬೇಕಾಗುವ ನೀರಿನ ಮೂಲ ಸೌಕರ್ಯಗಳ ಬಳಕೆಗೆ ಸಾಲದಾಗದು. ಹಿಂದೆ ಕೆರೆಗಳ ನಿರ್ಮಾಣ ಬಹುತೇಕ ಖಾಸಗಿ ಉದ್ಯಮವಾಗಿದ್ದು ಇದರ ಮೇಲುಸ್ತುವಾರಿಯನ್ನು ಗ್ರಾಮ ಸಮುದಾಯವೇ ನೋಡಿಕೊಳ್ಳುತ್ತಿತ್ತು. ಅದರಿಂದ ಉದ್ಯಮದಾರನಿಗೆ ಕೆರೆಯ ಆಯಕಟ್ಟಿನಲ್ಲಿ ಭೂಮಿ ಪ್ರತಿಫಲವಾಗಿ ಸಿಗುತ್ತಿತ್ತು. ಉದ್ಯಮದಾರನಿಗೆ ತನ್ನ ಸ್ವಂತಕ್ಕೆ ಹಾಗೂ ತನ್ನ ವಂಶಕ್ಕೆ ಸಿಗುವ ಲಾಭದ ಪ್ರೇರಣೆಯಿಂದಾಗಿ ಫಲಾನುಭವಿಗಳಿಗೆ ತೃಪ್ತಿಕರವಾಗುವಂತೆ ಗ್ರಾಮ ಸಮುದಾಯ ತನ್ನ ಅಧಿಕಾರಿಗಳ ಮೂಲಕ ನೀರನ್ನು ಹಂಚಲಾಗುತ್ತಿತ್ತು. ಇಂತಹ ಎಲ್ಲ ಹಳೆಯ ಪದ್ದತಿಗಳನ್ನು ನಾವು ಇಂದು ಅಧ್ಯಯನ ಮಾಡಬೇಕಾಗಿದೆ. ಈ ಪದ್ದತಿಯು ಇಂದಿಗೂ ಜಾರಿಯಲ್ಲಿ ಇದೆಯೋ ಅಥವಾ ಕಣ್ಮರೆಯಾಗಿದೆಯೋ ಎಂಬುದನ್ನು ತಿಳಿಯುವ ಉದ್ದೇಶದಿಂದ ಕೆರೆಗಳ ಅಧ್ಯಯನವನ್ನು ಕೈಗೊಳ್ಳಲಾಗಿದೆ. ಕೆರೆಗಳ ಅಧ್ಯಯನದಲ್ಲಿ ನಾವು ಇತಿಹಾಸ ಪೂರ್ವದಿಂದ ನಮ್ಮ ಕಾಲದವರೆಗಿನ ಕೆರೆಗಳ ಒಂದು ಚಾರಿತ್ರಿಕ ಅಧ್ಯಯನವನ್ನು ಮಾಡಬಹುದು. ಕೆರೆಗಳು ಪ್ರಾಚೀನ ಕಾಲದಿಂದ ವಿಜಯನಗರ ಕಾಲದವರೆಗೆ ಹಾಗೂ ಬ್ರಿಟಿಷರ ಕಾಲ ಮತ್ತು ನಂತರದ ಕಾಲಗಳಲ್ಲಿ ರಚನೆಗೊಂಡ ಪ್ರಮುಖ ಕೆರೆಗಳನ್ನು ಹಾಗೂ ಅವುಗಳ ಉಪಯೋಗ ಕುರಿತು ಮತ್ತು ನೀರಾವರಿ ಸೌಲಭ್ಯಗಳ ಅಭಿವೃದ್ದಿಗೆ ಕೆರೆಗಳ ಕೊಡುಗೆ ಎನೆಂಬುದನ್ನು ತಿಳಿಯುವುದು ಇದರ ಉದ್ದೇಶವಾಗಿದೆ. ಕೆರೆಗಳನ್ನು ಬಿಟ್ಟರೆ ನೀರಾವರಿಗೆ ಹಾಗೂ ಜನರಿಗೆ ಬೇರೆ ಯಾವುದಾದರೂ ಪರ್ಯಾಯ ವ್ಯವಸ್ಥೆಗಳು ಇದೆಯೇ? ಎಂಬುದನ್ನು ತಿಳಿಯಬೇಕಾಗಿದೆ. ಈ ಅಧ್ಯಯನದಲ್ಲಿ ನಮ್ಮ ಮುಖ್ಯ ಗಮನ ಇರುವುದು ಕೆರೆಗಳ ಬಗ್ಗೆ, ಕರ್ನಾಟಕ, ಆಂಧ್ರಪ್ರದೇಶ, ಮತ್ತು ತಮಿಳುನಾಡುಗಳಲ್ಲಿ ಈಗಲೂ ಸಾವಿರಾರು ಕೆರೆಗಳಿವೆ. ಆದರೆ ಅವು ಇಂದು ಪರಿಣಾಮರಹಿತವಾಗಿಬಿಟ್ಟಿವೆ. ಅವುಗಳ ಸಂರಕ್ಷಣೆಯ ಸಾಂಪ್ರದಾಯಿಕ ವಿಧಾನಗಳು ಶಿಥಿಲವಾಗಿರುವುದಕ್ಕೆ ಕಾರಣಗಳು ಹಾಗೂ ಇತ್ತಿಚೀನ ಸರ್ಕಾರಗಳು ಹೊಸ ಕೆರೆಗಳನ್ನು ಕಟ್ಟಲು ಪ್ರಯತ್ನಿಸುತ್ತಿರುವುದನ್ನು ತಿಳಿಯಬಹುದಾಗಿದೆ.

ಕೆರೆಗಳ ಇತಿಹಾಸದ ಅಧ್ಯಯನದಿಂದ ಕೆರೆಗಳ ರಚನೆ ಹಾಗೂ ಜೀರ್ಣೋದ್ಧಾರ ಕಾರ್ಯದಲ್ಲಿ ಫಲಾನುಭವಿಗಳನ್ನು, ಪಂಚಾಯತಿಗಳನ್ನು ಸೇರಿಸಿಕೊಳ್ಳದೆ ಹೋದಲ್ಲಿ ಸಮಸ್ಯೆಯನ್ನು ಬಿಡಿಸುವುದು ಅಸಾಧ್ಯ. ಈ ಅಧ್ಯಯನದಲ್ಲಿ ಮುಂದೆ ಸಾಗುವ ಮೊದಲ ನಮ್ಮ ನೀರಾವರಿ ಸೌಲಭ್ಯಗಳ ಅಭಿವೃದ್ದಿಗೆ ಕೆರೆಗಳ ಕೊಡುಗೆಗಳನ್ನು ತಿಳಿಯಬೇಕಾಗಿದೆ. ಅದರಂತೆ ಜಮಖಂಡಿ ನಗರದ ಅಭಿವೃದ್ಧಿಗೆ ಕೆರೆಗಳ ಕೊಡುಗೆಗಳನ್ನು ತಿಳಿಯಬೇಕಾಗಿದೆ. ಜಮಖಂಡಿ ನಗರದ ಉತ್ತರ ಮತ್ತು ದಕ್ಷಿಣಕ್ಕೆ ಕೃಷ್ಣಾ ಹಾಗೂ ಘಟಪ್ರಭಾ ನದಿಗಳು ಇವೆಯಾದರೂ ಜಮಖಂಡಿ ನಗರದಲ್ಲಿ ಕೆರೆಗಳ ಪಾತ್ರವೇನು?, ಅವುಗಳ ನಿರ್ಮಾಣ ಅಂದಿನ ಕಾಲದಲ್ಲಿ ಎಷ್ಟು ಅವಶ್ಯಕ, ಅದರಿಂದ ಜನರಿಗೆ ಎಷ್ಟರ ಮಟ್ಟಿಗೆ ಉಪಯೋಗವಾಗುತ್ತಿವೆ ಎಂಬುದನ್ನು ತಿಳಿಯುವುದು ಈ ಅಧ್ಯಯನದ ಉದ್ದೇಶವಾಗಿದೆ. ಜಮಖಂಡಿಯ ಕೆರೆಗಳು ಕೇವಲ ಅವಶೇಷವಾಗಿ ಉಳಿಯದೇ, ವಿಶೇಷವಾಗಿ ಮುಂದಿನ ಪೀಳಿಗೆಗೂ ಸದುಪಯೋಗವಾಗಲಿ ಎಂದುದೇ ಈ ಅಧ್ಯಯನದ ಉದ್ದೇಶವಾಗಿದೆ. ಜನರು ಕೆರೆಗಳ ಉಪಯೋಗ ಪಡೆದುಕೊಳ್ಳುತ್ತಿದ್ದಾರೆ. ಆದರೆ ಇತ್ತೀಚೆಗೆ ಅವುಗಳ ಕಣ್ಮರೆಯಾಗುತ್ತಿರಲು ಕಾರಣಗಳನ್ನು ಕಂಡುಕೊಳ್ಳುವ

ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ.

ಅಧ್ಯಯನದ ವ್ಯಾಪ್ತಿ :

ಪ್ರಸ್ತುತ ಜಮಖಂಡಿ ಕೆರೆಗಳ ಈ ಕಿರು ಮಹಾಂಪ್ರಬಂಧವು ಕೆರೆಗಳ ನಿರ್ಮಾಣದ ಕುರಿತು, ಕೆರೆಗಳ ಉಗಮ, ವಿವಿಧ ಕಾಲಘಟ್ಟಗಳಲ್ಲಿರುವ ಕೆರೆಗಳ ಸ್ಥಿತಿಗತಿಯವರೆಗೆ ಈ ಅಧ್ಯಯನದ ವ್ಯಾಪ್ತಿ ಹರಡಿಕೊಂಡಿದೆ. ಅಷ್ಟೇ ಅಲ್ಲದೇ ಪ್ರತ್ಯೇಕವಾಗಿ ಜಮಖಂಡಿ ನಗರದ ಪ್ರಮುಖ ಕೆರೆಗಳ ಅಧ್ಯಯನಕ್ಕೆ ಇದರ ವ್ಯಾಪ್ತಿಯನ್ನು ಸೀಮಿತಗೊಳಿಸಲಾಗಿದೆ. ಈ ಪ್ರಬಂಧದ ಅಧ್ಯಯನದಲ್ಲಿ ಜಮಖಂಡಿ ನಗರದ ಭೌಗೋಳಿಕ ಪ್ರದೇಶಗಳನ್ನು ಪರಿಶೀಲನೆ ಕೈಗೊಂಡು ಅಧ್ಯಯನ ಮಾಡಲಾಗಿದೆ. ಭೌಗೋಳಿಕ ಪ್ರದೇಶಗಳ ಅಧ್ಯಯನ ಕೆರೆಗಳ ಅಧ್ಯಯನದಲ್ಲಿ ಎಷ್ಟರಮಟ್ಟಿಗೆ ಸಹಾಯಕವಾಗಿವೆ ಎಂಬ ಹಿನ್ನಲೆಯಲ್ಲಿ ಅಧ್ಯಯನದ ವ್ಯಾಪ್ತಿಯನ್ನು ಸೀಮಿತಗೊಳಿಸಲಾಗಿದೆ.

ಕ್ರಿ.ಶ. ೧೮೭೪ ರ ಕಾಲಾವಧಿಯಲ್ಲಿ ಜಮಖಂಡಿಯ ಸಂಸ್ಥಾನಿಕರಾದ ರಾಮಚಂದ್ರರಾವ್ ಅಪ್ಪಾಸಾಹೇಬರ ಕಾಲಾವಧಿಯಲ್ಲಿ ನಿರ್ಮಾಣಗೊಂಡಂತಹ ಕೆರೆಗಳು ಹಾಗೂ ಅವರ ಕಾಲಾವಧಿಯಲ್ಲಿ ರಚನೆಗೊಂಡ ಕೆರೆಗಳ ಅಧ್ಯಯನ, ಹಾಗೂ ಅವರ ಕಾಲಾವಧಿಯ ನಂತರದಲ್ಲಿ ರಚನೆಗೊಂಡ ಕೆರೆಗಳ ಅಧ್ಯಯನ ಹಾಗೂ ಆ ಕೆರೆಗಳು ಜಮಖಂಡಿ ನಗರದ ಜನತೆಗೆ ಆಗುತ್ತಿದ್ದ ಮತ್ತು ಈಗಲೂ ಆಗುತ್ತಿರುವ ಉಪಯೋಗವನ್ನು ತಿಳಿಯಬಹುದಾಗಿದೆ. ಈ ಅಧ್ಯಯನದ ವ್ಯಾಪ್ತಿ ಕೇವಲ ಕೆರೆಗಳ ನಿರ್ಮಾಣ, ಉಪಯೋಗಕ್ಕೆ ಮಾತ್ರ ಸೀಮಿತವಾಗಿರದೇ ಅವುಗಳ ದುರಸ್ತಿ ಹಾಗೂ ಸಂರಕ್ಷಣೆ ಮಾಡುವ ವಿಧಾನದವರೆಗೂ ಈ ಅಧ್ಯಯನದ ವ್ಯಾಪ್ತಿಯನ್ನು ವಿಸ್ತರಿಸಲಾಗಿದೆ.

ಅಧ್ಯಯನದ ಸ್ವರೂಪ :

ಪ್ರಸ್ತುತ ಈ ಕಿರುಪ್ರಬಂಧವು ಐದು ಅಧ್ಯಾಯಗಳನ್ನು ಒಳಗೊಂಡಿದೆ. ಅವುಗಳಲ್ಲಿ ಮುಖ್ಯವಾಗಿ ಜಮಖಂಡಿ ಕೆರೆಗಳ ಸಂಪೂರ್ಣ ಅಧ್ಯಾಯನವನ್ನು ಕೈಗೊಂಡು ಅವುಗಳ ಇತಿಹಾಸವನ್ನು ತಿಳಿಸಕೊಡುವುದಾಗಿದೆ. ಮೊದಲ ಅಧ್ಯಾಯದಲ್ಲಿ ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಮತ್ತು ಕೆರೆಗಳ ಇತಿಹಾಸ ತಿಳಿಯಲು ಮಾಹಿತಿ ಸಂಗ್ರಹಿಸಿದ ಅಧ್ಯಯನದ ವೈಧಾನಿಕತೆಯನ್ನು ತಿಳಿಸಲಾಗಿದೆ. ಕಾರ್ಯಕ್ಷೇತ್ರವನ್ನು ಕೈಗೊಂಡು ಅಧ್ಯಯನವನ್ನು ಇಲ್ಲಿ ಪ್ರಸ್ತಾಪಿಸಲಾಗಿದೆ.

ಪ್ರಬಂಧದ ಎರಡನೇ ಅಧ್ಯಾಯದಲ್ಲಿ ಕೆರೆಗಳ ಉಗವು, ಕೆರೆಗಳ ನಿರ್ಮಾಣ, ಕೆರೆಂತು ಲಕ್ಷಣಗಳು, ಕೆರೆಗಳ ನಿರ್ಮಾಪಕರು, ಕೆರೆಗಳಿಗೆ ಇರುವ ವಿವಿಧ ಹೆಸರುಗಳು, ಕೆರೆಗಳ ಮುಖ್ಯ ಭಾಗಗಳು ಹಾಗೂ ಕೆರೆಗಳ ಉಪಂಯೋಗ ಮತ್ತು ಕೆರೆ ನೀರಾವರಿ ವ್ಯವಸ್ಥೆಯ ಸಂಕ್ಷಿಪ್ತ ಇತಿಹಾಸದ ಅಧ್ಯಯನವನ್ನು ಇಲ್ಲಿ ಅಭ್ಯಸಿಸಬಹುದಾಗಿದೆ. ಪ್ರಾಚೀನ ಕಾಲದಿಂದ ಆಧುನಿಕ ಕಾಲ ಘಟ್ಟದವರೆಗೆ ರಚನೆಗೊಂಡ ಕೆರೆಗಳು ಹಾಗೂ ಏಕೆ ಕೆರೆಗಳನ್ನು ನಿರ್ಮಿಸುತ್ತಿದ್ದರು, ಮತ್ತು ಇತ್ತೀಚೆಗೆ ಕೆರೆಗಳ ಸಂಖ್ಯಾ ಪ್ರಮಾಣ ಇಳಿಮುಖವಾಗುತ್ತಿರಲು ಕಾರಣಗಳನ್ನು ಇದರಲ್ಲಿ ಕಂಡುಕೊಳ್ಳಬಹುದಾಗಿದೆ.

ಮೂರನೇ ಅಧ್ಯಾಯದಲ್ಲಿ ಪ್ರತ್ಯೇಕವಾಗಿ ಜಮಖಂಡಿಯ ಕೆರೆಗಳ ಬಗ್ಗೆ ಅಧ್ಯಯನ ಮಾಡಲಾಗಿದೆ. ಜಮಖಂಡಿಯ ರಾಮಚಂದ್ರರಾವ್ ಅಪ್ಪಾಸಾಹೇಬರ ಕಾಲಾವಧಿಯಲ್ಲಿ ರಚನೆಗೊಂಡ ಹಾಗೂ ಪೂರ್ವದಲ್ಲಿದ್ದಂತಹ ಮತ್ತು ನಂತರ ಕಾಲದಲ್ಲಿ ರಚನೆಗೊಂಡ ಕೆರೆಗಳ ಬಗ್ಗೆ ಹಾಗೂ ಅವುಗಳ ಉಪಯೋಗದ ಬಗ್ಗೆ ವಿವರಿಸಲಾಗಿದೆ. ಕೆರೆಗಳು ಅಂದಿನ ಸಂಸ್ಥಾನಿಕರು ನಿರ್ಮಿಸಿದ ಕೆರೆಗಳು ಜನತೆಗೆ ಹೇಗೆ ಪ್ರಯೋಜನಕಾರಿಯಾಗಿದ್ದವು ಎಂಬುದನ್ನು ತಿಳಿಸುವ ಪ್ರಯತ್ನವನ್ನು ಈ ಅಧ್ಯಯನದಲ್ಲಿ ಮಾಡಲಾಗಿದೆ.

ನಾಲ್ಕನೇ ಅಧ್ಯಾಯದಲ್ಲಿ ಕೆರೆಗಳು ಚಾರಿತ್ರಿಕವಾಗಿ, ಸಾಮಾಜಿಕವಾಗಿ, ಆರ್ಥಿಕವಾಗಿ, ರಾಜಕೀಯ ಹಾಗೂ ಸಾಂಸ್ಕೃತಿಕವಾಗಿ ಹೇಗೆ ಪ್ರಾಮುಖ್ಯತೆಯನ್ನು ಪಡೆದಿವೆ. ಮತ್ತು ಈ ಎಲ್ಲ ಕ್ಷೇತ್ರಗಳಲ್ಲಿ ಕೆರೆಗಳ ಪಾತ್ರವೇನು ಎಂಬುದನ್ನು ವಿಸ್ತಾರವಾಗಿ ಈ ಅಧ್ಯಾಯದಲ್ಲಿ ವಿವರಿಸಲಾಗಿದೆ.

ಇನ್ನೂ ಕೊನೆಯದಾಗಿ ಐದನೇ ಅಧ್ಯಾಯದಲ್ಲಿ ಒಟ್ಟಾರೆಯಾಗಿ ಈ ಮೇಲಿನ ಎಲ್ಲ ನಾಲ್ಕು ಅಧ್ಯಾಯಗಳ ಒಟ್ಟು ಫಲಿತಾಂಶಗಳ ಸಂಕ್ಷಿಪ್ತ ರೂಪವನ್ನು ಇದರಲ್ಲಿ ಕಂಡುಕೊಳ್ಳಲಾಗಿದೆ. ಹೀಗೆ ಪ್ರಸ್ತುತ ಈ ಸಂಶೋಧನಾ ಅಧ್ಯಯನವು ಕೆರೆಗಳ ಉಗಮದಿಂದ ಹಿಡಿದು ಅವುಗಳು ಕಣ್ಮರೆಯಾಗುತ್ತಿರುವ ಇಂದಿನ ಅವುಗಳ ಸ್ಥಿತಿ-ಗತಿಗಳವರೆಗಿನ ಸಂಕ್ಷಿಪ್ತ ಇತಿಹಾಸವನ್ನು ತಿಳಿಸಿದೆ. ಈ ಎಲ್ಲ ಐದು ಅಧ್ಯಾಯವನ್ನು ಒಳಗೊಂಡ ಈ ಕಿರು ಮಹಾಪ್ರಬಂಧವು ಕೆರೆಗಳ ಕುರಿತ ಮಾಹಿತಿಯನ್ನು ಒದಗಿಸುತ್ತವೆ.

ಅಧ್ಯಯನದ ವೈಧಾನಿಕತೆ :

ಇತಿಹಾಸ ಅಧ್ಯಯನ ಮಾಡುವುದು ಸುಲಭವಲ್ಲ ಆದರೆ ಅಧ್ಯಯನ ಕೈಗೊಳ್ಳಬೇಕಾದರೆ ಹಲವಾರು ವಿಧಿ ವಿಧಾನಗಳನ್ನು ಅಳವಡಿಸಿಕೊಂಡು ಅಭ್ಯಸಿಸಬೇಕಾಗುತ್ತದೆ. ಅಧ್ಯಯನದ ಪ್ರಾಥಮಿಕ ಮೂಲ ಆಕರಗಳನ್ನು ಹಾಗೂ ಅನುಷಂಗಿಕ ಆಕರಗಳನ್ನು ಸಂಗ್ರಹಿಸಬೇಕು. ಇತಿಹಾಸದ ಅಧ್ಯಯನದ ವಿಧಾನವು ಹಲವು ಅಧ್ಯಯನವನ್ನು ಕೈಗೊಳ್ಳಬೇಕಾದರೆ ಎಲ್ಲವೂ ಇತಿಹಾಸದ ವ್ಯಾಪ್ತಿಗೆ ಒಳಪಡುವುದಿಲ್ಲ. ಆದ್ದರಿಂದ ಇತಿಹಾಸದ ಹಾದಿಯನ್ನು ಸುಗಮಪಡಿಸಿಕೊಳ್ಳಬೇಕಾದರೆ ಅಧ್ಯಯನಕ್ಕೆ ಅನೇಕ ವೈಧಾನಿಕತೆಯ ಅಂಶಗಳನ್ನು ಸೇರ್ಪಡೆ ಮಾಡಿಕೊಳ್ಳಬೇಕು. ಇತಿಹಾಸದ ಅಧ್ಯಯನವಾಗಬೇಕಾದರೆ ಶಾಸನಗಳ ಕೃತಿಗಳ ಆಧಾರವಾಗಿ ಅಧ್ಯಯನ ಮಾಡದೇ ಕ್ಷೇತ್ರ ಕಾರ್ಯದ ಮೂಲಕ ಮಾಹಿತಿ ಸಂಗ್ರಹಿಸಿ ಅಧ್ಯಯನ ಮಾಡಬೇಕಾಗುತ್ತದೆ. ಇಂತಹ ಕ್ಷೇತ್ರಕಾರ್ಯವನ್ನು ಇಲ್ಲಿ ಕೈಗೊಳ್ಳಲಾಗಿದೆ.

ಅಧ್ಯಯನವನ್ನು ಕೈಗೊಳ್ಳುವಾಗ ನಾವು ಕೈಗೊಂಡ ವಿಷಯದ ಕುರಿತು ಸಂಪೂರ್ಣ ಮಾಹಿತಿಯನ್ನು ವಿವಿಧ ವೈಧಾನಿಕತೆಗೆ ಒಳಪಡಿಸಿ ಅಂದರೆ, ಶಾಸನಗಳು, ಯಾವ ಅರಸರ ಕಾಲಾವಧಿಯಲ್ಲಿ ರಚಿತವಾದವುಗಳು ಎಂಬ ಮಾಹಿತಿ ಸಂಗ್ರಹಿಸುವುದು. ನಕ್ಷೆಗಳ ಬಗ್ಗೆ ತಿಳಿದುಕೊಂಡು ಪುರಾತತ್ವ ಶೋಧನೆಗೆ ಒಳಪಡಿಸಿ ಅಧ್ಯಯನ ಕೈಗೊಂಡು ವಿಷಯದ ಇತಿಹಾಸವನ್ನು ಬೆಳಕಿಗೆ ತರುವುದೇ ಇದರ ಒಂದು ಮಹತ್ವದ ಅಂಶವಾಗಿದೆ. ಈ ಅಧ್ಯಯನವನ್ನು ಮೇಲ್ಕಂಡ ವಿಧಾನದ ಚೌಕಟ್ಟಿನೊಳಗಡೆ ಸಂಯೋಜಿಸಲಾಗಿದೆ. ಕೆರೆಗಳ ಅಧ್ಯಯನಕ್ಕಾಗಿ ಕ್ಷೇತ್ರ ಕಾರ್ಯವನ್ನು ಕೈಗೊಂಡು ಮಾಹಿತಿ ಸಂಗ್ರಹಿಸಿ ಹಲವಾರು ವೈಧಾನಿಕತೆಯನ್ನು ಅಳವಡಿಸಿಕೊಂಡು ಕೆರೆಗಳ ಸಮಗ್ರ ಮಾಹಿತಿಯನ್ನು ತಿಳಿಸುವ ಪ್ರಯತ್ನ ಮಾಡಲಾಗಿದೆ.

ಅಧ್ಯಾಯ – 2

ಕೆರೆಗಳ
ನಿರ್ಮಾಣ ಮತ್ತು ಸಂರಕ್ಷಣೆ

ಅಧ್ಯಾಯ – 2

ಕೆರೆಗಳ ನಿರ್ಮಾಣ ಮತ್ತು ಸಂರಕ್ಷಣೆ

ಕೆರಗಳ ಉಗಮ :

ಮಾನವನ ಉಗಮ ಮತ್ತು ವಿಕಾಸದ ಸುದೀರ್ಘ ಇತಿಹಾಸವನ್ನು ಗಮನಿಸಿದಾಗ ನಮಗೆ ತಿಳಿಯುವ ವಿಷಯವೆನೇಂದರೆ, ಮಾನವ ತನ್ನ ಪೂರ್ವಜರ ಕಾಲದಿಂದಲೂ ಭೌತಿಕವಾಗಿ ಹಾಗೂ ಮಾನಸಿಕವಾಗಿ ವಿಕಾಸ ಹೊಂದುವುದರೊಂದಿಗೆ ಪರಿಸರದಲ್ಲಿ ಆಗುತ್ತಿರುವ ಕಠಿಣ ಸಮಸ್ಯೆಗಳನ್ನು ಸಹ ಎದುರಿಸುತ್ತಾ ಬಂದಿದ್ದಾನೆ. ಮಾನವನ ಎಲ್ಲ ಬಗೆಯ ಶಿಲಾಯುಗದ ಚಟುವಟಿಕೆಗಳ ಕಾರ್ಯಕ್ಷೇತ್ರವು ಸರೋವರ, ಕೆರೆ, ನದಿ, ತೊರೆಗಳ ಸಮೀಪದಲ್ಲಿಯೇ ಕೇಂದ್ರಿಕೃತವಾಗಿತ್ತು. ಸರಿಸುಮಾರು ಇಂದಿನಿಂದ ಏಳು ಸಾವಿರ ವರ್ಷಗಳ ಪೂರ್ವದಲ್ಲಿ ಮಾನವ ತನ್ನ ಅಲೆಮಾರಿ ಜೀವನವನ್ನು ಬಿಟ್ಟು ಒಂದೇ ಸ್ಥಳದಲ್ಲಿ ನಿರಂತರವಾಗಿ ಇರಲು ಪ್ರಾರಂಭಿಸಿದ ಕಾಲಘಟ್ಟವನ್ನು ಅಧ್ಯಯನ ಮಾಡಿದಾಗ ದಿನದಿಂದ ದಿನಕ್ಕೆ ಒಂದೆಡೆ ಮಾನವನು ಸ್ಥಿರವಾಗಿ ನೆಲೆ ನಿಲ್ಲುವಂತಹ ಪ್ರಯತ್ನವು ಅವನ ಜೀವನದಲ್ಲಿ ಬಂದದ್ದು ವ್ಯವಸಾಯದಿಂದಲೇ ಈ ವ್ಯವಸಾಯ ಪದ್ಧತಿಯು ಅವನ ಜೀವನದಲ್ಲಿ ಒಂದು ಕ್ರಮಬದ್ಧತೆಯನ್ನು ತಂದಿತು. ಮಾನವನ ಸರ್ವತೋಮುಖ ಅಭಿವೃದ್ಧಿ ಮತ್ತು ವಾಣಿಜ್ಯ ವ್ಯವಹಾರಗಳೆಲ್ಲವೂ ವ್ಯವಸಾಯದ ಆವಿಷ್ಕಾರದಿಂದಲೇ ಪ್ರಾರಂಭವಾಯಿತು. ಒಂದು ಸಂಸ್ಕೃತಿಯ ಉಗಮ ಮತ್ತು ವಿಕಾಸಕ್ಕೆ ವ್ಯವಸಾಯವು ತಳಹದಿಯಾಯಿತು.

ಮಾನವನು ಮೊದಲಿಗೆ ವ್ಯವಸಾಯವನ್ನು ಪ್ರಾರಂಭಿಸಿದಾಗ ಅವನು ಮಳೆಯನ್ನೇ ನಂಬಿದ. ವಿಪುಲವಾಗಿ ನೀರು ಸಿಗುವ ಜಾಗವಾಗಿದ್ದ ನದಿಯನ್ನು ಆಶ್ರಯಿಸಿದ್ದನು. ಪರಿಸರದಲ್ಲಿ ಆಗುತ್ತಿದ್ದ ಬದಲಾವಣೆಗಳು ಮತ್ತು ಸಕಾಲದ ವೈಫಲ್ಯತೆಯು ಅವನನ್ನು ಆಗಾಗ ಕಷ್ಟಕ್ಕೆ ಒಳಪಡಿಸುತ್ತಿದ್ದರಿಂದ ಅವನು ನೀರನ್ನು ಸಂಗ್ರಹಮಾಡಿ ಉಪಯೋಗ ಮಾಡಿಕೊಳ್ಳಹತ್ತಿದ. ವರ್ಷದ ಕೆಲವು ಮಾಸಗಳಲ್ಲಿ ನೀರನ್ನು ಸಂಗ್ರಹಿಸಿಕೊಂಡು ಅಗತ್ಯವಿದ್ದಾಗ ಅತ್ಯಂತ ಸಮರ್ಪಕವಾಗಿ ಬಳಸಿಕೊಳ್ಳತೊಡಗಿದನು. ಇಂತಹ ಕೃತಕ ಸಂಗ್ರಾಹಕಗಳೇ ಕೆರೆಗಳು ಮತ್ತು ಕುಂಟೆಗಳು. ಕೆರೆಗಳ ನಿರ್ಮಾಣದಿಂದ ಮಾನವ ತನಗೆ ಬೇಕೆಂದಾಗ ನೀರನ್ನು ಉಪಯೋಗಿಸಿಕೊಂಡು ವ್ಯವಸಾಯ ಮಾಡತೊಡಗಿದನು. ಈ ಬಗೆಯ ಕೆರೆಗಳ ನಿರ್ಮಾಣ ಕಾರ್ಯದ ಪ್ರಯತ್ನವನ್ನು ನವಶಿಲಾಯುಗ ಕಾಲದ ಆರಂಭದಿಂದಲೂ ಕಾಣಬಹುದು. ಮಳೆಯ ನೀರನ್ನು ಸಂಗ್ರಹಿಸಿ ಹೆಚ್ಚುತ್ತಿರುವ ಜನಸಂಖ್ಯೆಗೆ ಅನುಗುಣವಾಗಿ ಆಹಾರ ಪೂರೈಕೆಯಲ್ಲಿ ಹೆಚ್ಚುವರಿ ಭೂ ಭಾಗಗಳನ್ನು ವ್ಯವಸಾಯಕ್ಕೆ ಒಳಪಡಿಸಿಕೊಂಡು ಹೆಚ್ಚು ವ್ಯವಸಾಯ ಕ್ಷೇತ್ರಕ್ಕೆ ನೀರನ್ನು ಕೃತಕ ಮೂಲವಾದ ಕೆರೆಗಳಿಂದ ಪೂರೈಸಿಕೊಳ್ಳುತ್ತಿದ್ದನು.

ಈಜಿಪ್ಟ್ ದೇಶದಲ್ಲಿ ದೊರೆತಿರುವ ರೇಖಾ ಚಿತ್ರಗಳಲ್ಲಿ ಮಾನವನು ನೀರನ್ನು ಸಂಗ್ರಹಿಸಿ ಬಳಸಿಕೊಂಡಿರುವುದನ್ನು ಚಿತ್ರಿಸಲಾಗಿದೆ. ಇದರಿಂದಾಗಿ ಈಜಿಪ್ಟ್ ಜಗತ್ತಿನ ರಾಷ್ಟ್ರಗಳಲ್ಲಿಯೇ ಮೊಟ್ಟ ಮೊದಲಿಗೆ ಕೆರೆಗಳನ್ನು ನಿರ್ಮಿಸಿ, ಈ ನೀರಾವರಿ ಪದ್ಧತಿ ಅಳವಡಿಸಿಕೊಂಡು ವ್ಯವಸಾಯ ಮಾಡುತ್ತಿರುವ ದೇಶವಾಗಿದೆ ಎಂದು ಭಾವಿಸಲಾಗಿದೆ. ಈಜಿಪ್ಟಿಯನ್ನರು ಮೊಟ್ಟಮೊದಲಿಗೆ ಕೆರೆ ನೀರಾವರಿ ಪದ್ಧತಿಯನ್ನು ಬೆಳಕಿಗೆ ತಂದರೆಂದು ಪುರಾತತ್ವದ ಅಭಿಪ್ರಾಯವಾಗಿದೆ. ಭಾರತವು ಸಹ ಈಜಿಪ್ಟ್‌ನಷ್ಟೇ ಪ್ರಾಚೀನತೆಯನ್ನು ಹೊಂದಿರುವ ದೇಶವಾಗಿದ್ದು ಸಿಂಧೂ ನದಿಕೊಳ್ಳದ ಸಂಸ್ಕೃತಿಯ ಜನರು ಮಾಡಿಕೊಂಡಿರುವ ನೀರಿನ ವ್ಯವಸ್ಥೆಯು ನಿಜಕ್ಕೂ ಶ್ಲಾಘನೀಯ. ಸಿಂಧೂ ಕೊಳ್ಳದ ಸಂಸ್ಕೃತಿಯ ಅನೇಕ ನೆಲೆಗಳಲ್ಲಿ ಇಂತಹ ನೀರಾವರಿ ವ್ಯವಸ್ಥೆಯ ಪುರಾವೆಗಳು ದೊರಕಿವೆ.

ನದಿಗಳು ಹಾಗೂ ಸರೋವರಗಳು ಮಾನವನ ಅಗತ್ಯಗಳಿಗೆ ನೀರನ್ನು ಒದಗಿಸುವ ಪ್ರಾಥಮಿಕ ಮೂಲಗಳು. ಆದರೂ ಯಾವುದೇ ನಿರ್ದಿಷ್ಟ ಸಮಯದಲ್ಲೂ ಇವು ಭೂಮಿಯಲ್ಲಿ ಸಿಗುವ ನೀರಿನ ಶೇಕಡಾ ಒಂದಕ್ಕಿಂತ ಕಡಿಮೆಯಷ್ಟು ಪ್ರಮಾಣದವು. ಇಂಥ ಅಲ್ಪ ಸಂಪನ್ಮೂಲದ ನಿರ್ವಹಣೆಯ ಸಮಸ್ಯೆಯಿಂದಾಗಿ, ಮಳೆಯ ಏರುಪೇರಿನಿಂದ ಎಷ್ಟೋ ಸಲ ನಮಗೆ ಅಗತ್ಯವಿದ್ದಾಗ ಅತಿ ಕಡಿಮೆ, ಹಾಗೂ ಅಗತ್ಯವಿಲ್ಲದಿದ್ದಾಗ ಅತಿ ನೀರು ಬರುತ್ತದೆ. ಹೀಗೆ ನೆರೆ ಮತ್ತು ಬರ ಎಂದಿನಿಂದಲೂ ಇರುವ ಸಮಸ್ಯೆಗಳಾಗಿದ್ದು ಇತ್ತೀಚಿನ ವರ್ಷಗಳಲ್ಲಿ ಜನಸಂಖ್ಯೆ ಹೆಚ್ಚಳದಿಂದ ಹಾಗೂ ಅರಣ್ಯ ನಾಶದಿಂದ ಅವು ಇನ್ನೂ ತೀವ್ರವಾಗಿವೆ. ಇಂತಹ ಸಮಸ್ಯೆಗಳನ್ನು ನಿವಾರಿಸಲು ನೀರನ್ನು ಸಂಗ್ರಹಿಸಿಡುವುದು ಅನಿವಾರ್ಯವಾದಾಗ ಕೊಳ, ಕೆರೆ, ಹಾಗೂ ಭಾರಿ ಜಲಾಶಯಗಳು ನಿರ್ಮಾಣಗೊಂಡವು.

ಪ್ರಾಚೀನ ಕಾಲದಲ್ಲಿ ಪ್ರಾಣಿಗಳ ಹೆಜ್ಜೆ ಗುರುತುಗಳಿಂದಾದ ತಗ್ಗು ಭಾಗದಲ್ಲಿ ನೀರು ಸಂಗ್ರಹವಾಗಿದ್ದು ಕೆಲವೊಮ್ಮೆ ಮಾನವರಿಗೆ ಅಲ್ಲಿಯ ನೀರು ಉಪಯೋಗಕ್ಕೆ ಬಂದಾಗ ಮಾನವನಿಗೆ ತಗ್ಗಾದ ಪ್ರದೇಶಗಳಲ್ಲಿ ನೀರನ್ನು ಸಂಗ್ರಹಿಸಿಕೊಳ್ಳಬಹುದು ಎಂಬುದನ್ನು ತಿಳಿದುಕೊಂಡು ಕೆರೆಗಳನ್ನು ನಿರ್ಮಿಸುವ ಕಾರ್ಯವನ್ನು ಕೈಗೊಂಡನು. ಹೀಗೆಯೇ ಕೆರೆಗಳು ನಿರ್ಮಾಣಗೊಂಡವು ಎಂದು ಹೇಳಬಹುದು.

ಕರ್ನಾಟಕದಲ್ಲಿ ಅತ್ಯಧಿಕವಾಗಿ ಕೆರೆಗಳು ಏಕೆ ನಿರ್ಮಾಣಗೊಂಡವು ಎಂಬುದನ್ನು ಪರಿಶೀಲಿಸಿದಾಗ ಇಂದಿನ ಹವಾಮಾನವು ಅನೇಕ ಶತಮಾನಗಳಿಂದ ಬದಲಾವಣೆಗೊಳ್ಳುತ್ತಲೇ ಬಂದಿದೆ. ಇದರಿಂದಾಗಿ ಉತ್ತರ ಕರ್ನಾಟಕದ ಕೆಲವು ಭಾಗಗಳು ಸಾಕಷ್ಟು ಮಳೆಯನ್ನು ಪಡೆಯುತ್ತಿರಲಿಲ್ಲವಾದ್ದರಿಂದ ಕೆರೆ, ಕುಂಟೆ, ಕಾಲುವೆಗಳನ್ನು ನಿರ್ಮಿಸಲಾಯಿತು. ಇದರೊಂದಿಗೆ ಬೆಳೆಯುತ್ತಿರುವ ಜನಸಂಖ್ಯೆಗೆ ಅನುಗುಣವಾಗಿ ಆಹಾರವನ್ನು ಪೂರೈಸುವ ಸಲುವಾಗಿ ಹೆಚ್ಚುವರಿ ಭೂಮಿಯನ್ನು ಕೃಷಿಗೆ ಒಳಪಡಿಸಲಾಯಿತು. ಇವುಗಳಿಗೆ ನೀರನ್ನು ಪೂರೈಸಲು ಕೃತಕ ಜಲಸಂಗ್ರಾಹಕಗಳಾದ ಕೆರೆಗಳು ಹೆಚ್ಚು ನಿರ್ಮಾಣಗೊಂಡವು. ಹಾಗೆಯೇ ಹೆಚ್ಚು ಬಳಕೆಗೆ ಬಂದವು. ದಕ್ಷಿಣ ಭಾರತದಲ್ಲಿ ಸಾಮಾನ್ಯವಾಗಿ ಅದೂ ಕರ್ನಾಟಕದಲ್ಲಿ ವಿಶೇಷವಾಗಿ ಕೆರೆ ನೀರಾವರಿಯ ಮೂಲವನ್ನು ಇತಿಹಾಸ ಪೂರ್ವ ಮಾನವನಲ್ಲಿ ಗುರುತಿಸಬಹುದು. ಬೆಟ್ಟದ ಇಳಿಜಾರಿನಿಂದ

ಹರಿದು ಬರುವ ನೀರನ್ನು ಕಣಿವೆಗಳಲ್ಲಿ ಅಡ್ಡಗಟ್ಟಿ ಸಂಗ್ರಹಿಸಿಕೊಳ್ಳುತ್ತಿದ್ದರು. ಹೀಗೆ ಮೇಲಿನ ಅನೇಕ ವಿಧಗಳಿಂದ ಕೆರೆಗಳು ಉಗಮಗೊಂಡವು.

ಈಗಾಗಲೇ ವಿವರಿಸಿದಂತೆ ಪುರಾತನ ಕಾಲದಿಂದಲೂ ಈ ದೇಶದಲ್ಲಿ ವಿವಿಧ ಗಾತ್ರದ ಕೆರೆಗಳನ್ನು ನಿರ್ಮಿಸಿ ಅವುಗಳಿಂದ ಭೂ ಸಾಗುವಳಿ ಮಾಡುತ್ತಲೇ ಬಂದಿದ್ದಾರೆ. ಅದರಲ್ಲಿಯೂ ದಕ್ಷಿಣ ಭಾರತವು ಭೌಗೋಳಿಕ ಪರಿಸರದಿಂದಾಗಿ ಬೇಸಾಯದ ಅವಶ್ಯಕತೆಗಳನ್ನು ಪೂರೈಸಿಕೊಳ್ಳಲು ಕೆರೆ ನೀರಾವರಿ ವ್ಯವಸ್ಥೆಯನ್ನು ಅವಲಂಬಿಸಬೇಕಾಯಿತು. ಕೆರೆಗಳ ಗಾತ್ರವು ಅದು ಹೊಂದಿದ ಭೌಗೋಳಿಕ ಪರಿಸರವನ್ನೇ ಅವಲಂಬಿಸಿತ್ತು. ಅನೇಕ ಅರಸು ಮನೆತನಗಳ ಕಾಲಾವಧಿಗಳಲ್ಲಿ ಆಡಳಿತಗಾರರು ನೂತನ ಕೆರೆಗಳನ್ನು ನಿರ್ಮಿಸಿದರಲ್ಲದೆ, ಹಳೆಯ ಹಾಗೂ ಒಡೆದ ಹೋದ ಕೆರೆಗಳ ಪುನರ್ ನಿರ್ಮಾಣವನ್ನು ಕೈಗೆತ್ತಿಕೊಂಡರು. ಏಕೆಂದರೆ ಅಂದಿನ ಮಾನವೀಯ ಅವಶ್ಯಕತೆಗಳನ್ನು ಈ ಕೆರೆಗಳು ಪೂರೈಸುತ್ತಿದ್ದವು. ಇದರಿಂದ ನಾವು ಗಮನಿಸಬೇಕಾದ ಮತ್ತೊಂದು ವಿಷಯವೆಂದರೆ ಅಂದಿನ ದಿನಗಳಲ್ಲಿ ಜನಸಂಖ್ಯೆಯ ಸಮಸ್ಯೆ, ಔದ್ಯೋಗಿಕರಣ, ಪರಿಸರ ಮಾಲಿನ್ಯ, ಮುಂತಾದ ಸಮಸ್ಯೆಗಳಿರದೇ ಇದ್ದುದರಿಂದ ಕೆರೆಗಳಲ್ಲಿ ಶೇಖರಿಸಿದ ನೀರನ್ನು ಕುಡಿಯಲು, ಬಟ್ಟೆ ಒಗೆಯಲು, ಸ್ನಾನ ಮಾಡಲು ಮುಂತಾದ ಕಾರ್ಯಗಳಿಗೆ ಉಪಯೋಗಿಸಲಾಗುತ್ತಿತ್ತು. ಹೀಗಾಗಿ ಕೆರೆಗಳು ಮಾನವರ ಜೀವನದಲ್ಲಿ ಪ್ರಮುಖ ಸ್ಥಾನ ಪಡೆದಿದ್ದವು. ಅಲ್ಲದೆ ಪ್ರತಿಯೊಂದು ಹಳ್ಳಿಯಲ್ಲೂ ಕೆರೆಗಳ ಬಗೆಗೆ ಶಿಲಾಶಾಸನ, ತಾಮ್ರಪಟ ಶಾಸನಗಳು ವಿಪುಲವಾಗಿ ದೊರೆಯುತ್ತವೆ. ಹಾಗೂ ಹಲವಾರು ಗ್ರಂಥಗಳಲ್ಲಿಯೂ ಸಹ ನಾವು ಕೆರೆಗಳ ಉಲ್ಲೇಖಗಳನ್ನು ಕಾಣಬಹುದು.

ಶುಕ್ರನು ರಚಿಸಿದ ಗ್ರಂಥ "ಶುಕ್ರನೀತಿ", ಸೋಮೇಶ್ವರನ "ಮಾನಸೋಲ್ಲಾಸ", "ಪದ್ಮ ಪುರಾಣ" ಗಳಲ್ಲಿ ಕೆರೆಗಳ ಉಲ್ಲೇಖವನ್ನು ಕಾಣಬಹುದು. ಅದಿ ಇತಿಹಾಸ ಕಾಲದ ಕೆಲವು ಮುಖ್ಯ ಶಾಸನಗಳು ಕೆರೆಗಳನ್ನು ಕುರಿತು ಉಲ್ಲೇಖಿಸುತ್ತವೆ. ಶಾಸನಗಳು ಕೆರೆಯ ಕುರಿತು ಸಂಪೂರ್ಣ ಮಾಹಿತಿಯನ್ನು ನೀಡುತ್ತದೆ. ಕೆರೆಗಳ ಮಾಹಿತಿಯನ್ನು ಅರಿಯಲು ಶಾಸನಗಳು ಸಹಕಾರಿಯಾಗಿವೆ. ಕೆಲವು ಶಾಸನಗಳಲ್ಲಿ ಕೆರೆಗಳ ಬಗೆಗಿನ ಹಲವಾರು ಪರ್ಯಾಯ ಪದಗಳನ್ನು ಪ್ರಸ್ತಾಪಿಸಿದ್ದನ್ನು ಕಾಣಬಹುದು. ಅವುಗಳೆಂದರೆ, ಕಟ್ಟೆ, ಕೆರೆ, ಕುಂಟೆ, ಕೊಳ, ಕೊಳಂ, ಸಮುದ್ರ, ಸರೋವರ, ಏರಿ, ತಟಾಕ, ಕಾಲುವೆ, ತೀರ್ಥ, ಡೋಣೆ, ಮದಗ ಇತ್ಯಾದಿ. ಕೆರೆಯನ್ನು ವಿಶೇಷವಾಗಿ ದನಕರುಗಳಿಗಾಗಿಂಯೇ ನಿರ್ಮಿಸುತ್ತಿದ್ದರಿಂದ ಗೋಕಟ್ಟೆಯೆಂತಲೂ ಕರೆಯುವರು. ಇಂತಹ ಗೋಕಟ್ಟೆಗಳ ನಿರ್ಮಾಣವನ್ನು ನಾವು ಕೆಲವು ಪ್ರದೇಶಗಳಲ್ಲಿ ಕಾಣಬಹುದು. ಪ್ರಾಚೀನ ಕಾಲದಿಂದಲೂ ಕೆರೆಗಳನ್ನು ಬೇರೆ ಬೇರೆ ಹೆಸರುಗಳಿಂದ ಕರೆಯಲಾಗುತ್ತಿದ್ದು ಅವುಗಳ ಉಲ್ಲೇಖವನ್ನು ಕೆಲವು ಶಾಸನಗಳಲ್ಲಿ ನಾವು ಕಾಣಬಹುದು. ಇದರಿಂದ ಕೆರೆಗಳು ಪ್ರಾಚೀನ ಕಾಲದಿಂದಲೂ ಇವತ್ತೀನವರೆಗೂ ಕೆರೆಗಳು ನಮ್ಮ ಕಣ್ಮುಂದೆ ಇರುವುದನ್ನು ಕಾಣಬಹದು.

ವಿವಿಧ ಕಾಲಘಟ್ಟಗಳಲ್ಲಿನ ಕೆರೆಗಳು :

ಪ್ರಾಚೀನ ಕಾಲ :

ಪ್ರಾಚೀನ ಕರ್ನಾಟಕದಲ್ಲಿ ಅಂದರೆ ಇತಿಹಾಸ ಪೂರ್ವ ಕಾಲದ ಕೆರೆಗಳನ್ನು ನಿರ್ಮಾಣ ಮಾಡುತ್ತಿರುವ ದೊರೆಗಳು ನೀರಾವರಿ ಅಭಿವೃದ್ಧಿಯಲ್ಲಿ ದೊರೆಗಳು, ಅಧಿಕಾರಿಗಳು ಹಾಗೂ ಪ್ರಜೆಗಳು

ವಹಿಸಿದ ಪಾತ್ರವನ್ನು ಪರಾಮರ್ಶಿಸಲಾಗಿದೆ. ದಕ್ಷಿಣ ಭಾರತದಲ್ಲಿಯೇ ಹೆಚ್ಚಾಗಿ ಕೆರೆಗಳು ನಿರ್ಮಾಣಗೊಳ್ಳಲು ಕಾರಣಗಳನ್ನು ಈಗಾಗಲೇ ಹಿಂದಿನ ಅಧ್ಯಾಯದಲ್ಲಿ ಕಂಡುಕೊಂಡಿದ್ದೇವೆ. ದಕ್ಷಿಣ ಭಾರತದಲ್ಲಿ ಅದರಲ್ಲೂ ಕರ್ನಾಟಕದಲ್ಲಿ ವಿಶೇಷವಾಗಿ ಕೆರೆ ನೀರಾವರಿಯ ಮೂಲವನ್ನು ಇತಿಹಾಸ ಪೂರ್ವದ ಕಾಲದಲ್ಲಿ ಗುರುತಿಸಬಹುದು. ಇತಿಹಾಸ ಪೂರ್ವದಲ್ಲಿ ಮಾನವನು ವ್ಯವಸಾಯ ಮಾಡುವುದನ್ನು ತಿಳಿದಿದ್ದನಾದರೂ ಮಳೆಯ ನೀರನ್ನು ಸಂಗ್ರಹಿಸಿ ಬಳಕೆ ಮಾಡುವುದನ್ನು ಕಲಿತಿದ್ದು ಇತ್ತೀಚೆಗೆ ಆದರೆ ಅವರ ಸಂಖ್ಯೆ ಹೆಚ್ಚಿದಂತೆ ಮೂಲ ಸ್ಥಳಕ್ಕಿಂತ ಕಡಿಮೆ ಮಳೆ ಆಗುವ ಸ್ಥಳಗಳಿಗೂ ವಲಸೆ ಹೋಗಬೇಕಾಯಿತು. ಆಗ ಆತ ಮಳೆ ಅತ್ಯಲ್ಪವಾಗುವ ಅಥವಾ ಮಳೆಯು ಬಾರದಂಥ ಕಾಲದಲ್ಲಿ ತನ್ನ ಅಗತ್ಯವನ್ನು ಪೂರೈಸಿಕೊಳ್ಳಲು ಮಳೆ ನೀರನ್ನು ಕೂಡಿಡುವ ತಂತ್ರವನ್ನು ಬೆಳೆಸಿಕೊಂಡ. ಇದರಿಂದ ಸಣ್ಣ ಪ್ರಮಾಣದ ಕೆರೆಗಳು ನಿರ್ಮಾಣಗೊಳ್ಳತೊಡಗಿದವು. ತಾವು ವಾಸಿಸುವ ಸ್ಥಳವನ್ನು ಆರಿಸಿಕೊಂಡು ಬೆಟ್ಟದ ಇಳಿಜಾರಿನಿಂದ ಹರಿದು ಬರುವ ಮಳೆ ನೀರನ್ನು ಸಂಗ್ರಹಿಸಿ ಕೆರೆಗಳನ್ನು ನಿರ್ಮಾಣ ಮಾಡತೊಡಗಿದ.

ಪ್ರಾಚೀನ ಕಾಲದಲ್ಲಿರುವ ಅನೇಕ ಅರಸು ಮನೆತನಗಳು ಆಳ್ವಿಕೆ ನಡೆಸಿರುವುದನ್ನು ಕಾಣಬಹುದು. ಅವುಗಳ ಆಳ್ವಿಕೆಯಲ್ಲಿ ರಚಿತವಾದ ಹಲವು ಕೆರೆಗಳ ಒಂದು ಮಾಹಿತಿಯನ್ನು ಈ ಅಧ್ಯಾಯದಲ್ಲಿ ನೋಡಬಹುದಾಗಿದೆ. ಪ್ರಾಚೀನ ಕಾಲದ ಅರಸು ಮನೆತನಗಳಾದ ಮೌರ್ಯರು, ಶಾತವಾಹನರು, ಕದಂಬರು, ಗಂಗರು, ಬಾದಾಮಿ ಚಾಲುಕ್ಯರು, ರಾಷ್ಟ್ರಕೂಟರು, ಕಲ್ಯಾಣ ಚಾಲುಕ್ಯರು, ಹೊಯ್ಸಳರ ಕಾಲಗಳಲ್ಲಿ ರಚನೆಯಾಗಿದ್ದ ಪ್ರಮುಖ ಕೆರೆಗಳನ್ನು ಈ ಅಧ್ಯಯನದಲ್ಲಿ ತಿಳಿಯಬಹುದಾಗಿದೆ. ಈ ಕಾಲಘಟ್ಟಗಳಲ್ಲಿ ಕೆರೆಗಳ ರಚನೆ, ಅವುಗಳಿಂದ ಜನತೆಗೆ ಆಗುವ ಅನುಕೂಲಗಳ ಬಗ್ಗೆ ತಿಳಿಯಬಹುದು. ಈ ಕಾಲದಲ್ಲಿದ್ದ ಕೆರೆಗಳು ಮುಂದಿನ ಜನತೆಗೆ ಎಷ್ಟರ ಮಟ್ಟಿಗೆ ಉಪಯೋಗವಾಗುತ್ತಿದೆ ಎಂಬುದನ್ನು ತಿಳಿದುಕೊಳ್ಳಬಹುದು. ಪ್ರಾಚೀನ ಕಾಲಘಟ್ಟಗಳಲ್ಲಿ ರಚಿತವಾದ ಕೆರೆಗಳನ್ನು ದುರಸ್ತಿಮಾಡಿ ಪುನರ್ ಜೀರ್ಣೋದ್ಧಾರ ಮಾಡಿ ಅವುಗಳಿಂದ ಉಪಯೋಗವನ್ನು ಜನತೆ ಮಾಡಿಕೊಳ್ಳುತ್ತಿದೆ. ಇಂದಿನ ಜನತೆಗೆ ಪ್ರಾಚೀನ ಕಾಲದ ಕೆರೆಗಳು ಮಾದರಿಯಾಗಿದ್ದು ಇಂದಿಗೂ ಉಪಯೋಗಕ್ಕೆ ಬರುತ್ತಿವೆ. ಈ ಅಧ್ಯಾಯದಲ್ಲಿ ಸಂಕ್ಷಿಪ್ತವಾಗಿ ಈ ಕೆಳಗೆ ಅಭ್ಯಾಸ ಮಾಡೋಣ.

ಮೌರ್ಯರು :

ಮೌರ್ಯರು ಆಳ್ವಿಕೆಯ ಅವಧಿಯ ವೇಳೆಗೆ ಸೌರಾಷ್ಟ್ರದ ಜುನಾಗಡದಲ್ಲಿರುವ ಸುದರ್ಶನ ಕೆರೆಯು ಇವರ ಕಾಲದ ಪ್ರಸಿದ್ಧ ಕೆರೆಯಾಗಿತ್ತು ಎಂದು ರುದ್ರಧಾಮನನ ಶಾಸನವು ತಿಳಿಸುತ್ತದೆ. ಇದು ಕೆರೆ ನಿರ್ಮಾಣ ಶ್ರೇಷ್ಠತೆಯಲ್ಲಿ ಉನ್ನತ ಮಟ್ಟವನ್ನು ಹೊಂದಿತ್ತು. ಇದನ್ನು ಚಂದ್ರಗುಪ್ತ ಮೌರ್ಯನ ರಾಜ್ಯಪಾಲ ಪುಷ್ಯಗುಪ್ತ ನಿರ್ಮಿಸಿದನೆಂದು ತಿಳಿದುಬರುತ್ತದೆ. ನಂತರ ಶಕರ ಕಾಲಾವಧಿಯಲ್ಲಿ ಸುದರ್ಶನ ಕೆರೆಯು ಸಂಪೂರ್ಣ ನಾಶವಾಯಿತು. ಆಗ ರುದ್ರಧಾಮನು ತನ್ನ ಸ್ವಂತ ಹಣದಿಂದ ಆ ಕೆರೆಯನ್ನು ದುರಸ್ತಿಮಾಡಿದನೆಂದು ತಿಳಿದು ಬರುತ್ತದೆ. ಸುದರ್ಶನ ಕೆರೆಗೆ ಮೌರ್ಯರ ಪ್ರಸಿದ್ಧ ಅರಸ ಅಶೋಕನ ರಾಜ್ಯಪಾಲ ತುಷಸ್ಪ ಅದಕ್ಕೆ ಕಾಲುವೆಗಳನ್ನು ನಿರ್ಮಿಸಿದ. [೧]ಸುದರ್ಶನ ಕೆರೆಯ ಏರಿಯು

---

೧. ಕರ್ನಾಟಕದಲ್ಲಿ ಕೆರೆ ನೀರಾವರಿ –

ಒಡೆದು ಹೋಗಿದ್ದರಿಂದ ಕೆರೆಯ ಅಂಗಳ ಬರಿದಾಯಿತು. ಮೌರ್ಯರ ಕಾಲಾವಧಿಯಲ್ಲಿ ನಿರ್ಮಿತವಾದ ಕೆರೆಗಳು ನೀರಾವರಿ ಕಾಮಗಾರಿಗಳಿಗೆ ಮುಂದಿನ ಉತ್ತರಾಧಿಕಾರಿಗಳಿಗೆ ಸಹಾಯಕವಾಯಿತೆನ್ನಬಹುದು.

ಶಾತವಾಹನರು :

ತಮಿಳುನಾಡಿನ ಚಿನ್ನಕಡಬೂರು ಮತ್ತು ಮೈಕಡೋನಿ ಗ್ರಾಮಗಳ ನಡುವೆ ಕಂಡುಬರುವ ಬಂಡೆಯಲ್ಲಿ ಕೆತ್ತಲಾಗಿರುವ ಶಾಸನವು ಕರ್ನೂಲು ಜಿಲ್ಲೆಯ ಆದವಾನಿಯಲ್ಲೂ ಶಾತವಾಹನ ವಂಶದ ಮುಮ್ಮಡಿ ಪುಲುಮಾವಿಗೆ ಸಂಬಂಧಿಸಿದೆ. ಇದು ಕುಮಾರದತ್ತನೆಂಬ ಸೇನಾಧಿಕಾರಿಗೆ ಸೇರಿದ ವೇಪುರಾಕ ಎಂಬ ಹಳ್ಳಿಯಲ್ಲಿ ಗೃಹಪತಿ ಸಾಂಬನು ಕೆರೆಯನ್ನು ತೋಡಿಸಿದ ಎಂಬ ದಾಖಲಾತಿಯನ್ನು ತಿಳಿಸುತ್ತದೆ.

ಉತ್ತರ ಕನ್ನಡ ಜಿಲ್ಲೆಯ ಬನವಾಸಿಯ ಮಧುಕೇಶ್ವರ ದೇವಾಲಯದಲ್ಲಿ ಕಂಡು ಬರುವ ಶಾಸನವು ಚುಟುರಾಜ ವಿಷ್ಣುಕಡ ಚುಟುಕುಲಾನಂದ ಶಾತಕರ್ಣಿಯದು. ಅದರಲ್ಲಿ ಈ ಕೆಳಗಿನಂತೆ ಉಲ್ಲೇಖಿಸಿದೆ, "ಮಹಾರಾಜನ ಕುಮಾರಿ, ಯುವರಾಜ ಶಿವಸ್ಕಂದ ನಾಗಶ್ರೀಯ ಪೂಜ್ಯಮಾತೆ ಒಂದು ನಾಗವನ್ನು ಕತ್ತಿಸಿದಳು, ಒಂದು ಕೆರೆಯನ್ನು ತೋಡಿಸಿದಳು ಹಾಗೂ ಒಂದು ವಿಹಾರವನ್ನು ಕಟ್ಟಿಸಿದಳು. ಅಮಾತ್ಯ ಸ್ಕಂದಸತಿ ಈ ಕಾಮಗಾರಿಗಳ ಮೇಲ್ವಿಚಾರಕನಾಗಿದ್ದ" [೨]ಇದರಿಂದ ಶಾತವಾಹನರು ಕಾಲಾವಧಿಯಲ್ಲಿ ರಚಿತವಾದ ಕೆರೆಯ ಬಗ್ಗೆ ತಿಳಿಯಬಹುದು.

ಕದಂಬರು :

ಕ್ರಿ.ಶ. ೪ನೇ ಶತಮಾನದ ಮಧ್ಯದಿಂದ ಇವರ ಕಾಲಘಟ್ಟವನ್ನು ಅವಲೋಕಿಸಬಹುದು. ಚಿತ್ರದುರ್ಗದ ಬಳಿಯ ಚಂದ್ರವಳ್ಳಿಯಲ್ಲಿ ಒಂದು ಕೆರೆಯನ್ನು ಕಟ್ಟಿಸಿದುದಾಗಿ ಮೊದಲನೆ ಕದಂಬ ಅರಸ ಮಯೂರವರ್ಮ ಹೇಳುತ್ತಾನೆ. ಈ ಒಂದು ಉಲ್ಲೇಖವನ್ನು ನಾವು ಕೆರೆಯ ಬಳಿಯ ಒಂದು ಬಂಡೆಯ ಮೇಲೆ ಕೆತ್ತಲಾಗಿದೆ. ಚಂದ್ರವಳ್ಳಿ ಕೆರೆಯು ಅತಿ ಪ್ರಾಚೀನ ಕೆರೆ ಎಂದು ಹೇಳಲಾಗುವುದು. ಇದು ಇತ್ತೀಚೆಗೆ ಜೀರ್ಣೋದ್ಧಾರ ಮಾಡಲ್ಪಟ್ಟ ಕೆರೆಗಳಲ್ಲಿ ಒಂದಾಗಿದೆ. ಹಿಂದಿನ ಜನರು ನಿರ್ಮಿಸಿದ ಕೆರೆಳನ್ನು ಇಂದಿನ ಜನರು ಹೇಗೆ ಉಪಯೋಗಿಸಿಕೊಳ್ಳಬೇಕು ಎಂಬುದನ್ನು ತಿಳಿಯಬಹುದು.

ಕದಂಬರ ಅರಸ ಕಾಕುತ್ಸ್ಥವರ್ಮನ ಪ್ರಸಿದ್ಧ ತಾಳಗುಂದ ಶಾಸನದಲ್ಲಿ ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ತಾಲ್ಲೂಕಿನ ತಾಳಗುಂದದ ಪ್ರಣವೇಶ್ವರ ಗುಡಿಯ ಎದುರಿಗೆ ಕೆರೆ ನಿರ್ಮಿಸಿದ್ದರ ಬಗ್ಗೆ ಆ ಶಾಸನ ತಿಳಿಸುತ್ತದೆ. ಚಂದ್ರವಳ್ಳಿ ಕೆರೆ ಮತ್ತು ಈ ಕೆರೆಯನ್ನು ಹೋಲಿಕೆ ಮಾಡಲಾಗಿ ಈ ಕೆರೆಯೇ ಅತ್ಯಂತ ಪ್ರಾಚೀನ ಕೆರೆಯೆಂದು ಗುರುತಿಸಲಾಗುತ್ತದೆ. ಗುಡ್ನಪುರ ಊರಿನ ಪ್ರವೇಶ ಭಾಗದಲ್ಲಿ ಒಂದು ದೊಡ್ಡ ಕೆರೆ ಇದೆ. ಇದು ಉತ್ತರ ಕನ್ನಡದ ಅತಿ ದೊಡ್ಡ ಕೆರೆಯಾಗಿದ್ದು ಇದನ್ನು ರಾಜಾ ರವಿವರ್ಮನು ನಿರ್ಮಿಸಿದ್ದು ಇದನ್ನು ಗುಡ್ಡತಟಾಕ ಎಂದು ಹೆಸರಿಸಲಾಗಿದೆ. ಇದು ಆರನೇ ಶತಮಾನದ ಆದಿ ಭಾಗದಲ್ಲಿ ನಿರ್ಮಿಸಿದ್ದೆನ್ನಲಾಗಿದೆ. ಗುಡ್ಡತಟಾಕ ಎಂಬ ಹೆಸರಿನಿಂದಲೇ ಗುಡ್ನಪುರ ಎಂಬ ಹೆಸರು ಬಂದಿದೆ ಎನ್ನಲಾಗಿದೆ. ಈ ಭಾರಿ ಕೆರೆಯು ಕದಂಬರ ರಾಜಧಾನಿಯ ಸುತ್ತಲಿನ ವ್ಯವಸಾಯ ಭೂಮಿಗೆ ನೀರನ್ನು ಒದಗಿಸುತ್ತಿತ್ತು.

---

೨. ಕರ್ನಾಟಕದಲ್ಲಿ ಕೆರೆ ನೀರಾವರಿ –

ಗಂಗರು :

ಕದಂಬರ ಸಮಕಾಲೀನವರಾಗಿದ್ದ ಗಂಗರು ತಮ್ಮ ಪೂಜೆಗಳಿಗೆ ನೀರಾವರಿ ಸೌಲಭ್ಯಗಳನ್ನು ಒದಗಿಸುವಲ್ಲಿ ಅವರು ನಿರ್ಮಿಸಿದ ಪಾತ್ರ ಅಪಾರವಾದುದು. ತಡಂಗಲ ಮಾಧವವರ್ಮನ ಮೇಲುಕೋಟೆ ಶಾಸನದಲ್ಲಿ ಕೆಲವು ಕೆರೆಗಳ ಪ್ರಸ್ತಾಪವಿದೆ. ಶಾಸನದಲ್ಲಿ ಎರಡು ಕೆರೆಗಳಿಂದ ಗದ್ದೆಗಳಿಗೆ ನೀರಾವರಿ ಸೌಕರ್ಯ ನೀಡಲಾಗಿತ್ತೆಂದು ತಿಳಿಸುತ್ತದೆ. ಅವನೀತನ ಕಾಲದ ಹೊಸಕೋಟೆ ಶಾಸನ ಕೆರೆಗಳ ಬಗ್ಗೆ ಹಾಗೂ ಶ್ರೀಪುರುಷನ ತಾಮ್ರಶಾಸನ ಆರು ಕೆರೆಗಳ ಮಾಹಿತಿಯನ್ನು ನೀಡುತ್ತದೆ. ಕ್ರಿ.ಶ ೮ನೇ ಶತಮಾನದಲ್ಲಿ ದಕ್ಷಿಣ ಕರ್ನಾಟಕದಲ್ಲಿ ಒಂದು ಹಳ್ಳಿಯ ಬಳಿ ಇಷ್ಟೊಂದು ಕೆರೆಗಳು ಇದ್ದುದಕ್ಕೆ ಇದೇ ಮೊಟ್ಟ ಮೊದಲ ನಿದರ್ಶನವನ್ನು ಕಾಣಬಹುದು. ಇವರ ಕಾಲಾವಧಿಯಲ್ಲಿ 'ಅರ್ಧಚಂದ್ರಾಕಾರದ ಕೊಳ' ಮತ್ತು 'ಬಾಲಚಂದ್ರಾಕಾರದ ಕೊಳ' ಎಂಬ ಪದಗಳು ಶಾಸನದಲ್ಲಿ ಕಂಡುಬಂದಿವೆ. ಇದರಿಂದ ನಮಗೆ ತಿಳಿಯುವ ಅಂಶವೆಂದರೆ, ಬಹುಶಃ ಅಲ್ಲಿಯ ಭೌಗೋಳಿಕ ಪರಿಸ್ಥಿತಿಗೆ ಅನುಗುಣವಾಗಿ ಕೆರೆಗಳನ್ನು ನಿರ್ಮಿಸುತ್ತಿದ್ದರೆಂದು ತಿಳಿಯಬಹುದಾಗಿದೆ. ಮಾಧವನ ಮಗ ನಾಗಯ್ಯ ನೀತಿಮಾರ್ಗನ ಮರಣದ ಸ್ಮರಣಾರ್ಥ ಒಂದು ಕೆರೆಯನ್ನು ನಿರ್ಮಿಸಿದನು. ರಾಚಮಲ್ಲನ ಸಾಲಿಗ್ರಾಮ ಶಾಸನವು ಎಡತೊರೆಯ ಸರಹದ್ದಿನಲ್ಲಿ ಹದಿನಾಲ್ಕು ಕೆರೆಗಳು ಇದ್ದದನ್ನು ದಾಖಲು ಮಾಡಲಾಗಿದೆ. ಓರ್ವ ಸಾಮಾನ್ಯ ಸ್ತ್ರೀ ಪರಮೇಶ್ವರದೇವಸೆಟ್ಟಿಯ ಮಡದಿ ಅಕಲೇಟಿಯು ತನ್ನ ಹೆಸರಿನಲ್ಲಿ ನಿರ್ಮಿಸಲಾದ ಅಕಲೇ ಸಮುದ್ರ ಕೆರೆಯ ಸಂಪೂರ್ಣ ವೆಚ್ಚವನ್ನು ನೀಡಿದ್ದಾಳೆ. ಇದರಿಂದ ನಮಗೆ ಈ ಕಾಲದಲ್ಲಿ ಮಹಿಳೆಯರು ಕೆರೆಗಳನ್ನು ನಿರ್ಮಿಸುತ್ತಿರುವುದನ್ನು ಕಾಣಬಹುದು. ಇಲ್ಲಿ ವೃತ್ತಿವಾಚಕಗಳ ಹೆಸರನ್ನು ಕೆರೆಗಳು ಇಡುತ್ತಿದ್ದುದ್ದನ್ನು ಕಾಣಬಹುದು. ಅವುಗಳೆಂದರೆ ಅಕ್ಕಸಾಲಿಗನ ಕೆರೆ, ಅಗಸರ ಕೆರೆ, ಮುಂತಾದವು. ನಾಗವರ್ಮನು ದೇವಿಗೆರೆ ಮತ್ತು ಪಿರಿಯಗೆರೆ ಎಂಬ ಎರಡು ಕೆರೆಗಳನ್ನು ನಿರ್ಮಿಸಿದನೆಂದು ಗಂಗರಾಜನಾದ ಸತ್ಯವಾಕ್ಯಪೆರ ಮಾನಡಿಯ ಶಾಸನದಿಂದ ತಿಳಿದು ಬರುತ್ತದೆ.

ಬಾದಾಮಿ ಚಾಲುಕ್ಯರು :

ಚಾಲುಕ್ಯರು ಸುಮಾರು ಎರಡುನೂರು ಶತಮಾನಗಳ ಕಾಲ ಆಳ್ವಿಕೆ ಮಾಡಿದ್ದು ತಮ್ಮ ಇತಿಹಾಸವನ್ನು ತಿಳಿಸಲು ಹಲವಾರು ಆಧಾರಗಳನ್ನು ಬಿಟ್ಟು ಹೋಗಿದ್ದಾರೆ. ವಿಕ್ರಮಾದಿತ್ಯನ ಅನುಗೋಡು ಶಾಸನವು ಒಂದು ಕೆರೆಯ ಕೆಳಗೆ ಭತ್ತದ ಗದ್ದೆಗಳನ್ನು ದಾನವಿತ್ತನು ಎಂಬ ವ್ಯಾಖ್ಯೆಯನ್ನು ಗಮನಿಸಿದಾಗ ಕೆರೆಯ ಒಂದು ನಿರ್ಮಾಣ ಅವನ ಕಾಲದಲ್ಲಿ ನಿರ್ಮಿತವಾಗಿದ್ದನ್ನು ತಿಳಿಯಬಹುದು. ವಿಜಯಾದಿತ್ಯನ ಶಾಸನವು ಗುಡ್ಡಿಗೆರೆ ಗ್ರಾಮದ ಸರಹದ್ದುಗಳನ್ನು ಹೇಳಲು ಕೆರೆಗಳನ್ನು ಪ್ರಸ್ತಾಪಿಸಿದ್ದನ್ನು ಕಾಣಬಹುದು. ದಕ್ಷಿಣಕ್ಕೆ ವೆಣ್ಣೆಕೆರೆ, ಪಶ್ಚಿಮಕ್ಕೆ ಕುಪೇರ ಕೆರೆ, ವಾಯುವ್ಯಕ್ಕೆ ಕೋಡಿ ಕೆರೆ, ಉತ್ತರಕ್ಕೆ ಪುಲಿವಾರ ಕೆರೆ, ಈಶಾನ್ಯಕ್ಕೆ ಮಕೆರೆ ಮತ್ತು ಅರಸನಾಳ ಕೆರೆಗಳು ಇದ್ದವು ಎಂದು ತಿಳಿಸುತ್ತದೆ. ಇದರಿಂದ ಇವರ ಅವಧಿಯಲ್ಲಿದ್ದ ಕೆರೆಗಳನ್ನು ತಿಳಿಯಬಹುದು.

ರಾಷ್ಟ್ರಕೂಟರು :

ಕ್ರಿ.ಶ. ೯–೧೦ ನೇ ಶತಮಾನದಲ್ಲಿ ಕರ್ನಾಟಕದಲ್ಲಿ ಏಳ್ಗೆಗೆ ಬಂದ ರಾಷ್ಟ್ರಕೂಟರು ತಮ್ಮ

ಶಾಸನಗಳಲ್ಲಿ ಹಲವಾರು ಕೆರೆಗಳ ಬಗ್ಗೆ ಉಲ್ಲೇಖಿಸಿದ್ದಾರೆ. ಬಾಗಲಕೋಟ ಜಿಲ್ಲೆಯ ಹುನಗುಂದ ತಾಲ್ಲೂಕಿನ ಕೇಸರಭಾವಿ ಶಾಸನವು ಅಮೋಘ ವರ್ಷನಿಂದ ಅವನ ಆಳ್ವಿಕೆಯ ಅವಧಿಯಲ್ಲಿ ಒಂದು ಕೆರೆ ಮತ್ತು ಅದರ ತೂಬನ್ನು ಕಟ್ಟಿಸಿದನ್ನು ದಾಖಲಿಸುತ್ತದೆ. ಇವನ ಅವಧಿಯಲ್ಲಿಯೇ ಬಿಜಾಪೂರ ಜಿಲ್ಲೆಯ ಬಾಗೇವಾಡಿ ತಾಲ್ಲೂಕಿನ ಹೂವಿನ ಹಿಪ್ಪರಗಿ ಶಾಸನವು ಎರಡು ಕೆರೆಗಳು ಇದ್ದದ್ದನ್ನು ದಾಖಲಿಸುತ್ತದೆ. ಮೂರನೇ ಕೃಷ್ಣನ ಆಳ್ವಿಕೆಯಲ್ಲಿ ರಚಿತವಾದ ಕುಡತಿನಿ ಶಾಸನವು ಕೆರೆಯ ಬಗ್ಗೆ ಉಲ್ಲೇಖಿಸಿದ್ದು, ಕುಡತಿನಿ ಕೆರೆ ಇಂದಿಗೂ ಇರುವುದನ್ನು ಕಾಣಬಹುದು.

ಕಲ್ಯಾಣದ ಚಾಲುಕ್ಯರು :

ಚಾಲುಕ್ಯರ ಪ್ರಸಿದ್ಧ ಅರಸ ಮೂರನೇ ಸೋಮೇಶ್ವರನು ರಚಿಸಿದ ಮಾನಸೋಲ್ಲಾಸವು ಸಹ ಬಾವಿ, ಕೆರೆ, ಸರೋವರ ಮುಂತಾದವುಗಳನ್ನು ನಿರ್ಮಿಸುತ್ತಿರುವ ಮಾಹಿತಿಯನ್ನು ಒದಗಿಸುತ್ತದೆ. ಕೆರೆಗಳ ನಿರ್ಮಾಣದ ಕಾರ್ಯಗಳಲ್ಲಿ ಶೇಕಡಾ ೫೦ ರಷ್ಟು ಕಲ್ಯಾಣರ ಪ್ರಮುಖ ಅರಸನೆನಿಸಿದ ಇಮ್ಮಡಿ ತೈಲಪ, ಇಮ್ಮಡಿ ಜಯಸಿಂಹ, ಮೊದಲನೆ ಸೋಮೇಶ್ವರಗಳ ಅವಧಿಯಲ್ಲಿ ಹಾಗೂ ಆರನೇ ವಿಕ್ರಮಾದಿತ್ಯನ ಕಾಲದಲ್ಲಿ ರಚನೆಗೊಂಡವು. ಧಾರವಾಡ ಜಿಲ್ಲೆಯ ಕೋಟೆವುಮಚಗಿ ಶಾಸನದಲ್ಲಿ ದೇವಿರಿಗೆರೆಯ ಉಲ್ಲೇಖವಿದೆ. ಇಮ್ಮಡಿ ಜಯಸಿಂಹ ಆಳ್ವಿಕೆಯ ಮಂಟೂರು ಶಾಸನವು ರಟ್ಟ ಸಮುದ್ರದ ದಾಖಲೆಯನ್ನು ತಿಳಿಸುತ್ತದೆ. ಸೋಮೇಶ್ವರನ ಅವಧಿಯಲ್ಲಿ ಭಾವನಗಂಧವಾರಣ ಎಂಬ ಅಧಿಕಾರಿ ಕೆರೆಗಳನ್ನು ನಿರ್ಮಿಸಿದ್ದು ಬಿಜಾಪೂರ ಜಿಲ್ಲೆಯ ನಂದವಾಡಿಗೆ ಶಾಸನದಲ್ಲಿ ದಾಖಲಾಗಿದೆ. ಹಲವಾರು ಶಾಸನಗಳು ಕೆರೆಗಳನ್ನು ಪ್ರಸ್ತಾಪಿಸಿದ್ದು, ಅವುಗಳ ಪಾತ್ರವನ್ನು ತಿಳಿಯಬಹುದು. ಕ್ರಿ.ಶ. ೧೦೯೭ ರಲ್ಲಿ ಚಾಲುಕ್ಯ ಅರಸನಾದ ೬ ನೇ ವಿಕ್ರಮಾದಿತ್ಯನ ಸಾಮಂತನಾದ ಹೊಯ್ಸಳ ವಿನಯಾದಿತ್ಯನು ಹಳೇಬಿಡು ಕೆರೆಗೆ ನೂತನ ಕಾಲುವೆಯೊಂದನ್ನು ನಿರ್ಮಿಸಿದನು. ಇದೇ ಅರಸನ ಮತ್ತೋರ್ವ ಸಾಮಂತ ಜೋಗಿ ಮಾರಸನು ಅನಂತಪೂರ ಜಿಲ್ಲೆಯ ಚಿನ್ನ ತುಂಬಳದಲ್ಲಿ ತನ್ನ ಹೆಸರಿನಲ್ಲಿ ಜೋಗಿ ಸಮುದ್ರ ಎಂಬ ಕೆರೆಯನ್ನು ನಿರ್ಮಿಸಿದ.[೩]

ಹೊಯ್ಸಳರು :

ಇವರನ್ನು ಪ್ರಾಚೀನ ಕರ್ನಾಟಕದಲ್ಲಿನ ಅತ್ಯಂತ ಶ್ರೇಷ್ಠ ಕೆರೆ ನಿರ್ಮಾಪಕರು ಎಂದು ಕರೆಯಲಾಗಿದೆ. ಬೇಲೂರು ಮತ್ತು ಹಳೇಬಿಡು ರಾಜಧಾನಿಗಳ ಮೇಲೆ ನೀರಾವರಿ ಕಾಮಗಾರಿಗಳೆಲ್ಲ ಅರಸರದ್ದೇ ಎಂದು ಹೇಳಬಹುದು. ಕ್ರಿ.ಶ. ೧೧೪೮ ರ ಒಂದು ಶಾಸನವು ಬಿಟ್ಟಿದೇವ ಮತ್ತು ಮಾದಿಕಬ್ಬೆಯರು ಬೇಲೂರಿನ ಹೊಯ್ಸಳ ಸಮುದ್ರವನ್ನು ಕಟ್ಟಿಸಿದ ಉಲ್ಲೇಖವಿದೆ. ಬೇಲೂರು ಶಾಸನ ಸಾಮಂತ ಮಾರನೆಂಬುವನು ಸಾಂತ ಸಮುದ್ರ ಹಾಗೂ ಬ್ರಹ್ಮ ಸಮುದ್ರ ಎಂಬ ಕೆರೆಗಳನ್ನು ತನ್ನ ಸ್ವಂತ ಖರ್ಚಿನಲ್ಲಿ ಕಟ್ಟಿಸಿದ ಎಂದು ಹೇಳುತ್ತದೆ. ಕವಿಯಾಗಿದ್ದ ಕೆರೆಯ ಪದ್ಮರಸ ಬೇಲೂರಿನಲ್ಲಿ ನರಸಿಂಹ ಬಲ್ಲಾಳನ ಆಳ್ವಿಕೆಯಲ್ಲಿ ಒಂದು ಕೆರೆ ಕಟ್ಟಿಸಿದ. ಅದನ್ನು ವಿಷ್ಣು ಸಮುದ್ರ ಎಂದು ಕರೆಯಲಾಗುತ್ತಿತ್ತು. ಅದಕ್ಕಾಗಿಯೇ ಆತನಿಗೆ ಕೆರೆಯ ಎಂಬ ಬಿರುದು ದೊರೆಯಿತು. ಅಲ್ಲಿನ ಒಂದು ಅತಿ ಪ್ರಾಚೀನ

---

೩. ಕರ್ನಾಟಕದಲ್ಲಿ ಕೆರೆ ನೀರಾವರಿ –

ಕೆರೆಯನ್ನು ವಿನಯಾದಿತ್ಯ ಕ್ರಿ.ಶ. ೧೦೬೨ ರಲ್ಲಿ ಕಟ್ಟಿಸಿ, ಆ ಕೆರೆ ತೂಬನ್ನು ಮಾಡಿಸಿದನೆಂದು ಆತನ ಒಂದು ಶಾಸನ ತಿಳಿಸುತ್ತದೆ. ಕಮ್ಮಟಶೆಟ್ಟಿ ಎಂಬ ವರ್ತಕನಿಂದ ಬಾಣಾವರದಲ್ಲಿ ಕೆರೆಗಳು ನಿರ್ಮಾಣಗೊಂಡವು. ಮಗನ ಹೆಸರಿನಲ್ಲಿ ಕನಕನ ಕೆರೆಯನ್ನು ನಿರ್ಮಿಸಿದ. ಕೆರೆಗಾಗಿ ಭೂದಾನ ಮಾಡಿದ್ದನ್ನು ಶಾಸನಗಳು ತಿಳಿಸುವುದರಿಂದ ಹೊಯ್ಸಳರ ಅವಧಿಯಲ್ಲಿನ ಕೆರೆಗಳ ಪಾತ್ರವನ್ನು ತಿಳಿಯಬಹುದು.

ಮಧ್ಯಯುಗೀನ ಕಾಲ :

ಮಧ್ಯಯುಗೀನ ಕಾಲದ ಕೆರೆಗಳ ಕುರಿತು ಅಧ್ಯಯನ ಮಾಡುವುದಾದರೆ, ಮುಖ್ಯವಾಗಿ ಇಲ್ಲಿ ವಿಜಯನಗರ ಕಾಲಾವಧಿಯ ಕೆರೆಗಳೇ ಪ್ರಮುಖವಾಗಿವೆ. ವಿಜಯನಗರ ಕಾಲದಲ್ಲಿ ಕೆರೆ ಕಟ್ಟುವುದರ ಬಗೆಗಿನ ಮಾಹಿತಿಗಳು ಶಾಸನಗಳಿಂದ ತಿಳಿದು ಬರುತ್ತವೆ. ಮೊದಲನೆ ಬುಕ್ಕರಾಯನ ಆಳ್ವಿಕೆಯು ಮಹತ್ವವುಳ್ಳದಾಗಿದ್ದು ಅವನು ಕೆರೆಗಳ ನಿರ್ಮಾಣ ಕಾರ್ಯಕ್ಕೆ ಭದ್ರ ಬುನಾದಿಯನ್ನು ಹಾಕಿದನು. ಪೋರುಮಾಮಿಲ್ಲ ಕೆರೆಯು ಇವನ ಕಾಲಕ್ಕೆ ಸೇರಿದ್ದು, ವಿರೂಪಾಕ್ಷ ಪಂಡಿತ ಮತ್ತು ವಿನಾಯಕ ಪಂಡಿತರೆಂಬ ಸಹೋದರ ವಿದ್ವಾಂಸರು ಹಂಪೆಯಲ್ಲಿ ದೇವಾಲಯ ನಿರ್ಮಿಸಿ ಅದರ ಸಮೀಪ ಕೆರೆ ನಿರ್ಮಿಸಿದ್ದನ್ನು ಕಾಣಬಹುದು. ವಿಜಯನಗರ ಕಾಲದಲ್ಲಿ ಕೆರೆಕಟ್ಟಿಸಲು ಮತ್ತು ಭೂದಾನ ನೀಡಲು ಮಹಿಳೆಯರಿಗೂ ಸ್ವಾತಂತ್ರ್ಯವಿತ್ತು. ಪೆನುಗೊಂಡೆ ರಾಜ್ಯದ ಚೊಮ್ಮದೇವಿ ಬುಕ್ಕರಾಯನ ಮಗಳು ತಿರುಮಣಿಯಾಯೂರು ಗ್ರಾಮದಲ್ಲಿ ಕೆರೆಗೆ ನೀರು ಹರಿದು ಬರುವ ಕಾಲುವೆಯನ್ನು ನಿರ್ಮಿಸಿದಳೆಂದು ಶಾಸನವು ತಿಳಿಸುತ್ತದೆ. ಹಂಪೆಯ ಸಮೀಪದಲ್ಲಿಯೇ ಕೆಲವು ಕೆರೆಗಳು ಇದ್ದು ಅಂದಿನ ರಾಜಧಾನಿಯನ್ನು ಒಳಗೊಂಡು ಸುತ್ತಮುತ್ತಲ ಜನರಿಗೆ ಅವಶ್ಯಕವಾದ ನೀರನ್ನು ಪೂರೈಸುತ್ತಿತ್ತು ಎಂದು ಶಾಸನಗಳಿಂದ ತಿಳಿದುಬರುತ್ತದೆ. ಕವಕಿಯ ಕಟ್ಟೆ, ಭೂಪತಿಯ ಕೆರೆ, ಗೌರಜಿಯ ಕೆರೆ, ನಾಗಲಾಪುರ ಕೆರೆಗಳು ಹಂಪೆಯ ಸಮೀಪದಲ್ಲಿದ್ದರೆ, ಚಿಕ್ಕರಾಯ ಕೆರೆ ಎಂಬ ಕೆರೆ ವಿಜಯನಗರ ಪಟ್ಟಣದಲ್ಲಿತ್ತು. ಹಾಗೂ ಚಿಕ್ಕಹಂಸನ ಕೆರೆಯು ವಿಜಯನಗರದಲ್ಲಿತೆಂದು ಕಮಲಾಪುರದ ಶಾಸನವು ತಿಳಿಸುತ್ತದೆ. ಹಂಪಿ ಪರಿಸರದಲ್ಲಿ ಸುಮಾರು ೬೦ಕ್ಕೂ ಹೆಚ್ಚು ಕೆರೆಗಳಿದ್ದೂ ೫೫ಕ್ಕೂ ಅಧಿಕ ಕೆರೆಗಳು ವಿಜಯನಗರ ಕಾಲದಲ್ಲಿ ನಿರ್ಮಿತವಾಗಿದ್ದು ಉಳಿದವುಗಳು ಪೂರ್ವದಲ್ಲಿದ್ದುದ್ದು ಕಂಡುಬರುತ್ತವೆ.

ಮಧ್ಯಯುಗೀನ ಕಾಲಾವಧಿಯಲ್ಲಿ ರಚನೆಗೊಂಡ ಕೆರೆಗಳೆಂದರೆ ವಿಜಯನಗರ ಕಾಲದಲ್ಲಿ ರಚಿತವಾದವುಗಳ ಸಂಖ್ಯೆಯೇ ಹೆಚ್ಚಿನವು. ಭಟ್ಟರ ಬಾಚಿಯಪ್ಪನು ಬುಕ್ಕರಾಯ ಸಮುದ್ರ, ಕೀರ್ತಿ ಸಮುದ್ರ, ಮಾಳುವೆಯ ಕೆರೆ, ನಾಗವ್ವೆಯ ಕೆರೆ, ಚಾಚಪ್ಪನ ಕೆರೆ ಮೊದಲಾದ ಕೆರೆಗಳನ್ನು ಸ್ಥಾಪಿಸಿದ್ದ ಎಂಬ ಅಂಶವನ್ನು ಮದ್ದೂರು ತಾಲೂಕಿನ ಅರುವನಹಳ್ಳಿ ಶಾಸನವು ತಿಳಿಸುತ್ತದೆ. ಹೊಸಪೇಟೆಯ ನೈರುತ್ಯ ಭಾಗದಲ್ಲಿ ಕೃಷ್ಣದೇವರಾಯನಿಂದ ನಿರ್ಮಿತವಾದ ಕೆರೆ ರಾಯರ ಕೆರೆ ಎಂಬ ಹೆಸರಿನಿಂದ ಕರೆಯಲಾಯಿತು. ಸಾಳುವ ಕುಟುಂಬ ಪಾಳೆಗಾರ ಪೆದ್ದತಿರುಮಲಯ್ಯ ರಾಜನು ವೇಲುಪಾಳ್ಯ ಹಳ್ಳಿಯಲ್ಲಿ ಕೆರೆಯನ್ನು ನಿರ್ಮಿಸಿದನೆಂದು ಗುಂಟೂರು ಜಿಲ್ಲೆಯ ಒಂದು ತೆಲುಗು ಶಾಸನ ತಿಳಿಸುತ್ತದೆ. ಹೊಸಪೇಟೆಯ ದಣ್ಣನಾಯಕನ ಕೆರೆ, ದರೋಜಿಕೆರೆ, ಕಮಲಾಪುರ ಕೆರೆ, ಅಳ್ಳಿಕೆರೆ, ರಾಯರ ಕೆರೆ ಮುಂತಾದವುಗಳು ವಿಜಯನಗರ ಕಾಲದ ಪ್ರಮುಖ ಕೆರೆಗಳಾಗಿವೆ. ತ್ರಯಂಬಕಪುರದ ಶಾಸನವು ಒಟ್ಟು ಹದಿನೆಂಟು

ಕೆರೆಗಳ ಹೆಸರುಗಳನ್ನು ಅದು ಉಲ್ಲೇಖಿಸಿದೆ. ಅವುಗಳು, ಹಳಲಕೋಟೆ ಕೆರೆ, ಮೊರಗದ ಕೆರೆ, ಅರೆಕೊಠಾರದ ಕೆರೆ, ಅಂಕೆಹಳ್ಳಿಯ ಕೆರೆ, ಹಗುಲದ ಕೆರೆ, ನರಸಮಂಗಲದ ಕೆರೆ, ನಲುವೊರ ಕೆರೆ, ವಿಜಯನಗರದ ಕೆರೆ, ರಾಘವಪುರದ ಕೆರೆ, ಹೆಗವಾಡಿಯ ಕೆರೆ, ಕೋಡಿಹಳ್ಳಿ ಕೆರೆ, ಕುಂತನೂರು ಕೆರೆ, ಮಾಲೂರು ಕೆರೆ, ಎಡತಲೆಯ ಕೆರೆ, ಕೆಳಸೂರು ಕೆರೆ, ಸಗಡೆಯ ಕೆರೆ, ವೊಡೆಯನ ಕೆರೆ, ಅರಕವಾಡಿ ಕೆರೆ.

ಬೆಂಗಳೂರು ಸ್ಥಾಪಕ ಕೆಂಪೇಗೌಡರು ನಗರದಲ್ಲಿ ಹಲವಾರು ಕೆರೆಗಳನ್ನು ನಿರ್ಮಿಸಿದ್ದರು. ಅವುಗಳಲ್ಲಿ ಕೆಂಪಾಂಬುದಿ ಕೆರೆ ಮತ್ತು ಧರ್ಮಾಂಬುದಿ ಪ್ರಮುಖವಾದವುಗಳು. ಕೆಳದಿಯ ದೊರೆ ತನ್ನ ರಾಜಧಾನಿಯ ಸುತ್ತಲೂ ಹದಿನಾಲ್ಕಕ್ಕೂ ಹೆಚ್ಚು ಕೆರೆಗಳನ್ನು ನಿರ್ಮಿಸಿದ. ಮದಗ ಮಾಸೂರು ಕೆರೆಯನ್ನು ಇವನೇ ನಿರ್ಮಿಸಿರಬೇಕೆಂದು ಶಾಸನವು ತಿಳಿಸುತ್ತದೆ. ಏರಡನೇ ಸದಾಶಿವನು ಕಟ್ಟಿಸಿದ ಹಿರಿಯಕೆರೆ ಪರಿಸ್ಥತಿಯಿಂದಾಗಿ ಕೆಲವು ನೀರಾವರಿ ಸೌಲಭ್ಯಗಳು ನಾಶಹೊಂದುವಂತಾದವು. ಇಂಥ ನಾಶಹೊಂದಿದ ಕೆರೆಗಳ ಸಾಲಿನಲ್ಲಿ ತೊಣ್ಣೂರು ಕೆರೆ ಒಂದು. ಇದು ಟಿಪ್ಪುವಿನಿಂದಲೆ ನಾಶಹೊಂದಿತು.ನಂತರ ಮೈಸೂರು ದಿವಾನರಾದ ಪೂರ್ಣಯ್ಯ ಅವರು ಹಿಂದಿನ ಜಲಾಶಯಗಳ ಜೀರ್ಣೋದ್ಧಾರ ಕೈಗೊಂಡರು. ನೀರಾವರಿ ಕೆರೆಗಳ ಅವನತಿ ಬ್ರಿಟಿಷರ ಆಗಮನದಿಂದ ಮೊದಲಾಯಿತು ಎನ್ನುವುದನ್ನು ಸಾಮಾನ್ಯ ಅಭಿಪ್ರಾಯವಾಗಿದೆ. ಹೀಗೆ ಮಧ್ಯಯುಗೀನ ಕಾಲ ವಿಜಯನಗರದವರಿಗೆ ಮಾತ್ರವಾಗಿದ್ದು ಅವರ ಕಾಲದಲ್ಲೇ ಹೆಚ್ಚು ಕೆರೆಗಳು ರಚನೆಯಾದವು.

ಬ್ರಿಟಿಷರ ಕಾಲ ಮತ್ತು ಅನಂತರದ ಕಾಲ (ಆಧುನಿಕ ಕಾಲ) :

ಮಧ್ಯಕಾಲದ ಅಂತ್ಯಕಾಲದಲ್ಲಿ ಅನೇಕ ರಾಜಕೀಯ ಕಲಹಗಳಿಂದಾಗಿ ಕೆರೆಗಳ ನಾಶದ ಕಾರ್ಯಗಳು ಜರುಗುತ್ತಿದ್ದವು. ಇದರಿಂದಾಗಿ ಕರ್ನಾಟಕವು ಬ್ರಿಟಿಷರ ಕೈವಶವಾಯಿತು. ಹಾಗೂ ಕೆಲವು ಪ್ರದೇಶಗಳು ಪ್ರಾಂತ್ಯಗಳಲ್ಲಿ ಸೇರ್ಪಡೆಗೊಂಡವು. ಇದರಿಂದ ಪ್ರಾಂತಗಳೇ ಅಡಳಿತ ನಡೆಸಲಾರಂಭಿಸಿದವು. ಈ ನಿಟ್ಟಿನಲ್ಲಿ ಕೆರೆಗಳ ನಿರ್ಮಾಣ ಮತ್ತು ನೀರಾವರಿ ಬೆಳವಣಿಗೆಯನ್ನು ಈ ಅಧ್ಯಾಯದಲ್ಲಿ ಪರಿಶೀಲಿಸೋಣ. ಬ್ರಿಟಿಷರ ಆರಂಭದಲ್ಲಿ ೧೪,೮೦೨ ಕ್ಕೂ ಹೆಚ್ಚು ಕೆರೆಗಳು ೪೫೬೨ ಕುಂಟೆಗಳು ಇದ್ದವೆಂದು ಬ್ರಿಟಿಷ್ ಅಧಿಕಾರಿ ಕರ್ನಲ್ ಮೆಕಂಜಿ ವಿವರಿಸಿದ್ದಾರೆ.[೪] ಮೈಸೂರು ಪ್ರಾಂತದಲ್ಲಿ ನೀರಾವರಿಗಿಲ್ಲದ ಹಾಗೂ ನೀರಾವರಿಯ ಎಂದು ವರ್ಗೀಕರಿಸಿದ ಕೆರೆಗಳು ಕಂಡುಬರುತ್ತವೆ. ಮೈಸೂರು ಪ್ರಾಂತದಲ್ಲಿ ಒಂದು ಚದರ ಮೈಲಿಗೆ ಒಂದು ಕೆರೆ ಇರುತ್ತಿದ್ದುದು ಕಂಡು ಬರುತ್ತದೆ. ಕಡೂರು, ಹಾಸರನ, ಶಿವಮೊಗ್ಗ, ಕೋಲಾರ ಜಿಲ್ಲೆಯಲ್ಲೂ ಶೇಕಡಾ ೮೦ ರಷ್ಟು ಕೆರೆಗಳು ಕಂಡುಬರುತ್ತವೆ.

ಮೈಸೂರಿನ ದಿವಾನರಾದ ಸರ್. ಶೇಷಾದ್ರಿ ಅಯ್ಯರ್ ಅವರು ದೊಡ್ಡವು, ಸಣ್ಣವು ಸೇರಿದಂತೆ ಸುಮಾರು ೩೮,೦೦೦ ಕೆರೆಗಳಿದ್ದು ಹೊಸ ಕೆರೆಗೆ ಸೂಕ್ತವಾದ ಸ್ಥಳ ಹುಡುಕುವುದು ತುಂಬಕಷ್ಟ ಎಂದಿದ್ದಾರೆ. ೧೯ನೇ ಶತಮಾನದ ಆದಿಯಲ್ಲಿ ಮೈಸೂರು ಪ್ರಾಂತದಲ್ಲಿ ಸುಮಾರು ೩೦,೦೦೦ ದೊಡ್ಡವು, ಸಣ್ಣವು ಕೆರೆಗಳಿದ್ದವು ಎಂದು ಪುರಾವೆಯಿಂದ ತಿಳಿದು ಬರುತ್ತದೆ. ೧೯೮೮–೧೯೦೦ ರ ಅವಧಿಯಲ್ಲಿ ಅನೇಕ ಕೆರೆಗಳ ಜೀರ್ಣೋದ್ಧಾರವಾದದ್ದು ಗಮನಿಸಿದರೆ ನಮಗೆ ತಿಳಿದು ಬರುವ ಅಂಶವೆನೆಂದರೆ ಹೊಸ

೪. ಕರ್ನಾಟಕದಲ್ಲಿ ಕೆರೆ ನೀರಾವರಿ –

ಕೆರೆಗಳನ್ನು ಕಟ್ಟಿಸಲು ಸೂಕ್ತ ಸ್ಥಳಗಳು ಕಡಿಮೆ ಇದ್ದುದರಿಂದ ಹಳೆಯ ಕೆರೆಗಳನ್ನೇ ಜೀರ್ಣೋದ್ಧಾರ ಮಾಡಲಾಯಿತು.

ಕರ್ನಾಟಕದ ಏಕೀಕರಣದ ಪೂರ್ವದಲ್ಲಿ ಪ್ರದೇಶಗಳು ಪ್ರಾಂತ್ಯಗಳಾಗಿ ಹಂಚಿಹೋಗಿದ್ದು ವ್ಯವಸಾಯಕ್ಕಾಗಿ ಹಲವು ಕೆರೆಗಳನ್ನು ನಿರ್ಮಿಸಲಾಯಿತು. ನಂತರ ಏಕೀಕರಣಗೊಂಡ ಕರ್ನಾಟಕದಲ್ಲಿ ಕೆರೆಗಳ ಅವಶ್ಯಕತೆ ಕಂಡುಬಂದಿದ್ದು ಉತ್ತರ ಕರ್ನಾಟಕದಲ್ಲಿ ಹಾಗಾಗಿ ಉತ್ತರ ಭಾಗದಲ್ಲಿ ಕೃಷ್ಣಾ, ತುಂಗಭದ್ರಾ, ಘಟಪ್ರಭಾ, ಮಲಪ್ರಭಾ, ನದಿಗಳಿಗೆ ಅಡ್ಡಲಾಗಿ ಅಣೆಕಟ್ಟುಗಳನ್ನು ನಿರ್ಮಿಸಿಕೊಂಡು ವ್ಯವಸಾಯಕ್ಕೆ ನೀರನ್ನು ಉಪಯೋಗಿಸಲಾರಂಭಿಸಿದರು. ಇವುಗಳು ಬತ್ತಿದಾಗ ನೀರು ಸಂಗ್ರಹವಾಗಿ ಉಪಯೋಗಕ್ಕೆ ಬರುವುದೇ ಕೆರೆಗಳು. ಇದರಿಂದ ಕೆರೆಗಳು ಉಗಮಗೊಳ್ಳತೊಡಗುತ್ತವೆ. ಆದರೆ ಇತ್ತೀಚಿನ ಆಧುನಿಕ ಯುಗದಲ್ಲಿ ಅಣೆಕಟ್ಟುಗಳಿಂದಾಗಿ ಕೆರೆಗಳ ನಿರ್ಮಾಣಗಳು ಕಡಿಮೆಯಾಗುತ್ತಲಿವೆ ಎನ್ನಬಹುದು. ಕೆರೆಗಳನ್ನು ಮುಚ್ಚಿ ಬೃಹತ ಕಟ್ಟಡಗಳನ್ನು ನಿರ್ಮಿಸುತ್ತಿದ್ದಾರೆ. ಆದರೂ ಕೆಲವಡೆಗಳಲ್ಲಿ ಭಾರಿ ನೀರಾವರಿ ಯೋಜನೆಗಳಿಗೆ ಪ್ರಾಶಸ್ತ್ಯ ಕೊಡಲಾಗಿದ್ದರೂ ಸಣ್ಣ ಜಲಾಶಯಗಳಂತಹ ಕೆರೆಗಳನ್ನು ಅಸಡ್ಡೆ ಮಾಡುತ್ತಿಲ್ಲ. ಸರ್ಕಾರವು ಹಳೆಯ ಕೆರೆಗಳನ್ನು ಜೀರ್ಣೋದ್ಧಾರ ಮಾಡುವ ಕಾರ್ಯವನ್ನು ಕೈಗೆತ್ತಿಕೊಂಡಿದೆ.

ಕಟ್ಟಿಗರು, ಉಪ್ಪಾರರು ಹಾಗೂ ಒಡ್ಡರು ಇವರಿಗೂ ಕೆರೆಗಳ ನಿರ್ಮಾಣ ಕಾರ್ಯಕ್ಕಂದೇ ಭೂಮಿ ಹಾಗೂ ಇತರೆ ರಿಯಾಯತಿಗಳನ್ನು ವಹಿಸಲಾಗುತ್ತಿತ್ತು. ಕೆರೆಯ ನಿರ್ಮಾಣ ಹಾಗೂ ಸಂರಕ್ಷಣೆಯ ಸಲುವಾಗಿ ಬಿತ್ತುವಟ್ಟು ಎಂಬ ದಾನವಿತ್ತ ಭೂಮಿಯನ್ನು ಕೊಡುತ್ತಿದ್ದರು. ಇದರಿಂದ ನಾವು ಪರೋಕ್ಷವಾಗಿ ದೊರೆಯುವ ದಾನವೆಂದು ಊಹಿಸಬಹುದು. ೧೯ನೇ ಶತಮಾನದಲ್ಲಿ ಅಂದರೆ ಬ್ರಿಟಿಷರ ಆಳ್ವಿಕೆ ಜಾರಿಗೆ ಬರುವುದಕ್ಕೆ ಮೊದಲು ನಮ್ಮ ಕೆರೆ ವ್ಯವಸ್ಥೆಯ ನಿರ್ಮಾಣ ಹಾಗೂ ನಿರ್ವಹಣೆ ಸ್ಥಳೀಯ ಗ್ರಾಮ ಸಮುದಾಯದ ಕೈಯಲ್ಲಿ ಇತ್ತು ಎನ್ನುವುದನ್ನು ನಾವು ನೋಡಿದ್ದೇವೆ. ವಿಶೇಷ ಸಂದರ್ಭಗಳ ಮಾತ್ರ ಭಾರಿ ಕೆರೆಗಳು, ದೊಡ್ಡ ನದಿಗಳ ಅಣೆಕಟ್ಟುಗಳು ಭಾರಿ ಹಣಹೂಡಿಕೆಯ ಸಂದರ್ಭಗಳಲ್ಲಿ ಮಾತ್ರ ದೊರೆ ನಿರ್ವಹಿಸುತ್ತಿದ್ದ. ಬ್ರಿಟಿಷ ಅವಧಿಯಲ್ಲಿ ಗ್ರಾಮ ಸೇವಕರು ಮತ್ತು ಗ್ರಾಮ ಸಮುದಾಯಗಳ ನಡುವಣ ಸಾಂಪ್ರದಾಯಿಕ ಸಂಬಂಧಗಳನ್ನು ಬ್ರಿಟಿಷರು ಕಡಿದು ಹಾಕಿದರು. ಬಹುತೇಕ ಈ ಕಾರಣಗಳಿಂದ ಸ್ಥಳೀಯ ಗ್ರಾಮ ಸಮುದಾಯದ ನಿರ್ಮಾಣ. ಉಸ್ತುವಾರಿ ಪದ್ಧತಿ ಮಾಯವಾಯಿತು. ಬ್ರಿಟಿಷರ ಹಿಡಿತದಿಂದ ಭಾರತ ಸ್ವತಂತ್ರಗೊಂಡ ನಂತರವು ಸರ್ಕಾರ ತನ್ನ ನೌಕರ ವರ್ಗಾ ವರ್ಗೀಯ ನೀತಿಯಲ್ಲಿ ಬ್ರಿಟಿಷರ ಪದ್ಧತಿಯನ್ನೆ ಮುಂದುವರೆಸಲಾಯಿತು. ಮೊದಲಿದ್ದ ಕೆರೆಯ ನಿರ್ಮಾತೃಗಳ ವ್ಯವಸ್ತೆಯು ನಮ್ಮ ಇಂದಿನ ಸಾಮಾಜಿಕ ಆರ್ಥಿಕ ಪರಿಸ್ಥಿತಿಗೆ ಅನುಗುಣವಾಗಿ ಅಗತ್ಯವಾದ ಮಾರ್ಪಾಟುಗಳೊಂದಿಗೆ ಮತ್ತೆ ಆ ಪದ್ಧತಿಯನ್ನು ಜಾರಿಗೆ ತರಲು ಸಾಧ್ಯವೇ? ಎಂಬುದನ್ನು ಪರಿಶೀಲಿಸಬೇಕು.

ಈ ಮೇಲೆ ತಿಳಿಸಿದ ಎಲ್ಲ ಅಧಿಕಾರಿ ವರ್ಗ, ದೊರೆಗಳು ಜನರ ಕಲ್ಯಾಣಕ್ಕಾಗಿ ಹಾಗೂ ವ್ಯವಸಾಯಕ್ಕೆ ನೀರಾವರಿ ಕಲ್ಪಿಸಲು ಮತ್ತು ಧಾರ್ಮಿಕ ಆಚರಣೆಗಳ ಅಪಾರ ಭಕ್ತಿಯಿಂದ ದೇವಸ್ಥಾನದ ಪಕ್ಕದಲ್ಲಿಯೇ ಕೆರೆಗಳನ್ನು ನಿರ್ಮಾಣ ಮಾಡುತ್ತಿರುವುದನ್ನು ಕಾಣಬಹುದು. ಸಾಮಾಜಿಕ ಉಪಯೋಗಕ್ಕಾಗಿ ಕೆರೆಗಳ ಜೀರ್ಣೋದ್ಧಾರಕ್ಕಾಗಿ ಭೂಮಿಯನ್ನು ದಾನ ಮಾಡುತ್ತಿದ್ದರಲ್ಲದೆ, ಕೆರೆಗಳ ಮೇಲೆ ಅನೇಕ

ಕರವನ್ನು ಸಂಗ್ರಹಿಸಿ ಆ ಹಣವನ್ನು ಕೆರೆಗಳ ದುರಸ್ಥಿಗೆ ಉಪಯೋಗಿಸುತ್ತಿದ್ದರು. ನಮ್ಮ ಕೆರೆಗಳ ಪುನರ್ ನಿರ್ಮಾಣದ ಮುಖ್ಯ ಕೆಸಲವೆಂದರೆ ತುಂಬಿಕೊಂಡಿರುವ ಹೂಳನ್ನು ಕೆರೆಯಿಂದ ತೆಗೆದುಹಾಕುವುದು. ಈ ಹೂಳನ್ನೇ ಹಾಲಿ ಏರಿಯನ್ನು ಬಲಪಡಿಸಲು ಬಳಸುವುದು. ಬಹುಪಾಲು ಹೂಳಿನಿಂದ ಹಳ್ಳಿಯಲ್ಲಿನ ತಗ್ಗು ಪ್ರದೇಶಗಳನ್ನು ಮುಚ್ಚಿ ಮಟ್ಟ ಮಾಡಬಹುದು.

ಹೀಗೆ ಕೆರೆಗಳು ನಿರ್ಮಿಸಲು ಪ್ರತ್ಯೇಕ ಜನಾಂಗದವರನ್ನು ಹೊಂದಿದ್ದರೂ ಇತ್ತೀಚಿನ ದಿನಗಳಲ್ಲಿ ಎಲ್ಲ ಜನಾಂಗದವರೂ ನಿರ್ಮಿಸಬಹುದಾಗಿದೆ. ಇದರ ನಿರ್ಮಾಣದ ಜವಾಬ್ದಾರಿಯನ್ನು ಸರ್ಕಾರವೇ ನೋಡಿಕೊಳ್ಳುತ್ತಿತ್ತು. ಹಿಂದಿನ ವ್ಯವಸ್ಥೆ ಇದ್ದಂತೆ ಕೆರೆಯ ನಿರ್ಮಾಣದ ಜವಾಬ್ದಾರಿಯನ್ನು ಸರ್ಕಾರವೇ ನೋಡಿಕೊಳ್ಳುತ್ತಿತ್ತು. ಹಿಂದಿನ ವ್ಯವಸ್ಥೆ ಇದ್ದಂತೆ ಕೆರೆಯ ನಿರ್ಮಾಣ ಅಥವಾ ಪುನರ್ ನಿರ್ಮಾಣವನ್ನು ಸ್ಥಳಿಯ ಉದ್ಯಮಶೀಲನಿಗೆ ವಹಿಸಿಕೊಡಬಹುದು. ಕೆರೆಗಳಿಗೆ ಭೂಮಿಯನ್ನು ಕೊಡುವುದಕ್ಕೆ ಪರ್ಯಾಯವಾಗಿ ಕೆರೆಯ ಸಂರಕ್ಷಣೆಯ ಹೊಣೆಯನ್ನು ಕೆರೆಯ ನಿರ್ಮಾತೃವಿಗೆ ವಹಿಸುವುದು.

ಕೆರೆಗಳ ನಿರ್ಮಾಪಕರು :

ಪ್ರಾಚೀನ ಕಾಲದಲ್ಲಿ ಅಂದರೆ ಬ್ರಿಟಿಷರ ಕಾಲಕ್ಕಿಂತ ಪೂರ್ವದಲ್ಲಿ ಕೆರೆಗಳ ನಿರ್ಮಾಣ ಹಾಗೂ ಸಂರಕ್ಷಣೆ ಕೇವಲ ಸ್ಥಳೀಯ ಜನತೆಯ ಜವಾಬ್ದಾರಿಯಾಗಿತ್ತು. ಮುಖ್ಯವಾಗಿ ಕೆರೆಗಳನ್ನು ನಿರ್ಮಿಸುವವರು ಯಾರು? ಎಂಬ ಪ್ರಶ್ನೆಗೆ ಮೊದಲು ಉತ್ತರ ಕಂಡುಕೊಳ್ಳಬೇಕು. ಕೆರೆಗಳನ್ನು ಅರಸರು, ಗ್ರಾಮ ಸಮುದಾಯಗಳು, ಆಡಳಿತಾಧಿಕಾರಿಗಳು ಇವರೆಲ್ಲರಲ್ಲಿ ಕೆರೆಗಳನ್ನು ನಿರ್ಮಿಸುವವರು ಯಾರು? ಹಾಗೂ ನಿರ್ಮಿಸುವುದು ಅವಶ್ಯಕವೋ ಎಂಬುದನ್ನು ಕೆಲವು ಶಾಸನಗಳ ಪ್ರಕಾರ ತಿಳಿದುಕೊಳ್ಳಬಹುದು. ವಿವಿಧ ಅರಸರುಗಳ ಕಾಲಾವಧಿಯಲ್ಲಿ ಕಂಡುಬರುವ ಶಾಸನಗಳ ಸಮೀಕ್ಷೆಯ ಪ್ರಕಾರ ಕೆರೆಗಳನ್ನು ರಾಜರು, ಮಂತ್ರಿಗಳು, ಮಾಂಡಲಿಕರು, ಸ್ಥಳೀಯ ಅಧಿಕಾರಿಗಳು, ಸಾಮಂತರು, ರಾಜ್ಯೋದ್ಯೋಗಿಗಳು, ಸಾಮಾನ್ಯರು, ಸಾಮಾನ್ಯರಲ್ಲಿ ವ್ಯಾಪಾರಿಗಳು ಮತ್ತು ಶ್ರೀ ಸಾಮಾನ್ಯರು ನಿರ್ಮಿಸುತ್ತಿದ್ದರು. ಕುಶಲರಲ್ಲದ ಕೂಲಿಗಳನ್ನು ಮಣ್ಣು ಕೆಲಸಕ್ಕೂ, ಕಲ್ಲು ಕೆಲಸಗಾರರನ್ನು ತೂಬು ರಚನೆಗೂ ನೇಮಿಸಿಕೊಂಡು ಕೆರೆಗಳನ್ನು ಕಟ್ಟಲಾಗುತ್ತಿತ್ತು ಎಂದು ಶಾಸನಗಳಿಂದ ತಿಳಿದು ಬರುತ್ತದೆ. ಈ ಮೇಲಿನ ಅಧಿಕಾರ ವರ್ಗದವರು ಕೇವಲ ಕೆರೆಗಳನ್ನು ಕಟ್ಟಿಸುತ್ತಿದ್ದರೂ ಅವುಗಳನ್ನು ಕಟ್ಟುವವರು ಬೇರೆ ಜನಾಂಗದವರಾಗಿದ್ದರು. ಈ ವಿಷಯವನ್ನು ದಕ್ಷಿಣ ಭಾರತದ ಕೆಲವು ಮುಖ್ಯ ಶಾಸನಗಳು ತಿಳಿಯಪಡಿಸುತ್ತವೆ. ಆಂಧ್ರ ಪ್ರದೇಶದ ಕಡಪಾ ಜಿಲ್ಲೆಯಲ್ಲಿರುವ ಪೋರುಮಾಮಿಲ್ಲ ಗ್ರಾಮದ ದಂಡೆಯಲ್ಲಿ ದೊರೆತ ಶಾಸನವು ಯುವರಾಜ ಭಾಸ್ಕರನ ಹೆಸರನ್ನು ಸೂಚಿಸುತ್ತದೆ. ಇದು ಕೆರೆಗಳ ಅಧ್ಯಯನಕ್ಕೆ ಸಹಾಯಕವಾಗುವ ಏಕೈಕ ಶಾಸನವಾಗಿದೆ.

ಕೆರೆಗಳನ್ನು ಉಪ್ಪಾರರು ಎಂಬ ಜನಾಂಗದವರು ನಿರ್ಮಿಸಲು ತಮ್ಮನ್ನು ತೊಡಗಿಸಿಕೊಂಡಿದ್ದರು. ತೆಲಗು ಭಾಷೆಯ ಶಾಸನವು ಕಟ್ಟಿಗರು ಎಂಬ ಜನಾಂಗದವರು ಕೆರೆಗಳನ್ನು ನಿರ್ಮಿಸುತ್ತಿದ್ದರು. ಎಂದು ತಿಳಿಸುತ್ತದೆ. ಅಂತೆಯೇ ಪ್ರತಿಯೊಂದು ಪ್ರದೇಶದಲ್ಲಿಯೂ ಕೆರೆಯನ್ನು ಕಟ್ಟಲು ಮಣ್ಣು ಒಡ್ಡರು, ಕಲ್ಲು ಒಡ್ಡರು ಮುಂತಾದ ಅನುಭವಿಗಳು, ಕುಶಲಿಗಳು ಆದ ಕಸಬುದಾರರಿದ್ದರು. ಕೆರೆಗಳ ನಿರ್ಮಾಣವನ್ನು ಪ್ರತ್ಯೇಕ ವರ್ಗದವರೇ ಮಾಡಿತ್ತಿದ್ದರೆಂದು ಶಾಸನದಿಂದ ತಿಳಿದು ಬರುತ್ತದೆ. ಆದರೆ ಕೆರೆ ಕಟ್ಟುವಂತಹ

ಕೆಲಸಕ್ಕೆ ಅನೇಕ ವ್ಯಕ್ತಿಗಳ ನೆರವು ಮತ್ತು ಸಹಕಾರಗಳು ಬೇಕಿದ್ದರಿಂದ ಕೇವಲ ಒಂದೇ ಜನಾಂಗದವರು ನಿರ್ಮಿಸದೆ, ಉಪ್ಪಾರ ಜನಾಂಗದವರೊಂದಿಗೆ ಕಟ್ಟಗರು ಎಂಬುವರು ಹಾಗೂ ಇತರ ವರ್ಗಗದವರು ಸೇರಿಕೊಂಡು ಕೆರೆಗಳನ್ನು ನಿರ್ಮಿಸುತ್ತಿದ್ದರು. ಇವರು ಕೆರೆಗಳನ್ನು ನಿರ್ಮಿಸಿದ ಪ್ರತಿಫಲವಾಗಿ ವ್ಯವಸಾಯ ಭೂಮಿಯನ್ನು ದಾನವನ್ನಾಗಿ ಪಡೆಯುತ್ತಿದ್ದರು.ಕೆರೆಗಳನ್ನು ನಿರ್ಮಿಸುತ್ತಿರುವ ಅಧಿಕಾರಿಗಳೇ ಭೂಮಿಯನ್ನು ದಾನ ನೀಡುತ್ತಿದ್ದರು. ಅಧಿಕಾರಿ ವರ್ಗದವರು ತಮ್ಮ ಅಧಿಕಾರ ಹಾಗೂ ಜನಪ್ರಿಯತೆಯನ್ನುಗಳಿಸಲು ನೀರಾವರಿ ಕಾರ್ಯಗಳಿಗೆ ಹೆಚ್ಚು ಮಹತ್ವವನ್ನು ನೀಡುತ್ತಿದ್ದರು.

* * *

ಕೆರೆಯನ್ನು ಹೇಗೆ ಕಟ್ಟಲಾಗುತ್ತಿತ್ತು, ಅದರ ಲಕ್ಷಣಗಳೇನು? ಎಂಬ ಬಗ್ಗೆ ವಿವರವಾಗಿ ವರ್ಣಿಸಲು ಲಭ್ಯವಿರುವ ಏಕೈಕ ಶಾಸನವೆಂದರೆ, ವಿಜಯನಗರದ ಅರಸ ಭಾಸ್ಕರನ ಕ್ರಿ.ಶ. ೧೩೬೯ರ ಪೊರುಮಾಮಿಲ್ಲ ಶಾಸನ. ಇಂದಿನ ಕೆರೆಗಳ ನಿರ್ಮಾಣ ಸ್ಥಿತಿಯನ್ನು ಗಮನಿಸಿದರೆ, ಬಹುಪಾಲು ಕೆರೆಗಳು ಸಣ್ಣ ಕೆರೆಗಳಾಗಿದ್ದು ಒಂದೇ ಬೆಳೆಗೆ ಬಳಸುವಂತವು. ಅವುಗಳನ್ನು ನಿರ್ಮಿಸಿದ್ದು ಜಾನುವಾರುಗಳಿಗೂ ಹಾಗೂ ಜನಕ್ಕೂ ಒದಗಿಸಲು. ನೀರಾವರಿಗೆ ನೀರು ಒದಗಿಸುವದು ಅದರ ಪ್ರಮುಖ ಗುರಿ. ಇತ್ತೀಚಿನ ಶತಮಾನದಲ್ಲಿ ಜನಸಂಖ್ಯೆಯ ಹೆಚ್ಚಳದ ಪರಿಣಾಮವಾಗಿ ಪ್ರಾಚೀನ ಕಾಲದಲ್ಲಿದ್ದ ಹಳೆಯ ಕೆರೆಗಳ ಜೀರ್ಣೋದ್ಧಾರ ಮಾಡಿ ಅವುಗಳ ಸಾಮರ್ಥ್ಯವನ್ನು ಹೆಚ್ಚಿಸುವ ಹಾಗೂ ಕೆರೆಗಳನ್ನು ರಚಿಸುವ ಅರಿವು ಉಂಟಾಯಿತು.

ಇತಿಹಾಸದಲ್ಲಿ ಕೆರೆ ನೀರಾವರಿಯ ಪ್ರಾಮುಖ್ಯತೆಯನ್ನು ಅರ್ಥಮಾಡಿಕೊಳ್ಳಬೇಕಾದರೆ ನಾನಾ ಬಗೆಯ ಕೆರೆಗಳು ಹಾಗೂ ಅವುಗಳ ಅಂಗಗಳ ಬಗ್ಗೆ ತಿಳಿದುಕೊಳ್ಳುವುದು ಅಗತ್ಯ. ಇಂತಹ ಹಲವಾರು ವ್ಯವಸ್ಥಿತ ಅಂಶಗಳಿಂದ ನಿರ್ಮಿತವಾದ ಕೆರೆಗಳು ಕೆಲವು ಮುಖ್ಯ ಭಾಗಗಳನ್ನು ಒಳಗೊಂಡಿರುತ್ತವೆ. ಆಂಧ್ರಪ್ರದೇಶದ ಕಡಪ ಜಿಲ್ಲೆಯ ಪೋರುಮಾಮಿಲ್ಲ ಗ್ರಾಮದಲ್ಲಿ ಭಾಸ್ಕರನ ಶಾಸನವು ಕೆರೆಯ ನಿರ್ಮಾಣವನ್ನು ಕುರಿತು ಪೂರ್ಣ ಮಾಹಿತಿಯನ್ನು ನೀಡುತ್ತದೆ. ಇದು ಕೆರೆಗಳ ಅಧ್ಯಯನಕ್ಕೆ ಅತಿ ಮುಖ್ಯವಾಗಿದ್ದು, ಕೆರೆಗಳ ಬಗೆಗಿನ ಅನೇಕ ಮಾಹಿತಿಯನ್ನು ಅರಿಯಲು ಸಹಕಾರಿಯಾಗಿದೆ. ಈ ಶಾಸನವು ಮುಖ್ಯವಾಗಿ ಕೆರೆಗಳನ್ನು ನಿರ್ಮಿಸುವಾಗ ಈ ಕೆಳಗಿನ ಮುನ್ನಚ್ಚೆರಿಕೆಗಳನ್ನು ತೆಗೆದುಕೊಳ್ಳಬೇಕು ಎಂದು ತಿಳಿಸಿದೆ.

೧) ಕೆರೆ ನಿರ್ಮಿಸುವ ರಾಜನು ಸಂತೃಪ್ತನಾಗಿಯೂ, ಸಂತೋಷದಿಂದ ಕೂಡಿದವನಾಗಿಯೂ ಮತ್ತು ಕೀರ್ತಿಯನ್ನು ಬಯಸುವಂತವನು ಕೆರೆಯ ನಿರ್ಮಾಣಕ್ಕೆ ತೊಡಗಬೇಕು.

೨) ಜಲಶಾಸ್ತ್ರದಲ್ಲಿ ನೈಪುಣ್ಯತೆಯನ್ನು ಹೊಂದಿದ ಬ್ರಾಹ್ಮಣನು ಈ ಕಾರ್ಯದಲ್ಲಿ ತೊಡಗಬೇಕು.

೩) ಉತ್ತಮ ಜೇಡಿಮಣ್ಣು ಕೊಡಿರುವಂತಹ ಪ್ರದೇಶವನ್ನು ಆಯ್ದುಕೊಳ್ಳಬೇಕು.

೪) ನದಿಯ ನೀರಿನ ಆಶ್ರಯವು ಅಥವಾ ಬುಗ್ಗೆಯು ಕೆರೆಯಿಂದ ಸುಮಾರು ಮೂರು ಯೋಜನೆಗಳಷ್ಟು ದೂರದಲ್ಲಿರುಬೇಕು.

೫) ಬೆಟ್ಟಗಳ ಸಾಲುಗಳು ಇದ್ದಲ್ಲಿ ಅವುಗಳನ್ನು ಕೆರೆಯನ್ನು ನಿರ್ಮಿಸಲು ಉಪಯೋಗಿಸಿಕೊಳ್ಳಬೇಕು.

೬) ಬೆಟ್ಟಗಳ ನಡುವಿನ ಕಣಿವೆ ಪ್ರದೇಶದಲ್ಲಿ ಅತಿ ದೊಡ್ಡದಲ್ಲದ ಮತ್ತು ಸದೃಡವಾದ ಏರಿಯನ್ನು ಕಟ್ಟಬೇಕು.

೭) ಕೆರೆಯ ಪ್ರದೇಶದಲ್ಲಿ ಫಲ ಕೊಡುವ ಭೂಮಿಯಿರಬೇಕು.

೮) ಕೆರೆಯ ನೀರಿನ ಹರವು ವಿಸ್ತೀರ್ಣವಾಗಿರಬೇಕು, ಹಾಗೆಯೇ ಆಳವಾಗಿಯೂ ಇರಬೇಕು.

೯) ಸಮೀಪದಲ್ಲಿಯೇ ಕಲ್ಲು ಗಣಿಗಳು ಇದ್ದು ಅಲ್ಲಿ ಉದ್ದವಾದ ಮತ್ತು ಸಮನಾದ ಕಲ್ಲುಗಳು ದೊರೆಯಬೇಕು.

೧೦) ಕೆರೆಯ ಸಮೀಪದಲ್ಲಿರುವ ಜಮೀನು ಫಲವತ್ತಾಗಿರಬೇಕು ಹಾಗೂ ಅಲ್ಲಿ ಹಣ್ಣು ಹಂಪಲುಗಳ ವನಗಳು ಇರಬೇಕು ಮತ್ತು ಜಮೀನು ಸಮನಾಗಿ ಏರಿಳಿತವಿಲ್ಲದೆ ಇರಬೇಕು.

೧೧) ಕೆರೆಯ ತೂಬುಗಳಲ್ಲಿನ ಕಲ್ಲು ಅಥವಾ ನಿಯಂತ್ರಕಗಳು ಭದ್ರವಾಗಿರಬೇಕು ಮತ್ತು ನೀರಿನ ಒತ್ತಡದಿಂದ ಕಾಪಾಡುವಷ್ಟು ಸದೃಡವಾಗಿರಬೇಕು.

ಕೆರೆಗಳನ್ನು ಕಟ್ಟುವ ತಂತ್ರಜ್ಞಾನವನ್ನು ಹೊಂದಿರುವಂತಹ ಹನ್ನೆರಡು ಮಂದಿಯಿರಬೇಕು ಅವರೆಲ್ಲರೂ ಮೇಲೆ ಉಲ್ಲೇಖಿಸಿದ ಹನ್ನೊಂದು ಅಂಶಗಳನ್ನು ಅರಿತಿರಬೇಕೆಂದು ಶಾಸನವು ತಿಳಿಸುತ್ತದೆ. ಕೆರೆಗಳನ್ನು ನಿರ್ಮಿಸುವ ಬಗ್ಗೆ ತಿಳಿಸುವ ಶಾಸನದಿಂದ ಅವರು ನಿಸರ್ಗವನ್ನು ಉಪಯುಕ್ತವಾಗಿ ಬಳಸಿಕೊಂಡು ಕೆರೆ ಕಟ್ಟುವ ಕಾರ್ಯಕ್ಕೆ ಸಾಕಷ್ಟು ಮಹತ್ವ ನೀಡಿದ್ದರೆಂಬುದನ್ನು ಸ್ಪಷ್ಟವಾಗಿ ತಿಳಿಯಬಹುದು. ಕೆರೆಗಳನ್ನು ನಿರ್ಮಿಸುವಾಗ ಹಲವಾರು ಅಂಶಗಳನ್ನು ಗಮನದಲ್ಲಿರಿಸಿಕೊಂಡು ಕೆರೆಗಳನ್ನು ನಿರ್ಮಿಸುತ್ತಿದ್ದರಲ್ಲದೆ, ಅವುಗಳಲ್ಲಿ ವಿವಿಧ ಆಕಾರಗಳನ್ನು ಹೊಂದಿರುವ ಕೆರೆಗಳು ಕಂಡುಬರುತ್ತವೆ. ಇದರಿಂದ ನಮಗೆ ವಿವಿಧ ಆಕಾರದ ಕೆರೆಗಳನ್ನು ನಿರ್ಮಿಸುತ್ತಿದ್ದರೆಂದು ತಿಳಿಯಬಹುದು. ಇವುಗಳನ್ನು ಬಹುತೇಕವಾಗಿ ಭೌಗೋಳಿಕ ಪರಿಸರವನ್ನು ಅವಲಂಬಿಸಿ ನಿರ್ಮಿಸಲಾಗುತ್ತಿತ್ತು. ಚಕ್ರಪಾಣಿ ಮಿಶ್ರನ ವಿಶ್ವವಲಭ ಕೃತಿಯು ವೃತ್ತಾಕಾರ, ಚತುಷ್ಕೋನ, ಬಹುಕೋನಾಕೃತಿ, ಲಂಬಾಕಾರ, ಅರ್ಧಚಂದ್ರಕಾರಗಳು ಮತ್ತು ಆಯತಾಕಾರದ ಕೆರೆಗಳನ್ನು ಪ್ರಸ್ತಾಪಿಸುತ್ತದೆ.[೫] ಕಶ್ಯಪನು ಕೃಷಿ ಸೂಕ್ತಿಯಲ್ಲಿ ವೃತ್ತ ಲಂಬ ಮತ್ತು ಅರ್ಧಚಂದ್ರಾಕಾರಗಳಲ್ಲಿ ಕೆರೆಯ ಆಕಾರವು ಇರಬಹುದೆಂದು ತಿಳಿಸುತ್ತಾನೆ.[೬] ಹಾವಿನ ಕುಂಟೆ ಎಂಬ ಕೆರೆಯು ಸರ್ಪಾಕೃತಿಯಲ್ಲಿದ್ದ ಕಾರಣ ಇದಕ್ಕೆ ಹಾವಿನಕುಂಟೆ ಎಂಬ ಹೆಸರು ಬಂದಿದೆ.[೭] ಶಾಸ್ತ್ರಗ್ರಂಥದಲ್ಲಿರುವುದಕ್ಕಿಂತ ಭಿನ್ನ ಆಕಾರದ ಕೆಲವು ಕೆರೆಗಳು ವಿಜಯನಗರದ ಕಾಲದಲ್ಲಿ ಹಾಗೂ ಅದಕ್ಕೂ ಮುಂಚೆ ನಿರ್ಮಾಣವಾಗಿದ್ದನ್ನು ಕಾಣಬಹುದು.

ಹೀಗೆ ವಿವಿಧ ಆಕಾರದ ಕೆರೆಗಳನ್ನು ನಿರ್ಮಿಸಬಹುದಾಗಿತ್ತಾದರೂ, ಅವುಗಳನ್ನು ನಿರ್ಮಿಸುವಾಗ ಕೆಲವು ಮುನ್ನಚ್ಚೆರಿಕೆ ಕ್ರಮಗಳನ್ನು ಅನುಸರಿಸಿಕೊಂಡು ನಿರ್ಮಿಸುತ್ತಿದ್ದರು. ಆದರೆ ಇಂದಿನ ದಿನಗಳಲ್ಲಿ ಹೊಸ ಕೆರೆಗಳ ನಿರ್ಮಾಣದ ಕಾರ್ಯಗಳು ಹಾಗೂ ನಿರ್ಮಿತವಾಗಿದ್ದ ಹಳೆಯ ಕೆರೆಗಳೂ ಸಹ ಕಣ್ಮರೆಯಾಗುತ್ತಿವೆ. ಆದರೂ ಗ್ರಾಮದ ಕೆಲವೆಡೆಗಳಲ್ಲಿ ಬೆರಳಣಿಕೆಯಷ್ಟು ಕೆರೆಗಳು ನಿರ್ಮಾಣವಾಗುತ್ತಿವೆ. ಪ್ರಮುಖ ಬ್ರಿಟಿಷ್ ಅಧಿಕಾರಿ ವಿಜಯನಗರ ಅರಸರ ನೀರಾವರಿ ಕಾರ್ಯಗಳನ್ನು ಕುರಿತು ಸರ್ ಥಾಮಸ್ ಮನ್ರೋ ಅವರು "ನೂತನ ಕೆರೆಗಳನ್ನು ನಿರ್ಮಿಸುವುದು ಅನಾವಶ್ಯಕ, ಏಕೆಂದರೆ ಈಗ ಇದ್ದ ಕೆರೆಗಳನ್ನೆ ದುರಸ್ತಿಗೊಳಿಸಿದರೆ ನಮಗೆ ಬೇಕಾದ ಸೌಲಭ್ಯ ದೊರಯಬಲ್ಲದು" ಎಂದಿದ್ದಾನೆ. ಶಾಸನಗಳಲ್ಲಿರುವ ಕ್ರಮಗಳನ್ನು ಅನುಸರಿಸಿ ಕೆರೆಗಳನ್ನು ನಿರ್ಮಿಸುತ್ತಿರುವದು ಅರಸರ ಕಾಲಕ್ಕೆ ಮಾತ್ರ ಸೀಮಿತಗೊಂಡದ್ದು ಬ್ರಿಟಿಷ ಕಾಲಕ್ಕೆ ಹಾಗೂ ಸರ್ಕಾರದ ಕೈಗೆ ನಿರ್ಮಾಣದ ಅಧಿಕಾರ ದೊರೆತಾಗಿನಿಂದ ಆಧುನಿಕ ತಂತ್ರಾಜ್ಞಾನದಿಂದಾಗಿ ಜಲಾಶಯಗಳಿಗೆ ಬೃಹತ್ ಅಣೆಕಟ್ಟುಗಳನ್ನು ನಿರ್ಮಿಸಿ ಕಾಲುವೆಗಳ ಮೂಲಕ ಕೃಷಿಗೆ ನೀರು ಒದಗಿಸುವ ವ್ಯವಸ್ಥೆ ಜಾರಿಗೆ ಬಂದಿದೆ.

---

೫ – 'ಹಂಪಿ ಪರಿಸರದ ಕೆರೆಗಳು' – ಸಿ.ಎಸ.ವಾಸುದೇವನ್.

೬– 'ವಿಜಯನಗರ ಸಾಮ್ರಾಜ್ಯದ ನೀರಾವರಿ ವ್ಯವಸ್ಥೆ' – ಸಿ. ಟಿ. ಎಂ. ಕೊಟ್ರಯ್ಯ

ಕೆರೆಗಳ ವರ್ಗೀಕರಣ :

ಪುರಾತನ ಕಾಲದಿಂದಲೂ ಈ ದೇಶದಲ್ಲಿ ವಿವಿಧ ಗಾತ್ರದ ಕೆರೆಗಳನ್ನು ನಿರ್ಮಿಸಿ ಅವುಗಳಿಂದ ಭೂ ಸಾಗುವಳಿ ಮಾಡುತ್ತಲೇ ಬಂದಿದ್ದಾರೆ. ಅದರಲ್ಲಿ ದಕ್ಷಿಣ ಭಾರತವು ಭೌಗೋಳಿಕ ಪರಿಸರದಿಂದಾಗಿ ಬೇಸಾಂಗುದ ಅವಶ್ಯಕತೆಗಳನ್ನು ಪೂರೈಸಿಕೊಳ್ಳಲು ಕೆರೆಗಳನ್ನು ಅವಲಂಬಿಸಬೇಕಾಯಿತು. ಕೆರೆಗಳ ಗಾತ್ರವು ಅದು ಹೊಂದಿದ ಭೌಗೋಳಿಕ ಪರಿಸರವನ್ನೇ ಅವಲಂಬಿಸಿತ್ತು. ಕೆರೆಗಳು ಅಂದಿನ ಮಾನವೀಯ ಅವಶ್ಯಕತೆಗಳನ್ನು ಪೂರೈಸುತ್ತಿದ್ದವು. ಅಂದಿನ ದಿನಗಳಲ್ಲಿ ಜನಸಂಖ್ಯೆಯ ಸಮಸ್ಯೆ, ಔದ್ಯೋಗಿಕರಣ, ಪರಿಸರ ಮಾಲಿನ್ಯ ಮುಂತಾದ ಸಮಸ್ಯೆಗಳು ಇರದೇ ಇದ್ದುದರಿಂದ ಕೆರೆಗಳಲ್ಲಿ ಶೇಖರಿಸಿದ ನೀರನ್ನು ಕುಡಿಯಲು, ಸ್ನಾನ ಮಾಡಲು, ಮುಂತಾದ ದಿನ ನಿತ್ಯದ ಅವಶ್ಯಕ ಕಾರ್ಯಗಳಿಗೂ ಉಪಯೋಗಿಸಲಾಗುತ್ತಿತ್ತು.

ಪ್ರಾಚೀನ ಕರ್ನಾಟಕದಲ್ಲಿ ಕೆರೆ ನೀರಾವರಿಯ ಉಗಮ ಹಾಗೂ ಕೆರೆಗಳ ನಿರ್ಮಾಣ ಮತ್ತು ಕೆರೆಗಳ ವರ್ಗೀಕರಣದ ಬಗ್ಗೆ ಈ ಅಧ್ಯಾಯದಲ್ಲಿ ತಿಳಿಯಲಾಗಿದೆ. ಈ ಕೆರೆಗಳ ನಿರ್ಮಾಣವನ್ನು ನಾವು ಹೆಚ್ಚಾಗಿ ದಕ್ಷಿಣ ಭಾರತದಲ್ಲಿ ಕಾಣಬಹುದು. ಪ್ರಾಚೀನ ಕಾಲದಲ್ಲಿನ ಮಾನವನು ಮಳೆ ಬಾರದಂತಹ ಕಾಲದಲ್ಲಿ ತನ್ನ ಅಗತ್ಯಗಳನ್ನು ಪೂರೈಸಲು ಮಳೆ ನೀರನ್ನು ಕೂಡಿಡುವ ತಂತ್ರವನ್ನು ಬೆಳೆಸಿಕೊಂಡ. ಇದರಿಂದ ಕೆರೆಗಳ ನಿರ್ಮಾಣದ ಉಗಮ ಪ್ರಾರಂಭವಾಯಿತು. ಈ ಜನರು ತಮ್ಮ ವಾಸಸ್ಥಳವನ್ನಾಗಿ ಬೆಟ್ಟದ ಪಕ್ಕದ ಸ್ಥಳವನ್ನು ಆಯ್ಕೆ ಮಾಡಿಕೊಂಡು ಬೆಟ್ಟದ ಇಳಿಜಾರಿನಿಂದ ಹರಿದು ಬರುವ ಮಳೆ ನೀರನ್ನು ಸಣ್ಣ ಒಡ್ಡುಗಳನ್ನಾಗ್ಗಿ ನಿರ್ಮಿಸಿ ಕೆರೆಗಳನ್ನು ನಿರ್ಮಿಸತೊಡಗಿದ.

ಭಾರತದಲ್ಲಿ ಕೆರೆಗಳು ಸುಮಾರು ಎರಡು ಸಾವಿರ ವರ್ಷಗಳಿಂದಲೂ ಕಂಡು ಬಂದಿವೆಯಾದರೂ, ಕರ್ನಾಟಕದಲ್ಲಿ ಕೆರೆಗಳ ನಿರ್ಮಾಣ ಕಾರ್ಯ ಭರದಿಂದ ಸಾಗಿರಲಿಲ್ಲ. ಕರ್ನಾಟಕದ ಪ್ರಮುಖ ಅರಸು ಮನೆತನಗಳಲ್ಲೊಂದಾದ ಕಲ್ಯಾಣ ಚಾಲುಕ್ಯರ ಕಾಲದಿಂದ ಕೆರೆಗಳ ನಿರ್ಮಾಣ ಕಾರ್ಯ ಹೊಸದೊಂದು ಚೈತನ್ಯವನ್ನು ಪಡೆಯಿತು. ಈ ಕಾಲವನ್ನು ವಿದ್ವಾಂಸರು "ಕೆರೆಗಳ ಸುವರ್ಣಯುಗ"ವೆಂದು ಅಭಿಪ್ರಾಯಪಟ್ಟಿದ್ದಾರೆ. ಮಳೆಯ ವೈಪರಿತ್ಯ ಸ್ವಭಾವಗಳನ್ನು ಪರಿಗಣಿಸಿ ಕೆರೆಗಳನ್ನು ನಿರ್ಮಿಸುವಾಗ ಕೇವಲ ಒಂದು ಕೆರೆಯನ್ನು ನಿರ್ಮಿಸಿದೆ. ಎರಡು ಅಥವಾ ಮೂರು ಕೆರೆಗಳ ಒಂದು ಶೃಂಖಲೆಯನ್ನು ನಿರ್ಮಿಸಿರುವುದನ್ನು ಕಾಣಬಹುದು. ಭೌಗೋಳಿಕ ಲಕ್ಷಣ, ಮಳೆಯ ಅತಿವೃಷ್ಟಿಯ ಸ್ವಭಾವವನ್ನರಿತು ಕೆರೆಗಳನ್ನು ವಿವಿಧ ಭೂಮಟ್ಟದಲ್ಲಿ ಒಂದಕ್ಕೊಂದು ಹೊಂದಿಕೊಂಡಿರುವಂತೆ ನಿರ್ಮಿಸಿರುವರು. ಇದರಿಂದ ಮೊದಲ ಕೆರೆಯು ಮೇಲ್ಮಟ್ಟದಲ್ಲಿದ್ದು ಮಳೆ ನೀರು ಬಂದಲ್ಲಿ ಆ ನೀರು ಕೋಡಿಯ ಮೂಲಕ ಹರಿದು ಎರಡನೆ ಕೆರೆಯಲ್ಲಿ ಸಂಗ್ರಹವಾಗುತ್ತದೆ. ಈ ವಿಶಿಷ್ಟ ಪದ್ಧತಿಯಿಂದ ಒಮ್ಮೆ ಹೆಚ್ಚುವರಿ ನೀರು ಮೊದಲ ಕೆರೆಗೆ ಬಂದರೂ ಕೆರೆಯು ಒಡೆಯುದಂತೆ ಇರುತ್ತದೆ. ಹಾಗೂ ನೀರು ಪೋಲಾಗುವುದನ್ನು ಸಹ ಎರಡನೆಯ ಕೆರೆಯು ತಪ್ಪಿಸುತ್ತದೆ. ಇಂತಹ ವ್ಯವಸ್ಥೆಯನ್ನು ವಿಜಯನಗರದ ಕಾಲದಲ್ಲಿ ಕಾಣಬಹುದಾಗಿದೆ. ಕೆರೆಯು ನಿರ್ಮಾಣದ ಕುರಿತು ಸಂಪೂರ್ಣ ಮಾಹಿತಿಯನ್ನು ನಮಗೆ ಆಂಧ್ರಪ್ರದೇಶದ ಕಡಪಾ ಜಿಲ್ಲೆಯಲ್ಲಿ ದೊರೆತ ಪೋರುಮಾಮಿಲ್ಲ ಶಾಸನವು ತಿಳಿಸುತ್ತದೆ.

ಕೆರೆಗಳ ವಿಧಗಳನ್ನು ತಿಳಿಯುವುದಾದರೆ ಮಳೆ ಆಶ್ರಿತ ಕೆರೆಗಳು, ನದಿ ಆಶ್ರಿತ ಕೆರೆಗಳು ಇಂದಿನ ಕೆರೆಗಳು ಮಳೆಯನ್ನು ಆಶ್ರಯಿಸಿರದೆ ನದಿ ಆಶ್ರಿತ ಕೆರೆಗಳು ಕಂಡುಬರುತ್ತವೆ. ಕಾರಣ ಕೆರೆಗಳನ್ನು ಜೀವಂತವಾಗಿರಿಸುವ ಸಲುವಾಗಿ ಸರ್ಕಾರದ ಲೋಕೋಪಯೋಗಿ ಮತ್ತು ನೀರಾವರಿ ಇಲಾಖೆಯವರು ಕೆಲವು ಮಳೆ ಆಶ್ರಿತ ಕೆರೆಗಳನ್ನು ನಿರ್ಮಿಸಿದ್ದಾರೆ. ಕೆರೆ ನೀರಿನ ಹರವು ವಿಸ್ತೀರ್ಣವಾಗಿರಬೇಕು. ಹಾಗೆಯೇ ಆಳವಾಗಿಯೂ ಇರಬೇಕು. ಕೆರೆಗಳು ವಿವಿಧ ಆಕಾರಗಳನ್ನು ಹೊಂದಿರುತ್ತಿದ್ದವು. ಕೆರೆಗಳ ಆಕಾರವು ಬಹುತೇಕವಾಗಿ ಭೌಗೋಳಿಕ ಪರಿಸರವನ್ನು ಅವಲಂಬಿಸಿರುತ್ತಿದ್ದವು. ಚಕ್ರಪಾಣಿ ಮಿಶ್ರನ ವಿಶ್ವವಲ್ಲಭ ಕೃತಿಯು ವಿವಿಧ ಆಕಾರದ ಕೆರೆಗಳನ್ನು ಪ್ರಸ್ತಾಪಿಸುತ್ತದೆ. ಅವುಗಳಲ್ಲಿ ವೃತ್ತಾಕಾರ, ಚತುಷ್ಕೋನ, ಬಹುಕೋನಾಕೃತಿ, ಲಂಬಾಕಾರ, ಅರ್ಧಚಂದ್ರಾಕಾರಗಳು ಮತ್ತು ಆಯತಾಕಾರದ ಕೆರೆಗಳು ಕಂಡುಬರುತ್ತವೆ. ಆಯಾ ಪರಿಸರಕ್ಕೆ ಅನುಗುಣವಾಗಿ ಕೆರೆಗಳನ್ನು ನಿರ್ಮಿಸುವುದು ಸಹಜ.

ಕೆರೆಗಳ ರಕ್ಷಣೆ ಮತ್ತು ದೀರ್ಘಕಾಲ ಬಾಳಿಕೆ ಬರಬೇಕೆಂದು ಕೆರೆಯ ಏರಿಯನ್ನು ಯಾವಾಗಲೂ ಅಂಕುಡೊಂಕಾಗಿ ನಿರ್ಮಿಸುತ್ತಿದ್ದರು. ಇದರಿಂದಾಗಿ ನೀರಿನ ಒತ್ತಡವು ಕೆರೆಯ ಏರಿಯಲ್ಲಿ ಹಂಚಿಹೋಗಿ ಏರಿಯು ಸುರಕ್ಷಿತವಾಗಿರುತ್ತದೆ. ಒಮ್ಮೆ ಕೆರೆ ಕಟ್ಟೆ ಒಡೆದರೂ ಏರಿಯ ಸಣ್ಣ ಭಾಗವು ಮಾತ್ರವೇ ಒಡೆಯುತ್ತಿತ್ತು. ಇದನ್ನು ದುರಸ್ತಿಗೊಳಿಸುವುದು ಸುಲಭವಾಗಿರುವ ಕಾರಣದಿಂದ ಕೆರೆಯನ್ನು ಅಂಕುಡೊಂಕಾಗಿ ನಿರ್ಮಿಸುತ್ತಿದ್ದರು. ಇಂತಹ ಕೆರೆಗಳನ್ನು ನಾವು ವಿಜಯನಗರದ ಕಾಲದಲ್ಲಿ ಕಾಣಬಹುದು.

ಮಳೆಯು ನೀರನ್ನು ಆಶ್ರಯಿಸಿರುವಂತಹ ಈ ಕೆರೆಗಳನ್ನು ನಿರ್ಮಿಸುವಾಗ ಪರಿಸರಕ್ಕನುಗುಣವಾಗಿ ಮೂರು ಅಥವಾ ನಾಲ್ಕು ಕೆರೆಗಳನ್ನು ಸಮೀಪದಲ್ಲಿಯೇ ಒಂದಕ್ಕೊಂದು ಹೊಂದಿಕೊಂಡಿರುವಂತೆ ಕಟ್ಟಿರುವುದನ್ನು ಗಮನಿಸಬಹುದು. ಈ ರೀತಿಯಾದ ವ್ಯವಸ್ಥೆಯಿಂದ ಎರಡು ಪ್ರಯೋಜನಗಳು ಕಂಡುಬರುತ್ತವೆ. ಅವುಗಳೆಂದರೆ, ಮೊದಲನೆಯದಾಗಿ ಕೆರೆಗೆ ಹೆಚ್ಚುವರಿ ನೀರು ಬಂದ ಪಕ್ಷದಲ್ಲಿಯೂ ಏರಿಗೆ ಯಾವುದೇ ವಿಧದ ಅಪಾಯ ಉಂಟಾಗುವುದಿಲ್ಲ. ಆ ಕೆರೆಯು ಸುರಕ್ಷಿತವಾಗಿರುತ್ತದೆ. ಎರಡನೆಯ ಪ್ರಯೋಜನವೆಂದರೆ, ಹೆಚ್ಚುವರಿ ನೀರು ವ್ಯರ್ಥವಾಗದಂತೆ ಎರಡನೆಯ ಕೆರೆಯಲ್ಲಿ ಶೇಖರಣೆಗೊಳ್ಳುತ್ತದೆ. ಇದು ನಮ್ಮ ಪೂರ್ವಜರು ತಮ್ಮ ದೀರ್ಘ ಅನುಭವದಿಂದ ಇಂತಹ ವಿಷಯಗಳನ್ನು ಕಂಡುಕೊಂಡು ಅತ್ಯಂತ ವೈಜ್ಞಾನಿಕವಾಗಿ ತಮ್ಮ ದೈನಂದಿನ ಜೀವನದಲ್ಲಿ ಬೆಳಕಿಗೆ ತಂದಿರುವುದು ಹೆಚ್ಚು ಶ್ಲಾಘನೀಯ.

<u>ಕೆರೆಯ ಮುಖ್ಯ ಭಾಗಗಳು :-</u>

➢ ಕೆರೆಯ ಏರಿ :-

ಏರಿಯ ಕೆರೆಯು ಒಂದು ಪ್ರಮುಖ ಭಾಗ. ಏರಿಯನ್ನು ಕಟ್ಟೆಯೆಂತಲೂ ಕರೆಯುವರು. ಇದು ಕೆರೆಯಲ್ಲಿ ಸಂಗ್ರಹವಾಗುವ ನೀರನ್ನು ತಡೆಯುತ್ತದೆ. ಆದ್ದರಿಂದ ಏರಿಯನ್ನು ಅತ್ಯಂತ ಗಟ್ಟಿಯಾಗಿ ನಿರ್ಮಿಸಿರಬೇಕು. ಕೆರೆಯ ಈ ಭಾಗವನ್ನು ಮಣ್ಣಿನಿಂದ ಕಟ್ಟಲಾಗಿರುತ್ತದೆ. ಹಳೆಯ ಕೆರೆಗಳ ಏರಿಯು

ಬಹುಮಟ್ಟಿಗೆ ಸ್ಥಳದ ಪರಿಸ್ಥಿತಿ ಹಾಗೂ ಭದ್ರತೆಗಳಿಗೆ ಅನುಗುಣವಾಗಿರುತ್ತದೆ. ಏರಿಯು ಕೆರೆಗಳಿಗೆ ನಿರ್ಮಿತ ಮಾಡಿದ್ದನ್ನು ಹಲವು ಪ್ರಾಚೀನ ಶಾಸನಗಳಲ್ಲಿ ತಿಳಿಯಬಹುದಾಗಿದೆ. ಏರಿಯನ್ನು ನಿರ್ಮಿಸಲು ಮಣ್ಣನ್ನು ಹಾಕಿ ನೀರಿನಿಂದ ನೆನೆಸಿ ಗಟ್ಟಿಮಾಡಿ ಅದರ ಮೇಲೆ ಮತ್ತಷ್ಟು ಮಣ್ಣನ್ನು ಹಾಕುತ್ತಾ ಹೋಗುತ್ತಾರೆ. ಈ ರೀತಿ ಪದೇ ಪದೇ ಮಾಡುತ್ತಾ ಹೋಗುವುದರಿಂದ ಮಣ್ಣು ಚೆನ್ನಾಗಿ ಕೂಡಿಕೊಂಡು ಗಟ್ಟಿಯಾಗುತ್ತದೆ. ಇದರಿಂದ ಕೆರೆಯ ತಳದ ವಿಸ್ತಾರ ಹೆಚ್ಚಿ ಹೆಚ್ಚು ನೀರು ಸಂಗ್ರಹಗೊಳ್ಳುತ್ತದೆ. ಏರಿಯು ಸಾಮಾನ್ಯವಾಗಿ ಕಲ್ಲಿನ ಜೋಡಣೆಯಿಂದಾಗಿರುತ್ತದೆ. ಕೆರೆಯ ಏರಿಯನ್ನು ಕಟ್ಟುವಾಡ ಅಥವಾ ಕಟ್ಟುವಾಡು ಎಂದು ಕರೆಯುತ್ತಾರೆ. ಕೆರೆಯಲ್ಲಿ ಸಂಗ್ರಹವಾದ ನೀರಿನಿಂದ ಏರಿಗೆ ಬೀಳುವ ಒತ್ತಡವು ಸಮನಾಗಿ ಹಂಚಿ ಹೋಗುವಂತಾಗಲು ಕೆರೆಯ ಏರಿಯನ್ನು ಯಾವಾಗಲೂ ಲಂಬವಾಗಿ ಕಟ್ಟದೇ, ಅಂಕುಡೊಂಕಾಗಿಯೇ ಕಟ್ಟಲಾಗುತ್ತಿತ್ತು. ಇಂತಹ ಅಂಕುಡೊಂಕಾದ ಕೆರೆಯ ಏರಿಯನ್ನು ಹೊಂದಿರುವ ಕೆರೆಗಳು ವಿಜಯನಗರ ಕಾಲದಲ್ಲಿ ಕಂಡುಬರುತ್ತವೆ. ಪ್ರಮುಖ ವಿಜಯನಗರ ಕಾಲದ ಕೆರೆಗಳೆಂದರೆ ದರೋಜಿ ಕೆರೆ, ಕಮಲಾಪುರದ ಕೆರೆ. ಒಮ್ಮೊಮ್ಮೆ ಕೆರೆಯ ಎರಡೂ ಬದಿಗಳಲ್ಲಿ ಕಟ್ಟುವಾಡುಗಳನ್ನು ನಿರ್ಮಿಸಲಾಗುತ್ತಿತ್ತು.

ಸಾಮಾನ್ಯವಾಗಿ ಕೆರೆ ಏರಿಯ ತಳಭಾಗವು ವಿಶಾಲವಾಗಿದ್ದು ಅದು ಮೇಲಕ್ಕೆ ಹೋದಂತೆ ಕಿರಿದಾಗುತ್ತಾ ಹೋಗುತ್ತದೆ. ಏರಿಯ ಆಯಕಟ್ಟಿನ ಭಾಗವು ಇಳಿಜಾರಾಗಿರುತ್ತದೆ. ಈ ಇಳಿಜಾರು ರಚನೆಯು ನೀರಿನ ಒತ್ತಡವನ್ನು ವಿರುದ್ಧ ದಿಕ್ಕಿನಿಂದ ತಡೆದು ಏರಿಗೆ ಸಾಕಷ್ಟು ಬಲವನ್ನು ನೀಡುವಲ್ಲಿ ಸಹಾಯಕವಾಗುತ್ತದೆ. ಏರಿಯ ಇಳಿಜಾರು ಭಾಗದಲ್ಲಿ ಕೆಲವು ಸಸ್ಯಗಳನ್ನು ಬೆಳೆಸಿ ಕೆರೆಯ ಏರಿಯನ್ನು ಮತ್ತಷ್ಟು ಬಲಪಡಿಸುವಂತಾಗುತ್ತದೆ. ಏರಿಯ ವಿನ್ಯಾಸವು ಎಲ್ಲ ನೀರಾವರಿ ಕೆಲಸಗಳಲ್ಲಿಯ ಧೈರ್ಯ ಹಾಗೂ ರಚನಾಕೌಶಲ್ಯವು ವ್ಯಕ್ತವಾಗುತ್ತದೆ. ಏರಿಯು ಕೆರೆಯಲ್ಲಿ ಸಂಗ್ರಹವಾಗುವ ನೀರನ್ನು ತಡೆಯುವುದರಿಂದ ಏರಿಯು ಅತ್ಯಂತ ಗಟ್ಟಿಯಾಗಿರಬೇಕು. ಬಹುತೇಕವಾಗಿ ಕೆರೆಯ ತಳಭಾಗದ ಮಣ್ಣನ್ನು ಅಗೆದು ಏರಿಕಟ್ಟಲು ಉಪಯೋಗಿಸುತ್ತಿದ್ದರು. ಇದರಿಂದ ಕೆರೆಯ ತಳಭಾಗವು ಅಗಲ ಮತ್ತು ಆಳವಾಗಿರುವುದರಿಂದ ಕೆರೆಯಲ್ಲಿ ಹೆಚ್ಚು ನೀರು ಸಂಗ್ರಹಗೊಳ್ಳುತ್ತದೆ. ಏರಿಯು ಅಂಕುಡೊಂಕಾಗಿ ಇರುವುದರಿಂದ ನೀರಿನಿಂದ ಏರಿಗೆ ಬೀಳುವ ಒತ್ತಡವು ಸಮನಾಗಿ ಹಂಚಿಹೋಗುತ್ತದೆ. ಮತ್ತು ಏರಿ ಒಡೆದಾಗ ಅದನ್ನು ಸರಿಪಡಿಸುವುದು ಸುಲಭವಾಗುವುದು.

<u>ತೂಬುಗಳು :</u>

ತೂಬುಗಳು ಕೆರೆಯ ಒಂದು ಮುಖ್ಯ ಅವಿಭಾಜ್ಯ ಅಂಗವಾಗಿದೆ. ಇವುಗಳು ಕೆರೆಯ ನೀರನ್ನು ಹೊರಗೆ ಹೋಗದಂತೆ ತಡೆಹಿಡಿಯುವ ಸಾಧನಗಳು. ಸಾಮಾನ್ಯವಾಗಿ ತೂಬುಗಳನ್ನು ಕಲ್ಲಿನಿಂದ ನಿರ್ಮಿಸಲಾಗಿದೆ. ಇವುಗಳು ಎರಡು ಅಥವಾ ನಾಲ್ಕು ಕಂಬಗಳಿಂದ ಕೂಡಿರುತ್ತವೆ. ಎರಡು ಕಂಬಗಳ ನಡುವೆ ಒಂದು ಅಡ್ಡಗಲ್ಲನ್ನು ಇರಿಸಲಾಗುತ್ತದೆ. ಎರಡೂ ಅಡ್ಡಗಲ್ಲುಗಳ ಮಧ್ಯೆ ಸುಮಾರು ೨೫ ಸೆ.ಮೀ ವ್ಯಾಸದ ರಂದ್ರಗಳು ಕಂಡುಬರುತ್ತವೆ. ಈ ರಂಧ್ರಕ್ಕೆ ಮರದ ತುಂಡನ್ನು ಇಟ್ಟು ಮುಚ್ಚುವ ವ್ಯವಸ್ಥೆ ಮಾಡಲಾಗಿದೆ. ಇದರ ವಿಶೇಷತೆಯೇನೆಂದರೆ, ಅದು ನೀರಿನಲ್ಲಿ ನೆನೆದಾಗ ಹಿಗ್ಗುತ್ತದೆ. ಹಿಗ್ಗಿದ ಮರದ ತುಂಡು ರಂಧ್ರದಲ್ಲಿ ಬಿಗಿಯಾಗಿ ಕುಳಿತು ಹೊರ ಕಾಲುವೆಯ ಮುಖಾಂತರ

ನೀರು ಹರಿಯುವುದನ್ನು ಆದಷ್ಟು ಮಟ್ಟಿಗೆ ತಡೆಯುತ್ತದೆ. ಆದ್ದರಿಂದ ತೂಬುಗಳಿಗೆ ಮತ್ತು ನೀರಾವರಿಗೆ ನೇರ ಸಂಬಂಧವಿದೆ. ಕೆರೆಯಲ್ಲಿ ಶೇಖರಿಸಲಾದ ನೀರನ್ನು ಈ ತೂಬು ಕಾಲುವೆಗಳ ಮೂಲಕ ಗದ್ದೆಗಳಿಗೆ ಹರಿಸಲಾಗುವುದು. ಆದಕಾರಣ ಅಣೆಕಟ್ಟು ಹಾಗೂ ಕೆರೆಗಳ ನೀರಾವರಿಯಲ್ಲಿ ಈ ತೂಬುಗಳ ಪಾತ್ರ ಅಪಾರ. ಏಕೆಂದರೆ ಶೇಖರಿಸಲಾದ ನೀರು ದುರುಪಯೋಗವಾಗದಂತೆ ನೋಡಿಕೊಳ್ಳಬೇಕಾಗುತ್ತದೆ. ಈ ವಿಧಾನದಿಂದ ನೀರಿನ ಗರಿಷ್ಠ ಉಪಯೋಗವನ್ನು ಪಡೆಯಬಹುದು. ಹಾಗೂ ಆರ್ಥಿಕ ಅಭಿವೃದ್ಧಿ ಸಾಧಿಸಬಹುದು.

ಒಂದೊಂದು ಕೆರೆಗೂ ಒಂದು ಅಥವಾ ಎರಡು ತೂಬು ಇರುತ್ತಿದ್ದವು. ಕೆಲವೊಂದು ಕೆರೆಗಳಿಗೆ ಮೂರು ತೂಬುಗಳು ಇದ್ದುದ್ದು ಕಂಡುಬಂದಿವೆ. ಈ ತೂಬು ಕಾಲುವೆಗಳು ನೀರಾವರಿ ಕಾರ್ಯಗಳ ಭಾಗವಾಗಿರುವುದರಿಂದ ಇವುಗಳನ್ನೇ ಕುರಿತ ಮಾಹಿತಿಗಳು ನಮಗೆ ಶಿಲಾಶಾಸನಗಳಲ್ಲಿ ಪ್ರತ್ಯೇಕ ವರ್ಣನೆ ಸಿಗುವುದಿಲ್ಲ. ಆದರೆ ತೂಬು ಕಾಲುವೆಯ ಮಹತ್ವವನ್ನು ಸೂಚಿಸುತ್ತವೆ. ಹಿಂದಿನ ಕಾಲದಲ್ಲಿ ವಿವಿಧ ಮಾದರಿಯ ತೂಬು ಕಾಲುವೆಗಳನ್ನು ನಿರ್ಮಿಸಲಾಗಿದೆ. ಮುಚ್ಚಳದ ಮಾದರಿ, ಬಿರಡೆ ಮಾದರಿ, ತೊಟ್ಟಿಯ ಮಾದರಿಯ ತೂಬುಗಳು ಕಂಡು ಬರುತ್ತವೆ. ಬಿರಡೆ ಮಾದರಿಯ ತೂಬು ಕಾಲುವೆಗಳು ಹೆಚ್ಚು ಬಳಕೆಯಲ್ಲಿದ್ದುದ್ದು ಕಂಡುಬರುತ್ತವೆ. ಸಾಮಾನ್ಯವಾಗಿ ಈ ತೂಬುಗಳನ್ನು ಬಳಸುವುದರಿಂದ ಬಿಗಿಯುಂಟಾಗಿ ನೀರು ಸೋರಿ ಹೋಗದಂತೆ ನೋಡಿಕೊಳ್ಳಲಾಗುತ್ತಿತ್ತು. ಅಂದಿನ ಕಾಲದಲ್ಲಿನ ಕೆಲವು ತೂಬುಗಳನ್ನು ವಾಸ್ತುಶಿಲ್ಪ ಮಾದರಿಯಾಗಿ ಮತ್ತು ಭವ್ಯವಾಗಿ ಇರುವುದನ್ನು ಕಾಣಬಹುದು. ಕೆರೆಯ ವಿಸ್ತೀರ್ಣತೆ, ನೀರು ಸಂಗ್ರಹವಾಗುವ ಸಾಮರ್ಥ್ಯವನ್ನು ಗಮನದಲ್ಲಿರಿಸಿಕೊಂಡು ತೂಬುಗಳನ್ನು ನಿರ್ಮಿಸಲಾಗುತ್ತದೆ. ಇತ್ತೀಚಿನ ದಿನಗಳಲ್ಲಿ ಮರದ ತೂಬಿನ ಬದಲಾಗಿ ಲೋಹವನ್ನು ಬಳಕೆ ಮಾಡಲಾಗುತ್ತಿದೆ. ತೂಬುಗಳನ್ನು ತೂಬು ಮತ್ತು ಗಡಿಗತೂಬು ಎಂದು ವಿಧಗಳನ್ನಾಗಿ ಮಾಡಲಾಗಿದೆ. ಗಡಿಗೆಯ ಆಕಾರದಲ್ಲಿರುವ ತೂಬಿಗೆ ಗಡಿಗತೂಬು ಎಂದು ಕರೆಯಲಾಗಿದೆ.

ತೂಬುಗಳನ್ನು ಸಾಮಾನ್ಯವಾಗಿ ಕೆರೆ ಏರಿಯಿಂದ ಸುಮಾರು ೧೦ ರಿಂದ ೧೫ ಅಡಿ ದೂರದಲ್ಲಿ ನಿರ್ಮಿಸಲಾಗುತ್ತದೆ. ಇದರಿಂದ ಕಾಲುವೆ, ತೂಬು ಮತ್ತು ಏರಿಗೆ ಯಾವುದೇ ಅಪಾಯವಿಲ್ಲ. ಇವುಗಳಿಂದ ಕೆರೆಯ ನೀರನ್ನು ನಿಯಂತ್ರಿಸಲಾಗುತ್ತಿತ್ತು. ಸಾಮಾನ್ಯವಾಗಿ ಕೆರೆಗಳ ಗಾತ್ರ, ಅದರ ನೀರಿನಿಂದ ಸಾಗುವಳಿ ಆಗಬೇಕಾದ ಭೂಮಿಯನ್ನು ಆಧರಿಸಿ ತೂಬುಗಳ ವಿನ್ಯಾಸಗಳನ್ನು ರಚಿಸಲಾಗುತ್ತಿತ್ತು. ಹಲವು ಬಾರಿ ವ್ಯವಸಾಯದ ಭೂಮಿಯ ಆಧಾರದ ಮೇಲೆ ಒಂದಕ್ಕಿಂತ ಅಧಿಕ ತೂಬುಗಳನ್ನು ರಚಿಸಲಾಗುತ್ತಿತ್ತು. ಅಲ್ಲದೇ ಒಂದಕ್ಕಿಂತ ಹೆಚ್ಚಿನ ತೂಬುಗಳನ್ನು ನಿರ್ಮಿಸುವಾಗ ಕೆರೆಯ ಸಮಪಾತಳಿಯನ್ನು ಗಮನದಲ್ಲಿರಿಸಿಕೊಂಡು ರಚನೆ ಮಾಡಲಾಗುತ್ತಿತ್ತು. ಕೆಲವು ಕೆರೆಯ ಒಡ್ಡಿನ ಬದುವಿನಲ್ಲಿ ಎರಡೂ ತೂಬುಗಳಿಗೆ ಒಂದು ಹರಿಗಾಲುವೆಯನ್ನು ನಿರ್ಮಿಸಿ ನೀರು ಹಾಯಿಸಲಾಗುತ್ತಿತ್ತು. ಈ ಮಾದರಿಯ ನೀರು ಹಂಚಿಕೆಯ ವಿಧಾನವನ್ನು ಪೆರಿಮಡ್ಯೆ, ಸಿರುಮಡ್ಯೆ, ಕಡ್ಯೆಕಡ್ಯೆ ಎಂದು ಕರೆಯಲಾಗುತ್ತಿತ್ತು. ಇದನ್ನು ಅನುಕ್ರಮವಾಗಿ ಹಿರಿಯ ತೂಬು, ಕಿರಿಯ ತೂಬು, ಕೊನೆಯ ತೂಬು ಎಂದು ಕರೆಯಬಹುದು. ನೀರು ಹಾಯಿಸಲು ತೂಬುಗಳನ್ನು ಕೆರೆಯ ದಂಡೆಯಿಂದ ಸ್ವಲ್ಪ ದೂರದಲ್ಲಿ ರಚಿಸಲಾಗುತ್ತಿತ್ತು. ಈ ತೂಬುಗಳನ್ನು ಮುಚ್ಚಲು ತೆರೆಯಲು ನೀರು ಗಂಟಿ ಎಂಬ ವ್ಯಕ್ತಿಯನ್ನು ನೇಮಿಸಲಾಗುತ್ತಿತ್ತು. ನೀರು ಹಾಯಿಸಬೇಕೆಂದಾಗ ಅವರು ಕೆರೆಯ ನೀರಿನಲ್ಲಿ ಈಜಿಕೊಂಡು

ಹೋಗಿ ತೂಬಿನ ಮರವನ್ನು ತೆಗೆದು ನೀರನ್ನು ಹಾಯಿಸುತ್ತಿದ್ದರು. ವಿಜಯನಗರದ ಕಾಲದ ಅನೇಕ ಶಾಸನಗಳು ತೂಬುಗಳನ್ನು ನಿರ್ಮಿಸಿದ್ದನ್ನು ಕುರಿತು ತಿಳಿಸುತ್ತವೆ.

ಪ್ರಾಚೀನ ಕಾಲದಲ್ಲಿನ ಕೆರೆಗಳನ್ನು ಪುನರುಜ್ಜೀವನಗೊಳಿಸುವ ಸಂದರ್ಭದಲ್ಲಿ ಸರ್ಕಾರದ ನೀರಾವರಿ ಇಲಾಖೆಯವರು ಮೂಲ ತೂಬಿಗೆ ಯಾವುದೇ ವಿಧದ ಧಕ್ಕೆ ಉಂಟಾಗದಂತೆ ಮರದ ತುಂಡನ್ನೇ ಬಳಸಿರುತ್ತಾರೆ. ಇಲಾಖೆಯವರು ತೂಬಿನ ರಂಧ್ರಕ್ಕೆ ಮರದ ತುಂಡು ಇಟ್ಟು ಅದರ ಮೇಲ್ಭಾಗಕ್ಕೆ ಕಬ್ಬಿಣದ ಸಲಾಕೆಯನ್ನು ಅಳವಡಿಸಿ ತಿರುಚುವ ಮೂಲಕ ಯಾಂತ್ರೀಕರಿಸಿದ್ದಾರೆ. ತೂಬುಗಳನ್ನು ಕಾಲುವೆಗಳಿಗೆ ಅನುಗುಣವಾಗಿ ವಿವಿಧ ಎತ್ತರಗಳಲ್ಲಿ ಅಳವಡಿಸಲಾಗುತ್ತದೆ. ಶಾಸನಗಳಲ್ಲಿ ನಡುವಣ ತೂಬು ಎಂಬ ಉಲ್ಲೇಖವಿರುವುದರಿಂದ ಕೆರೆಗೆ ತೂಬುಗಳು ವಿವಿಧ ಎತ್ತರಗಳಲ್ಲಿ ಇದ್ದಿರಬೇಕು ಎಂಬುದು ಸ್ಪಷ್ಟವಾಗುತ್ತದೆ. ಕೆರೆಯ ನೀರನ್ನು ಹಾಯಿಸುವ ಪ್ರಮಾಣವನ್ನು ಒಂದು ಸಲುಕ್ಕಿ ನೀರು ಅಥವಾ ಎರಡು ಸಲುಕ್ಕಿ ನೀರು ಎಂದು ತಿಮ್ಮಲಾಪುರದ ನೀರುಗಂಟಿಗಳು ತಿಳಿಸುತ್ತಾರೆ. ತೂಬುಗಳ ಒಳಗೆ ಏನಾದರೂ ಅಡಚಣೆ ಆದಲ್ಲಿ ಒಬ್ಬ ವ್ಯಕ್ತಿ ಒಳಗೆ ಹೋಗಿ ಅದನ್ನು ಸ್ವಚ್ಛಗೊಳಿಸಲು ಅನುಕೂಲವಾಗಿ ಕೆರೆಯ ಅಂಗಳದ ಮಟ್ಟದಲ್ಲಿ ತೂಬು ದೊಡ್ಡದು, ಧೃಡವೂ ಆಗಿದ್ದು ದುಬಾರಿಯ ಕೆಲಸವೇ ಆಗಿರುತ್ತಿತ್ತು. ಧಾರ್ಮಿಕ ಕಲ್ಪನೆಗಳು ಹಾಗೂ ಸಾಮಾಜಿಕ ನಂಬಿಕೆಗಳೇ ಇವುಗಳ ನಿರ್ಮಾಣಕ್ಕೆ ಕಾರಣವಾದವು. ದೇವಾಲಯಗಳಷ್ಟೇ ಪವಿತ್ರ ಸ್ಥಾನವನ್ನು ನೀಡಿ ಜನರು ಧಾರ್ಮಿಕ ಭಾವನೆಯಿಂದ ನಿರ್ಮಿಸುತ್ತಿದ್ದರು.

ಕೋಡಿ :

ಕೆರೆಯ ಮುಖ್ಯ ಭಾಗಗಳ ಸಾಲಿಗೆ ಸೇರುವ ಪ್ರಮುಖ ಅಂಗ ಕೋಡಿ. ಸಾಮಾನ್ಯವಾಗಿ ಕೋಡಿಯು ಕೆರೆಯ ನೀರಿರುವ ಯಾವುದಾದರು ಒಂದು ದಿಕ್ಕಿಗೆ ಇರುತ್ತದೆ. ಆದರೆ ಇದು ಏರಿಯ ದಿಕ್ಕಿನಲ್ಲಿ ಇರದೇ ಬೇರೆ ಯಾವ ದಿಕ್ಕಿನಲ್ಲಾದರೂ ಇರುತ್ತದೆ. ಅತಿ ಹೆಚ್ಚು ನೀರು ಬಂದು ಕೆರೆಯ ಏರಿಗೆ ಒತ್ತಡ ಬೀಳುತ್ತಿರುವುದನ್ನು ತಡೆಯಲು ಕೋಡಿಗಳನ್ನು ಅಳವಡಿಸಲಾಗುತ್ತದೆ. ಕೋಡಿಯ ಪ್ರದೇಶವನ್ನು ಆಯ್ಕೆ ಮಾಡಿ ಅದನ್ನು ಅಳವಡಿಸುವುದರಲ್ಲಿಯೇ ಕೆರೆಯನ್ನು ಕಟ್ಟುವವನಿಗೆ ಇರುವ ಸಾಮರ್ಥ್ಯವನ್ನು ತೋರಿಸಿಕೊಡುತ್ತದೆ. ಕೆರೆಯಲ್ಲಿ ಹೆಚ್ಚು ನೀರು ಸಂಗ್ರಹವಾಗಿ ಗರಿಷ್ಠ ಮಟ್ಟ ತಲುಪಿದಾಗ ಹೆಚ್ಚುವರಿ ನೀರು ಈ ಕೋಡಿಯ ಮೂಲಕ ಹಾದು ಹೋಗುತ್ತದೆ. ಕೆರೆಗೆ ಗರಿಷ್ಠ ಮಟ್ಟದ ನೀರು ಈ ಕೋಡಿಯ ಮೂಲಕ ಹಾದು ಹೋಗುತ್ತದೆ. ಕೆರೆಗೆ ಗರಿಷ್ಠ ನೀರು ಬಂದಿದೆ ಎಂದು ಹೇಳುವುದನ್ನು ಕಾಣುತ್ತೇವೆ. ಹೀಗೆ ಗರಿಷ್ಠ ಮಟ್ಟದ ನೀರು ಬಂದಾಗ ಕೆರೆಯ ಕೋಡಿ ಬಿತ್ತು ಎಂದು ಹೇಳುತ್ತವೆ. ಹೀಗೆ ಕೆಲವೊಂದು ಕಡೆಯಲ್ಲಿ ಕೋಡಿ ಬಿದ್ದು ನೀರು ಹರಿದುಹೋಗುವ ಪ್ರದೇಶದ ಸಮೀಪದಲ್ಲಿಯೇ ಮತ್ತೊಂದು ಕೆರೆಯನ್ನು ನಿರ್ಮಿಸಲಾಗುತ್ತಿತ್ತು. ಇದನ್ನು ಗಮನಿಸಿದಾಗ ನಮಗೆ ತಿಳಿಯುವ ಅಂಶವೆನೇಂದರೆ ನೀರು ಪೋಲಾಗುವುದನ್ನು ತಡೆಯಲು ಇಂತಹ ಕೆರೆಗಳ ಶೃಂಖಲೆಯನ್ನು ನಿರ್ಮಿಸುತ್ತಿದ್ದರೆನ್ನಬಹುದು. ಕೋಡಿಗಳನ್ನು ನಿರ್ಮಿಸುವಾಗ ಕೆರೆಯ ಗರಿಷ್ಠ ಮಟ್ಟದ ಆಧಾರದ ಮೇಲೆ ಅದೇ ಮಟ್ಟದ ಮೇಲೆ ಕೋಡಿಯನ್ನು ನಿರ್ಮಿಸಲಾಗುತ್ತಿತ್ತು. ಕೆರೆಯು ಅತೀ ದೊಡ್ಡದಾಗಿದ್ದರೆ ಎರಡು ಕೋಡಿಗಳಿರುವುದನ್ನು ಕಾಣಬಹುದು.

ಕೋಡಿಗಳನ್ನು ಸಾಮಾನ್ಯವಾಗಿ ಕಲ್ಲು, ಗಾರೆಗಳಿಂದ ನಿರ್ಮಿಸುತ್ತಾರೆ. ಕೆಲವೊಮ್ಮೆ ಕೋಡಿಯ ಇಕ್ಕೆಲಗಳಲ್ಲಿ ಭದ್ರವಾದ ಕಲ್ಲಿನ ಗೋಡೆಯನ್ನು ನಿರ್ಮಿಸಿ ಕೆರೆ ಏರಿಯ ಕೋಡಿಯ ಮೇಲೆ ಕುಸಿಯದಂತೆ ಕಾಪಾಡಲು ನಿರ್ಮಿಸುವರು. ಪ್ರತಿಯೊಂದು ಕೆರೆಯಲ್ಲೂ ತೂಬಿನ ಜೊತೆಗೆ ಕಲ್ಲು ಕಟ್ಟಡದ ಕೋಡಿಯೂ ಇರುತ್ತಿತ್ತು. ಅದರ ಮೂಲಕ ಕೆರೆಯಲ್ಲಿನ ಹೆಚ್ಚುವರಿ ನೀರು ೧೦೦ ಗಜದವರೆಗೂ ಇರುತ್ತಿತ್ತು. ಕೆಲವು ಸಲ ಕೋಡಿ ಕೆಳಗಿನ ಹಳ್ಳದಲ್ಲಿ ಒರಟುಗಲ್ಲಿನ ಇನ್ನೊಂದು ಸಣ್ಣ ಕಟ್ಟೆಯನ್ನು ಕಟ್ಟಲಾಗುತ್ತಿತ್ತು. ಕೋಡಿಯಿಂದ ಬಂದ ಹೆಚ್ಚುವರಿ ನೀರನ್ನು ನಷ್ಟವಾಗಿ ಹೋಗದಂತೆ ಹಿಡಿದಿಡುತ್ತಿತ್ತು. ಕೆರೆಯಲ್ಲಿ ಅಧಿಕವಾಗಿ ಸಂಗ್ರಹವಾಗುವ ನೀರಿನಿಂದ ಕೆರೆಯು ಒಡೆಯಬಾರದೆಂಬ ಉದ್ದೇಶದಿಂದ ಕೆರೆಗಳಿಗೆ ಕೋಡಿಯನ್ನು ನಿರ್ಮಿಸಲಾಗುತ್ತಿತ್ತು. ಕೋಡಿಗಳಿಗೆ ದಾಟು, ದಿಡುಗು ಎಂಬ ಪದಗಳನ್ನು ಬಳಕೆ ಮಾಡಿದ್ದನ್ನು ತಿಳಿಯಬಹುದು. ಬುಕ್ಕರಾಯನ ಮಗನಾದ ವಿಜಯನಗರದ ರಾಜಕುಮಾರ ಭಾಸ್ಕರ ಭವದೂರನು ನಿರ್ಮಿಸಿದ ಈ ಕೆರೆಯು ನಾಲ್ಕು ಗುಡ್ಡಗಳನ್ನು ಜೋಡಣೆ ಮಾಡಿ ನಿರ್ಮಿಸಲಾಗಿದ್ದು, ಈ ಕೆರೆಯು ಐದು ಕೋಡಿಗಳನ್ನು ಹೊಂದಿತ್ತು.[೮] ಎಂದು ತಿಳಿದು ಬರುತ್ತದೆ. ಕ್ರಿ.ಶ.೧೫೩೨ರ ದಾಖಲೆಯೊಂದು ಕೆರೆಯ ಎರಡು ಕೋಡಿಗಳ ಬಗ್ಗೆ ಪ್ರಸ್ತಾಪಿಸಿದೆ. ಇವುಗಳಿಂದ ಕೋಡಿಯ ಬಗ್ಗೆ ತಿಳಿಯಬಹುದು.

ಕೋಡಿಯನ್ನು ಕಟ್ಟುವುದರಲ್ಲಿ ಪರಿಣಿತಿಯನ್ನು ಹೊಂದಿದ ಜನರು ವಿಜಯನಗರದ ಕಾಲದಲ್ಲಿದ್ದರು ಎಂಬುದನ್ನು ಶಾಸನವು ದಾಖಲಿಸಿದೆ. ವೆಂಕಟಪತಿರಾಯನ ಕಾಲದ ರುದ್ರಪ್ಪನಾಯಿಡು ಎಂಬಾತನು ಕೋಡಿಯನ್ನು ಕಟ್ಟುವುದರಲ್ಲಿ ಪರಿಣತಿಯನ್ನು ಹೊಂದಿದ್ದು ಅವನು ಕೊಲ್ಲೂರು ಕೆರೆಗೆ ಮೂವತ್ತಮೂರು ಕಂಬಗಳಿರುವ ಕೋಡಿಯನ್ನು ನಿರ್ಮಿಸುತ್ತಾನೆಂದು ಶಾಸನವು ಉಲ್ಲೇಖಿಸಿದೆ.[೯] ಈ ಕಂಬಗಳಿರುವ ಕೋಡಿಗಳನ್ನು ನಿರ್ಮಿಸುವ ಕಂಬಗಳು ಒಂದು ಗರಿಯನ್ನು ಹೊಂದಿದ್ದವು. ಕೋಡಿಯ ಮೇಲೆ ಇರುವ ನೀರಿನ ರಭಸವನ್ನು ತಡೆಗಟ್ಟಿ ಕೋಡಿಗೆ ಆಗಬಹುದಾದ ಅಪಾಯವನ್ನು ನಿವಾರಿಸುತ್ತಿದ್ದವು. ಅಲ್ಲದೆ ಇವುಗಳು ಪ್ರವಾಹದಲ್ಲಿ ತೇಲಿ ಬರುವ ಮರದ ಬೊಡ್ಡೆಗಳನ್ನು ತಡೆಹಿಡಿದು ಕೋಡಿಗೆ ಧಕ್ಕೆ ಮಾಡದಂತೆ ಕಾಪಾಡುತ್ತಿದ್ದವು. ಮಳೆಯ ಭರಾಟೆ ತಗ್ಗಿದ ಮೇಲೆ ಕಂಬಗಳ ಮಧ್ಯೆ ಉಸುಕಿನ ಚೀಲ, ಮರದ ತೊಪ್ಪಲು, ಹಾಗೂ ಕೆಸರು ಮಣ್ಣಿನಿಂದ ಅಡ್ಡಗೋಡೆಯನ್ನು ತಾತ್ಕಾಲಿಕವಾಗಿ ನಿರ್ಮಿಸಿ ಅಧಿಕ ನೀರನ್ನು ಸಂಗ್ರಹಿಸಬಹುದಾಗಿತ್ತು. ಹೀಗೆ ಅಧಿಕವಾಗಿ ಸಂಗ್ರಹಿಸುವ ನೀರನ್ನು ರೈತರು ಉಪಯೋಗಿಸಿಕೊಂಡು ಲಾಭ ಪಡೆಯುತ್ತಿದ್ದರು. ಕೋಡಿಗಳು ಬಿದ್ದಾಗ ಈ ಕಂಬಗಳು ಸೇತುವೆಯಂತೆ ಉಪಯೋಗಿಸುತ್ತಿದ್ದರು. ಈ ರೀತಿಯ ಕೋಡಿಗಳನ್ನು ಹೊಂದಿರುವ ಕೆರೆಗಳನ್ನು ವಿಜಯನಗರ ಕಾಲಾವಧಿಯಲ್ಲಿಯೇ ಹೆಚ್ಚು ಕಂಡುಬರುತ್ತವೆ. ಕೋಡಿಗಳ ಆಕಾರ ಸಾಮಾನ್ಯವಾಗಿ ಚೌಕ, ಉದ್ದ, ಎಷ್ಟು ಅಗಲವೋ ಅಷ್ಟು ಮುಂಭಾಗದಲ್ಲಿ ಒಂದು ಕಲ್ಲು ಗೋಡೆ ಇರುತ್ತಿದ್ದನ್ನು ಕಾಣಬಹುದು.

ಕೋಡಿಯ ಪಕ್ಕದಲ್ಲಿ ಪಾರ್ಶ್ವಗೋಡೆಗಳ ರಕ್ಷಣೆ ಇರುತ್ತಿತ್ತು. ಕೆಲವು ಸಲ ಕೋಡಿ ಕೆಳಗಿನ ಹಳ್ಳದಲ್ಲಿ ಒರಟುಗಲ್ಲಿನ ಇನ್ನೊಂದು ಸಣ್ಣ ಕಟ್ಟೆಯನ್ನು ಕಟ್ಟಲಾಗುತ್ತಿತ್ತು. ಆ ಕಟ್ಟೆಯಿಂದ ಇನ್ನೊಂದು ನೀರಾವರಿ ಕಾಲುವೆಯೂ ಹೊರಡುತ್ತಿತ್ತು. ಕೆರೆಗೆ ಭದ್ರ ಎನಿಸಬಹುದಾದ ಅತ್ಯಂತ ಹೆಚ್ಚಿನ ಮಟ್ಟದ

---

೮ – 'ವಿಜಯನಗರ ಸಾಮ್ರಾಜ್ಯದ ನೀರಾವರಿ ವ್ಯವಸ್ಥೆ'. – ಸಿ. ಟಿ. ಎಂ. ಕೊಟ್ರಯ್ಯ

೯ – ಅದೇ.

ನೀರನ್ನು ಕೋಡಿ ತಡೆಹಿಡಿದಿಡುತ್ತಿತ್ತು. ಕೆಳಗಿನ ಕಟ್ಟೆಯಾದರೂ ಕೋಡಿಯಿಂದ ಬಂದ ಹೆಚ್ಚುವರಿ ನೀರನ್ನು ನಷ್ಟವಾಗಿ ಹೋಗದಂತೆ ಹಿಡಿದಿಡುತ್ತಿತ್ತು. ಕೆರೆಗಳ ಕೆಳಗೆ ಕೆರೆಗಳನ್ನು ಸರಣಿಯಲ್ಲಿ ನಿರ್ಮಿಸಲಾದ ಸಮಯದಲ್ಲಿ ಒಂದು ಮೇಲು ಮಟ್ಟದ ಕೆರೆಯಿಂದ, ಕೆಳಗಿನ ಮಟ್ಟದ ಕೆರೆಗೆ ಕೋಡಿಗಳ ಮೂಲಕ ನೀರನ್ನು ಹರಿಸಲಾಗುವುದು. ಇಂತಹ ಸರಣಿ ಕೆರೆಗಳನ್ನು ಸಾಮಾನ್ಯವಾಗಿ ನಾವು ಪರ್ವತಗಳ, ಕಣಿವೆ ಪ್ರದೇಶಗಳಲ್ಲಿ ಕಾಣುತ್ತೇವೆ. ಈ ವಿಧವಾಗಿ ನಾವು ಅನೇಕ ಮಾದರಿಯ ಕೋಡಿಗಳನ್ನು ನಿರ್ಮಿಸುವುದು ಅನಿವಾರ್ಯ. ಇನ್ನೊಂದು ಪ್ರಮುಖ ಅಂಶವೆಂದರೆ, ಕೆರೆಯಲ್ಲಿ ಸಂಗ್ರಹವಾದ ಕಸಕಡ್ಡಿ, ಬಳ್ಳಿಯಿಂದ ಕೆರೆಯನ್ನು ರಕ್ಷಿಸುವುದು. ಈ ವಿಧವಾದ ಹೊಲಸು ಕೋಡಿಗಳ ಮೂಲಕ ಹರಿದು ಹೋಗುತ್ತದೆ. ಕೆರೆಯಲ್ಲಿ ತೇಲಿ ಬರುವ ಎಲ್ಲ ಕಸಗಳನ್ನು ಕೆರೆಯಿಂದ ಹೊರಗೆ ತಳ್ಳಿ ಕೆರೆಯನ್ನು ನಿರ್ಮಲವಾಗಿರಿಸಿಕೊಳ್ಳುವುದು ಕೋಡಿಗಳ ಉದ್ದೇಶ. ಕ್ರಿ.ಶ.೧೩೮೯ರ ಒಂದು ಶಾಸನವು ಕೆರೆಯಲ್ಲಿರುವ ಕೊಳಚೆ ಎಲ್ಲವೂ ಕೋಡಿಯ ಸಂದಿಗಳಲ್ಲಿ ಶೇಖರಣೆಗೊಳ್ಳುತ್ತಿದ್ದು ಅವುಗಳು ನಿರ್ಮಲವಾಗಿಸುವುದು ಮತ್ತು ಗಾರೆಯ ಗೋಡೆಗಳು ಕೆರೆಯ ನಾಶಕ್ಕೆ ಉಂಟುಮಾಡುವ ಕಾರಣವನ್ನು ತಿಳಿಸುತ್ತದೆ.[೧೦]

ಕಾಲುವೆಗಳು :

ಕೆರೆಯಲ್ಲಿ ಸಂಗ್ರಹವಾದ ನೀರನ್ನು ನಿಯಂತ್ರಿಸಿ ಆಯಕಟ್ಟು ಪ್ರದೇಶಕ್ಕೆ ನೀರು ಹಾಯಿಸುವ ಮಾರ್ಗಕ್ಕೆ ಕಾಲುವೆ ಎಂದು ಹೆಸರು. ಇದು ಕೆರೆಯ ಒಂದು ಮುಖ್ಯ ಅವಿಭಾಜ್ಯ ಅಂಗವಾಗಿದೆ. ಕೆರೆಯ ನೀರನ್ನು ಕೆಲವೊಮ್ಮೆ ಕಾಲುವೆಗಳ ಮೂಲಕ ಏರಿಯ ಕೆಳಭಾಗದಿಂದ ವ್ಯವಸಾಯದ ಭೂಮಿಗೆ ಹಾಯಿಸುತ್ತಿದ್ದರು. ಕಾಲುವೆಗಳಿಗೆ ತೂಬುಗಳನ್ನು ಇರಿಸಿ ಕೆರೆಯ ನೀರನ್ನು ಸಮರ್ಪಕವಾಗಿ ನಿಯಂತ್ರಿಸಲಾಗುತ್ತಿತ್ತು. ಕಾಲುವೆಯ ಕೆರೆ ಏರಿಯ ಕೆಳಗಡೆ ನಿರ್ಮಿಸಲಾಗುತ್ತಿತ್ತು. ಇವುಗಳನ್ನು ಕಲ್ಲಿನಿಂದ ಕಟ್ಟಲಾಗುತ್ತಿತ್ತು. ಕೆಲವೊಂದು ಸಂದರ್ಭಗಳಲ್ಲಿ ಮರವನ್ನು ಬಳಸುತ್ತಿದ್ದರೆಂದು ತುಮಕೂರು ಜಿಲ್ಲೆಯ ರಾಮಚಂದ್ರನ ಹಳ್ಳಿಯ ಶಾಸನವು ತಿಳಿಸುತ್ತದೆ.[೧೧] ಒಂದು ಕೆರೆಗೆ ಒಂದು, ಎರಡು, ಮೂರು ಅಥವಾ ನಾಲ್ಕು ಕಾಲುವೆಗಳು ಇರುತ್ತಿದ್ದವು. ಕೆರೆಗೆ ಮೇಲ್ಮಟ್ಟದ ಕಾಲುವೆ ಮತ್ತು ಕೆಳಮಟ್ಟದ ಕಾಲುವೆಗಳನ್ನು ನಿರ್ಮಿಸಲಾಗುತ್ತಿತ್ತು. ವಿಜಯನಗರ ಪೂರ್ವಕಾಲದಲ್ಲಿ ಅತ್ಯಂತ ಕಲಾತ್ಮಕವಾಗಿ ನಾಲೆಗಳನ್ನು ಯೋಜಿಸುತ್ತಿದ್ದರು. ಕಾಲುವೆಗಳನ್ನು ನಾವು ಎರಡು ರೀತಿಯಲ್ಲಿ ಕಾಣಬಹುದು. ಮೊದಲನೆಯದು ಕೆರೆಗೆ ನೀರು ಬರುವ ಕಾಲುವೆ ಮತ್ತು ಎರಡನೆಯದು ಕೆರೆಯಿಂದ ಆಯಕಟ್ಟು ಪ್ರದೇಶಕ್ಕೆ ನೀರು ಹಾಯಿಸುವ ಕಾಲುವೆಗಳು.

ನೀರಾವರಿ ಕಾರ್ಯಗಳಿಗೆಂದೇ ನಿರ್ಮಿಸಲಾದ ಕೆರೆ ಹಾಗೂ ಇತರ ಮೂಲಗಳಿಂದ ನೀರನ್ನು ಹರಿಸುವ ಕಾಲುವೆಗಳನ್ನು ರಕ್ಷಿಸುವುದು ಪ್ರಮುಖ ಕಾರ್ಯ ಏಕೆಂದರೆ ಈ ಕಾಲುವೆಗಳು ಇಲ್ಲದೇ ಹೋದಲ್ಲಿ ನೀರಾವರಿ ಮುಂದುವರಿಯಲಾರದು. ನೀರನ್ನು ಸಂಗ್ರಹಿಸಿದಾಗ ಅದರ ಸದುಪಯೋಗಕ್ಕೆ ಕಾಲುವೆಗಳ ನಿರ್ಮಾಣದ ಕಾರ್ಯದ ಕುರಿತು ಹಲವು ಪ್ರಾಚೀನ ಶಾಸನಗಳು ವಿವರಿಸಿದ್ದನ್ನು

---

೧೦ – ಹಂಪಿ ಸಂಪುಟ – ಡಾ. ದೇವರಕೊಂಡಾರೆಡ್ಡಿ

೧೧ – ಹಂಪಿ ಪರಿಸರದ ಕೆರೆಗಳು – ಸಿ. ಎಸ್. ವಾಸುದೇವನ್.

ಕಾಣಬಹುದು. ಕೆರೆಯು ಪ್ರಮುಖ ಭಾಗವಾಗಿದ್ದ ಕಾಲುವೆಯು ಕೆರೆಯ ನೀರನ್ನು ನಿಯಂತ್ರಿಸಿ ಆಯಕಟ್ಟು ಪ್ರದೇಶಕ್ಕೆ ನೀರು ಹಾಯಿಸುವ ಮಾರ್ಗವಾಗಿದೆ. ಕೆಳಮಟ್ಟದ ಮತ್ತು ಮೇಲ್ಮಟ್ಟದ, ಕಾಲುವೆಯಿಂದ ವಿವಿಧ ಎತ್ತರಗಳಲ್ಲಿ ಇರುವುದರಿಂದ ಕೆರೆಯು ತುಂಬಿದಾಗ ಮೇಲ್ಮಟ್ಟದ ಹಾಗೂ ಕೆಳಮಟ್ಟಕ್ಕೆ ಬಂದಾಗ ಕೆಳಮಟ್ಟದ ಕಾಲುವೆಯಿಂದ ನೀರನ್ನು ಹಾಯಿಸಿಕೊಳ್ಳಲಾಗುತ್ತಿತ್ತು. ಇಂತಹ ವ್ಯವಸ್ಥೆಯನ್ನು ನಾವು ಇಂದು ಕಾಣುತ್ತೇವೆ. ಕ್ರಿ.ಶ.೧೩೯೭ರಲ್ಲಿ ಚಿರೇರು ನದಿಯ ಪ್ರವಾಹದಿಂದ ಹೂಳು ತುಂಬಿದ ಕಾಲುವೆಯ ನಿರ್ಮಾಣದ ಬಗೆಗೆ ವಿವರಿಸಿದೆ. ಈ ಬಗೆಯ ಕಾರ್ಯಗಳ ವೆಚ್ಚವನ್ನು ಭರಿಸಲೆಂದು ದಾನಗಳನ್ನು ನೀಡಲಾಗುತ್ತಿತ್ತು. ಕೆರೆ, ಬಾವಿ, ನದಿ, ಹಳ್ಳ, ಚಿಲುಮೆಗಳ ನೀರು ಈ ಕಾಲುವೆಗಳ ಮುಖಾಂತರ ವ್ಯವಸಾಯ ಭೂಮಿಗೆ ಹಾಯಿಸಲಾಗುತ್ತಿತ್ತು. ಕಾಲುವೆಗಳ ನಿರ್ಮಾಣ ಕಾರ್ಯ ಹಾಗೂ ಅವುಗಳು ಹೂಳು ತುಂಬಿದಾಗ ಅವುಗಳನ್ನು ರಿಪೇರಿ ಮತ್ತು ಪುನರ್‌ನಿರ್ಮಿಸಲು ಆಗುವ ವೆಚ್ಚವನ್ನು ಕರದಿಂದ ಭರಿಸುತ್ತಿದ್ದರು. ನಿರ್ಮಾಣಕ್ಕೆ ಭೂಮಿಯನ್ನು ಪಡೆಯುತ್ತಿದ್ದರು. ಈ ಎಲ್ಲ ಅಂಶಗಳನ್ನು ಶಾಸನಗಳ ಮೂಲಕ ತಿಳಿಯಬಹುದು.

ಕ್ರಿ.ಶ.೧೩೯೮ರಲ್ಲಿ ಮಹಾಮಂಡಳೇಶ್ವರ ವಲ್ಲಭದೇವ ಮಹಾರಾಜನ ಆಡಳಿತ ಸಮಯದಲ್ಲಿ ಅನಂತಪುರ ಜಿಲ್ಲೆಯ ಶಿಂಗಾವರಂನಲ್ಲಿ ಅಗೆದ ಕಾಲುವೆಗೆಂದೇ ಸರ್ವಮಾನ್ಯ ಅಂದರೆ ಸರ್ವಕಾಲದ ದಾನವಾಗಿ ಭೂಮಿಯನ್ನು ನೀಡಲಾಯಿತು. ಕಾಲುವೆಗಳು ಹೂಳಿನಿಂದ ತುಂಬಿದಾಗ ಅವುಗಳ ಪುನರ್ ನಿರ್ಮಾಣ ಕಾರ್ಯ ಸ್ಥಳೀಯ ಅಧಿಕಾರಿಯಿಂದ ಕೈಗೊಳ್ಳಲಾಗುತ್ತಿತ್ತು. ಕ್ರಿ.ಶ.೧೪೧೦ ಶಿಲಾಲೇಖನದ ದಾಖಲೆಯಂತೆ ಕೆರೆ, ಕಾಲುವೆ, ಮತ್ತು ಬಾವಿಗಳ ರಿಪೇರಿ ಕಾರ್ಯದ ವೆಚ್ಚವನ್ನು ಅಗ್ರಹಾರದ ಬ್ರಾಹ್ಮಣರು ಹಾಗೂ ದೇವಾಲಯದವರು ೧:೨ರ ಪ್ರಮಾಣದಲ್ಲಿ ಹಂಚಿಕೊಂಡರು. ಇದರಂತೆ ಕಾಲುವೆಯಿಂದ ಹರಿದು ಬಂದ ನೀರನ್ನು ಹಂಚಿಕೊಳ್ಳಬೇಕೆಂಬ ಕರಾರನ್ನು ಮಾಡಿಕೊಳ್ಳಲಾಗುತ್ತಿತ್ತು.[೧೨] ಕಾಲುವೆಗಳಿಗಾಗಿ ದಾನ ನೀಡಿದವರು ಸಮಾಜದ ವಿವಿಧ ಅಂತಸ್ತುಗಳಿಂದ ಬಂದವರಾಗಿದ್ದರು. ಅರಸರು, ರಾಣಿಯರು, ಪಾಳೆಯಗಾರರು, ಅಧಿಕಾರಿಗಳು, ಮಠಾಧೀಶರು, ಪುರೋಹಿತರು, ವ್ಯಾಪಾರಸ್ಥರು, ವಿದ್ವಾಂಸರು, ನಾಗರಿಕರು, ನರ್ತಕಿಯರು ಹಾಗೂ ಇತರರು. ಕ್ರಿ.ಶ.೧೪೮೭ರ ಸಾಳುವ ವಂಶದ ಅವಧಿಯಲ್ಲಿ ವಿರುಪಾಕ್ಷ ಡಣನಾಯಕನು ವಿರುಪಾಕ್ಷ ಡಣ್ಣಾಯಕಪುರ ಎಂಬಲ್ಲಿ ದೇವಸ್ಥಾನದ ಭೂಮಿಗಳಿಗೆಂದೆ ಒಂದು ನೀರಾವರಿ ಕಾಲುವೆಯನ್ನು ನಿರ್ಮಿಸಿದ. ಹೀಗೆ ನೂತನವಾಗಿ ರಚಿಸಿದ ಹಳ್ಳಿಗೂ ಅದೇ ಹೆಸರನ್ನು ಇಟ್ಟಿದ್ದನು. ಅಲ್ಲದೆ ದೇವಸ್ಥಾನವನ್ನು ಕೆರೆಯಲ್ಲಿ ನಿರ್ಮಿಸಿದ. ಈ ಸಂದರ್ಭದಲ್ಲಿ ಹಣವನ್ನು ದಾನ ಮಾಡಿ ಅವುಗಳ ಉಸ್ತುವಾರಿ ಏರ್ಪಾಟು ಮಾಡಿದನು.

ಶಿಲಾಲೇಖನದಲ್ಲಿ ಕಾಲುವೆಗಳಿಂದ ನಿರ್ಮಿಸಿದವರಿಗೆ ಭೂಮಿ ದಾನ ಮಾಡಲಾಗಿತ್ತೆಂದು ತಿಳಿದು ಬರುತ್ತದೆ. ಕೆಲವು ಪ್ರದೇಶಗಳಲ್ಲಿದ್ದ ವ್ಯವಸಾಯ ಭೂಮಿಯನ್ನು ದೇವಸ್ಥಾನಕ್ಕೆ ದಾನ ಮಾಡುತ್ತಿದ್ದರು. ದೇವಸ್ಥಾನದ ಆದಾಯದಿಂದ ಬಂದ ಹಣದಿಂದಲೇ ಕಾಲುವೆಗಳನ್ನು ದುರಸ್ಥಿ ಮಾಡುತ್ತಿದ್ದರು. ಕಲಾತ್ಮಕ ಕಾಲುವೆಗಳನ್ನು ನಿರ್ಮಿಸಿದ್ದನ್ನು ವಿಜಯನಗರ ಅರಸರ ಅವಧಿಯಲ್ಲಿ

---

೧೨ – 'ವಿಜಯನಗರ ಸಾಮ್ರಾಜ್ಯದ ನೀರಾವರಿ ವ್ಯವಸ್ಥೆ'– ಸಿ. ಟಿ. ಎಂ. ಕೋಟ್ರಯ್ಯ.

ಕಾಣಬಹುದು. ಕ್ರಿ.ಶ.೧೪೬೪ರ ಸಾಳುವ ರಾಮಚಂದ್ರನು ದೇವಸ್ಥಾನದ ಹಳ್ಳಿಯಾದ ಅವಿಲಾಲದಲ್ಲಿ ಒಂದು ನೀರಾವರಿ ಕಾಲುವೆಯನ್ನು ಅಗೆಸಿದ್ದು ಅದರ ಕಾರ್ಯದಿಂದ ದೇವಸ್ಥಾನದ ಆದಾಯ ಅಧಿಕಗೊಂಡಿತು. ಈ ಅಧಿಕ ದೇವಾಲಯದ ಆದಾಯದಿಂದ ಹಲವಾರು ಸಾಂಪ್ರದಾಯಿಕ ಧರ್ಮಕಾರ್ಯಗಳನ್ನು ಕೈಗೊಳ್ಳಲಾಗುತ್ತಿತ್ತು. ಅಧಿಕ ನೈವೆದ್ಯ ಮತ್ತು ಪ್ರಸಾದಕ್ಕೂ ಅನುಕೂಲವಾಯಿತು. ಹೀಗೆ ತಿರುಪತಿಯ ಅನೇಕ ಶಿಲಾಲಿಪಿಯ ವಿವರಗಳು ತಿಳಿಸುತ್ತವೆ.[೧೩] ಕಾಲುವೆಗಳಲ್ಲಿ ಕೆರೆಗೆ ಬರುವ ಕಾಲುವೆಗಳಿವೆ ಎಂಬುದನ್ನು ತಿಳಿಸಲಾಗಿದೆ. ಪ್ರದೇಶಗಳಲ್ಲಿ ಮಳೆಯಿಂದಾಗಿ ಪೋಲಾಗುವ ನೀರೆಲ್ಲವನ್ನೂ ಕೆರೆಯಲ್ಲಿ ಸಂಗ್ರಹಿಸುವ ಸಲುವಾಗಿ ಇಂತಹ ಕಾಲುವೆಗಳನ್ನು ನಿರ್ಮಿಸಿ ಅವುಗಳ ಮೂಲಕ ನೀರನ್ನು ಕೆರೆಗೆ ಸೇರಿಸಲಾಗುತ್ತಿತ್ತು. ಹೀಗೆ ಸಂಗ್ರಹಗೊಂಡ ಕೆರೆ ನೀರನ್ನು ಅವಶ್ಯಕತೆಗೆ ಅನುಗುಣವಾಗಿ ಜನತೆ ವ್ಯವಸಾಯಕ್ಕೆ ಹಾಗೂ ಇತರ ಉಪಯೋಗಕ್ಕೆ ಬಳಸಿಕೊಳ್ಳಲು ಕೆರೆಯಿಂದ ನೀರು ಹೊರ ಹೋಗುವ ಕಾಲುವೆ ಮೂಲಕ ಪಡೆಯಲಾಗುತ್ತಿದ್ದರು.

ಕೆರೆಯ ತಳ :

ಕೆರೆಯ ತಳವು ಮುಖ್ಯ ಭಾಗವಾಗಿದ್ದು ಸಾಮಾನ್ಯ ಭೂ ಪ್ರದೇಶವಾಗಿದೆ. ಈ ಭಾಗದಲ್ಲಿ ಚಿಕ್ಕ ಹಳ್ಳಗಳಿಂದ ಇತರ ಎತ್ತರ ಪ್ರದೇಶಗಳಿಂದಲೂ ಹರಿದು ಬರುವ ನೀರು ಇಲ್ಲೇ ಸಂಗ್ರಹಗೊಳ್ಳುತ್ತದೆ. ಅಧಿಕ ನೀರು ಸಂಗ್ರಹಗೊಂಡಂತೆ ನೀರಿನ ಹರವು ವಿಸ್ತಾರಗೊಳ್ಳುತ್ತಾ ಹೋಗುತ್ತದೆ. ಭೂಮಟ್ಟದಿಂದ ಕೆರೆ ಕಟ್ಟೆಯ ಗರಿಷ್ಟ ಮಟ್ಟವನ್ನು ಮುಟ್ಟೆದೆ ಎನ್ನುತ್ತಾರೆ. ಕನಿಷ್ಟ ಮಟ್ಟದ ನೀರು ನಿಲ್ಲುವ ಕೆರೆಯ ತಳಭಾಗವನ್ನು ಕೆರೆಯ ತಳ ಎನ್ನುವರು. ಕೆರೆಯಲ್ಲಿ ಒಬ್ಬ ವ್ಯಕ್ತಿಯ ಆಳೆತ್ತರ ಎತ್ತರದಷ್ಟೇ ನೀರು ಇರಬೇಕು ಮತ್ತು ತುಂಬಬೇಕು. ಅದಕ್ಕಿಂತ ಹೆಚ್ಚಿನ ನೀರು ಬಂದ ಪಕ್ಷದಲ್ಲಿ ಆ ನೀರು ಕೋಡಿಯ ಮೂಲಕ ಹರಿದು ಹೋಗಬೇಕು ಎಂದು ತಿಮ್ಮಲಾಪುರದ ಕೆರೆಯ ಸಮೀಪದಲ್ಲಿ ದೊರೆತಿರುವ ಶಾಸನವು ದಾಖಲಿಸಿರುವುದು ಪ್ರಶಂಸನಾರ್ಹ.[೧೪] ಇದರಿಂದ ಒಂದು ಕೆರೆಯಲ್ಲಿ ಗರಿಷ್ಟ ಮಟ್ಟದ ನೀರಿನ ಪ್ರಮಾಣ ಎಷ್ಟಿರಬೇಕು ಎಂಬುದರ ಬಗೆಗೆ ತಿಳಿದು ಬರುತ್ತದೆ. ವ್ಯಕ್ತಿಯ ಆಳೆತ್ತರದ ಮಟ್ಟಕ್ಕಿಂತ ಅಧಿಕ ನೀರು ಬಂದಲ್ಲಿ ಕೆರೆ ಏರಿಗೆ ಅಪಾಯ ಉಂಟಾಗುವ ಸಾಧ್ಯತೆ ಇದೆ. ಆದ್ದರಿಂದ ಒಂದೇ ಪ್ರದೇಶದಲ್ಲಿ ಎರಡು, ಮೂರು ಕೆರೆಗಳು ಕಂಡು ಬರುತ್ತವೆ. ಅವುಗಳು ಒಂದಕ್ಕೊಂದು ಹೊಂದಿಕೊಂಡು ಹೆಚ್ಚುವರಿ ನೀರು ಒಂದು ಕೆರೆಯಿಂದ ಮುಂದಿನ ಕೆರೆಯಲ್ಲಿ ಸಂಗ್ರಹಗೊಳ್ಳುತ್ತವೆ.

ಕೆರೆಗಳಲ್ಲಿ ಹೂಳು ತುಂಬಿದ್ದನ್ನು ತೆಗೆಯುವಾಗ ಕೆರೆಯ ತಳಭಾಗವು ಇನ್ನೂ ಆಳ ಮತ್ತು ಅಗಲವಾಗುತ್ತದೆ. ಕೆರೆಯ ಏರಿಯನ್ನು ನಿರ್ಮಿಸುವಾಗ ಕೆರೆಯ ತಳಭಾಗದ ಮಣ್ಣನ್ನು ಹಾಗೂ ಕೋಡಿಯನ್ನು ನಿರ್ಮಿಸುವಾಗ ಕೆರೆಯ ತಳಭಾಗದ ಮಣ್ಣನ್ನೇ ಉಪಯೋಗಿಸುತ್ತಿದ್ದರು ಎಂಬುದನ್ನು ನೋಡಿದ್ದೇವೆ. ಇದರಿಂದ ಕೆರೆಯ ತಳಭಾಗವು ಪದೇ ಪದೇ ವಿಸ್ತಾರವಾಗುತ್ತಿದ್ದರಿಂದ ಕೆರೆಗಳಲ್ಲಿ ಹೆಚ್ಚು ನೀರು ಸಂಗ್ರಹವಾಗುವುದಕ್ಕೆ ಸಹಾಯವಾಗುತ್ತದೆ. ಕೆರೆಯಲ್ಲಿ ಹೂಳನ್ನು ತೆಗೆಯುವುದರ ಮೂಲಕ ಕೆರೆಯಲ್ಲಿ ಸಂಗ್ರಹಗೊಂಡ ಕಸಕಡ್ಡಿಗಳು ತೆಗೆಯುದರ ಮೂಲಕ ಕೆರೆಯ ತಳವನ್ನು ವಿಸ್ತರಿಸುವರು. ಹೀಗೆ ಆಳ ಮತ್ತು ವಿಸ್ತಾರವನ್ನು ಹೆಚಿಸುವುದರಿಂದ ಕೆರೆಯಲ್ಲಿ ಹೆಚ್ಚು ನೀರು ಸಂಗ್ರಹವಾಗುವುದರಿಂದ

---

೧೩ – 'ವಿಜಯನಗರ ಸಾಮ್ರಾಜ್ಯದ ನೀರಾವರಿ ವ್ಯವಸ್ಥೆ' – ಸಿ. ಟಿ. ಎಂ. ಕೊಟ್ರಯ್ಯ

೧೪–ಹಂಪಿ ಸಂಪುಟ–ಡಾ. ದೇವರಕೊಂಡಾರೆಡ್ಡಿ

ಕೆರೆಯ ಏರಿಗೆ ಅಪಾಯವಾಗುತ್ತದೆ. ಅಂದರೆ ಒಡೆಯುವ ಸಾಧ್ಯತೆಯಿಂದಾಗಿ ಅದನ್ನು ರಕ್ಷಿಸುವ ಮೂಲಕ ಸರಣಿ ಕೆರೆಗಳನ್ನು ನಿರ್ಮಿಸಲಾಗುತ್ತದೆ. ಇದರಿಂದ ಒಂದು ಕೆರೆಯಲ್ಲಿ ಹೆಚ್ಚಾದ ನೀರನ್ನು ಕೆಳಗಿನ ಅಥವಾ ಮುಂದಿನ ಕೆರೆಗೆ ಹರಿಯ ಬಿಡಲಾಗುತ್ತದೆ. ಒಟ್ಟಿನಲ್ಲಿ ಒಂದು ಕೆರೆಗೆ ಈ ಕೆರೆಯ ತಳಭಾಗವು ಇಲ್ಲದೇ ಹೋದಲ್ಲಿ ಕೆರೆಯೆನ್ನಿಸಲಾಗದು. ಕೆರೆಯ ತಳದ ಪ್ರಮಾಣ ಎಷ್ಟಿರಬೇಕೆಂಬುದನ್ನು ತಿಮ್ಮಲಾಪುರದ ಕೆರೆಯ ಬಳಿ ದೊರೆತ ಶಾಸನದ ಮೂಲಕ ತಿಳಿಯಬಹುದಾಗಿದೆ. ಆ ಕೆರೆಯ ವಿಸ್ತೀರ್ಣತೆಯ ಮೇಲೆ ಕೆರೆಯ ತಳವು ನಿರ್ಮಾಣವಾಗಿರುತ್ತದೆ.

ಜಲಾನಯನ ಪ್ರದೇಶ :

ಜಲಾನಯನ ಪ್ರದೇಶವನ್ನು ನಾವು ಕೆರೆಯ ಒಂದು ಭಾಗವೆಂದು ತಿಳಿಯಬಹುದಾಗಿದೆ. ಸಾಮಾನ್ಯವಾಗಿ ಈ ಪ್ರದೇಶವು ಕೆರೆಯ ಭಾಗಕ್ಕಿಂತ ಎತ್ತರವಾಗಿರುತ್ತದೆ ಮತ್ತು ಇಲ್ಲಿ ಹೆಚ್ಚು ಮಳೆಯಾಗುತ್ತಿರುತ್ತದೆ. ಎರಡು ಗುಡ್ಡಗಳ ನಡುವಿರುವ ಕಣಿವೆ ಪ್ರದೇಶವನ್ನು ಜಲಾನಯನ ಪ್ರದೇಶ ಎಂದು ಕರೆಯಲಾಗುತ್ತದೆ. ಈ ಬೆಟ್ಟ ಕಣಿವೆಗಳಲ್ಲಿರುವ ಸಸ್ಯಗಳು ಮಳೆಯ ನೀರನ್ನು ತಮ್ಮ ಬೇರುಗಳಲ್ಲಿ ಹಾಗೂ ಒಣಗಿದ ಎಲೆಗಳ ನಡುವಿನ ಪದರುಗಳಲ್ಲಿ ಮತ್ತು ಮಣ್ಣಿನಲ್ಲಿ ಸಂಗ್ರಹಿಸಿಕೊಂಡಿರುತ್ತದೆ. ಇಂತಹ ನೀರು ಕಾಲಕ್ರಮದಲ್ಲಿ ಝರಿಗಳಂತೆ ಹರಿದು ಬಂದು ನದಿಗಳಾಗಿ ಮಾರ್ಪಾಡಾಗುತ್ತವೆ. ಇಂತಹ ಝರಿಗಳು ಹಳ್ಳವಾಗಿ ನಂತರ ಕೆರೆಗೆ ಬಂದು ಸೇರುತ್ತವೆ. ಹೀಗೆ ಸಂಗ್ರಹಿಸಿಕೊಂಡ ನೀರಿಗೆ ಕಟ್ಟೆಯನ್ನು ಕಟ್ಟಿ ಕೆರೆಯನ್ನು ನಿರ್ಮಿಸಲಾಗುತ್ತದೆ. ಜಲಾನಯನ ಪ್ರದೇಶದಲ್ಲಿ ಮುಖ್ಯವಾಗಿ ನೆನಪಿಡಬೇಕಾದ ಅಂಶವೆಂದರೆ ಮಳೆ ಬೀಳುವ ಪ್ರದೇಶ ಮತ್ತು ಕೆರೆಗೆ ಹರಿದು ಬರುವ ನೀರಿನ ಪ್ರಮಾಣಗಳು ಪರಸ್ಪರ ಸಂಬಂಧ ಹೊಂದಿರುತ್ತವೆ ಎಂಬುದನ್ನು ಈ ಜಲಾನಯನ ಪ್ರದೇಶಗಳನ್ನು ಗಮನದಲ್ಲಿರಿಸಿಕೊಂಡು ಕೆರೆಗಳನ್ನು ನಿರ್ಮಿಸಲಾಗುತ್ತಿತ್ತು. ಇವುಗಳಿಂದಾಗಿ ಎಲ್ಲಾ ಕಡೆಗಳಿಂದ ನೀರು ಬಂದು ಕೆರೆಯಲ್ಲಿ ಸಂಗ್ರಹಗೊಳ್ಳುತ್ತದೆ. ಕೆರೆಗಳ ನಿರ್ಮಾಣದಲ್ಲಿ ಈಗಾಗಲೇ ನಾವು ಕೆರೆ ನಿರ್ಮಿತವಾಗುವ ಪ್ರದೇಶ ಹೇಗಿರಬೇಕು ಎಂಬುದನ್ನು ತಿಳಿದಿದ್ದೇವೆ. ಈ ಪ್ರದೇಶದಲ್ಲಿರುವ ಸಸ್ಯಗಳಿಂದಾಗಿ ಅವು ಹಿಡಿದಿಡುವ ನೀರಿನ ಅಂಶದಿಂದಾಗಿ ಈ ಪ್ರದೇಶ ಸದಾ ನೀರಿನಂಶದಿಂದ ಕೂಡಿರುವುದರಿಂದ ಕೆರೆಗಳು ಅಂತರ್ಜಲ ಮಟ್ಟದಿಂದ ಉತ್ತಮವಾಗಿರುವಂತೆ ಸಹಾಯ ಮಾಡುತ್ತವೆ.

ಹೆಚ್ಚಾಗಿ ಕೆರೆಗಳು ನಿರ್ಮಾಣಗೊಳ್ಳುವುದು ನೀರು ಸಂಗ್ರಹಗೊಳ್ಳುವ ಪ್ರದೇಶಗಳಲ್ಲಿ ಇಂತಹ ನೀರು ಸಂಗ್ರಹಗೊಂಡರು ಒಮ್ಮೊಮ್ಮೆ ಕೆರೆಗಳು ನೀರಿಲ್ಲದೆ ಬರಿದಾಗಿರುವುದನ್ನು ಕಾಣುತ್ತೇವೆ. ಅದರಲ್ಲಂತೂ ಕೆಲವು ಕೆರೆಗಳು ನಿರ್ಮಾಣವಾದಾಗಿನಿಂದ ಇಂದಿನವರೆಗೂ ಬತ್ತದೆ ಇರುವುದನ್ನು ಕಾಣುತ್ತೇವೆ. ಕಾರಣ ಅಲ್ಲಿರುವ ಅಂತರ್ಜಲದ ಕಾರಣದಿಂದಾಗಿ. ಹೀಗೆ ಅಂತರ್ಜಲ ಇರುತ್ತದೆ ಅನ್ನುವುದಾದರೆ, ಕೆರೆಯ ಸುತ್ತಮುತ್ತಲಿರುವ ಸಸ್ಯಗಳೇ ಕಾರಣ. ಅವುಗಳು ಬೇರಿನಲ್ಲಿ ಹಿಡಿದಿಟ್ಟಿರುವ ನೀರಿನ ಅಂಶವೇ ಕಾರಣ. ಈ ಜಲಾನಯನ ಪ್ರದೇಶವು ಗುಡ್ಡ, ಕಣಿವೆಗಳಿಂದ ಕೂಡಿರುವುದರಿಂದ ಅವುಗಳಲ್ಲಿ ಸಣ್ಣ ಸಣ್ಣ ಸಸ್ಯರಾಶಿಗಳು ಕಂಡುಬರುತ್ತಿರುವುದರಿಂದ ಅಂಥಹ ಪ್ರದೇಶಗಳಲ್ಲಿ ಸದಾ ಅಂತರ್ಜಲ ಮಟ್ಟವನ್ನು ಆ ಪ್ರದೇಶವು ಕಾಯ್ದುಕೊಂಡಿರುತ್ತದೆ. ಇದರಿಂದಾಗಿ ಕೆರೆಯ ಮುಖ್ಯ ಭಾಗವಾಗಿ ಜಲಾನಯನ ಪ್ರದೇಶವು ಪ್ರಮುಖ ಪಾತ್ರ ವಹಿಸುತ್ತವೆ. ಇದು ಕೆರೆಗಳಿಂದ ಎತ್ತರ ಭಾಗದಲ್ಲಿರುವುದರಿಂದ

ಈ ಪ್ರದೇಶದಲ್ಲಿ ಆಗುವ ಮಳೆಯ ನೀರು ಎಲ್ಲವೂ ಕೆರೆಗಳಲ್ಲೇ ಸಂಗ್ರಹಗೊಳ್ಳುತ್ತವೆ.

ಆಯಕಟ್ಟು ಅಥವಾ ಅಚ್ಚುಕಟ್ಟು ಪ್ರದೇಶ :

ಕೆರೆಯ ಮುಖ್ಯ ಭಾಗಗಳಲ್ಲಿ ಒಂದೆನಿಸಿಕೊಂಡ ಈ ಭಾಗವು ಸಾಮಾನ್ಯವಾಗಿ ಕೆರೆಯ ವಿರುದ್ಧ ದಿಕ್ಕಿನ ಪ್ರದೇಶವಾಗಿರುತ್ತದೆ. ಇದನ್ನು ಆಯಕಟ್ಟು ಅಥವಾ ಅಚ್ಚುಕಟ್ಟು ಪ್ರದೇಶ ಎಂದು ಕರೆಯುತ್ತೇವೆ. ಇದು ಕೆರೆಯ ನೀರಾವರಿಗೊಳಪಟ್ಟ, ಕೃಷಿ ಮಾಡಲ್ಪಟ್ಟ ವ್ಯವಸಾಯ ಭೂಮಿಯಾಗಿದೆ. ಆಯಕಟ್ಟು, ಅಚ್ಚುಕಟ್ಟು ಎಂಬ ಪದಗಳು ವಿಜಯನಗರ ಕಾಲದ ಶಾಸನಗಳಲ್ಲಿ ಕಾಣಬಹುದು. ಕೆರೆ ಈ ಪ್ರದೇಶದ ಗುಣಮಟ್ಟವನ್ನು ತಿಳಿಸುತ್ತವೆ. ಈ ಕೆರೆಯ ಆಯಕಟ್ಟು ಪ್ರದೇಶದಲ್ಲಿ ವ್ಯವಸಾಯ ಮಾಡಲಾಗುತ್ತದೆ. ವಿಜಯನಗರದ ತೇದಿಶಾಸನವು ಆಯಕಟ್ಟಿನ ಪ್ರದೇಶವನ್ನು ಸಮನಾಗಿಸುವ ಕಾರ್ಯದಿಂದ, ಕೆರೆಯ ನೀರು ಆಯಕಟ್ಟಿಗೆ ಸಮರ್ಪಕವಾಗಿ ಒದಗಿಸುವುದನ್ನು ತಿಳಿಸುತ್ತದೆ. ಅಷ್ಟಲ್ಲದೇ ಕೆರೆಗಳ ಆಧಾರದ ಮೇಲೆ ಅಚ್ಚುಕಟ್ಟು ಪ್ರದೇಶವನ್ನು ಅದರ ಗುಣಮಟ್ಟದ ಆಧಾರದ ಮೇಲೆ ಉತ್ತಮ, ಮಧ್ಯಮ ಮತ್ತು ಅಧಮ ಎಂದು ವಿಂಗಡಿಸಲಾಗಿದೆ. ಇವೆಲ್ಲವುಗಳಿಗೂ ಸಮರ್ಪಕವಾಗಿ ಕೆರೆಯ ನೀರನ್ನು ಹಂಚಿಕೊಳ್ಳುತ್ತವೆ. ಪೊರುಮಾಮಿಲ್ಲನ ಮತ್ತು ಗುಂಡನ ಹಳ್ಳಿಯ ಶಾಸನಗಳು ಆಯಕಟ್ಟು ಪ್ರದೇಶವು ಸಮತಟ್ಟಾಗಿರಬೇಕು ಎಂದು ತಿಳಿಸುತ್ತದೆ.

ಒಂದು ಕೆರೆಯ ಸಾಮರ್ಥ್ಯವು ಅದರ ಕೆಳಗಿನ ಅಚ್ಚುಕಟ್ಟು ಪ್ರದೇಶಕ್ಕೆ ಅನುಗುಣವಾಗಿ ನೀರನ್ನು ಪೂರೈಸುತ್ತಿರುತ್ತವೆ. ಸಾಮಾನ್ಯವಾಗಿ ಈ ಭಾಗವು ಕೃಷಿಗೆ ಒಳಪಟ್ಟು ಇಲ್ಲಿ ಕೆರೆಯ ನೀರನ್ನು ಉಪಯೋಗಿಸಿಕೊಂಡು ಬೆಳೆಗಳನ್ನು ಬೆಳೆಯುತ್ತಿದ್ದರು. ಕೆರೆಯ ಈ ಭಾಗವನ್ನು ಹೆಚ್ಚಾಗಿ ಕೆರೆಗಳನ್ನು ನಿರ್ಮಾಣ ಮಾಡಿರುವ ವ್ಯಕ್ತಿಗಳಿಗೆ, ಸಂಬಂಧಿಸಿದ್ದಾಗಿರುತ್ತವೆ. ಕೆರೆಗಳನ್ನು ನಿರ್ಮಿಸಿದವರಿಗೆ ಹಾಗೂ ದುರಸ್ತಿಗೊಳಸಿದವರಿಗೆ ಭೂಮಿಯನ್ನು ದಾನ ನೀಡುತ್ತಾರೆಂದು ಹೇಳಲಾಗುವ ಭೂಮಿಯು ಇದೇ ಪ್ರದೇಶವಾಗಿದೆ ಎಂಬುದನ್ನು ಕೆಲವು ಕೆರೆಗಳ ನಿರ್ಮಾಣದಿಂದ ತಿಳಿಯಬಹುದು. ಕೆರೆಗಳಿಗೆ ತೂಬುಗಳನ್ನು ಹಾಗೂ ಕಾಲುವೆಗಳನ್ನು ನಿರ್ಮಿಸುವುದರ ಉದ್ದೇಶವೆ, ಈ ಆಯಕಟ್ಟು ಪ್ರದೇಶಗಳಿಗೆ, ಹಾಗೂ ವ್ಯವಸಾಯಕ್ಕೆ ಅನುಕೂಲವಾಗಲು ನಿರ್ಮಿಸಲಾಗಿದೆ. ಇವುಗಳನ್ನು ನಿರ್ಮಿಸಿದ್ದು ನೋಡಿದರೆ ಕೆರೆಯ ವಿರುದ್ಧ ಭಾಗದಲ್ಲಿ ಇಂತಹ ಅಚ್ಚುಕಟ್ಟು ಪ್ರದೇಶವನ್ನು ರಚಿಸಿಕೊಂಡು ವ್ಯವಸಾಯ ಮಾಡಲಾಗುತ್ತದೆ. ಇಂದಿಗೂ ನಾವು ಈ ಪ್ರದೇಶವನ್ನು ಕಾಣಬಹುದು.

ಕೆರೆಗಳ ಸಂರಕ್ಷಣಾ ಕ್ರಮಗಳು :

ಕೆರೆಗಳು ಹೇಗೆ ರಚನೆಗೊಂಡವು? ರಚಿಸಿದವರು ಯಾರು? ಎಂಬೆಲ್ಲಾ ವಿಷಯವನ್ನು ಹಿಂದಿನ ಅಧ್ಯಾಯದಲ್ಲಿ ನಾವು ತಿಳಿದುಕೊಂಡಿದ್ದೇವೆ. ಆದರೆ ಅವುಗಳ ನಿರ್ವಹಣಾ ಜವಾಬ್ದಾರಿಯನ್ನು ಯಾರು ನಿರ್ವಹಿಸುವರೆಂದು ತಿಳಿಯುವುದು ಅವಶ್ಯ, ಆದ್ದರಿಂದ ಅದರ ಪ್ರಮುಖ ಸಂರಕ್ಷಣಾ ಕ್ರಮಗಳನ್ನು ತಿಳಿದುಕೊಳ್ಳೋಣ. ಪ್ರಾಚೀನ ಭಾರತದಲ್ಲಿ ಕೆರೆಗಳ ನಿರ್ವಹಣೆಯ ಜವಾಬ್ದಾರಿಯು ರಾಜ ಮತ್ತು ಪ್ರಜೆಗಳ ಮೇಲೆ ಇತ್ತು ಎಂಬುದನ್ನು ಈಗಾಗಲೇ ತಿಳಿದಿದ್ದೇವೆ. ರಾಜನ ಪ್ರತಿನಿಧಿಗಳು ಒಂದು ಗ್ರಾಮದ ಅಥವಾ ಮಂಡಲದ ಸಭೆಯ ಸದಸ್ಯರುಗಳು ಈ ಕಾರ್ಯಭಾರವನ್ನು ನಿರ್ವಹಿಸುತ್ತಿದ್ದರು.

ಆದರೆ ಕೆಲವು ಶಾಸನಗಳಲ್ಲಿ ಕೆರೆಯ ನಿರ್ವಹಣೆ ಮತ್ತು ರಕ್ಷಣೆಯನ್ನು ಕೆಲವು ಸಂದರ್ಭಗಳಲ್ಲಿ ಕೆರೆಯನ್ನು ಕಟ್ಟಿಸಿದವನಿಗೆ ಹೊರಿಸಲಾಗುತ್ತಿತ್ತು. ಮಧ್ಯಕಾಲೀನ ಯುಗದಲ್ಲಿ ಕೆರೆ ನಿರ್ಮಿಸುವ, ಪೋಷಿಸುವ ಜವಾಬ್ದಾರಿ ಅರಸನ ಮೇಲಿತ್ತು. ಅಧಿಕ ಸಂಖ್ಯೆಯಲ್ಲಿ ಕೆರೆ, ಕುಂಟೆಗಳು ನಿರ್ಮಾಣಗೊಂಡಂತೆಯೇ ಅವುಗಳನ್ನು ನಿರ್ವಹಿಸಲು ಅನೇಕ ನಿರ್ವಾಹಕರ ಅವಶ್ಯಕತೆ ಉಂಟಾಯಿತು. ಹಾಗೂ ಅವುಗಳ ವೆಚ್ಚಕ್ಕಾಗಿ ಕೆರೆಗಳ ಮೇಲೆ ತೆರಿಗೆಗಳನ್ನು ವಿಧಿಸಿ ಕೆರೆಗಳ ರಕ್ಷಣೆ ಮತ್ತು ನಿರ್ವಹಣಾ ಕಾರ್ಯಗಳಿಗೆ ಅವುಗಳನ್ನು ಬಳಸುತ್ತಿದ್ದರು. ನೀರುಗಂಟಿಗಳೆಂಬುವವರನ್ನು ನಿಯೋಜಿಸಲಾಗುತ್ತಿತ್ತು. ಇವರು ವಂಶಪಾರಂಪರಿಕವಾಗಿ ಈ ಕೆಲಸದಲ್ಲಿ ಮುಂದುವರೆಯುತ್ತಿದ್ದರು. ಇವರ ಸೇವೆಗೆ ಪ್ರತಿಫಲವಾಗಿ ವೇತನವನ್ನು ಧನ, ಧಾನ್ಯಗಳ ರೂಪದಲ್ಲಿ ನೀಡುತ್ತಿದ್ದರು. ಇತ್ತೀಚಿನ ದಿನಗಳಲ್ಲಿ ಕೆರೆಗಳ ನಿರ್ವಹಣಾ ಜವಾಬ್ದಾರಿಯು ಸರ್ಕಾರದ ನೀರಾವರಿ ಇಲಾಖೆಯವರ ಅಧೀನದಲ್ಲಿವೆ. ಕೆರೆಗಳಿಂದ ನೀರನ್ನು ಕಿರಿಯ ಸಹಾಯಕರು ನಿರ್ವಹಿಸುವರು. ಇವರಿಗೆ ವೇತನವನ್ನು ಸರ್ಕಾರವು ನೀಡುತ್ತಲಿದೆ. ಹೂಳೆತ್ತುವ ಕಾರ್ಯವನ್ನು ಇಲಾಖೆಯವರು ಮಾಡುತ್ತಾರೆ. ಆದರೂ ಕೂಡ ಸರ್ಕಾರವು ಇನ್ನೂ ಕೆರೆಗಳನ್ನು ಸಂರಕ್ಷಿಸುವ ನಿಟ್ಟಿನಲ್ಲಿ ಕಾರ್ಯೋನ್ಮುಖರಾಗಬೇಕು.

ಕೆರೆಗಳನ್ನು ಉತ್ತಮವಾಗಿ ನಿರ್ಮಿಸಿದರೆ ಸಾಲದು, ಅದನ್ನು ನಿರ್ಮಿಸಿದ ಕಾರ್ಯಗಳಿಗಿಂತ ಅದನ್ನು ರಕ್ಷಿಸಿಕೊಂಡು ಹೋಗುವುದು ಹೆಚ್ಚು ಮಹತ್ವವನ್ನು ಹೊಂದಿತ್ತು. ಆದ್ದರಿಂದ ಕೆರೆಯನ್ನು ರಕ್ಷಿಸುವವರಿಗೆ ಉಂಬಳಿ ಮತ್ತು ದಾನಗಳನ್ನು ದಸವಂದ, ಕಟ್ಟುಗೊಡಿಗೆ, ಕಟ್ಟುಮಾನ್ಯ, ಕೆರೆ ಬಿತ್ತುವಾಟ ಎಂಬ ಹೆಸರಿನಿಂದ ಮಾಡಲಾಗುತ್ತಿತ್ತು. ಸ್ಥಳೀಯ ವ್ಯಕ್ತಿಗಳು ಅವುಗಳ ಉಸ್ತುವಾರಿಯನ್ನು ನೋಡಿಕೊಂಡು ಹೋಗುತ್ತಿದ್ದರು. ಇವರಿಗೆ ಕರ ರಿಯಾಯಿತಿ ದೊರೆಯುತ್ತಿತ್ತು. ಹಲವು ಬಾರಿ ಇದೇ ವ್ಯಕ್ತಿಗಳಿಗೆ ಸ್ಥಳೀಯ ಕರಾಕರಣೆಯ ಕಾರ್ಯವಹಿಸಿ ಬಂದ ಕರದಲ್ಲಿ ಅದರ ಉಸ್ತುವಾರಿ ಕಾರ್ಯ ನೋಡಿಕೊಳ್ಳಲಾಗುತ್ತಿತ್ತು. ಕರಗಳನ್ನು ಧಾನ್ಯ ರೂಪದಲ್ಲಿ ನೀಡಲಾಗುತ್ತಿತ್ತು. ಈ ಕಾರ್ಯಗಳೊಂದಿಗೆ ತೊಡಗಿಸಿಕೊಂಡ ಒಡ್ಡರು ಹಾಗೂ ಉಪ್ಪಾರರಿಗೂ ನಿರ್ಮಾಣದ ಕಾರ್ಯಕ್ಕೆಂದೇ ಭೂಮಿ ಇತರ ರಿಯಾಯಿತಿಗಳನ್ನು ನೀಡಲಾಗುತ್ತಿತ್ತು. ಹಲವು ಬಾರಿ ಮೀನುಗಾರರಿಗೆ ಈ ಉಸ್ತುವಾರಿ ಕಾರ್ಯವನ್ನು ವಹಿಸಲಾಗುತ್ತಿತ್ತು. ಇದಕ್ಕೆ ಪ್ರತಿಯಾಗಿ ಅವರಿಗೆ ನದಿ, ಸರೋವರಗಳಲ್ಲಿ ಮೀನು ಹಿಡಿದುಕೊಳ್ಳಲು ನೀಡಬೇಕಾದ ಕರದಿಂದ ಪ್ರತಿಗೆ ವಿನಾಯಿತಿ ನೀಡಲಾಗುತ್ತಿತ್ತು.

ಪ್ರಮುಖವಾಗಿ ಕೆರೆಗೆ ಹಾನಿಯನ್ನುಂಟು ಮಾಡುವ ಉಸ್ತುವಾರಿ ಕಾರ್ಯವನ್ನು ಅಲಕ್ಷಿಸಿದವರಿಗೆ, ತಪ್ಪು ಮಾಡಿದವರಿಗೆ ಪ್ರಾಯಶ್ಚಿತ ಮತ್ತು ದಂಡಗಳನ್ನೂ ವಿಧಿಸಲಾಗುತ್ತಿತ್ತು. ಉಸ್ತುವಾರಿ ಕಾರ್ಯಗಳ ಹಿಂದೆಯೂ ಧಾರ್ಮಿಕ ಭಾವನೆಗಳು ಅಡಕವಾಗಿದ್ದವು. ಅವುಗಳ ದುರಸ್ತಿ ಕಾರ್ಯಗಳ ಹಿಂದೆ ಪುಣ್ಯದ ಭಾವನೆ ಅಡಗಿತ್ತು. ಗ್ರಾಮಗಳಲ್ಲಿ ಸ್ಥಳೀಯ ಸಮಿತಿಯ ಪಾತ್ರ ಸಂರಕ್ಷಣೆಯಲ್ಲಿ ಅಪಾರವಾಗಿತ್ತು. ಈ ಕಾರ್ಯಗಳನ್ನು ಸ್ಥಳೀಯ ಅಧಿಕಾರಿಗಳು, ದೇವಾಲಯದ ಧರ್ಮದರ್ಶಿಗಳು, ಮತ್ತು ಇತರ ಪ್ರಮುಖರು ವಿಧವಾದ ಸಾಮೂಹಿಕ ಹೊಣೆಗಾರಿಕೆಯಿಂದ ನಿರ್ವಹಿಸುತ್ತಿದ್ದರು. ಇಂತಹ ಅನುಭವಿ ಸಮಿತಿಗಳನ್ನು ಸಭೆ, ಮಹಾಸಭೆ, ವರಿಯಂ, ಮಹಾಜನರು ಎಂದು ಕರೆಯುತ್ತಿದ್ದರು. ಈ ಅಧ್ಯಾಯದಲ್ಲಿ ವಿಜಯನಗರ ಅರಸರ ಕಾಲದಲ್ಲಿ ಶಾಸನಗಳು ಕೆರೆಗಳ ರಕ್ಷಣಾ ಕಾರ್ಯಕ್ಕೆ ನೀಡಿದ ಪ್ರೋತ್ಸಾಹ ಮತ್ತು ಕೆಲವು ಕೆರೆ ತೆರಿಗೆ ಪದ್ಧತಿಯನ್ನು ಕುರಿತು ಚರ್ಚಿಸಲಾಗಿದೆ. ಕೆರೆಯನ್ನು ನಿರ್ಮಿಸುವುದಕ್ಕೆ ತಗಲುವ

ವೆಚ್ಚವನ್ನು ಹಾಗೂ ದುರಸ್ತಿಗೊಳಿಸಲು ತಗಲುವ ವೆಚ್ಚವನ್ನು ಕೆರೆಗಳ ಮೇಲೆ ಕೆರೆಗೆ ಸಂಬಂಧಿಸಿದಂತೆ ತೆರಿಗೆಗಳನ್ನು ಹೇರಲಾಗುತ್ತದೆ. ಇಂತಹ ಕೆಲವು ಕೆರೆಗಳ ಮೇಲಿನ ಕರವನ್ನು ಸೂಚಿಸುವ ಪದಗಳನ್ನು ಶಾಸನಗಳಲ್ಲಿ ಕಾಣಬಹುದು. ಅವುಗಳೆಂದರೆ, ಕಟ್ಟುಕೊಡುಗೆ, ಕೆರೆ–ಕಟ್ಟುಮಾನ್ಯ, ಕಟ್ಟುಮಾನ್ಯ, ಕೆರೆ ಬಿತ್ತುವತ್ತ, ಬಿತ್ತುವತ್ತ.

ಈ ಮೇಲೆ ವಿವರಿಸಿದ ಪದ್ಧತಿಯಲ್ಲದೇ ದೇವಾಲಯಗಳು ಸಹ ಈ ಕಾರ್ಯಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುತ್ತಿದ್ದವು. ಕೆರೆಯ ರಕ್ಷಣೆಯ ಜವಾಬ್ದಾರಿಯನ್ನು ದೇವಾಲಯವು ಹೊತ್ತಿರುತ್ತಿದ್ದವು. ದೇವಾಲಯಗಳಿಗೆ ಸಲ್ಲುವ ಅನೇಕ ದಾನ ದತ್ತಿಗಳು ಮತ್ತು ಧನವನ್ನು ಕೆರೆಯ ರಕ್ಷಣೆಗೆ ತೊಡಗಿಸಿ ಕೆರೆಯ ಆಯಕಟ್ಟಿನಿಂದ ಬರುವಂತಹ ಕೃಷಿ ಆದಾಯವನ್ನು ದೇವಾಲಯ ಪಡೆದು ದೇವಾಲಯದ ಅಡಳಿತ ಮತ್ತು ನಿರ್ವಹಣಾ ಕಾರ್ಯಗಳಿಗೆ ಉಪಯೋಗಿಸಲಾಗುತ್ತಿತ್ತು. ಅರಸರು, ಮಾಂಡಲೀಕರು ಮತ್ತು ಅರಸರು ಹಾಗೂ ಪ್ರತಿನಿಧಿಗಳು ಕೆರೆಗಳ ರಕ್ಷಕರಿಗೆ ತೆರಿಗೆಯಲ್ಲಿ ವಿನಾಯ್ತಿಯನ್ನು ನೀಡಿ ಅವರನ್ನು ಪ್ರೋತ್ಸಾಹಿಸುತ್ತಿದ್ದರು. ಅಲ್ಲದೇ ಕೆರೆ ನಿರ್ಮಿಸುವ ಒಡ್ಡರು ಹಾಗೂ ಉಪ್ಪಾರರಿಗೆ ಅನೇಕ ದಾನ–ದತ್ತಿಗಳನ್ನು ನೀಡಿರುವುದು ಶಾಸನಗಳಲ್ಲಿ ಕಂಡುಬರುತ್ತವೆ. ಕೆರೆಗಳ ನಿರ್ವಹಣೆ ಎಂದರೆ ನಾಲೆಗಳನ್ನು ಸುಸ್ಥಿತಿಯಲ್ಲಿ ಇಡುವುದು, ಹೂಳನ್ನು ಕಾಲಕಾಲಕ್ಕೆ ತೆಗೆದು ಕೆರೆಯ ಆಳವನ್ನು ಹೆಚ್ಚಿಸುವುದು ಕೆರೆ ಏರಿಯನ್ನು ಬಲಪಡಿಸುವುದು, ಕೋಡಿಯನ್ನು ಎಲ್ಲಾ ರೀತಿಯಿಂದ ರಕ್ಷಿಸುವುದು, ಇವೆಲ್ಲಾ ಮುಂತಾದ ಕಾರ್ಯಗಳು ಆಗಿರುತ್ತವೆ. ಕೆರೆಯ ರಕ್ಷಣೆಗೆ ಬಿಟ್ಟುಕೊಟ್ಟಂತಹ ಭೂಮಿಯನ್ನು ಕಾಯ್ದು, ಕೆರೆಯನ್ನು ರಕ್ಷಿಸುವವನಿಗೆ ಪುಣ್ಯವು ದೊರಕುವುದರೊಂದಿಗೆ ಅಶ್ವಮೇಧ ಯಾಗವನ್ನು ಮಾಡಿದಂತಹ ಪುಣ್ಯವು ಲಭಿಸುವುದೆಂದು ಕೋಲಾರ ಜಿಲ್ಲೆಯ ಕುರುಬರಹಳ್ಳಿಯಲ್ಲಿ ದೊರೆತ ಶಾಸನವು ತಿಳಿಸುತ್ತದೆ.[೧೫]

ಕೆರೆಗಳಿಗೆ ಸಂಬಂಧಿಸಿದಂತೆ ಏರಿ ವಾರಿಯಂ, ಏರ ಆಯ, ಚೆರವು, ಕುಂಚಲು, ನೀರ ಬಿರಾಡ, ಕೆರೆ–ಬಂಡಿ ಎಂಬ ಮುಂತಾದ ತೆರಿಗೆಗಳು ಕೆರೆಯ ಸಂರಕ್ಷಣೆಗೆ ಉಪಯೋಗಿಸಲಾಗುತ್ತಿತ್ತು. ಹೀಗೆ ಕೆರೆಗಳನ್ನು ಸಂರಕ್ಷಿಸಲು ವಿವಿಧ ಕಾಲಘಟ್ಟಗಳಲ್ಲಿ ವಿವಿಧ ವಿಧಾನಗಳನ್ನು ಅನುಸರಿಸಲಾಗುತ್ತಿತ್ತು.

ಕೆರೆಗಳ ಸಂರಕ್ಷಣೆಯು ಬಹಳ ಮಹತ್ವ ಪಡೆದಿದೆ. ನೀರಾವರಿ ಕಾರ್ಯದ ಸೂಕ್ತ ಸಂರಕ್ಷಣೆ ಅದರ ನಿರ್ಮಾಣದಷ್ಟೇ ಮುಖ್ಯ. ನಮ್ಮ ಹಿರಿಯರು ಇದನ್ನು ಆಧಾರವಾಗಿಟ್ಟುಕೊಂಡು ಹಳೆಯ ಕೆರೆಯನ್ನು ಸಂರಕ್ಷಿಸುವುದು ಹೊಸದೊಂದನ್ನು ಕಟ್ಟುವುದಕ್ಕಿಂತ ಹೆಚ್ಚು ಶ್ಲಾಘನೀಯ ಎಂದಿದ್ದಾರೆ. ಕೆರೆಗಳ ಸಂರಕ್ಷಣೆಗೆ ನೀಡಲಾಗಿದ್ದ ಮಹತ್ವವನ್ನು ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ವಿಧಿಸಲಾಗಿರುವ ನಿಯಮಗಳಿಂದ ಸ್ಪಷ್ಟವಾಗುತ್ತದೆ. ಸಾಮಾನ್ಯವಾಗಿ ಕೆರೆಯನ್ನು ಕೆಳಗಿನ ಮುಖ್ಯ ಅಂಶಗಳಿಂದ ಸಂರಕ್ಷಣೆಯನ್ನು ಮಾಡಬಹುದು.

- ❖ ಕೆರೆ ಅಂಗಳ ಹಾಗೂ ನಾಲೆಯ ತಳದಿಂದ ಕಾಲಕಾಲಕ್ಕೆ ಹೂಳು ತೆಗೆಯುವುದು.
- ❖ ಮಳೆಯಿಂದಾಗಲಿ, ಅಥವಾ ಇತರ ಕಾರಣಗಳಿಂದಾಗಲಿ ಮಣ್ಣು ಕಟ್ಟೆಗೆ ಎಲ್ಲಿಯಾದರೂ ಹಾನಿಯಾಗಿದ್ದಲ್ಲಿ ಮಣ್ಣು ಆ ಕೆಲಸ ಮಾಡಿ ಅದನ್ನು ಸರಿಪಡಿಸುವುದು
- ❖ ತೂಬು, ಕೋಡಿಗಳಿಗೆ ಏನಾದರೂ ಹಾನಿಯಾಗಿದ್ದರೆ ಕಾಲಕಾಲಕ್ಕೆ ಅದನ್ನು ದುರಸ್ತಿ ಮಾಡುವುದು

---

೧೫ – 'ಹಂಪಿ ಪರಿಸರದ ಕೆರೆಗಳು' – ಸಿ. ವಾಸುದೇವನ್.

- ಜಲಾನಯನ ಪ್ರದೇಶ ಒತ್ತುವರಿಯಾಗದಂತೆ ಇಟ್ಟುಕೊಳ್ಳುವುದು.
- ಕೆರೆಯೊಳಕ್ಕೆ ಹರಿದು ಬರುವ ಹೂಳನ್ನು ತಡೆಯಲು ವ್ಯವಸ್ಥೆ ಮಾಡುವುದು.
- ಕೆರೆಯ ಸುತ್ತಮುತ್ತಲಿನ ಪ್ರದೇಶದಲ್ಲಿ ಜನರು ಅವುಗಳ ಬಗ್ಗೆ ಕಾಳಜಿಯಿಂದ ಸಂರಕ್ಷಣೆ ಬಗ್ಗೆ ಮುನ್ನಚ್ಚರಿಕೆಯ ಕ್ರಮಗಳನ್ನು ಅನುಸರಿಸಬೇಕು.

ಕೆರೆಗಳ ಸಂರಕ್ಷಣೆಯು ಪ್ರಾಚೀನ ಕಾಲದಲ್ಲಿ ಸ್ಥಳೀಯ ಜನತೆಗೆ, ನಂತರದ ಅವಧಿಯಲ್ಲಿ ವಿವಿಧ ಅಧಿಕಾರಿಗಳಲ್ಲಿ ಗ್ರಾಮದ ಮುಖ್ಯಸ್ಥರುಗಳಲ್ಲಿ ಹಂಚಿಕೆಯಾಗಿ ಬಂದಿವೆಯಾದರೂ ಬ್ರಿಟಿಷರ ಕಾಲಾವಧಿಯಲ್ಲಿ ಭೂ ಹಿಡುವಳಿದಾರರಿಗೆ ಒಪ್ಪಿಸಿತು. ಯಾವ ಕೆರೆಗಳು ದುರಸ್ತಿ ಸ್ಥಿತಿಯಲ್ಲಿ ಇದ್ದವೊ ಅವುಗಳನ್ನು ಸುಧಾರಣೆ ಕೈಗೊಳ್ಳಲು ಕೆರೆಯ ಹಳ್ಳಿಯವರಿಗೆ ಸಂರಕ್ಷಣೆಗೆ ವಹಿಸುತ್ತಿದ್ದರು. ಕೆರೆಗಳಿಗೆ ಅವುಗಳ ಉಪಕಾರ್ಯಗಳಿಗೆ ಸಂಬಂಧಿಸಿದ ಎಲ್ಲ ಕಾರ್ಯವನ್ನು ಗೊತ್ತುಮಾಡಿದ ಅವಧಿಗಳಲ್ಲಿನ ಗ್ರಾಮಾಧಿಕಾರಿಗಳು ಕೆಲಸವನ್ನು ನಿರ್ವಹಿಸುತ್ತಿದ್ದರು. ಯಾವುದೇ ಗ್ರಾಮಾಧಿಕಾರಿ ತನ್ನ ಹೊಣೆಯನ್ನು ನಿರ್ವಹಿಸದೆ ಹೋದಲ್ಲಿ ಆತ ಮಾಡಬೇಕಾಗಿದ್ದ ಕಾರ್ಯಭಾಗವನ್ನು ಕೂಲಿಕೊಟ್ಟು ಮಾಡಿಸಲು ಗ್ರಾಮಾಧಿಕಾರಿಗೆ ಅವಕಾಶವಿತ್ತು. ಅದು ಕಡ್ಡಾಯವು ಆಗಿತ್ತು. ಗ್ರಾಮಾಧಿಕಾರಿಯಿಂದ ಹಿಡಿದು ಲೋಕೋಪಯೋಗಿ ಇಲಾಖೆಯ ಇಂಜನೀಯರ್ ದರ್ಜೆಯ ಅಧಿಕಾರಿಯವರೆಗೆ ಇವುಗಳ ಸಂರಕ್ಷಣೆಯ ಜವಾಬ್ದಾರಿಯನ್ನು ನೀಡಲಾಗಿತ್ತು. ಅನೇಕ ಕೆರೆಗಳನ್ನು ಅಗತ್ಯವಾದ ಮಟ್ಟಕ್ಕೆ ದುರಸ್ತಿ ಮಾಡಿ ಸುಸ್ಥಿತಿಗೆ ತಂದು ಮುಂದಿನ ರಕ್ಷಣೆಯ ಜವಾಬ್ದಾರಿಯನ್ನು ರೈತರಿಗೆ ವಹಿಸಿಕೊಡಬೇಕೆಂದು ಸರ್ಕಾರವು ಅನೇಕ ಪ್ರಯತ್ನಗಳನ್ನು ಮಾಡಿದರೂ, ರೈತರು ಅಲಕ್ಷ್ಯ ಮಾಡಿದರು. ಈ ಅಲಕ್ಷ್ಯದ ಸಲುವಾಗಿ ಕೆರೆಗಳನ್ನು ಪೂರ್ಣ ವಿನಾಶದಿಂದ ಉಳಿಸಲು ಸರ್ಕಾರವೇ ಜೀರ್ಣೋದ್ಧಾರ ಮಾಡುವುದು ಅಗತ್ಯವಾಯಿತು. ೧೯೦೪ರಲ್ಲಿ ಮೈಸೂರ ಸರ್ಕಾರ ಸಮಿತಿಯು ಹೊರಡಿಸಿದ ಆಜ್ಞೆಯಲ್ಲಿ ಸರ್ಕಾರಕ್ಕೆ ಸಹಾಯವಾಗುವಂತೆ ಕೆಲವು ಅಂಶಗಳನ್ನು ಪರಿಶೀಲಿಸಿ ಸೂಚಿಸಲಾಗಿತ್ತು. ಇವೆಲ್ಲವುಗಳನ್ನು ಪರಿಶೀಲಿಸಿದ ಸರ್ಕಾರವು ಕೆಲವು ಕೆರೆ ಪಂಚಾಯಿತಿ ಶಾಸನಗಳನ್ನು ಹೊರಡಿಸಿ ಸರ್ಕಾರಕ್ಕೆ ಕೆರೆಗಳ ಬಗ್ಗೆ ಇರುವ ಕಾಳಜಿಯನ್ನು ಇದರಲ್ಲಿ ತಿಳಿಸಿದೆ.

ಕೆರೆ ಪಂಚಾಯತಿಯು ಶಾಸನಗಳನ್ನು ಜಾರಿಗೆ ತಂದಿದ್ದರೂ ಕೂಡಾ, ಹಳ್ಳಿಯವರಲ್ಲಿ ಸಾಮುದಾಯಿಕ ಭಾವನೆ ಮಾಯವಾಗಿದ್ದರಿಂದ, ನಿಯಮಗಳನ್ನು ಜಾರಿ ಮಾಡಲು ನಿಯುಕ್ತರಾಗಿದ್ದ ಅಧಿಕಾರಿಗಳ ಆಲಸ್ಯದಿಂದ ಕೆರೆಗಳ ಸಂರಕ್ಷಣೆ ಅಲಕ್ಷಕ್ಕೆ ಒಳಗಾದವು. ಕೆರೆ ಪಂಚಾಯತಿ ಶಾಸನವು ಯಾವುದೇ ಹಳ್ಳಿಯಲ್ಲಿ ಕೆರೆ ಕೆಳಗಿನ ತರಿ ಭೂಮಿಯಲ್ಲಿ ಅರ್ಧಕ್ಕೆ ಕಡಿಮೆ ಇಲ್ಲದಷ್ಟು ಒಟ್ಟು ಹಿಡುವಳಿ ಉಳ್ಳಂತಹ ರೈತರ ಪೈಕಿ ಮೂರನೆಯ ಎರಡಕ್ಕೆ ಕಡಿಮೆ ಇಲ್ಲದಷ್ಟು ಮಂದಿ ಒಪ್ಪಿದಲ್ಲಿ ಅಲ್ಲಿ ಕೆರೆ ಪಂಚಾಯಿತಿಯನ್ನು ರಚಿಸತಕ್ಕದ್ದು. ಪಂಚಾಯತಿಯಲ್ಲಿ ಹಳ್ಳಿಯ ಪಟೇಲ, ಶ್ಯಾನುಭೋಗ ಹಾಗೂ ರೈತರಿಂದ ಆರಿಸಲಾದ ಸುಮಾರು ಮೂವರು ಅಥವಾ ಹೆಚ್ಚಿಗೆ ಸದಸ್ಯರು ಇರತಕ್ಕದ್ದು. ಹಳ್ಳಿಯ ಪಟೇಲನೇ ಈ ಪಂಚಾಯತಿಯ ಅಧ್ಯಕ್ಷ. ಪಂಚಾಯತಿಯು ಕೆಳಕಾಣಿಸಿರುವ ಬಾಬುಗಳಿಂದ ಆದ ನಿಧಿಯನ್ನು ನಿಯಂತ್ರಿಸತಕ್ಕದ್ದು. ಆ ಬಾಬುಗಳು ಇಂತಿವೆ.

- ತಮಗೆ ವಹಿಸಿದ ಕೆಲಸವನ್ನು ನಿರ್ವಹಿಸಲು ವಿಫಲರಾದ ಅಥವಾ ತಮ್ಮ ಪಾಲಿನ ಶ್ರಮವನ್ನು ಹಣ ಪಾವತಿಯಾಗಿ ಪರಿವರ್ತಿಸಲು ಬಯಸುವ ರೈತರಿಂದ ವಸೂಲಿ ಮಾಡಿದ ಮೊಬಲಗು.
- ಕೆರೆಯಲ್ಲಿ ಮೀನು ಹಿಡಿಯುವ ಹಕ್ಕು, ಕೆರೆ ಅಂಗಳದಲ್ಲಿ ದನಕರುಗಳನ್ನು ಮೇಯಿಸುವ ಹಕ್ಕು, ಕೆರೆ ಏರಿಯ ಮೇಲಿನ ಹುಲ್ಲನ್ನು ಕೊಯ್ದು ಒಯ್ಯುವ ಹಕ್ಕು ಹಾಗೂ ಕೆರೆಯಲ್ಲಿ ಅದರ ಏರಿಯಲ್ಲಿ ಇರುವ ಮರಗಳ ಉತ್ಪನ್ನವನ್ನು ಒಯ್ಯುವ ಹಕ್ಕು ಇವುಗಳ ಬಿಕರಿಯಿಂದ ಬಂದ ಮೊಬಲಗು.
- ಕೆರೆ ಅಂಗಳದಲ್ಲಿ ತಾತ್ಕಾಲಿಕವಾಗಿ ಅಲ್ಪಕಾಲಿನ ಬೆಳೆಗಳನ್ನು ಬೆಳೆಯುವುದಕ್ಕೆ ನೀಡುವ ಅವಕಾಶಕ್ಕಾಗಿ ಪಡೆಯುವ ಬಾಡಿಗೆ ಹಣ ಅಥವಾ ಉತ್ಪನ್ನದ ಪಾಲು.
- ಸರ್ಕಾರದ ನೀರಾವರಿ ಸುಂಕನಿಧಿಯಿಂದ ನೀಡುವ ಅನುದಾನ
- ಪಂಚಾಯತಿ ಬಯಸಿದಲ್ಲಿ ಕೆರೆಯ ಜೀರ್ಣೋದ್ಧಾರ ಅಥವಾ ಅಭಿವೃದ್ಧಿಗೆ ಸರ್ಕಾರ ಕೊಡುವ ಮುಂಗಡ ಹಣ.
- ಸರ್ಕಾರ ಪಂಚಾಯತಿಗೆ ನೀಡಬಹುದಾದ ಇತರ ಯಾವುದೇ ಅನುದಾನ ಅಥವಾ ಸಾಲ

ಕೆರೆಯಿಂದ ನೀರು ಬಿಡುವುದನ್ನು ನಿಯಂತ್ರಿಸುವ ಅಧಿಕಾರ ಪಂಚಾಯತಿಗೆ ಇತ್ತು. ಅಲ್ಲದೇ ಕೆರೆ ಪಂಚಾಯತಿ ಅಸ್ತಿತ್ವಕ್ಕೆ ಬಂದ ಮೇಲೆ ೧೮೭೩ ಹಾಗೂ ೧೯೦೪ ನಿಯಮಗಳಲ್ಲಿ ವಿಧಿಸಿದಂತೆ ಎಲ್ಲ ಕೆರೆಗಳ ಸಂರಕ್ಷಣೆ ಕುರಿತಂತೆ ರೈತರ ಮೇಲೆ ಇದ್ದ ಸಾಂಪ್ರದಾಯಿಕ ವ್ಯವಸ್ಥೆ ಪಂಚಾಯತಿ ಪಾಲಿಗೆ ಬಂದಿತು. ೧೯೧೩–೧೪ರಲ್ಲಿ ಮೂವತ್ತು ಕೆರೆ ಪಂಚಾಯತಿಗಳು ಇದ್ದವು.[೧೬] ಪ್ರತಿ ವರ್ಷವೂ ಇಂಥ ಪಂಚಾಯತಿಗಳು ಹೆಚ್ಚುತ್ತಾ ಹೋದಂತೆ ಎಲ್ಲೋ ಕೆಲವು ಪಂಚಾಯತಿಗಳು ಮಾತ್ರ ನಿಧಿ ಶೇಖರಣೆ ಮಾಡಿ ನೀರಿನ ಹಂಚಿಕೆ, ಕೆರೆ ಏರಿಗಳ, ಕೆಳಗಿಡಗಳ ನಿರ್ಮಾಣ ಮತ್ತಿತ್ತರ ದುರಸ್ಥಿ ಕಾರ್ಯಗಳಲ್ಲಿ ಆಸಕ್ತಿ ವಹಿಸಿದ್ದರು. ಕೆಲವು ಪಂಚಾಯತಿಗಳು ವಹಿಸಿದ ಕರ್ತವ್ಯಗಳನ್ನು ನಿರ್ವಹಿಸದಿದ್ದರಿಂದ ಅವುಗಳನ್ನು ರದ್ದು ಮಾಡಲಾಯಿತು.

ಕೆರೆಗಳನ್ನು ರಕ್ಷಿಸುವ ಉದ್ದೇಶದಿಂದ ಕರ್ನಾಟಕ ಸರ್ಕಾರವು ಹಲವಾರು ಯೋಜನೆಗಳನ್ನು ಹಾಕಿಕೊಂಡಿದೆ. ಅದರಲ್ಲಿ ಮುಖ್ಯವಾಗಿ ಜೆ.ಎಸ್.ವಾಯ್.ಎಸ್. ಇದು ಎಸ್. ಎಂ. ಕೃಷ್ಣ ಸರ್ಕಾರವಿದ್ದಾಗ ಕರ್ನಾಟಕ ಸರ್ಕಾರವು ಜಲ ಸಂವರ್ಧನಾ ಯೋಜನಾ ಸಂಘವನ್ನು ಸ್ಥಾಪಿಸಿಲಾಯಿತು. ಇದು ರಾಜ್ಯಮಟ್ಟದ ಸಂಘ ಇದರ ಮುಖ್ಯ ಉದ್ದೇಶ ಪ್ರತಿ ಗ್ರಾಮಗಳಲ್ಲಿ ಕೆರೆಗಳನ್ನು ಅಭಿವೃದ್ಧಿಗೊಳಿಸಲು ಗ್ರಾಮದ ಜನರಿಂದಲೇ ಒಂದು ಸಂಘವನ್ನು ನಿರ್ಮಿಸುವುದು. ಇದನ್ನು ಅಣ್ಣಾ ಹಜಾರೆಯವರು ಮಹಾರಾಷ್ಟ್ರ ಉದ್ಘಾಟಿಸಿದರು. ಈ ಸಂಘದ ಸದಸ್ಯರಿಗೆ ಬೆಂಗಳೂರಿನಲ್ಲಿ ಸಭೆ ಕರೆದು ತನ್ನ ಯೋಜನಾ ಉದ್ದೇಶಗಳನ್ನು ತಿಳಿಸಲಾಯಿತು. ಈ ಸಂಘಕ್ಕೆ ಸರ್ಕಾರದಿಂದ ಅನುದಾನವನ್ನು ನೀಡಲಾಗುತ್ತಿತ್ತು. ಈ ಸಂಘದವರು ಕೆರೆಗಳ ಸಂರಕ್ಷಣೆ, ಮಾಡುವುದು, ಒತ್ತುವರಿ ಪ್ರದೇಶವನ್ನು ತಡೆಗಟ್ಟುವುದು. ಆಯಕಟ್ಟು ಪ್ರದೇಶದಲ್ಲಿ ಗಿಡಗಳನ್ನು ಬೆಳೆಸುವುದು, ಹಾಗೂ ಅಚ್ಚುಕಟ್ಟು ಪ್ರದೇಶದಲ್ಲಿ ಬಂದರು (ಚೆಕ್ ಡ್ಯಾಂ) ನ್ನು ನಿರ್ಮಿಸಿ ಹೆಚ್ಚಿನ ಪ್ರಮಾಣದಲ್ಲಿ ನೀರನ್ನು ಸಂಗ್ರಹಿಸಿ ಅಂತರ್ಜಲಮಟ್ಟವನ್ನು

---

೧೬ – 'ಕರ್ನಾಟಕದಲ್ಲಿ ಕೆರೆ ನೀರಾವರಿ ವ್ಯವಸ್ಥೆ' – ಜಿ. ಎಸ್. ದೀಕ್ಷಿತ್, ಜಿ. ಆರ್. ಕುಮ್ಮಸ್ವಾಮಿ, ಎಸ್. ಕೆ. ಮೋಹನ್. ಕನ್ನಡ ಅನುವಾದ

ಹೆಚ್ಚಿಸುವ ಗುರಿಯನ್ನು ಹೊಂದಿದೆ. ಈ ಎಲ್ಲ ಉದ್ದೇಶಗಳಿಂದಾಗಿ ಕರ್ನಾಟಕ ಸರ್ಕಾರವು ಪ್ರಥಮ ಬಾರಿಗೆ ಪ್ರಾಯೋಗಿಕ ರೂಪದಲ್ಲಿ ಬೆಳಗಾವಿ ಜಿಲ್ಲೆಯ ಬಸ್ತವಾಡ ಮತ್ತು ಹಾವೇರಿ ಜಿಲ್ಲೆಯ ದೇವಿ ಹೊಸುರ ಗ್ರಾಮವನ್ನು ಆಯ್ಕೆ ಮಾಡಿ ಕೆರೆ ಅಭಿವೃದ್ಧಿ ಕಾರ್ಯವನ್ನು ಸ್ಥಳಿಐ ಜೆ.ಎಸ್.ವಾಯ್.ಎಸ್. ಅಭಿವೃದ್ಧಿ ಸಂಸ್ಥೆಗಳ ಮುಖಾಂತರ ಯಶಸ್ವಿಗೊಳಿಸಲಾಯಿತು.

* * *

ಅಧ್ಯಾಯ – 3

ಜಮಖಂಡಿ ಕೆರೆಗಳು

ಅಧ್ಯಾಯ – 3

ಜಮಖಂಡಿ ಕೆರೆಗಳು

ಹಿಂದಿನ ಅವಿಭಜಿತ ವಿಜಾಪುರ ಜಿಲ್ಲೆಯ ಹಾಗೂ ಈಗಿನ ಬಾಗಲಕೋಟೆ ಜಿಲ್ಲೆಗೆ ಒಳಪಟ್ಟಿರುವ ಜಮಖಂಡಿಗೆ ಸಾವಿರ ವರ್ಷಗಳ ಇತಿಹಾಸವಿರುವುದು ಕಂಡು ಬರುತ್ತದೆ. ಮಹಾಕವಿ ತನ್ನ ಗ್ರಂಥದಲ್ಲಿ ಇದೊಂದು ಅಗ್ರಹಾರವಾಗಿತ್ತೆಂದು ಹೇಳುವುದರೊಂದಿಗೆ ಇದಕ್ಕೆ 'ಜಂಬುಖಂಡಿ' ಎಂದು ಹೆಸರಿಸಿದ್ದಾರೆ. ಈ ಪ್ರದೇಶ ಕಲ್ಯಾಣ ಚಾಲುಕ್ಯರ ರಾಜ ತ್ರಿಭುವನ ಮಲ್ಲನ ಬ್ರಹ್ಮಪುರಿಯಾಗಿದ್ದು, ಮಹಾ ಅಗ್ರಹಾರವಾಗಿತ್ತೆಂದು ಹಲವು ಶಾಸನಗಳಲ್ಲಿ ಕಾಣಬಹುದಾಗಿದೆ. ಇದಕ್ಕೆ ೧೦ ರಿಂದ ೧೨ ನೇ ಶತಮಾನದ ಕೊನೆಯತನಕ ಜಂಬುಖಂಡಿ ಎಂದೇ ಕರೆಯಲಾಗಿರುವುದು ತಿಳಿದು ಬಂದಿದೆ. ಜಂಬುಖಂಡಿಗೆ, ಜಮಖಂಡಿ ಎಂಬ ಹೆಸರು ಹೇಗೆ ಬಂದಿತೆಂಬುದಕ್ಕೆ ಅನೇಕ ಐತಿಹಾಸಿಕ ದಾಖಲೆಗಳಿವೆ. ಬಾಗಲಕೋಟೆ ಜಿಲ್ಲೆಯ ಅಗ್ರಮಾನ್ಯ ತಾಲೂಕಾದ ಜಮಖಂಡಿಯು ಐತಿಹಾಸಿಕ ಮಹತ್ವವನ್ನು ಪಡೆದಿದೆ. ಇದಕ್ಕೆ ಸುಮಾರು ವರ್ಷಗಳಷ್ಟು ಭವ್ಯವಾದ. ಐತಿಹಾಸಿಕ ಪರಂಪರೆ ಇದೆ. 'ಆರಂಕುಶ ಮಿಟ್ಟೊಡಂ ನೆನೆಯುದೆನ್ನ ಮನಂ ಬನವಾಸಿ ದೇಶಮಂ', ಎಂಬಂತೆ ಜೀವಜಲಧಾರಣೆ ಕೃಷ್ಣೆ–ಘಟಪ್ರಭೆಯರ ಮಡಿಲಲ್ಲಿ ಪವಡಿಸಿದ ಜಮಖಂಡಿ ತಾಲ್ಲೂಕು ಹಾಲು, ಮೊಸರು, ಬೆಣ್ಣೆ, ತುಪ್ಪಗಳ ಮಾಧುರ್ಯವನ್ನು ನಿರಂತರ ಆಸ್ವಾದಿಸುವ ಸದ್ಗುಣಿಗಳ ಸಮೃದ್ಧನಾಡಾಗಿದೆ.[೧] ಕವಿ ಚಕ್ರವರ್ತಿ ರನ್ನ ಹೀಗೆ ಕೀರ್ತಿಸಿದ ಅಂದಿನ ಜಂಬುಖಂಡಿ, ಇಂದಿನ ಜಮಖಂಡಿ ಪ್ರಾಕೃತಿಕವಾಗಿ ಹಾಗೂ ಸಾಂಸ್ಕೃತಿಕವಾಗಿ ವಿಶಿಷ್ಟಸ್ಥಾನ ಪಡೆದಿದೆ. ಅಂದಿನ ವಿಜಾಪುರ ಜಿಲ್ಲೆಯು ಹನ್ನೊಂದು ತಾಲ್ಲೂಕುಗಳಲ್ಲೊಂದಾಗಿದ್ದ ಜಮಖಂಡಿ ಈಗಿನ ಬಾಗಲಕೋಟೆ ಜಿಲ್ಲೆಯ ಆರು ತಾಲ್ಲೂಕಗಳಲ್ಲಿ ಅತ್ಯಂತ ಸಂಪದ್ಭರಿತ ತಾಲ್ಲೂಕು ಎನಿಸಿಕೊಂಡಿದೆ. ಈ ಭಾಗದ ಹೊಳೆಗಳಲ್ಲೇ ದೊಡ್ಡದಾದ ಹಾಗೂ ಹಿರಿಹೊಳೆ ಎಂದು ಹೆಸರಾದ ಕೃಷ್ಣಾನದಿಯ ಎರಡೂ ಬದಿಗಳಲ್ಲಿ ಏತ ನೀರಾವರಿ ಸೌಲಭ್ಯವನ್ನು ಪಡೆದುಕೊಂಡು ಮಲೆನಾಡಿನಂತೆ ಕಂಗೊಳಿಸುವ ಈ ತಾಲ್ಲೂಕಿನಲ್ಲಿ ಕೃಷ್ಣಾನದಿ ಹರಿವಿನ ದೂರ ಇಪ್ಪತ್ನಾಲ್ಕು ಕಿಲೋಮೀಟರಗಳಷ್ಟಿದೆ. ಕೃಷಿ ಪ್ರಧಾನ ಉಪ ವಿಭಾಗವಾದ ಈ ಹಿರಿಹೊಳೆನಾಡು ಸಾಂಸ್ಕೃತಿಕವಾಗಿಯೂ ಅತ್ಯಂತ ಸಮೃದ್ಧ ಕರ್ನಾಟಕಕ್ಕೆ ಕೀರ್ತಿ ಮತ್ತು ಪ್ರಾಮುಖ್ಯತೆ ತಂದು ಕೊಟ್ಟಿರುವ ಇಂಥ ಐತಿಹಾಸಿಕ ಹಿನ್ನಲೆಯರುವ ಜಮಖಂಡಿ ತನ್ನದೇಯಾದ ವಿಶಿಷ್ಟತೆಯಿಂದ ಕೂಡಿದೆ. ಪ್ರಸ್ತುತ ಸಂಪ್ರಬಂಧವು ಜಮಖಂಡಿಯ ಕೆರೆಗಳು ಕುರಿತು ಒಂದು ಪಕ್ಷಿನೋಟ ಕೊಡುವುದಾಗಿದೆ.

ಜಮಖಂಡಿಯು ಜಿಲ್ಲೆಯಲ್ಲಿಯೇ ಮೊದಲಿನ ದೊಡ್ಡ ತಾಲೂಕಾಗಿದ್ದು, ೧,೧೬೯ ಚ.ಕೀ.

---

೧. ಸುವರ್ಣ ಸಂಭ್ರಮ ಸ್ಮರಣ ಸಂಚಿಕೆ – ೨೦೦೬

ವಿಸ್ತೀರ್ಣವನ್ನು ಹೊಂದಿದ್ದು, ೨೦೦೧ ರಲ್ಲಿ ಜಿಲ್ಲೆ ಒಟ್ಟು ವಿಸ್ತೀರ್ಣದಲ್ಲಿ ಶೇ. ೧೭.೭೫ ರಷ್ಟು ಹೊಂದಿದೆ. ಇದು ೧೬.೨೫ ದಿಂದ ೧೬.೪೫ ಉತ್ತರ ಅಕ್ಷಾಂಶಗಳ ಮಧ್ಯೆ ಮತ್ತು ೭೪.೫೯ ರಿಂದ ೭೬.೩೨ ಪೂರ್ವ ರೇಖಾಂಶಗಳ ಮಧ್ಯೆ ಹರಡಿದೆ. ಆರ್ಥಿಕ ಅಭಿವೃದ್ಧಿಯಲ್ಲಿ ಜನಸಂಖ್ಯೆಯ ಬದಲಾವಣೆಯು ಮುಖ್ಯವಾದ ಅಂಶವಾಗಿದೆ.[೨] ಜಮಖಂಡಿಯು ಎರಡೂ ಕಡೆ ಬೆಟ್ಟ ಗುಡ್ಡಗಳಿಂದ ಮತ್ತು ಒಂದೆಡೆ ಕೃಷ್ಣಾ ನದಿಯಿಂದ ಸುತ್ತುವರಿಯಲ್ಪಟ್ಟಿದೆ. ಸಂಸ್ಥಾನಿಕರ ಆಳ್ವಿಕೆಯ ಅವಧಿಯಲ್ಲಿ ನಿಸರ್ಗದತ್ತವಾದ ಕೋಟೆಗಳಿದ್ದು ವೈರಿಗಳಿಂದ ರಕ್ಷಣೆ ಸಿಗುತ್ತಿತ್ತು. ನೀರಾವರಿ ಮತ್ತು ಕೃಷಿ, ಆರ್ಥಿಕ ಅಭಿವೃದ್ಧಿಯ ಸಾಧನ. ಕೃಷಿ ಅಭಿವೃದ್ಧಿಯ ಜೀವಾಳವೇ ನೀರಾವರಿ. ನೀರಾವರಿ ಹಲವಾರು ಲಾಭಗಳನ್ನು ಕೃಷಿ ಸಮುದಾಯಕ್ಕೆ ಕಲ್ಪಿಸುತ್ತದೆ. ೧೪೩ ವರ್ಷಗಳ ವರೆಗೆ ರಾಜ್ಯಭಾರ ನಡೆಸಿದ ಸಂಸ್ಥಾನದ ಪಟವರ್ಧನ ದೊರೆಗಳು ಹಲವಾರು ಬಗೆಯ ಆಡಳಿತಾತ್ಮಕ ಸುಧಾರಣೆಗಳನ್ನು ಜಾರಿಯಲ್ಲಿ ತಂದರು. ಆಧುನಿಕ ಸೌಲಭ್ಯಗಳಾದ ವಿದ್ಯುತ್ ಸರಬರಾಜು, ಕುಡಿಯುವ ನೀರಿನ ವ್ಯವಸ್ಥೆ, ಒಳಚರಂಡಿ ಯೋಜನೆಯಂತಹ ಅನೇಕ ನಾಗರಿಕ ಸೌಲಭ್ಯಗಳನ್ನು ಪ್ರಜೆಗಳಿಗೆ ನೀಡಿದರು. ಐತಿಹಾಸಿಕವಾಗಿ ಅವಿಭಾಜಿತ ವಿಜಾಪುರ ಜಿಲ್ಲೆಯ ಒಂದು ಶ್ರೀಮಂತ ಜಿಲ್ಲೆಯಾಗಿದ್ದು ಇಲ್ಲಿಯ ಜೀವನಕ್ಕೆ ಬೇಕಾಗುವಂತಹ ನೀರು, ಹವಾಮಾನ, ಫಲವತ್ತಾದ ನೆಲವನ್ನು ಹೊಂದಿದ್ದು ಇದರಿಂದಾಗಿ ಪ್ರಾಚೀನ ಕಾಲದಿಂದಲೂ ಮಾನವನು ಇಲ್ಲಿ ವಾಸಿಸಿದ ಪುರಾವೆಗಳಿವೆ. ೧೯೬೭ ರಲ್ಲಿ ಈ ಅವಿಭಾಜಿತ ವಿಜಾಪುರ ಜಿಲ್ಲೆಯು ವಿಜಾಪುರ ಮತ್ತು ಬಾಗಲಕೋಟೆ ಜಿಲ್ಲೆಗಳಿಗಾ ವಿಭಜನೆಯಾಯಿತು. ಬಾಗಲಕೋಟೆ ಜಿಲ್ಲೆಯಲ್ಲಿ ಐತಿಹಾಸಿಕವಾಗಿ ಬಾದಾಮಿ ತಾಲೂಕಿನ ನಂತರ ಶ್ರೀಮಂತ ತಾಲೂಕು ಎಂದರೆ ಜಮಖಂಡಿ ತಾಲೂಕು. ಇದು ಬಾಗಲಕೋಟೆಯಿಂದ ೭೫ ಕಿ.ಮೀ. ದೂರದಲ್ಲಿರುವ ಪ್ರಾಚೀನ ಅಗ್ರಹಾರ ಪಟ್ಟಣವಾಗಿದೆ. ಭೌಗೋಳಿಕವಾಗಿ ಜಮಖಂಡಿಯು ಸಮುದ್ರ ಮಟ್ಟದಿಂದ ೪೫೦–೮೦೦ ಮೀ. ಎತ್ತರದಲ್ಲಿದ್ದು ಸಮಶೀತೋಷ್ಣವಲಯದಲ್ಲಿದೆ.

೧೯೬೦ ರಲ್ಲಿ ಮಹಾರಾಷ್ಟ್ರ ಸರ್ಕಾರ ಕೋಯ್ನಾ ಡ್ಯಾಮ ನಿರ್ಮಾಣಗೊಳಿಸಿದ ನಂತರದ ದಿನಮಾನಗಳಲ್ಲಿ ಕೃಷ್ಣಾನದಿಯ ಕೆಳಭಾಗದ ಪ್ರದೇಶಗಳು ಬೇಸಿಗೆಯ ನಾಲ್ಕೈದು ತಿಂಗಳಲ್ಲಿ ನದಿಯು ಸಂಪೂರ್ಣವಾಗಿ ಬತ್ತಿ ಹೋಗುವುದರೊಂದಿಗೆ ಈ ಭಾಗದ ಜನರು ಜಲ ಸಮಸ್ಯೆಯನ್ನು ಎದುರಿಸಲಾರಂಭಿಸಿದರು. ಇದರಿಂದಾಗಿ ಬೆಳೆಗಳು ಹಾನಿಗೊಳಪಡಹತ್ತಿದ್ದವು. ಜೀವನಕ್ಕೆ ಮೂಲಭೂತ ಅವಶ್ಯಕತೆಯಾದ ಕುಡಿಯುವ ನೀರಿಗೆ ಬರ ಉಂಟಾಗಿ ಜನರ ಹಾಹಾಕಾರ ಮುಗಿಲು ಮುಟ್ಟುತ್ತಿತ್ತು. ಅಷ್ಟೇ ಅಲ್ಲದೆ ಜನತೆ ಅನಿವಾರ್ಯವಾಗಿ ಪರರಾಜ್ಯಗಳಿಗೆ ವಲಸೆ ಹೋಗಬೇಕಾದ ಗಂಭೀರ ಪರಿಸ್ಥಿತಿ ಅಂದಿನದಾಗಿತ್ತು. ಪ್ರತಿ ಬೇಸಿಗೆಯಲ್ಲಿ ನಗರದಲ್ಲಿ ರುದ್ರಮೌನ ಆವರಿಸುತ್ತಿತ್ತು. ಸುಮಾರು ಎರಡು ದಶಕಗಳಿಗಿಂತಲೂ ಅಧಿಕ ದಿನಗಳವರೆಗೆ ಆರ್ಥಿಕ, ಸಾಮಾಜಿಕ ಸಂಕಷ್ಟಕ್ಕೊಳಗಾದ ಜನತೆ ತಮ್ಮ ಸಮಸ್ಯೆಯ ನಿವಾರಣೆಗಾಗಿ ಆಲೋಚನೆ ಮಾಡಿ ಜಮಖಂಡಿ ತಾಲೂಕಿನ ಚಿಕ್ಕಪಡಸಲಗಿ ಬಳಿ ಕೃಷ್ಣಾ ನದಿಗೆ ಬ್ಯಾರೇಜನ್ನು ನಿರ್ಮಿಸುವ ಮೂಲಕ ಈ ಭಾಗದ ಜನರ ಜಲ ಸಮಸ್ಯೆಯನ್ನು ನಿವಾರಿಸಬಹುದೆಂಬುದನ್ನು ಸಾಬೀತುಪಡಿಸಿದರು. ಇಂತಹ ವ್ಯವಸ್ಥೆಯನ್ನು ವ್ಯವಸಾಯಕ್ಕಾಗಿ ಕೈಗೊಂಡಿದ್ದರಾದರೂ ನಗರದಲ್ಲಿ ಕೆರೆಗಳು ನಿರ್ಮಾಣಗೊಂಡಿದ್ದನ್ನು ಕಾಣಬಹುದು. ಈ ಕೆರೆಗಳ ಒಂದು ಸಂಪೂರ್ಣ ಮಾಹಿತಿಯನ್ನು ಈ ಅಧ್ಯಾಯದಲ್ಲಿ ಮಾಡಲಾಗಿದೆ. ಅವುಗಳು ನಿರ್ಮಾಣದ

---

೨. ಸುವರ್ಣ ಸಂಭ್ರಮ ಸ್ಮರಣ ಸಂಚಿಕೆ – ೨೦೦೬

ಅವಧಿ, ಏಕೆ? ಹೇಗೆ? ಯಾರು ನಿರ್ಮಿಸಿದರು? ಮತ್ತು ಅವುಗಳ ಉಪಯೋಗವೇನು? ಎಂಬುದನ್ನು ತಿಳಿಯಲಾಗಿದೆ.

ಒಂದು ಪ್ರದೇಶದಲ್ಲಿನ ಭೂಮಿಯಂತುನ್ನು ಅದರ ಸ್ವಾಭಾವಿಕ ಗುಣಲಕ್ಷಣಗಳಿಗೆ ಪೂರಕವಾಗಿ ಸದುಪಯೋಗ ಪಡಿಸಿಕೊಳ್ಳುವುದರಿಂದ ಆ ಪ್ರದೇಶದ ಆರ್ಥಿಕ ಪ್ರಗತಿ ಉಂಟಾಗುತ್ತದೆ. ಜಮಖಂಡಿ ಪಾಕೃತಿಕ, ಚಾರಿತ್ರಿಕ, ಸಾಂಸ್ಕೃತಿಕ, ಧಾರ್ಮಿಕ ಮಹತ್ವದ ಹಿನ್ನಲೆಯಲ್ಲಿ ಪ್ರಮುಖ ಕೆರೆಗಳಿಗೆ ಸಂಬಂಧಿಸಿದಂತೆ ವಿಸ್ತೃತ ಕ್ಷೇತ್ರಕಾರ್ಯ ಕೈಗೊಂಡು ಕೆರೆಗಳ ಪರಿಚಯುವನ್ನು ಮಾಡಲಾಗಿದೆ. ಋತುಮಾನಕ್ಕೆ ತಕ್ಕಂತೆ ಕೆರೆಗಳ ಅಂತರ್ಜಲ ಮಟ್ಟವು ಬದಲಾವಣೆ ಹೊಂದುತ್ತಾ ಹೋಗುತ್ತದೆ. ನೀರಿನ ಬಳಕೆ ಹೆಚ್ಚಿದಂತೆ ಜಲಮಟ್ಟವು ಇಳಿಮುಖವಾಗುತ್ತಾ ಹೋಗುತ್ತದೆ. ನೀರಿನ ಬಳಕೆ ಹೆಚ್ಚಿದಂತೆ ಕೃಷ್ಣಾ, ಘಟಪ್ರಭಾಗಳಂತಹ ಜೀವನದಿಗಳಿದ್ದು ಕ್ಷಾಮ ಮತ್ತು ಬರಗಾಲದ ಪರಿಸ್ಥಿತಿ ಆಗಾಗ ಮರಕಳಿಸುತ್ತಿರುತ್ತದೆ. ಆದ್ದರಿಂದ ಇಂತಹ ಬರಗಾಲವನ್ನು ನಿರ್ಮೂಲನೆ ಮಾಡಲೆಂದು ನಗರದಲ್ಲಿ ಕೆರೆಗಳು ನಿರ್ಮಾಣಗೊಂಡವು.

ಜಮಖಂಡಿ ಜನರಿಗೆ ಸುರಕ್ಷಿತ ಶುದ್ಧ ನೀರನ್ನು ಒದಗಿಸುವ ಉದ್ದೇಶದಿಂದ ೧೯೫೭–೫೮ ರಲ್ಲಿ ಯೋಜನೆಯೊಂದನ್ನು ರೂಢಿಸಿ ಸುಮಾರು ೧೩ ಲಕ್ಷ ರೂ. ವೆಚ್ಚದಲ್ಲಿ ಪ್ರತಿದಿನ ೩ ಲಕ್ಷ ಗ್ಯಾಲನ್ ಶುದ್ಧಿಕರಿಸಿದ ನೀರನ್ನು ಒದಗಿಸುವ ಗುರಿ ಹಾಕಿಕೊಂಡಿದೆ. ಈ ಕಾರ್ಯ ಯೋಜನೆಯನ್ನು ೧೯೭೦ ರಲ್ಲಿ ಪೂರ್ಣಗೊಳಿಸಲಾಯಿತು. ಪ್ರಸ್ತುತ ಈ ಮಂಡಳಿಯು ನೀರು ಸರಬರಾಜು ಹೊಣೆ ಹೊತ್ತಿದೆ. ಇದಕ್ಕೆ ಪೂರಕವಾಗಿ ೭೬ ಕೊಳವೆ ಬಾವಿಗಳನ್ನು ಕೊರೆದಿದೆ. ಪ್ರಸ್ತುತ ತಲಾವಾರು ೧೭.೫ ಗ್ಯಾಲನ ನೀರನ್ನು ಒದಗಿಸಲಾಗುತ್ತಿದೆ. ಭೂಮಿಯ ಮೇಲೆ ಬಳಕೆಯಾಗುವ ನೀರಿನ ಪ್ರತಿಶತ ೮೦ ರಷ್ಟು ಕೇವಲ ಕೃಷಿಗಾಗಿ ಉಪಯೋಗಿಸಲಾಗುತ್ತದೆ. ಕಡಿಮೆ ಮಳೆ ಬೀಳುವ ಜಿಲ್ಲೆಯ ಉತ್ತರ ಭಾಗದಲ್ಲಿ ಸಾಮಾನ್ಯವಾಗಿ ನದಿ, ಕೆರೆಗಳ ನೀರಿಗಿಂತ ಅಂತರ್ಜಲವು ನೀರಾವರಿಗೆ ಸಹಾಯಕವಾಗಿದೆ. ರಾಜ್ಯದಲ್ಲಿ ಅಂತರ್ಜಲದಿಂದ ನೀರಾವರಿಯಾಗುವ ಭೂಮಿ ಹೆಚ್ಚು ವಿಜಾಪುರ ಜಿಲ್ಲೆಯಲ್ಲಿಯೇ ಹೆಚ್ಚಾಗಿದೆ.[೩]

ಅಂತರ್ಜಲ ನೀರಾವರಿಯಾಗುವ ಭೂಮಿಯಂತುನ್ನು ಗುರುತಿಸಲು ೧೯೭೪ ರಿಂದ ೧೯೯೦ ರವರೆಗೆ ಅಂತರ್ಜಲ ಸಮಿಕ್ಷೆಯಂತುನ್ನು ನಡೆಸಲಾಯಿತು. ಅಂತರ್ಜಲ ಸಮಿಕ್ಷೆಯಂತು ಫಲಿತಾಂಶಗಳನ್ನು ವಿಶ್ಲೇಷಿಸಲಾಗಿ ಬಾಗಲಕೋಟೆ ಮತ್ತು ಇಂಡಿ ತಾಲೂಕಗಳಲ್ಲಿ ತುಲನಾತ್ಮಕವಾಗಿ ಅಂತರ್ಜಲವು ಉತ್ತಮವಾಗಿರುವುದು ಕಂಡು ಬಂದಿದೆ. ಹುನಗುಂದ, ಜಮಖಂಡಿ, ಮುಧೋಳ ಮತ್ತು ವಿಜಾಪುರ ತಲೂಕಗಳಲ್ಲಿ ಸವಳು ಪ್ರಮಾಣ ಜಾಸ್ತಿ ಇರುವುದು ತಿಳಿದು ಬಂದಿದೆ. ಜಮಖಂಡಿಯಲ್ಲಿ ಶೇ. ೭೧.೬ ರಷ್ಟು ಉತ್ತಮ, ಶೇ. ೨೪.೩ ರಷ್ಟು ಸವಳು ಹಾಗೂ ಶೇ. ೪.೧ ರಷ್ಟು ಕ್ಷಾರ ಭೂಮಿಯನ್ನು ಕಾಣಬಹುದು. ಮಣ್ಣಿನಲ್ಲಿ ಸವಳು ಪ್ರಮಾಣ ಜಾಸ್ತಿಯಾದಾಗ ಹೆಚ್ಚು ನೀರನ್ನು ಹಾಯಿಸಿ ಲವಣಗಳ ಬಸಿಯುವಿಕೆಗೆ ಅನುವು ಮಾಡಿಕೊಡಬೇಕು. ಇಂತಹ ಒಂದು ವ್ಯವಸ್ಥೆಗಾಗಿಯೇ ಕೆರೆಗಳು ನಿರ್ಮಾಣಗೊಂಡು ಕೃಷಿ ಭೂಮಿಗೆ ಉಪಯುಕ್ತವಾದವು.

---

೩. ಬಿಜಾಪುರ ಜಿಲ್ಲೆ ಗೆಡೆಟಿಯರ್

ಜಮಖಂಡಿ ಭಾಗದ ಹವಾಮಾನವು ಒಣ ಹಾಗೂ ಆರೋಗ್ಯಕರವಾಗಿದ್ದು, ಮಾರ್ಚ ತಿಂಗಳ ಮಧ್ಯದಿಂದ ಮೇ ತಿಂಗಳ ಕೊನೆಯವರೆಗೆ ಸರಾಸರಿ ಉಷ್ಣತಾಮಾನವು ೧೧೦ ಫ್ಯಾ. ದಿಂದ ೧೧೨ ಫ್ಯಾ. ವರೆಗೆ ಇರುತ್ತದೆ. ವಾರ್ಷಿಕ ಸರಾಸರಿ ಮಳೆಯ ಪ್ರಮಾಣವು ೧೪ ರಿಂದ ೨೦ ಇಂಚಿನಷ್ಟಾಗುವುದು. ಮುಂಗಾರು ಮಳೆಯು ಜೂನ ತಿಂಗಳ ಮೊದಲನೇ ವಾರದಲ್ಲಿ ಪ್ರಾರಂಭವಾಗಿ ಸೆಪ್ಟೆಂಬರ್ ತಿಂಗಳಲ್ಲಿ ಹೆಚ್ಚು ಮಳೆಯಾಗುತ್ತದೆ. ಅಕ್ಟೋಬರ್ ಮತ್ತು ನವೆಂಬರ್ ತಿಂಗಳಲ್ಲಿ ಹಿಂಗಾರು ಮಳೆಯು ತೀವ್ರವಾಗಿದ್ದು ವಾರ್ಷಿಕ ಮಳೆ ೨೧% ರಷ್ಟು ಇರುತ್ತದೆ. ಬಂಗಾಳಕೊಲ್ಲಿಯಲ್ಲಿ ಅಪರೂಪವಾಗಿ ಆಗುವ ಸಮುದ್ರ ವಾಯುಭಾರ ಕುಸಿತದಿಂದ ಈ ಭಾಗದಿಂದ ಅಕ್ಟೋಬರ ಮತ್ತು ನವೆಂಬರ ತಿಂಗಳಲ್ಲಿ ವ್ಯಾಪಿತವಾಗಿ ಮಳೆ ಸುರಿಯುತ್ತದೆ. ಇನ್ನುಳಿದ ತಿಂಗಳುಗಳಲ್ಲಿ ಜನರಿಗೆ ಮತ್ತು ಕೃಷಿಗಾಗಿ ಬಳಕೆಯಾಗಲು ಅನೂಕೂಲವಾಗುವಂತೆ ಕೆರೆಗಳನ್ನು ನಿರ್ಮಿಸಲಾಯಿತು.[೪]

ಜಮಖಂಡಿಯ ಕೆರೆಗಳು :

೧) ಕಟ್ಟಿಕೆರೆ

೨) ಕುಂಬಾರ ಕೆರೆ

೩) ಲಕ್ಷಣ ಕೆರೆ

೪) ಆನೆ ಕೆರೆ

೫) ರಾಮತೀರ್ಥ ಕೆರೆ

೬) ಗಾಣಗಿತ್ತಿ ಕೆರೆ

೭) ಗುಳ್ಳವನ ಕೆರೆ

೧) ಕಟ್ಟಿಕೆರೆ :

ಕಟ್ಟಿಕೆರೆ ಇದು ಜಮಖಂಡಿ ನಗರದ ದಕ್ಷಿಣ ದಿಕ್ಕಿಗೆ, ಮುಧೋಳ ನಗರಕ್ಕೆ ಹೋಗುವ ಮಾರ್ಗದ ಬಲಬದಿಗೆ ಇದೆ. ಈ ಕೆರೆಯನ್ನು ಪೂರ್ವ ಪಶ್ಚಿಮ ಭಾಗದಲ್ಲಿ ಹಬ್ಬಿದ ಉನ್ನತವಾದ ಗುಡ್ಡದ ಎರಡೂ ತುದಿಗಳನ್ನು ಜೋಡಿಸಿ ಯೋಜನಾಬದ್ಧವಾಗಿ ಕಟ್ಟಲಾಗಿದೆ. ಈ ಕೆರೆಯನ್ನು ನಿರ್ಮಿಸಿದ್ದನ್ನು ನೋಡಿದಾಗ ನಮಗೆ ತಿಳಿಯುವ ಮುಖ್ಯ ಅಂಶವೆಂದರೆ. ಕೆರೆಯನ್ನು ನಿರ್ಮಿಸುವಾಗ ಆಯ್ಕೆ ಮಾಡಿಕೊಳ್ಳಬೇಕಾದ ಸ್ಥಳದ ಬಗ್ಗೆ ಅಧ್ಯಯನದಲ್ಲಿ ಹೇಳಲಾದಂತೆ, ಈ ಕೆರೆಯನ್ನು ನಿರ್ಮಿಸಲು ಆಯ್ಕೆಮಾಡಿಕೊಂಡ ಸ್ಥಳ ಸೂಕ್ತವಾಗಿದೆ. ಕೆರೆಯ ಸುತ್ತಲಿನ ಭಾಗದಿಂದ ಗುಡ್ಡದ ಮೇಲಿಂದ ಹರಿದು ಬರುವ ಮಳೆಯ ನೀರನ್ನು ತಡೆಯುವ ಉದ್ದೇಶದಿಂದ, ಹರಿದು ಬರುವ ಎಲ್ಲಾ ನೀರನ್ನು ಇಲ್ಲಿ ಸಂಗ್ರಹಿಸಿ ಈ ಕೆರೆಯನ್ನು ನಿರ್ಮಿಸಲಾಗಿದೆ. ಮಳೆಗಾಲದಲ್ಲಿ ಈ ಕೆರೆಯು ತುಂಬಿದಾಗ ಅಪಾರ ನೀರು ಹರಿದು ಜಮಖಂಡಿ ನಗರದ ಪೂರ್ವಭಾಗವೆಲ್ಲವೂ ನೀರಿನಿಂದ ಆವೃತ್ತಿಯಾಗುತ್ತಿತ್ತು. ಇದರಿಂದ ಜನರು ಸಂಕಷ್ಟಕ್ಕೆ ತುತ್ತಾಗುತ್ತಿದ್ದರು. ಇದನ್ನು ತಡೆಗಟ್ಟಲೆಂದು ಇದನ್ನು ವ್ಯವಸ್ಥಿತವಾಗಿ ನಿರ್ಮಿಸಲಾಯಿತು.

ಇಂತಹ ಪ್ರವಾಹದ ಸಂಕಷ್ಟದಿಂದ ಜನರನ್ನು ಪಾರುಪಾಡಲು ಅಂದಿನ ಸಂಸ್ಥಾನಿಕರಾದ

---

೪. ಸುವರ್ಣ ಸಂಭ್ರಮ ಸ್ಮರಣ ಸಂಚಿಕೆ – ೨೦೦೬

ರಾಮಚಂದ್ರರಾವ್ ಅಪ್ಪಾಸಾಹೇಬರು ಕ್ರಿ.ಶ. ೧೮೭೪ ರಲ್ಲಿ ಕೆರೆಯನ್ನು ಕಟ್ಟಿಸಿದರು. ಇದರಿಂದ ನಗರವನ್ನು ಅಪಾಯದ ಅಂಚಿನಿಂದ ಪಾರು ಮಾಡಿದರಲ್ಲದೆ, ನಗರಕ್ಕೆ ಕುಡಿಯುವ ನೀರು ಪೂರೈಸುವ ವ್ಯವಸ್ಥೆಯನ್ನು ಕಲ್ಪಿಸಿಕೊಟ್ಟರು. ಇದರಿಂದಾಗಿ ಇಡೀ ಜಮಖಂಡಿ ನಗರಕ್ಕೆ ಕುಡಿಯುವ ನೀರನ್ನು ಇಲ್ಲಿಂದಲೇ ಪೂರೈಸಲಾಗುತ್ತಿತ್ತು. ಕೆರೆಯ ದಕ್ಷಿಣ ಭಾಗದಲ್ಲಿಯೂ ವಿಶಾಲವಾದ ಗುಡ್ಡವಿದೆ. ಇದರಿಂದಲೂ ಹರಿದು ಬರುವ ನೀರು ಕೆರೆಗೆ ಸಂಗ್ರಹವಾಗುತ್ತಿತ್ತು. ಹೀಗೆ ಇದಕ್ಕೆ ಉತ್ತರ ದಿಕ್ಕು ಒಂದನ್ನು ಬಿಟ್ಟು ಉಳಿದೆಲ್ಲಾ ಗುಡ್ಡದ ಭಾಗಗಳಿಂದಲೂ ನೀರು ಸಂಗ್ರಹಗೊಳ್ಳುತ್ತಿತ್ತು. ಈ ಕೆರೆಯ ಪಶ್ಚಿಮ ಭಾಗದಲ್ಲಿ ಎರಡು ಗುಡ್ಡಗಳಿದ್ದು ನಡುವೆ ಒಂದು ಅಥವಾ ಎರಡು ಕಿ.ಮೀ. ನಷ್ಟು ಸಾಗಿದಾಗ ಗಾಣಗಿತ್ತಿ ಗುಂಡವಿದೆ. ಅಲ್ಲಿಂದಲೂ ನೀರು ಹರಿದು ಈ ಕೆರೆಗೆ ಬಂದು ಸೇರುತ್ತಿದ್ದವು. ಈ ಗಾಣಗಿತ್ತಿ ಗುಂಡಕ್ಕೆ ಸುತ್ತಲಿನ ಗುಡ್ಡಗಳಿಂದ ಹಾಗೂ ಅರಮನೆಯ ಹಿಂಭಾಗದಲ್ಲಿರುವ ಗಾಣಗಿತ್ತಿ ಕೆರೆಯಿಂದ ನೀರು ಹರಿದು ಬಂದು ಸೇರುತ್ತಿದ್ದವು. ಇದು ತುಂಬಿದಾಗ ಹೆಚ್ಚಾದ ನೀರೆಲ್ಲವೂ ಹರಿದು ಬಂದು ಈ ಕೆರೆಗೆ ಸೇರುತ್ತಿತ್ತು. ಹಾಗೂ ಕೆರೆಯ ಪೂರ್ವ ಭಾಗದಲ್ಲಿನ ದೊಡ್ಡ ಗುಡ್ಡವಿದ್ದು ಇದರಲ್ಲಿ ಮುಧೋಳಕ್ಕೆ ಹೋಗಲು ರಸ್ತೆಯನ್ನು ನಿರ್ಮಿಸಲಾಗಿದ್ದು, ಈ ಗುಡ್ಡದ ನೀರೆಲ್ಲವನ್ನು ಈ ಕೆರೆಗೆ ಬಂದು ಸೇರುವಂತೆ ಕೊಳವೆಗಳನ್ನು ಅಳವಡಿಸಲಾಗಿದೆ. ಇದರಿಂದ ನೀರು ಕೆರೆಗೆ ಹರಿದು ಬರುತ್ತದೆ. ಹೀಗೆ ಎಲ್ಲಾ ಕಡೆಯಿಂದಲೂ ಈ ಕೆರೆಗೆ ನೀರು ಬಂದು ಸಂಗ್ರಹವಾಗುತ್ತಿದ್ದರಿಂದ ಕೆರೆ ಸದಾ ತುಂಬಿ ಹರಿಯುತ್ತದೆ. ಕೆರೆಯನ್ನು ನಿರ್ಮಾಣಕ್ಕೆ ಯೋಗ್ಯವಾದ ಸ್ಥಳದಲ್ಲಿಯೇ ಇದು ನಿರ್ಮಾಣಗೊಂಡಿದೆ.

ಎಲ್ಲಾ ಕಡೆಯಿಂದಲೂ ಹರಿದು ಬರುವ ಮಳೆಯ ನೀರನ್ನು ತಡೆಯಲು ಹಾಗೂ ಕೆರೆಯ ನೀರು ತುಂಬಿ ಜಲಾವೃತವಾಗುವ ಜಮಖಂಡಿ ನಗರವನ್ನು ಉಳಿಸುವ ಸಲುವಾಗಿ ಕೆರೆಯ ಉತ್ತರ ಭಾಗಕ್ಕೆ ದೊಡ್ಡ ಮಣ್ಣಿನ ಒಡ್ಡನ್ನು ಹಾಕಿ ಏರಿಯನ್ನು ನಿರ್ಮಿಸಲಾಯಿತು. ಈ ಏರಿಯ ಒಳಬದಿಗೆ ಬಂಡೆಗಳನ್ನು ಒಂದರ ಮೇಲೊಂದು ಇಟ್ಟು ಭದ್ರವಾದ ಕಲ್ಲಿನ ಕಟ್ಟೆಯನ್ನು ನಿರ್ಮಿಸಿ ಕೆರೆಯ ನೀರು ಪೋಲಾಗದಂತೆ ತಡೆಯಲಾಗಿದೆ ಯೋಜನಾಬದ್ರವಾಗಿ ಕಟ್ಟೆಯನ್ನು ಕಟ್ಟಲಾಗಿದೆ. ಹೀಗೆ ಕಲ್ಲಿನಿಂದ ಕಟ್ಟೆಯನ್ನು ನಿರ್ಮಿಸಿದ್ದರಿಂದ ಇದನ್ನು ಕಟ್ಟೆ ಕೆರೆ, ಕಟ್ಟೆಯ ಕೆರೆ ಎಂದು ಕರೆಯಲಾಗಿದೆ. ಆದರೆ ಜನರ ಬಾಯಲ್ಲಿ ಅದು ಇಂದು ಕಟ್ಟಿಕೆರೆ, ಕೆಟ್ಟಿಕೆರೆ ಎಂದಾಗಿದೆ. ಈ ಕೆರೆಯನ್ನು ಸೂಕ್ಷ್ಮವಾಗಿ ಗಮನಿಸಿದಾಗ ಇದರ ನಿರ್ಮಾಣದ ವ್ಯವಸ್ಥೆಯು ವಿಜಯನಗರದ ಅರಸರ ಕಾಲಾವಧಿಯಲ್ಲಿ ನಿರ್ಮಾಣಗೊಂಡ ಕೆರೆಗಳಿಗೆ ಹೋಲಿಕೆ ಆಗುತ್ತದೆ. ಕೆರೆಗಳನ್ನು ನಿರ್ಮಿಸಬೇಕಾದರೆ ವಹಿಸಿಬೇಕಾದ ಮುನ್ನೆಚ್ಚರಿಕೆಯನ್ನು ಹಿಂದಿನ ಅಧ್ಯಾಯದಲ್ಲಿ ಅಭ್ಯಸಿಸಿದ್ದೇವೆ. ಅದರಲ್ಲಿನಂತೆ ಕೆರೆಗಳು ನಿರ್ಮಾಣವಾಗಲು ಎಂತಹ ಭೂ ಪ್ರದೇಶವಿರಬೇಕೆಂದು ಹೇಳಲಾಗಿದೆಯೇ, ಅದೇ ರೀತಿ ಎರಡು ಗುಡ್ಡಗಳ ನಡುವಿನ ಭೂ ಪ್ರದೇಶದಲ್ಲಿ ಕೆರೆಯನ್ನು ನಿರ್ಮಿಸಲಾಗಿದೆ. ಎಲ್ಲಾ ಮೂಲಗಳಿಂದ ಗುಡ್ಡದಿಂದ ಝರಿಗಳು ಹರಿದು ಬಂದು ಸೇರುತ್ತದೆ.

ಈ ಕೆರೆಗೆ ಸುಮಾರು ೧೦ ರಿಂದ ೧೫ ಎಕರೆಯಷ್ಟು ಭೂಮಿಯನ್ನು ಬಳಕೆ ಮಾಡಿಕೊಳ್ಳಲಾಗಿದೆ. ಅಂದಿನ, ಅಂದರೆ ಸಂಸ್ಥಾನಿಕರ ಕಾಲದಲ್ಲಿ ಈ ಕೆರೆಯಿಂದಲೇ ಕುಡಿಯುವ ನೀರನ್ನು ಸರಬರಾಜು ಮಾಡಲಾಗುತ್ತಿತ್ತು. ಕಟ್ಟಿ ಕೆರೆಯ ಕೆಳಭಾಗದಲ್ಲಿ ಗುಡ್ಡಕ್ಕೆ ಹೊಂದಿಕೊಂಡಿರುವಂತೆ ಒಂದು ಟ್ಯಾಂಕನ್ನು ಕಟ್ಟಿಸಿ ಅದರಲ್ಲಿ ಕೆರೆ ನೀರು ಸಂಗ್ರಹಿಸಿ ಅಲ್ಲಿಂದ ನಗರಕ್ಕೆ ಕೊಳವೆಗಳ ಮೂಲಕ ಸರಬರಾಜು

ಮಾಡಲಾಗುತ್ತಿತ್ತು. ಅಂದು ನಿರ್ಮಿಸಿದ ಟ್ಯಾಂಕಿನ ಅವಶೇಷಗಳನ್ನು ಇಂದಿಗೂ ಕಾಣಬಹುದು. ನಗರದ ಜನಸಂಖ್ಯೆ ಹೆಚ್ಚಾದಂತೆ ಈ ಕೆರೆಯ ನೀರು ನಗರಕ್ಕೆ ಸಾಲದಂತಾಯಿತು. ಮತ್ತು ಇತ್ತೀಚೆಗೆ ಮಳೆಯು ಪ್ರಮಾಣ ಕಡಿಮೆಯಾಗತೊಡಗಿದ್ದರಿಂದ ಇದರಿಂದ ಕೆರೆಯಲ್ಲಿ ನೀರಿನ ಸಂಗ್ರಹ ಕಡಿಮೆಯಾಗುತ್ತಿರುವುದರಿಂದ ನಗರಕ್ಕೆ ನೀರು ಪೂರೈಕೆಯು ಸಾಲದಂತಾಯಿತು. ನಂತರ ಕ್ರಿ.ಶ. ೧೯೨೮ ರಲ್ಲಿ ಪರಶುರಾಮ ಭಾವು ಸಾಹೇಬರ ಏಕಮೇವ ಪುತ್ರರಾದ 'ಶಂಕರರಾವ್ ಅಪ್ಪಾಸಾಹೇಬ ಪಟವರ್ಧನರು ಜಮಖಂಡಿ ನಗರಕ್ಕೆ ನಿರಂತರ ಕುಡಿಯುವ ನೀರಿನ ವ್ಯವಸ್ಥೆಗಾಗಿ ಕೃಷ್ಣಾ ನಡಿಯ ತಟಾಕದಲ್ಲಿದ್ದ, ಜಮಖಂಡಿಯಿಂದ ಐದು ಮೈಲು ಅಂತರದ ಸನಾಳ ಎಂಬ ಗ್ರಾಮದಲ್ಲಿ ಒಂದು ನೀರಿನ ಟ್ಯಾಂಕನ್ನು ನಿರ್ಮಿಸಿದರು. ಜಮಖಂಡಿಯಲ್ಲಿ ನೀಲಗಿರಿ ನಿಂಗಪ್ಪನ ಗುಡ್ಡದ ನೆರೆಯಲ್ಲಿ ನೀರಿನ ದೊಡ್ಡ ಟ್ಯಾಂಕನ್ನು ಕಟ್ಟಿಸಿ ಅಲ್ಲಿಂದ ಪಾಯಿಪಗಳ ಮೂಲಕ ನೀರನ್ನು ಪೂರೈಸುವ ವ್ಯವಸ್ಥೆಯನ್ನು ಮಾಡಿದರು. ಈ ಯೋಜನೆಗೆ ಅಂದು ಸುಮಾರು ೭ ಲಕ್ಷ ರೂ. ಗಳನ್ನುವೆಚ್ಚ ಮಾಡಿದರು. ಇಂದಿಗೂ ಸಹ ಜಮಖಂಡಿ ನಗರಕ್ಕೆ ಸನಾಳ ಟ್ಯಾಂಕನಿಂದಲೇ ನೀರನ್ನು ಪೂರೈಸಲಾಗುತ್ತಿದೆ. ೧೯೫೬ ರ ನಂತರ ಈ ನೀರು ಪೂರೈಕೆಯ ಕಾರ್ಯವನ್ನು ಕರ್ನಾಟಕ ನೀರು ಸರಬರಾಜು ಒಳಚರಂಡಿ ಮಂಡಳಿಗೆ ವಹಿಸಿಲಾಗಿದೆ."

ಕೆಟ್ಟಿ ಕೆರೆಗೆ ನೀರು ಯಾವ ಮೂಲದಿಂದ ದೊರೆಯುತ್ತಿತ್ತು ಎಂಬುದನ್ನು ತಿಳಿದಿದ್ದೇವೆ. ಹಾಗೆಯೇ ಕೆರೆಯನ್ನು ಹೇಗೆ ರಚಿಸಲಾಗಿದೆ ಮತ್ತು ಅದು ಹೇಗೆ ಪ್ರಯೋಜನವನ್ನುಂಟು ಮಾಡಿದೆ ಎಂಬುದನ್ನು ತಿಳಿಯೋಣ. ಪೂರ್ವ–ಪಶ್ಚಿಮವಾಗಿ ಹಾಗೂ ದಕ್ಷಿಣಕ್ಕೆ ವಿಶಾಲವಾಗಿ ಈ ಕೆರೆಯು ಹರಡಿಕೊಂಡಿದೆ. ಕೆರೆಯ ಉತ್ತರ ಭಾಗದಲ್ಲಿ ಸುಮಾರು ೨೦೦ ಮೀ. ಉದ್ದ ಹಾಗೂ ೩೦ ಮೀ ಅಡಿ ಹಾಗೂ ಎತ್ತರವಾದ ಏರಿಯನ್ನು ನಿರ್ಮಿಸಲಾಗಿದೆ. ಇದು ಕಲ್ಲಿನಿಂದ ನಿರ್ಮಿಸಿದೆ ಮತ್ತು ಪೂರ್ವದಿಂದ ಗಾಣಗಿತ್ತಿ ಗುಂಡದ ನೀರು ಹರಿದು ಬರುವಲ್ಲಿ, ಕೆರೆಯ ಪಶ್ಚಿಮ ಅಂಚಿನಲ್ಲಿ ಎತ್ತರವಾದ ಗೋಡೆಯನ್ನು ನಿರ್ಮಿಸಲಾಗಿದೆ. ಬಹುಶಃ ಗುಂಡದ ನೀರು ಹರಿದು ಬರುವಾಗ ರಭಸದಿಂದ ಬಂದು ಕೆರೆಗೆ ಯಾವುದೇ ತೆರನಾದ ಧಕ್ಕೆಯನ್ನು ಉಂಟು ಮಾಡದಂತೆ ವಿಧಾನಕ್ಕೆ ಬಂದು ಕೆರೆಗೆ ಸೇರುವಂತೆ ೮ ಅಡಿ ಎತ್ತರದ ಕಲ್ಲಿನ ಗೋಡೆಯನ್ನು ನಿರ್ಮಿಸಲಾಗಿದೆ. ನೀರು ಗೋಡೆಯಲ್ಲಿ ತಡೆದು ನಿಧಾನವಾಗಿ ಬಂದು ಕೆರೆಯನ್ನು ಸೇರುವ ವ್ಯವಸ್ಥೆ ಮಾಡಲಾಗಿದೆ. ಹಾಗೂ ಜಮಖಂಡಿಯಿಂದ ದಕ್ಷಿಣಕ್ಕೆ ಅಂದರೆ ಮುಧೋಳಕ್ಕೆ ಹೋಗುವ ದಾರಿಯಲ್ಲಿಯೇ ಜಮಖಂಡಿಯಿಂದ ೬ ಕಿ.ಮೀ. ದೂರದಲ್ಲಿರುವ ಸಿದ್ದಾಪೂರ ಎಂಬ ಗ್ರಾಮವಿದ್ದು ಅಲ್ಲಿ ಒಂದು ದೊಡ್ಡ ಕೆರೆಯಿದ್ದು, ಅದು ತುಂಬಿದಾಗ ಹೆಚ್ಚಾದ ನೀರೆಲ್ಲವೂ ಈ ಕಟ್ಟಿಕೆರೆಗೆ ಬಂದು ಸೇರುತ್ತಿತ್ತು. ಅಷ್ಟು ದೂರದಿಂದ ನೀರು ಹರಿದು ಕೆರೆಗೆ ಬಂದು ಸೇರುತ್ತಿತ್ತು ಎಂಬುದು ನಂಬಲು ಅಸಾಧ್ಯವಾದ ಮಾತು. ಆದರೂ ಅಂದಿನ ಕಾಲದ ಜನರು ಕಣ್ಣಾರೆ ಕಂಡ ಹಾಗೂ ನಡೆದ ವಾಸ್ತವವನ್ನು ಹೇಳುತ್ತಿರುವ ಅವರ ಮಾತನ್ನು ಅಲ್ಲಗಳೆಯುವಂತಿಲ್ಲ.

ವಿಜಯನಗರದ ಕಾಲದಲ್ಲಿನ ತೂಬುಗಳ ನಿರ್ಮಾಣವನ್ನು ನೋಡಿದ್ದೇವೆ. ಅಂತಹ ತೂಬುಗಳನ್ನು ಈ ಕೆರೆಯಲ್ಲಿ ನಿರ್ಮಿಸಿದ್ದನ್ನು ಕಾಣಬಹುದು. ಈ ಕೆರೆಯಲ್ಲಿ ಆರು ತೂಬುಗಳಿವೆ. ಈ

---

೫. ಜಮಖಂಡಿಯ ಇತಿಹಾಸ ದರ್ಪಣ – ಪ್ರೊ. ಎಸ್. ಬಿ. ಮಟೋಳಿ

ಕೆರೆಯ ಒಂದು ವಿಶೇಷತೆಯೆಂದರೆ, ಇಲ್ಲಿ ಗಡಿಗ ತೂಬು ಇರುವುದನ್ನು ಕಾಣಬಹುದು. ಈ ಏರಿಯ ಪಕ್ಕದಲ್ಲಿಯೇ ನಾಲುವೆಗಳು ಇದ್ದದ್ದನ್ನು ಕಾಣಬಹುದು. ಅವುಗಳಿಂದ ಉತ್ತರಕ್ಕಿರುವ ತೋಟಗಳಿಗೆ ಹಾಗೂ ಇತರ ಕೃಷಿ ಭೂಮಿಗೆ ನೀರನ್ನು ಹರಿಸಲಾಗುತ್ತಿತ್ತು.

ಕೆರೆಯ ಉತ್ತರ ಭಾಗದಲ್ಲಿ ಆಯಕಟ್ಟು ಪ್ರದೇಶವಿದೆ. ಈ ಪ್ರದೇಶಕ್ಕೆ ನಾಲುವೆಗಳ ಮೂಲಕ ನೀರನ್ನು ಪೂರೈಸಲಾಗುತ್ತಿತ್ತು. ಇಂದಿಗೂ ಈ ಪ್ರದೇಶದಲ್ಲಿ ತೋಟವಿದ್ದದ್ದನ್ನು ಕಾಣಬಹುದು. ಕೆರೆಯ ಏರಿಯ ಕೆಳಭಾಗದಲ್ಲಿರುವ ತೋಟದಲ್ಲಿ ಅಕ್ಕ–ತಂಗಿಯರ ಬಾವಿ ಇದ್ದು, ಕೆರೆಯ ನಾಲುವೆಗಳ ಮೂಲಕ ಕೆರೆಯ ನೀರನ್ನು ಬಾವಿಯಲ್ಲಿ ಸಂಗ್ರಹಿಸಿ ಅಲ್ಲಿನ ನೀರಿನಿಂದ ಕೆಳಗಿನ ತೋಟಗಳಿಗೆ ಪೂರೈಸಲಾಗುತ್ತಿತ್ತು. ಇದರಿಂದ ನಮಗೆ ತಿಳಿಯುವುದೆನೆಂದರೆ ಕೆರೆಯ ಅಂತರ್ಜಲದಿಂದಾಗಿ ಈ ಬಾವಿಗಳಲ್ಲಿ ನೀರು ಇರುತ್ತಿತ್ತು. ಎಂಬುದು ಸ್ಪಷ್ಟವಾಗುತ್ತದೆ. ಕೆರೆಯ ದಕ್ಷಿಣ ಭಾಗದಲ್ಲಿರುವ ಸುಮಾರು ಎಕರೆಯ ಜಮೀನುಗಳು ಈ ಕೆರೆಯ ನೀರನ್ನು ಉಪಯೋಗಿಸಿಕೊಂಡು ವ್ಯವಸಾಯ ಮಾಡುತ್ತಿದ್ದರು ಎಂಬುದು ತಿಳಿದು ಬರುತ್ತದೆ. ಕೆರೆಗೆ ನಿರ್ಮಿಸಿದ ನಾಲುವೆಗಳನ್ನು ಯೋಜನಾಬದ್ಧವಾಗಿ ನಿರ್ಮಿಸಲಾಗಿದೆ. ಕೆರೆಯಲ್ಲಿ ನಿರ್ಮಿಸಿದ ತೂಬುಗಳಿಂದ ನೀರು ನಾಲುವೆಗಳಿಗೆ ಹರಿಯುವ ವ್ಯವಸ್ಥೆ ಮಾಡಿದ್ದು ಕಸ ಕಡ್ಡಿಗಳಿಂದ ನೀರು ಹರಿಯುವ ವ್ಯವಸ್ಥೆ ತಟಸ್ಥವಾದಲ್ಲಿ ಅದನ್ನು ಸ್ವಚ್ಛವಾಗಿರಸಲು ಮ್ಯಾನ್‌ಹೋಲನ್ನು ನಿರ್ಮಿಸಲಾಗಿದೆ. ಹೀಗೆ ಈ ಕಟ್ಟೆ ಕೆರೆಯ ಸಾಮಾಜಿಕವಾಗಿ ನಗರದ ಜನತೆಗೆ ಉಪಯುಕ್ತವಾಗಿದೆ ಎನ್ನಬಹುದು.

ಜಮಖಂಡಿಯಿಂದ ಮುಧೋಳಕ್ಕೆ ಹೋಗುವ ರಸ್ತೆಯ ಪೂರ್ವಕ್ಕೆ ಇರುವ ಗುಡ್ಡದ ಕೆಳಭಾಗದಲ್ಲಿ ಅಂದರೆ, ಕೆರೆಯ ಆಗ್ನೇಯ ಭಾಗದಲ್ಲಿ ಸಕ್ಕರೆ ಕಾರ್ಖಾನೆ ಇರುವುದನ್ನು ಕಾಣಬಹುದು. ಆದರೆ ಅದು ಇಂದು ಕಾರ್ಯ ನಿರ್ವಹಿಸುತ್ತಿಲ್ಲ ಕೇವಲ ಕಾರ್ಖಾನೆಯ ಅವಶೇಷಗಳು ಮಾತ್ರ ಕಂಡು ಬರುತ್ತದೆ. ಬಹುಶಃ ಈ ಕಾರ್ಖಾನೆಯ ಕಾರ್ಯ ನಿರತವಾಗಿದ್ದಾಗ ಈ ಕೆರೆಯ ನೀರನ್ನು ಬಳಸಿಕೊಳ್ಳುತ್ತಿತ್ತು ಎಂದು ತಿಳಿಯಬಹುದು. ಹಾಗೂ ಪೂರ್ವ ಗುಡ್ಡದ ನೀರೆಲ್ಲವೂ ಕೊಳವೆ ಮೂಲಕ ಕೆರೆಗೆ ಬಂದು ಸೇರುತ್ತಿತ್ತು. ಈ ಕೊಳವೆ ಅಳವಡಿಸಿದ್ದಲ್ಲಿ ಪಾವಟಿಗೆಗಳನ್ನು ನಿರ್ಮಿಸಲಾಗಿತ್ತೆಂದು ತಿಳಿಯಬಹುದು. ರಸ್ತೆಯ ಬದಿ ಈ ಕೊಳವೆಯ ಹತ್ತಿರ ಪಾವಟಿಗೆಯ ಅವಶೇಷಗಳು ಇಂದಿಗೂ ಕಂಡು ಬರುತ್ತವೆ. ಕೆಟ್ಟಿಕೆರೆಯು ಪೂರ್ವ–ಪಶ್ಚಿಮಾಗಿ ಹಬ್ಬಿದ ಗುಡ್ಡದ ನಡುವೆ ತಗ್ಗಾದ ಭಾಗದಲ್ಲಿದ್ದು, ಕೆರೆಯ ಪೂರ್ವ ಭಾಗದಲ್ಲಿ ಹಬ್ಬಿರುವ ಗುಡ್ಡದ ಮೇಲ್ಭಾಗದಲ್ಲಿ ಅರಣ್ಯ ಇಲಾಖೆಯವರು ಒಂದು ಪಕ್ಷಿಧಾಮವನ್ನು ನಿರ್ಮಿಸಿದ್ದರು. ಸುಂದರವಾದ ಅರಣ್ಯಧಾಮವನ್ನು ನಿರ್ಮಿಸಿದ್ದರು. ಅದರಲ್ಲಿ ಒಂದು ಟ್ಯಾಂಕನ್ನು ನಿರ್ಮಿಸಿ ಕೆರೆಂತು ನೀರನ್ನು ಅಲ್ಲಿ ಸಂಗ್ರಹಿಸಿ ಅದರಿಂದ ಈ ಅರಣ್ಯದ ಎಲ್ಲ ಮರಗಳಿಗೆ ಹಾಯಿಸಲಾಗುತ್ತಿತ್ತು. ಇದರಿಂದ ಅರಣ್ಯವು ಸಂಪದ್ಭರಿತದಿಂದ ಕೂಡಿತ್ತು. ಇಲ್ಲ ಹಲವಾರು ಪಕ್ಷಿಗಳು ವಲಸೆ ಬರುತ್ತಿದ್ದವು. ಇದರಿಂದ ಅರಣ್ಯಧಾಮದ ಸೌಂದರ್ಯವನ್ನು ಇನ್ನಷ್ಟು ಹೆಚ್ಚಿಸಿದ್ದವು. ಇದೊಂದು ಪಕ್ಷಿಧಾಮವಾಗಿದ್ದು ಅಂದಿನ ಜನರಿಗೆ ಮನರಂಜನೆಯನ್ನು ಒದಗಿಸುವ ವನ್ಯಧಾಮವಾಗಿತ್ತು ಎನ್ನಬಹುದು. ಜನರು ಇಲ್ಲಿ ಬಂದು ಕುಳಿತು ನಿಸರ್ಗ ಸೌಂದರ್ಯವನ್ನು ಸವಿಯುತ್ತಿದ್ದರು ಎನ್ನಬಹುದು. ಇಲ್ಲಿ ಕುಳಿತುಕೊಳ್ಳುವ ಆಸನಗಳು ಕಂಡು ಬರುತ್ತವೆ. ಆದರೆ ಇತ್ತೀಚಿನ ದಿನಗಳಲ್ಲಿ ಮಳೆಯ ಪ್ರಮಾಣ ಕಡಿಮೆಯಾಗಿದ್ದು, ಕೆರೆಯಲ್ಲಿ ನೀರಿನ ಸಂಗ್ರಹ ಕಡಿಮೆಯಾಗುತ್ತಿರುವುದುರಿಂದ ಇಂದು

ಪಕ್ಷಿಧಾಮವು ಕಣ್ಮರೆಯಾಗಿದೆ. ಆದರೂ ಇಂದು ಕೇವಲ ಕೆಲವು ಮರಗಳು ಒಣಗಿ ನಿಂತಿದೆ. ಅದರಲ್ಲಿ ಮರಗಳು ಕೆಲವು ಮಳೆಯ ಆಶ್ರಯದಿಂದಾಗಿ ಹಸಿರಾಗಿವೆ.

ಜಮಖಂಡಿ ನಗರದ ಜನಸಂಖ್ಯೆ ಹೆಚ್ಚಾದಂತೆ ಈ ಕೆರೆಯ ನೀರು ನಗರಕ್ಕೆ ಸಾಲದಾಯಿತು. ಸಿದ್ದಾಪೂರ ಕೆರೆಯು ತುಂಬಿ ಅಲ್ಲಿ ಹೆಚ್ಚಾದ ನೀರನ್ನು ಈ ಕೆರೆಗೆ ನೀರನ್ನು ಪೂರೈಸುತ್ತಿತ್ತು. ಆದರೆ ಇತ್ತೀಚಿನ ದಿನಗಳಲ್ಲಿ ಮಳೆಯ ಪ್ರಮಾಣ ಕಡಿಮೆಯಾಗಿದ್ದರಿಂದ ಕೆರೆಯಲ್ಲಿಯ ನೀರಿನ ಸಂಗ್ರಹವು ಕೂಡ ಕಡಿಮೆಯಾಗುತ್ತಲಿದೆ. ಇದರಿಂದಾಗಿ ಕೆರೆಯ ಏರಿಯ ಕೆಳಭಾಗದಲ್ಲಿರುವ ಅಕ್ಕ–ತಂಗಿಯರ ಬಾವಿಯಲ್ಲಿ ನೀರೂ ಸಹ ಬತ್ತಿ ಬರಿದಾಗಿದೆ. ಆದರೆ ಇಂದು ಆ ಬಾವಿಗಳು ಮುಚ್ಚಿ ಹೋಗಿವೆ. ಕೆರೆಯ ದಕ್ಷಿಣದಲ್ಲಿ ಕೃಷಿಯ ಭೂಮಿಯನ್ನು ಇಂದು ವ್ಯವಸಾಯಕ್ಕೊಳಪಡಿಸದೆ ಬಂಜರಾಗಿ ಬಿದ್ದುದನ್ನು ನೋಡಬಹುದಾಗಿದೆ. ಈ ಕೆರೆಯ ದಕ್ಷಿಣ ಭಾಗದಲ್ಲಿರುವ ಬಯಲು ಭೂಮಿಯಲ್ಲಿ ವರ್ಷಕ್ಕೊಮ್ಮೆ ಜಾನುವಾರುಗಳ ಜಾತ್ರೆಯು ಜರಗುತ್ತದೆ. ಈ ಜಾತ್ರೆಯು ಯುಗಾದಿಯ ಪಾಡ್ಯಮಿ ದಿನದಂದು ನಡೆಯುತ್ತದೆ. ಇಲ್ಲಿಗೆ ಎಲ್ಲಾ ಕಡೆಯಿಂದಲೂ, ಎಲ್ಲಾ ತಳಿಯ ಉತ್ತಮ ಗುಣಮಟ್ಟದಿಂದ ಕೂಡಿದ ಜಾನುವಾರುಗಳು ಬಂದು ಸೇರುತ್ತಿದ್ದವು. ಈ ಜಾತ್ರೆಯಲ್ಲಿನ ಜಾನುವಾರಗಳಿಗೂ ನೀರು ಕುಡಿಯಲು ಈ ಕೆರೆಯೇ ಸಹಾಯಕವಾಗಿದೆ. ಹೀಗೆ ಹಲವಾರು ಉಪಯೋಗವಾಗುತ್ತಿರುವ ಈ ಕೆರೆಯ ಇಂದು ಮಳೆಗಾಲದಲ್ಲಿ ಮಾತ್ರ ನೀರಿನಿಂದ ತುಂಬಿರುತ್ತದೆ. ಇಂದು ಈ ಕೆರೆಯನ್ನು ದುರಸ್ತಿಗೊಳಿಸಿದರೆ, ಹೂಳೆತ್ತಿಸಿದರೆ ಮೊದಲಿನಂತೆ ಕೆರೆಯು ಉಪಯುಕ್ತವಾಗಬಹುದೆಂಬುದು ನನ್ನ ಅನಿಸಿಕೆ. ಇದಕ್ಕಾಗಿ ಇದರ ಉಸ್ತುವಾರಿಗೆ ಸಂಬಂಧಿಸಿದ ತಾಲೂಕ ಪಂಚಾಯತಿಯು ಇತ್ತ ಗಮನಹರಿಸಬೇಕಾಗಿದೆ.

೨) ಕುಂಬಾರ ಕೆರೆ (ಮಾದಪ್ಪನ ಕೆರೆ) :

ಜಮಖಂಡಿಯ ಪೂರ್ವ ಭಾಗದಲ್ಲಿ, ಅಂದರೆ ಕುಂಚನೂರು ವೃತ್ತ ಅಥವಾ ಟಿಪ್ಪು ಸುಲ್ತಾನ ವೃತ್ತದ ಹತ್ತಿರ ಇರುವ ಕೆರೆಯೇ ಕುಂಬಾರ ಕೆರೆ. ಈ ಕೆರೆಯು ಜಮಖಂಡಿ ನಗರದ ಈಗಿರುವ ಸರ್ಕಾರಿ ಆಸ್ಪತ್ರೆಯ ಹಿಂಬದಿಯಲ್ಲಿ ಮೊದಲಿಗೆ ಸಂಸ್ಥಾನಿಕರ ಕಾಲದಲ್ಲಿ ಜಾನುವಾರ ಮಾರುಕಟ್ಟೆಯು ಇದ್ದದ್ದು ಕಂಡುಬರುತ್ತದೆ. ಆ ಜಾನುವಾರು ಮಾರುಕಟ್ಟೆಯ ಪಕ್ಕದಲ್ಲಿ ಹಾಗೂ ಇಂದಿನ ನ್ಯಾಯಾಲಯದ ಹಿಂಬದಿಯಲ್ಲಿ ಈ ಕೆರೆಯ ಕಂಡು ಬರುತ್ತದೆ. ಇದು ಅತ್ಯಂತ ಪುರಾತನ ಕಾಲದ ಕೆರೆಯಾಗಿದ್ದು ತನ್ನದೇಯಾದ ವಿಶೇಷತೆಯನ್ನು ಹೊಂದಿದೆ. ಇದನ್ನು ಮಾದಪ್ಪನ ಕೆರೆಯೆಂತಲೂ ಕರೆಯುವರು. ಈ ಕೆರೆಗೆ ಈ ಹೆಸರು ಬರಲು ಕಾರಣವನ್ನು ತಿಳಿದಾಗ ಅದರ ಹೆಸರಿನ ಹಿಂದೆ ಒಂದು ಐತಿಹ್ಯವಿರುವದು ತಿಳಿದು ಬರುತ್ತದೆ. ಅದೇನೆಂದರೆ, ಹಿಂದೆ ಕುಂಚನೂರು ಗ್ರಾಮದಲ್ಲಿ ನೆಲೆಸಿದ್ದ ಮಾದಪ್ಪನೆಂಬ ಸಿದ್ಧಿ ಪುರುಷನು ವಾಸಿಸುತ್ತಿದ್ದನು. ಊರಿನ ದನಗಳೆಲ್ಲವನ್ನು ಮೇಯಿಸಿಕೊಳ್ಳುತ್ತಾ ಜಮಖಂಡಿ ನಗರದವರೆಗೂ ಬರುತ್ತಿದ್ದನು. ಎಲ್ಲ ದನ–ಕರುಗಳನ್ನು ಈ ಕೆರೆಗೆ ತಂದು ನೀರನ್ನು ಕುಡಿಸಿಕೊಂಡು ಹೋಗುತ್ತಿದ್ದನಂತೆ. ಒಂದು ದಿನ ಕೆರೆಗೆ ಜಾನುವಾರುಗಳಿಗೆ ನೀರು ಕುಡಿಸಲೆಂದು ಬಂದಾಗ ಕೆರೆಯ ಏರಿಯು ಒಡೆದು ಹೋಯಿತಂತೆ. ನಗರದ ಜನರೆಲ್ಲರೂ ಏರಿಯ ನಿರ್ಮಾಣಕ್ಕೆ ಏನೆಲ್ಲಾ ಪ್ರಯತ್ನಪಟ್ಟು ಮಣ್ಣನ್ನು ಹಾಕಿಸಿದರೂ. ಅದು ನಿಲ್ಲದೇ ಕೆರೆಯ ನೀರೆಲ್ಲವೂ ಹರಿದು ಹೋಗತೊಡಗಿತು. ಇದರಿಂದ ಅಪಾರ ಹಾನಿಯುಂಟಾಯಿತೆಂದು ತಿಳಿದು ಬರುತ್ತದೆ. ಜನರು ಎಷ್ಟೋ ಸಲ ಒಡ್ಡನ್ನು ನಿರ್ಮಿಸಿದರೂ

ಹರಿಯುವ ನೀರನ್ನು ತಡೆಯಲಾಗಲಿಲ್ಲವಂತೆ. ಆಗ ಮಾದಪ್ಪನು ತನ್ನ ಪವಾಡದಿಂದಾಗಿ ಕೆರೆಯ ನೀರು ಹರಿದು ಹೋಗದಂತೆ ತಡೆಯಲು ಒಡ್ಡನ್ನು ನಿರ್ಮಿಸಿದನಂತೆ. ಅಂದು ಪವಾಡ ಪುರುಷ ಮಾದಪ್ಪನ ತಪಃ ಶಕ್ತಿಯಿಂದ ನಿರ್ಮಿಸಿದ ಒಡ್ಡು ಇಂದಿಗೂ ಭದ್ರವಾಗಿದೆ. ಒಮ್ಮೆಯೂ ಒಡೆದು ಹೋಗಿಲ್ಲ. ಈ ಮಾದಪ್ಪ ನಿರ್ಮಿಸಿದ ಒಡ್ಡಿನಿಂದಾಗಿ ಈ ಕೆರೆಯು ಇಂದಿಗೂ ಇರುವುದರಿಂದ ಇದನ್ನು ಅವನ ಹೆಸರಿನಿಂದಲೇ ಮಾದಪ್ಪನ ಕೆರೆಯೆಂದು ಕರೆಯಲಾಗಿದೆ. ಆದರೆ ಇತ್ತೀಚಿನ ಭಾರಿ ಪ್ರಮಾಣದ ಮಳೆಯಿಂದಾಗಿ ಕೆರೆಯು ತುಂಬಿ ನೀರೆಲ್ಲವೂ ಹರಿದು ಅಪಾರ ಮನೆಗಳಿಗೆ ಹಾನಿಯುಂಟು ಮಾಡುತ್ತಿದ್ದ ಕಾರಣ ಕೆರೆಯ ಏರಿಯನ್ನು ಒಡೆದು ನೀರನ್ನು ಹರಿಯ ಬಿಡಲಾಯಿತು. ಆದರೆ ಹೆಚ್ಚಾಗಿ ಇಂದು ಜನರ ಬಾಯಲ್ಲಿ ಕುಂಬಾರ ಕೆರೆ ಎಂದು ರೂಢಿಯಲ್ಲಿದೆ. ಕಾರಣ ಇದು ಕುಂಬಾರ ಜನರಿಗೆ ಹೆಚ್ಚು ಉಪಯೋಗವಾಗಿದೆ.

ಕುಂಬಾರ ಕೆರೆಯು ದಕ್ಷಿಣೋತ್ತರವಾಗಿ ಹೆಚ್ಚು ಉದ್ದವಾಗಿ ರಚನೆಯಾಗಿದ್ದು, ಇದರ ದಕ್ಷಿಣ ದಂಡೆಯ ಮೇಲೆ ನಂದಿಕೇಶ್ವರ ದೇವಾಲಯವಿದೆ. ಇದು ಪುರಾತನ ಶೈವ ದೇವಾಲಯವಾಗಿದ್ದು, ಕಲ್ಯಾಣ ಚಾಲುಕ್ಯ ಶೈಲಿಯಲ್ಲಿ ನಿರ್ಮಾಣವಾದ ತ್ರಿಕೂಟೇಶ್ವರ ದೇವಾಲಯವಾಗಿದೆ. ಈ ದೇವಸ್ಥಾನದ ಪ್ರಾಂಗಣದಲ್ಲಿ ಒಂದು ಪುರಾತನ ಬಾವಿಯಿದೆ. ಅದರ ನೀರನ್ನು ಇಂದಿಗೂ ಬಳಸುತ್ತಾರೆ. ಈ ಬಾವಿಯ ಅಂತರ್ಜಲವು ಇನ್ನೂ ಇರುವುದಕ್ಕೆ ಈ ದೇವಾಲಯದ ಮುಂದಿರುವ ಕೆರೆಯೇ ಆಗಿದೆ ಎನ್ನಬಹುದು. ಈ ಕೆರೆಯು ಪೂರ್ವ–ಪಶ್ಚಿಮಕ್ಕೆವಾಗಿ ೮೦ ಮೀ. ಅಗಲ ದಕ್ಷಿಣೋತ್ತರವಾಗಿ ಸುಮಾರು ೨೫೦ ಮೀ. ಉದ್ದವಿದೆ ಎಂದು ಅಂದಾಜಿಸಲಾಗಿದೆ. ಅಗಲಕ್ಕೆ ಕಡಿಮೆಯಿದ್ದು ಉದ್ದಕ್ಕೆ ಹೆಚ್ಚಿದೆ. ಕೆರೆಯ ದಂಡೆಯ ಮೇಲೆ ದೇವಾಲಯವನ್ನು ಕಟ್ಟಿಸಿದ್ದನ್ನು ನೋಡಿದಾಗ ನಮಗೆ ತಿಳಿಯುವ ಅಂಶವೆಂದರೆ, ಕೆರೆಗಳ ಬಗ್ಗೆ ಜನರಲ್ಲಿ ಇರುವ ಧಾರ್ಮಿಕ ನಂಬಿಕೆಯನ್ನು ವ್ಯಕ್ತಪಡಿಸುತ್ತದೆ. ಈ ಕೆರೆಯು ನಗರದ ಇಳಿಜಾರು ಭಾಗದಲ್ಲಿರುವುದರಿಂದ ಮಳೆಗಾಲದಲ್ಲಿ ನಗರದ ನೀರೆಲ್ಲವೂ ಬಂದು ಸಂಗ್ರಹಗೊಳ್ಳುತ್ತಿದ್ದರಿಂದ ಈ ಕೆರೆಗೆ ಸದಾ ನೀರು ಇರುತ್ತಿದ್ದು ಜನರಿಗೆ ಉಪಯೋಗವಾಗಿದೆ.

ಈ ಕೆರೆಗೆ ಜಲ ಸಂಗ್ರಹ ಯಾವ ಯಾವ ಮೂಲಗಳಿಂದ ದೊರೆಯುತ್ತಿತ್ತು ಎಂಬುದನ್ನು ತಿಳಿಂಯುವದು ಅವಶ್ಯವಾಗಿದೆ. ಈ ಕೆರೆಂಯು ಮೇಲ್ಭಾಗದಲ್ಲಿ ದಕ್ಷಿಣ ದಿಕ್ಕಿಗೆ ಇರುವ ಕೆಟ್ಟಿಕೆರೆಯಿಂದ ಹೆಚ್ಚಾದ ಭಾಗಶ: ನೀರೆಲ್ಲವೂ ಈ ಕೆರೆಗೆ ಬಂದು ಸೇರುತ್ತಿತ್ತು. ಕೆರೆ ಇಳಿಜಾರಿನ ಭಾಗದಲ್ಲಿದ್ದು ಮಳೆಗಾಲದಲ್ಲಿನ ನಗರದ ನೀರೆಲ್ಲವೂ ಈ ಕೆರೆಗೆ ಬಂದು ಸಂಗ್ರಹವಾಗುತ್ತಿತ್ತು. ಅಲ್ಲದೇ ಮಹಾಲಿಂಗೇಶ್ವರ ಕೊಳ್ಳದಿಂದಲೂ ನೀರು ಹರಿದು ಬಂದು ಈ ಕೆರೆಗೆ ಸಂಗ್ರಹವಾಗುತ್ತಿತ್ತು. ಈ ಎಲ್ಲ ಮೂಲಗಳಿಂದಲೂ ಕೆರೆಗೆ ನೀರು ಹರಿದು ಬರುತ್ತಿದ್ದರಿಂದ ಕೆರೆಂಯು ಸದಾ ತುಂಬಿ ತುಳುಕುತ್ತಿತ್ತು. ಇದರಿಂದ ಕೆರೆಯು ಇಂದಿಗೂ ಬತ್ತದೇ ನಗರದ ಜನರಿಗೆ ಹಾಗೂ ಜಾನುವಾರುಗಳಿಗೆ ಅನುಕೂಲವಾಗಿದೆ. ಇಲ್ಲಿ ಜಾನುವಾರು ಮಾರುಕಟ್ಟೆಯಿದ್ದು ಇಲ್ಲಿನ ಮಾರುಕಟ್ಟೆಂಯಲ್ಲಿನ ಜಾನುವಾರುಗಳಿಗೆ ಈ ಕೆರೆಯಿಂದ ನೀರನ್ನು ಪೂರೈಸಲಾಗುತ್ತಿತ್ತು. ಈ ಕೆರೆಂಯು ಸಂಸ್ಥಾನಿಕರ ಕಾಲದಲ್ಲಷ್ಟೇ ಉಪಂಯೋಗವಾಗದೇ, ಇಂದಿನ ಜನರಿಗೂ ಉಪಂಯೋಗವಾಗಿದೆ. ಹಾಗೂ ಹಲವರಿಗೆ ಉದ್ಯೋಗವನ್ನು ನೀಡಿದೆ ಎಂದರೆ ತಪ್ಪಾಗಲಾರದು.

ಇದನ್ನು ಕುಂಬಾರ ಕೆರೆಯೆಂದು ಕರೆಯಲು ಒಂದು ವಿಶೇಷತೆ ಇದೆ. ಈ ಕೆರೆಯ ಮೇಲ್ಭಾಗದಲ್ಲಿ ಹೆಚ್ಚಾಗಿ ಕುಂಬಾರ ಜನಾಂಗದವರು ಕಂಡು ಬರುತ್ತಾರೆ. ಇವರಿಗೆ ಈ ಕೆರೆಯು ತುಂಬಾ ಉಪಯೋಗವಾಗಿದೆ. ಕುಂಬಾರ ಜನಾಂಗದವರು ಈ ಕೆರೆಯ ದಂಡೆಯ ಮೇಲೆ ತಮ್ಮ ಆವಿಗೆಗಳನ್ನು ನಿರ್ಮಿಸಿ ಮಡಿಕೆ-ಕುಡಿಕೆಗಳನ್ನು ತಯಾರಿಸುತ್ತಿದ್ದರು. ಇದನ್ನು ಗಮನಿಸಿದಾಗ ನಮಗೆ ತಿಳಿಯುವ ಅಂಶವೇಂದರೆ, ಕುಂಬಾರರು ತಮ್ಮ ವೃತ್ತಿಯನ್ನು ಕೈಗೊಳ್ಳಬೇಕಾದರೆ ಎಲ್ಲಾ ಸೌಕರ್ಯಗಳನ್ನು ಈ ಕೆರೆ ಒದಗಿಸುತ್ತಿದ್ದು ಇದು ಕುಂಬಾರರಿಗೆ ಹೆಚ್ಚು ಉಪಯುಕ್ತವಾಗಿದ್ದರಿಂದ ಇದನ್ನು ಕುಂಬಾರ ಕೆರೆ ಎಂದು ಕರೆಯಲಾಗುತ್ತಿದೆ. ಇತ್ತೀಚಿನ ದಿನಗಳಲ್ಲಿ ಕುಂಬಾರರು ನಿರ್ಮಿಸಿದ ಮಣ್ಣಿನ ಪಾತ್ರೆಗಳ ಬಳಕೆ ಕಡಿಮೆಯಾಗುತ್ತಿರುವುದರಿಂದ ಇತ್ತೀಚಿನ ದಿನಗಳಲ್ಲಿ ಈ ಕೆರೆಯ ಮೇಲಿನ ಆವಿಗೆಗಳು ಕಣ್ಮರೆಯಾಗುತ್ತಿವೆ. ಈ ಕೆರೆಯ ಮೇಲೆ ಕುಂಬಾರರಷ್ಟೇ ತಮ್ಮ ವೃತ್ತಿಯನ್ನು ಕೈಗೊಳ್ಳದೇ, ಇಟ್ಟಿಗೆಯನ್ನು ತಯಾರಿಸುವವರನ್ನು ಕಾಣಬಹುದಾಗಿದೆ. ಇಟ್ಟಿಗೆಯನ್ನು ನಿರ್ಮಿಸಲು ಬೇಕಾದ ಎಲ್ಲ ಮೂಲ ಸೌಲಭ್ಯಗಳು ಇಲ್ಲ ದೊರೆಯುತ್ತಿದ್ದರಿಂದ ಇಟ್ಟಿಗೆಯನ್ನು ತಯಾರಿಸುವ ಇಟ್ಟಿಗೆ ಭಟ್ಟಿಯನ್ನು ಕಾಣಬಹುದು.

ಇತ್ತೀಚಿಗೆ ಈ ಕೆರೆಯಲ್ಲಿ ಹೂಳೆತ್ತುವ ಕಾರ್ಯವನ್ನು ಹಮ್ಮಿಕೊಂಡಿದ್ದರಿಂದ ಈ ಕೆರೆಯ ಆಳ-ಅಗಲವನ್ನು ಇನ್ನಷ್ಟು ವಿಸ್ತರಿಸಲಾಗಿದೆ. ಈ ಕೆರೆಯಲ್ಲಿ ಮರಳು ತುಂಬುವುದನ್ನು ನೋಡುತ್ತೇವೆ. ಆರ್ಥಿಕವಾಗಿ ನರಳುತ್ತಿರುವ ಕುಟುಂಬಗಳು ತಮ್ಮ ಆರ್ಥಿಕ ವ್ಯವಸ್ಥೆಯನ್ನು ಉತ್ತಮ ಪಡಿಸಿಕೊಳ್ಳಲು ಈ ಕೆರೆಯಲ್ಲಿ ಮರಳು ತುಂಬುವ ಕೆಲಸಕ್ಕಾಗಿ ಈ ಕೆರೆಯಮೊರೆ ಹೋಗಿದ್ದಾರೆ. ಇಲ್ಲಿ ಮರಳನ್ನು ತುಂಬುವುದಕ್ಕಾಗಿ ಪುರಸಭೆಯು ವಿಧಿಸಿದಷ್ಟು ಕರವನ್ನು ತುಂಬಿ ಕೆರೆಯಲ್ಲಿಯ ಮರಳನ್ನು ತುಂಬಿಕೊಂಡು ಹೆಚ್ಚಿನ ಹಣಕ್ಕೆ ಮಾರಾಟಮಾಡಿ ಲಾಭವನ್ನು ಪಡೆದುಕೊಳ್ಳುತ್ತಾರೆ. ಇದರಿಂದ ಅದೆಷ್ಟೋ ಜನರಿಗೆ ಉದ್ಯೋಗ ದೊರಕಿಸಿಕೊಟ್ಟಂತಾಗಿದೆ. ಕುಂಬಾರರಿಗೆ, ಇಟ್ಟಿಗೆ ಮಾಡುವವರಿಗೆ, ಮರಳು ತುಂಬುವವರಿಗೆ, ಜಾನುವಾರುಗಳಿಗೆ ಪ್ರಯೋಜನವಾಗುತ್ತಿದೆ. ಈ ಕೆರೆಯು ಮೀನುಗಾರರಿಗೂ ಸಹ ಜೀವನವನ್ನು ರೂಪಿಸಿಕೊಟ್ಟಿವೆ. ಅನೇಕ ಮೀನುಗಾರರು ಇಲ್ಲಿ ಮೀನುಗಳನ್ನು ಹಿಡಿದು ತಮ್ಮ ಜೀವನವನ್ನು ಸಾಗಿಸುತ್ತಿದ್ದಾರೆ. ಆದರೆ ಮೀನುಗಾರರು ಅಧಿಕವಾಗಿ ಕಂಡು ಬರದೇ ಕಡಿಮೆ ಪ್ರಮಾಣದಲ್ಲಿ ಕಂಡು ಬರುತ್ತಾರೆ.

ಕೆರೆ ನಿರ್ಮಾಣದ ಪ್ರಾರಂಭದಲ್ಲಿ ಇದರ ಹರವು ವಿಶಾಲವಾಗಿದ್ದು, ಇಂದು ಇದರ ಹರಿವಿನ ವ್ಯಾಪ್ತಿ ಸೀಮಿತವಾಗಿದೆ. ಪ್ರೊ. ಎಸ್. ಬಿ. ಮಟೋಳಿಯವರು ರಚಿಸಿದ 'ಜಮಖಂಡಿಯ ಇತಿಹಾಸ ದರ್ಪಣ' ಎಂಬ ಕೃತಿಯಲ್ಲಿ ಈ ಕೆರೆಯ ಮೆರೆಯ ಕುರಿತು ತಿಳಿಸಿದ್ದಾರೆ. ಪೂರ್ವಕ್ಕೆ ಸದಾನಂದ ದೇವಸ್ಥಾನದ ಮೇಲ್ಭಾಗದವರೆಗೂ ಮತ್ತು ದಕ್ಷಿಣಕ್ಕೆ ನಂದಿಕೇಶ್ವರ ದೇವಾಲಯದ ಸಮುಚ್ಚಯದಲ್ಲಿ ದೊಡ್ಡ ಪ್ರಮಾಣದ ಮಣ್ಣಿನ ಒಡ್ಡನ್ನು ಹಾಕಿ ಈ ಕೆರೆಯನ್ನು ನಿರ್ಮಿಸಲಾಗಿದೆ ಎಂದಿದ್ದಾರೆ. ಈ ವಾಕ್ಯದಿಂದ ನಾವು ತಿಳಿಯಬೇಕಾದ ಒಂದು ಮುಖ್ಯ ಸಂಗತಿಯೆಂದರೆ ಈ ನಗರದ ಜನಸಂಖ್ಯೆ ಹೆಚ್ಚಾಗಿ ನಗರ

ಬೆಳೆಯುವುದಕ್ಕಿಂತ ಪೂರ್ವದಲ್ಲಿ, ಈ ಕೆರೆಯು ಸದ್ಯಕ್ಕೆ ಕುಂಚನೂರ ರಸ್ತೆಯಲ್ಲಿರುವ ಸದಾನಂದ ದೇವಾಲಯದವರೆಗೂ ಈ ಕೆರೆಯು ಇತ್ತೆಂದು ತಿಳಿದು ಬರುತ್ತದೆ. ಆದರೆ ಪ್ರದೇಶದ ಒತ್ತುವರಿಯಿಂದಾಗಿ ಇಂದು ಕೆರೆಯು ಹರವು ಕಡಿಮೆಯಾಗಿದೆ. ಅಲ್ಲದೆ ರಸ್ತೆ ನಿರ್ಮಿಸಿದ್ದರಿಂದಲೂ ಕಡಿಮೆಯಾಗಿದೆ. ಕೆರೆಯ ಪೂರ್ವ ಭಾಗದಲ್ಲಿ ಮನೆಗಳು ನಿರ್ಮಿತಗೊಂಡಿದೆ. ಕೆರೆಯ ಒತ್ತುವರಿಗೊಳಪಟ್ಟಿದೆ ಎಂದು ತಿಳಿದು ಬರುತ್ತದೆ. ಒಂದು ವೇಳೆ ಕೆರೆಯಲ್ಲಿ ನೀರು ಹೆಚ್ಚಾದರೆ ದಡದಲ್ಲಿರುವ ಈ ಮನೆಗಳಿಗೆ ನೀರು ನುಗ್ಗಿ ಮುಳಾಗುವ ಸಂಭವ ಜಾಸ್ತಿ ಇದೆ.

ನಂದಿಕೇಶ್ವರ ದೇವಾಲಯದವರೆಗೆ ಹಬ್ಬಿರುವ ಈ ಕೆರೆಯನ್ನು ಇಂದು ಮಧ್ಯದಲ್ಲಿ ರಸ್ತೆ ನಿರ್ಮಿಸಿ ಇಬ್ಭಾಗವನ್ನಾಗಿ ಮಾಡಲಾಗಿದೆ. ಇದರಿಂದ ದೇವಾಲಯದ ಮುಂದಿನ ಸುಮಾರ ೧೩೦ ಮೀ. ರಷ್ಟು ಭಾಗವು ಇಂದು ನೀರಿಲ್ಲದೆ ಬತ್ತಿ ಹೋಗಿವೆ. ಈ ಕೆರೆಯ ಜಾಗದಲ್ಲಿ ಜನರು ನಗರದ ಎಲ್ಲಾ ಕಸ-ಕೊಳೆಯನ್ನು ತಂದು ಸುರಿಯುತ್ತಿದ್ದಾರೆ. ಅಲ್ಲದೇ ನಂದಿಕೇಶ್ವರ ದೇವಾಲಯ ಮಗ್ಗಲಿನ ಕೆರೆಯ ಭಾಗವನ್ನು ದೇವಾಲಯದ ಅರ್ಚಕರು ಈ ಸ್ಥಳವು ದೇವಾಲಯಕ್ಕೆ ಸಂಬಂಧಿಸಿದ್ದು ಎಂದು ದೇವಾಲಯದ ಅಧೀನಕ್ಕೆ ಒಳಪಡಿಸಿಕೊಂಡು ಪ್ರದೇಶವೆಲ್ಲವನ್ನು ಕಲ್ಲಿನ ಗೋಡೆಯನ್ನು ನಿರ್ಮಿಸಿ ಅದೀನಕ್ಕೆ ಒಳಪಡಿಸಿಕೊಂಡಿದ್ದನ್ನು ನಾವು ಇಂದು ಕಾಣಬಹುದು. ವಿಶಾಲವಾದ ಕೆರೆಯನ್ನು ಇಬ್ಭಾಗ ಮಾಡಿ ಅದರ ವ್ಯಾಪ್ತಿಯನ್ನು ಕಡಿಮೆಗೊಳಿಸಿದ್ದ ಭಾಗದಲ್ಲಿನ ನೀರು ಸಂಗ್ರಹ ಕಡಿಮೆಯಾಗುವುದನ್ನು ಕಾಣುತ್ತೇವೆ. ಆದರೆ ಒಮ್ಮೆಯೂ ಬತ್ತಿದ್ದನ್ನು ಇದುವರೆಗೂ ನೋಡಿಲ್ಲ. ನಗರದ ಹೊರ ಭಾಗದಲ್ಲಿದ್ದ ಕೆರೆಯು ಸುತ್ತಲೂ ವ್ಯವಸಾಯಯ ಭೂಮಿಯನ್ನು ಹೊಂದಿದ್ದು, ನಗರದ ಬೆಳವಣಿಗೆಯಿಂದ ಇಂದು ಕೃಷಿ ಭೂಮಿಯು ಮನೆಗಳು ನಿರ್ಮಾಣಗೊಂಡಿವೆ ಎಂದು ಹೇಳಬಹುದು.

ಕೆರೆಯು ನಿರ್ಮಾಣದ ಹಾಗೂ ಅದರಿಂದ ನಗರದ ಜನರಿಗೆ ಆಗುತ್ತಿರುವ ಪ್ರಯೋಜನವನ್ನು ತಿಳಿದುಕೊಂಡಿದ್ದೇವೆ. ನೀರು ಒಂದು ಸಂಪನ್ಮೂಲವಾಗಿದ್ದು ಅದನ್ನು ರಕ್ಷಿಸುವ ಜವಾಬ್ದಾರಿಯು ಪ್ರತಿಯೊಬ್ಬ ಮಾನವನ ಆದ್ಯ ಕರ್ತವ್ಯವಾಗಿದೆ. ಆದರೆ ನಗರೀಕರಣ, ಕೈಗಾರೀಕರಣಗಳಿಂದಾಗಿ ಇಂದು ಕೆರೆಗಳು ಕಣ್ಮರೆಯಾಗುತ್ತಲಿದೆ ಎಂದು ಹೇಳಬಹುದು. ಮುಂದಿನ ಪೀಳಿಗೆಗೆ ಈ ಕೆರೆಗಳೆಂದರೆ ಹೇಗಿರುತ್ತವೆ ಎಂಬುದನ್ನು ಹೇಳುವುದೇ ಸಾಧ್ಯವಾಗಲಾರದು. ಅವರಿಗೆ ಕೇವಲ ಚಿತ್ರದಲ್ಲಿಂಯೇ ತೋರಿಸುವ ಪರಿಸ್ಥಿತಿ ಬಂದೊದಗುತ್ತದೆ. ಕೆರೆಗಳ ಕಲ್ಪನೆಂಯೇ ಮುಂದಿನ ಪೀಳಿಗೆಗೆ ಇಲ್ಲವಾಗುತ್ತದೆ. ಈ ಕೆರೆಯಲ್ಲಿ ಹಲವು ಜಲಚರ ಪ್ರಾಣಿಗಳು ಕಂಡು ಬರುತ್ತವೆ. ಈ ಕೆರೆಯಲ್ಲಿ ಮೊಸಳೆಯು ಸಹ ಕಂಡು ಬರುತ್ತದೆ. ಈ ಎಲ್ಲ ಜಲಚರಗಳಿಗೂ ಜೀವಿಸಲು ಅವಕಾಶವನ್ನು ಈ ಕೆರೆ ನೀಡಿದೆ.

ಕುಂಬಾರ ಕೆರೆಯನ್ನು ಇಂದು ನೋಡುತ್ತಿದ್ದಿವೆ. ಆದರೆ ಮುಂದೊಂದು ದಿನ ಇಲ್ಲಿ ಕೆರೆ ಇತ್ತೆಂಬುದನ್ನು ಮರೆತು ಹೋಗುವ ಸ್ಥಿತಿ ಬಂದೊದಗುತ್ತದೆ. ಇಲ್ಲಿ ಬಸ್ ತಂಗುದಾಣವನ್ನು ನಿರ್ಮಿಸಬೇಕೆಂಬುದು ಜಮಖಂಡಿ ನಗರದ ಜನರ ಆಶಯವಾಗಿದೆ. ಭರದಿಂದ ಬೆಳೆಯುತ್ತಿರುವ ಜನಸಂಖ್ಯೆಯಿಂದಾಗಿ ನಗರವೂ ಕೂಡಾ ಭರದಿಂದ ಬೆಳೆಯುತ್ತಲಿದೆ. ಜಮಖಂಡಿಯಲ್ಲಿ ಈ ಸದ್ಯದಲ್ಲಿರುವ ಬಸ್ ನಿಲ್ದಾಣವು ಊರಿನ ಮಧ್ಯೆಯಾಗಿದ್ದು, ಅತಿ ಚಿಕ್ಕದಾಗಿದ್ದು ಬಸ್ ತಂಗಲು ಅಸ್ತವ್ಯಸ್ತವಾಗುತ್ತಿದೆ ಎಂಬ ಕಾರಣದಿಂದಾಗಿ ಕುಂಬಾರ ಕೆರೆಯನ್ನು ನೆಲಸಮ ಮಾಡಿ ವಿಶಾಲವಾದ ಬಸ್ ನಿಲ್ದಾಣವನ್ನು ಮಾಡಬೇಕಾದ ಆಲೋಚನೆಯು ಸ್ಥಳೀಯರಲ್ಲಿ ಒಡಮೂಡಿದೆ. ಆದರೆ ಅದಕ್ಕೆ ದೊರಕಬೇಕಾದ ಮನ್ನಣೆ ದೊರೆಯಲಾರದ ಹಾಗೂ ರಾಜಕೀಯ ಇಚ್ಚಾಶಕ್ತಿಯ ಕೊರತೆ ಹಾಗೂ ಅಧಿಕಾರಿಗಳ ಕೊರತೆಯ ಕಾರಣದಿಂದಾಗಿ ಈ ಕಾರ್ಯಯೋಜನೆ ಇನ್ನೂ ಪ್ರಾರಂಭವಾಗಿಲ್ಲ. ಆದರೆ ಒಂದಲ್ಲ ಒಂದು ಮುಂದೊಂದು ದಿನ ಈ ಕುಂಬಾರ ಕೆರೆಯು ಜಮಖಂಡಿಯ ಬಸ್ ನಿಲ್ದಾಣವಾಗಿ ಬದಲಾಗುತ್ತದೆ ಎಂಬುದರಲ್ಲಿ ಸಂದೇಹವೇ ಇಲ್ಲ. ಆದರೆ ಈ ನಿರ್ಮಾಣದ ಕಾರ್ಯವು ಸ್ಥಗಿತಗೊಂಡಿರಲು ಕಾರಣವೇನು ಎಂಬುದನ್ನು ತಿಳಿದುಕೊಳ್ಳುವುದು ಅವಶ್ಯಕವಾಗಿದೆ. ಕೆಲವು ನಗರದ ಸ್ಥಳೀಯ ಪ್ರಮುಖ ವ್ಯಕ್ತಿಗಳ ಹೇಳಿಕೆಯ ಪ್ರಕಾರ ಕೆಲವು ನಗರದ ರಾಜಕೀಯ ವ್ಯಕ್ತಿಗಳ ಘರ್ಷಣೆಯಿಂದಾಗಿ ಸರ್ಕಾರಕ್ಕೆ ಸಲ್ಲಬೇಕಾದ ಮನವಿ ಸಲ್ಲಿಸಿರದೇ ಇರುವುದರಿಂದ ಈ ಕಾರ್ಯ ಕಾರ್ಯಾಚರಣೆಗೆ ಬರದೇ ತಟಸ್ಥವಾಗಿದೆ ಎಂದು ಹೇಳುವರು.

೩) ಲಕ್ಕಣ ಕೆರೆ :

ಜಮಖಂಡಿ ನಗರದ ಪೂರ್ವಕ್ಕೆ ಕುಂಬಾರ ಕೆರೆ, ಪಶ್ಚಿಮಕ್ಕೆ ಆನೆ ಕೆರೆ, ದಕ್ಷಿಣಕ್ಕೆ ಕಟ್ಟಿಕೆರೆ ಕಂಡು ಬಂದರೆ, ನಗರದ ಮಧ್ಯದಲ್ಲಿ ಈ ಲಕ್ಕಣ ಕೆರೆ ಕಂಡು ಬರುತ್ತದೆ. ಇದು ನಗರದ ಪಶ್ಚಿಮ ಭಾಗಕ್ಕೆ ಇರುವ ಉನ್ನತ ಬೃಹತ್ ಗುಡ್ಡದ ಬದಿಗೆ ಈ ಕೆರೆಯನ್ನು ನಿರ್ಮಿಸಲಾಗಿದೆ. ಈ ಕೆರೆಯು ವೃತ್ತಾಕಾರವಾಗಿದ್ದು, ಕೆರೆಯ ಪಶ್ಚಿಮ ಭಾಗಕ್ಕೆ ಸ್ವಾಭಾವಿಕ ಬೃಹತ್ ಕಲ್ಲಿನ ಗುಡ್ಡವಿದ್ದು, ಕೆರೆಗೆ ಕಟ್ಟೆಯನ್ನು ನಿರ್ಮಿಸಿದಂತಾಗಿದೆ. ಉಳಿದ ಮೂರು ದಿಕ್ಕುಗಳಾದ ಉತ್ತರ, ದಕ್ಷಿಣ ಮತ್ತು ಪೂರ್ವ ಭಾಗದಲ್ಲಿ ಸುಬದ್ಧವಾಗಿ ಕಲ್ಲಿನ ಗೋಡೆಯನ್ನು ಕಟ್ಟಲಾಗಿದೆ. ಈ ಕೆರೆಯು ಸುಮಾರು ೧೦ ರಿಂದ ೧೪ ಎಕರೆಗಳಷ್ಟು ಪ್ರದೇಶದಲ್ಲಿ ವ್ಯಾಪಿಸಿಕೊಂಡಿದೆ ಎನ್ನಬಹುದು. ಈ ಕೆರೆಯ ಪೂರ್ವಭಾಗಕ್ಕೆ ಕಲ್ಲಿನ ಪಾವಟಿಗೆಗಳನ್ನು ಜನರಿಗೆ ಈ ಕೆರೆಯಲ್ಲಿ ಪ್ರವೇಶಿಸಲು ಅನುಕೂಲವಾಗುಮತೆ ನಿರ್ಮಿಸಿದೆ. ಈ ಕೆರೆಯನ್ನು ಲಕ್ಷಣಯುಕ್ತವಾಗಿ ಮೂರು ದಿಕ್ಕಿಗೂ ಕಲ್ಲನ್ನು ಜೋಡಿಸಿ ಲಕ್ಷಣವಾಗಿ ನಿರ್ಮಿಸಿದ್ದರಿಂದ ಇದನ್ನು ಲಕ್ಕಣ ಕೆರೆ ಎಂದು ಕರೆಯಲಾಗುತ್ತಿದೆ. ಲಕ್ಷಣವಾದ ಕೆರೆಯಾದ್ದರಿಂದ ಲಕ್ಕಣ ಎಂದು ಕರೆಯುತ್ತಿದ್ದು ಜನರ ಬಾಯಿಯಲ್ಲಿ ಲಕ್ಕಣ ಕೆರೆ ಎಂದಾಗಿದೆ. ಅಷ್ಟೇ ಅಲ್ಲದೇ, ವೀರ ಸಿಂಧೂರ ಲಕ್ಷ್ಮಣನು ನಗರಕ್ಕೆ ಭೇಟಿ ನೀಡಿದ್ದು, ಇದರಲ್ಲಿ ಸ್ನಾನಮಾಡಿದ್ದರಿಂದ ಅದನ್ನು ನೋಡಿದ ಜನರು ಇದಕ್ಕೆ ಲಕ್ಷ್ಮಣ ಕೆರೆ ಎಂದು ಕರೆಯುತ್ತಿದ್ದು ಅದು ನಂತರದಲ್ಲಿ ಲಕ್ಕಣ ಕೆರೆ ಎಂದಾಯಿತು ಎಂದು ಸಂಸ್ಥಾನಿಕರ ಕಾಲಾವಧಿಯಲ್ಲಿನ ಜನರು ಹೇಳುವರು. ಕೆರೆಯು ಕಲ್ಲಿನ ಗೋಡೆಯಿಂದ ಸುತ್ತುವರಿದಿದ್ದು ಕೆರೆಯ ದಕ್ಷಿಣ ಭಾಗದಲ್ಲಿ ಹಾಗೂ

ಉತ್ತರ ಭಾಗದಲ್ಲಿ ಕೆರೆಯಲ್ಲಿ ಇಳಿಯಲು ಸಹಾಯಕವಾಗಿ ಒಬ್ಬ ವ್ಯಕ್ತಿಯು ಹಾಯಲು ಜಾಗಬಿಟ್ಟಿದ್ದು ಅಲ್ಲಿ ಇಳಿಯಲು ಕಲ್ಲಿನ ಪಾಟಗೆಗಳು ಇವೆ. ಆದರೆ ಇಂದು ಅವುಗಳನ್ನು ಮುಚ್ಚಲಾಗಿದೆ.

ಜಮಖಂಡಿಯ ಈ ಕೆರೆಯನ್ನು ಅಂದಿನ ಸಂಸ್ಥಾನಿಕರಾದ ರಾಮಚಂದ್ರರಾವ್ ಅಪ್ಪಾಸಾಹೇಬರು ಕ್ರಿ.ಶ. ೧೮೭೪ ರಲ್ಲಿ ೧ ಲಕ್ಷ ರೂ. ವೆಚ್ಚ ಮಾಡಿ ನಿರ್ಮಿಸಿದರು. ಇದನ್ನು ನಿರ್ಮಿಸುವ ಉದ್ದೇಶವೆಂದರೆ, – ನಗರದ ಪ್ರಜೆಗಳ ಒಳತಿಗಾಗಿ ನಿರ್ಮಿಸಿದ್ದರು. ೧೮೭೪ ರ ಅವಧಿಯಲ್ಲಿ ಸತತವಾಗಿ ವರ್ಷದಲ್ಲಿ ೫–೬ ತಿಂಗಳವರೆಗೆ ಮಳೆ ಬೀಳುತ್ತಿದ್ದರಿಂದ ಕೆರೆಯ ಪಶ್ಚಿಮ ಭಾಗದ ಗುಡ್ಡದಿಂದ ಸತತವಾಗಿ ರಭಸದಿಂದ ಹರಿದು ಬರುತ್ತಿದ್ದ ನೀರನ್ನು ಈ ಕೆರೆಯಲ್ಲಿ ಸಂಗ್ರಹಿಸಲಾಗುತ್ತಿತ್ತು. ಅಲ್ಲದೆ ಕೆರೆಯ ಪಶ್ಚಿಮ ಗುಡ್ಡದ ಮೇಲ್ಭಾಗದಲ್ಲಿ ಮೇಲಗಿರಿ ನಿಂಗಪ್ಪನ ಗುಡ್ಡವಿದೆ. ಆ ಗುಡ್ಡದ ಮೇಲಿನಿಂದ ಹಾಗೂ ಪಕ್ಕದಲ್ಲಿರುವ ವಾರಿಸಿದ್ಧಪ್ಪನ ಗುಡ್ಡದ ಝರಿಯಿಂದಲೂ ಮಳೆಯ ನೀರು ಹರಿದು ಬಂದು ಈ ಕೆರೆಗೆ ಸೇರುವಂತೆ ವ್ಯವಸ್ಥೆ ಮಾಡಲಾಗಿತ್ತು. ಹೀಗೆ ಸಂಗ್ರಹಗೊಂಡ ನೀರಿನಿಂದ ಕೆರೆಯು ಸದಾ ತುಂಬಿರುತ್ತದೆ. ಈ ಹಿಂದೆ ಸತತವಾಗಿ ಬೀಳುತ್ತಿದ್ದ ಮಳೆಯಿಂದಾಗಿ ಊರಲ್ಲಿ ಪ್ರವಾಹ ಉಂಟಾಗಿ ನಗರದ ಜನರಿಗೆ ತೊಂದರೆಯನ್ನು ಉಂಟುಮಾಡುತ್ತಿತ್ತು. ಪ್ರವಾಹದ ಈ ತೊಂದರೆಯನ್ನು ತಡೆಗಟ್ಟಲು ತಡೆಗೋಡೆಯಂತೆ ಈ ಲಕ್ಷಣ ಕೆರೆಯನ್ನು ಸಂಸ್ಥಾನಿಕರು ನಿರ್ಮಿಸಿದರು. ಇಂದು ಈ ಕೆರೆಯ ಸುತ್ತಲಿನ ಭಾಗದಲ್ಲೆಲ್ಲಾ ಮನೆಗಳು ನಿರ್ಮಾಣಗೊಂಡಿದೆ. ನಗರದ ಮಧ್ಯೆ ಸುಂದರವಾದ, ಲಕ್ಷಣವಾದ ಕೆರೆಯಾಗಿ ಕಂಗೊಳಿಸುತ್ತದೆ. ಅಲ್ಲದೆ ನಗರದ ಸೌಂದರ್ಯವನ್ನು ಕೂಡಾ ಹೆಚ್ಚಿಸಿದೆ. ಕೆರೆಯ ಉತ್ತರ ಭಾಗದಲ್ಲಿನ ಪ್ರದೇಶವು ಆಯಕಟ್ಟು ಪ್ರದೇಶವಾಗಿದ್ದು, ಇಲ್ಲಿ ಹೆಚ್ಚಾದ ನೀರು ಹರಿದು ಹೋಗಿ ಅಥವಾ ಇಲ್ಲಿಂದಲೇ ನೀರನ್ನು ಉಪಯೋಗಿಸಿಕೊಂಡು ವ್ಯವಸಾಯಕ್ಕೆ ಈ ಭೂಮಿಯನ್ನು ಬಳಸಿಕೊಳ್ಳುತ್ತಿದ್ದರೆನ್ನಬಹುದು. ನಂತರ ಕ್ರಿ.ಶ. ೧೯೪೪ ರಲ್ಲಿ ರಾಮಚಂದ್ರರಾವ್ ಅಪ್ಪಾಸಾಹೇಬರು ಈ ಜಾಗದಲ್ಲಿ ತಮ್ಮ ಮುತ್ತಜ್ಜರಾದ ಪರಶುರಾಮ ಭಾವು ಅವರ ಹೆಸರಿನಿಂದ ೧,೨೦,೦೦೦ ರೂ. ವೆಚ್ಚಮಾಡಿ ಹೈಸ್ಕೂಲನ್ನು ನಿರ್ಮಿಸಿದ್ದಾರೆ. ಅದೇ ಇಂದಿನ ಪಿ.ಬಿ. ಹೈಸ್ಕೂಲ್ ಈ ಕಟ್ಟಡದ ನಿರ್ಮಾಣದಿಂದ ವ್ಯವಸಾಯ ಭೂಮಿ ಇಲ್ಲದಂತಾಗಿದೆ. ನಂತರ ಕ್ರಮೇಣ ಮಳೆಯ ಪ್ರಮಾಣವು ಕಡಿಮೆಯಾಗತೊಡಗಿದ್ದು ಕೆರೆಯಲ್ಲಿಯೂ ನೀರಿನ ಪ್ರಮಾಣ ಇಳಿಮುಖವಾಗುತ್ತಿರುವದರಿಂದ ಸದ್ಯದಲ್ಲಿ ಈ ಕೊಳವೆಗಳ ಮೂಲಕ ನೀರು ಹೊರ ಹೋಗುವುದು ಕಡಿಮೆ ಎನ್ನಬಹುದು. ಕೆರೆಯಲ್ಲಿ ಹೆಚ್ಚಾದ ನೀರು ಹರಿದು ಹೋಗಲೆಂದು ಕೋಡಿಯ ರೂಪದಲ್ಲಿ ಕೆರೆಯ ಉತ್ತರಭಾಗದಲ್ಲಿ ಕೊಳವೆಗಳನ್ನು ಅಳವಡಿಸಿಲಾಗಿದ್ದು, ಇದರ ಮೂಲಕ ಹೆಚ್ಚಾದ ನೀರು ಕೆಳಗಿನ ಪ್ರದೇಶಕ್ಕೆ ಹರಿದು ಬರುತ್ತದೆ.

ನಗರದ ಜನರ ಉಪಯೋಗಕ್ಕಾಗಿಯೇ ನಿರ್ಮಿಸಲಾದ ಈ ಕೆರೆಯು ಅಂದಿನ ಮತ್ತು ಇಂದಿನ ಜನರೆಲ್ಲರಿಗೂ ಉಪಯೋಗವಾಗಿದೆ. ಅಂದಿನ ಸಂಸ್ಥಾನದಲ್ಲಿದ್ದ ಜನಸಂಖ್ಯೆ ಕಡಿಮೆಯಿದ್ದು, ಈ ಕೆರೆಯ ನೀರನ್ನು ಕುಡಿಯಲು ಉಪಯೋಗಿಸುತ್ತಿದ್ದರು. ಅಲ್ಲದೇ ದಿನ ನಿತ್ಯದ ಕಾರ್ಯಗಳಿಗೆ, ಅಂದಿನ ಜಾನುವಾರುಗಳಿಗೆ ಹಾಗೂ ನಗರದ ಎಲ್ಲಾ ಕಾರ್ಯಗಳಿಗೂ ಈ ಕೆರೆಯ ನೀರನ್ನು ಉಪಯೋಗಿಸಲಾಗುತ್ತಿತ್ತು. ಆದರೆ ಇತ್ತೀಚಿನ ದಿನಗಳಲ್ಲಿ ನಗರದ ಜನಸಂಖ್ಯೆ ಹೆಚ್ಚಾಗಿದ್ದು, ಕೆರೆಯ ನೀರನ್ನು ಬಟ್ಟೆ ತೊಳೆಯಲು ಉಪಯೋಗಿಸುತ್ತಿದ್ದರಿಂದ ಈ ಕೆರೆಯ ನೀರು ಇಂದು ಕುಡಿಯಲು ಯೋಗ್ಯವಾಗಿಲ್ಲ. ಹಾಗೂ ಇಂದು ನಗರದ ಜನತೆಗೆ ಕೃಷ್ಣಾ ನದಿಯಿಂದ ಕುಡಿಯುವ ನೀರಿನ

ಸರಬರಾಜು ಮಾಡುತ್ತಿರುವುದರಿಂದ ಈ ಕೆರೆಯ ನೀರಿನ ಅವಶ್ಯಕತೆಯೇ ಬರುತ್ತಿಲ್ಲ. ಅಲ್ಲದೇ ಇಂದಿನ ನಗರದ ಪ್ರತಿಯೊಬ್ಬರ ಮನೆ ಮನೆಗೂ ಕೊಳವೆ ಬಾವಿಗಳನ್ನು ಹಾಕಿಸಿಕೊಳ್ಳುತ್ತಿರುವುದರಿಂದ ಈ ಕೆರೆಯ ನೀರಿನ ಅವಶ್ಯಕತೆಯು ಜನರಿಗೆ ಕಡಿಮೆಯಾಯಿತೆನ್ನಬಹುದು. ಆದರೆ ಈ ಕೆರೆಯಿಂದಾಗಿಯೇ ಇಂದು ಇಡೀ ನಗರದ ಕೊಳವೆ ಬಾವಿಗಳಿಗೆ ಅಂತರ್ಜಲ ಮಟ್ಟವು ಹೆಚ್ಚಿದೆ ಎನ್ನಬಹುದು.

ಕೆರೆಯು ನಿರ್ಮಾಣವಾದಾಗಿನಿಂದ ಹಿಡಿದು ಇಂದಿನವರೆಗೂ ಯಾವ ಕಾಲದಲ್ಲಿಯೂ ಬತ್ತಿಹೋದ ಮಾಹಿತಿಯು ಇದುವರೆಗೂ ತಿಳಿದು ಬಂದಿಲ್ಲ. ಆದರೆ ಮಳೆಯಿಂದಾಗಿ ಕೆರೆಯಲ್ಲಿನ ನೀರಿನ ಪ್ರಮಾಣವು ಏರಿಳಿತವಾಗಿದ್ದನ್ನು ಕಾಣಬಹುದು. ಇಂದಿಗೂ ಜನರು ಈ ಕೆರೆಯಲ್ಲಿನ ನೀರನ್ನು ಬಟ್ಟೆ ತೊಳೆಯಲು ಉಪಯೋಗಿಸಿಕೊಳ್ಳುತ್ತಾರೆ. ಕೆರೆಯು ಒಂದು ವೇಳೆ ಬತ್ತಿ ಹೋದರೆ, ಇಡೀ ನಗರದ ಕೊಳವೆ ಬಾವಿಗಳಿಗೆ ಅಂತರ್ಜಲವು ಇಲ್ಲದಂತಾಗಿ ನಗರದಲ್ಲಿ ಬರಗಾಲ ಬಂದದೋಗಬಹುದು. ಆದ್ದರಿಂದ ಈ ಕೆರೆಯಲ್ಲಿ ನೀರಿನ ಪ್ರಮಾಣ ಕಡಿಮೆಯಾದರೆ, ಕೃಷ್ಣಾ ನದಿಯ ನೀರನ್ನು ಕೆರೆಗೆ ಬಿಟ್ಟು ತುಂಬಿಸುವ ವ್ಯವಸ್ಥೆಮಾಡಲಾಗಿದೆ. ಮೇಲಗಿರಿ ನಿಂಗಪ್ಪನ ಬೆಟ್ಟದ ಮೇಲಿರುವ ಕುಡಿಯುವ ನೀರಿನ ಸರಬರಾಜು ಮಾಡುವ ಟ್ಯಾಂಕಿನಿಂದ ನೀರು ಸಂಗ್ರಹಿಸಿ ಅಲ್ಲಿಂದ ಕೊಳವೆ ಮೂಲಕ ಕೆರೆಗೆ ಬಂದು ಸೇರುವಂತೆ ಮಾಡಲಾಗುತ್ತದೆ. ಹೀಗೆ ಟ್ಯಾಂಕಿನಿಂದ ನೀರು ಕೆರೆಗೆ ಬರಲು ಕೊಳವೆಯನ್ನು ಅಳವಡಿಸಲಾಗಿದೆ. ಆದರೆ ಇದು ಕೆರೆಯವರೆಗೆ ಬರದೆ, ಅರ್ಧದಲ್ಲಿಯೇ ಕೊನೆಗೊಳ್ಳುತ್ತದೆ. ಅಲ್ಲಿಂದ ಕೆರೆಯವರೆಗೆ ನೀರು ಹರಿದು ಬರಲು ಝರಿ ವ್ಯವಸ್ಥೆ ಮಾಡಲಾಗಿದೆ. ಇದನ್ನು ಜನರು ನಾಗರ ಝರಿ ಎಂದು ಕರೆಯುತ್ತಿದ್ದರು. ಇಂದು ಟ್ಯಾಂಕನ್ನು ತೊಳೆದ ತಳದ ನೀರೆಲ್ಲವೂ ಕೊಳವೆಯಿಂದ ಈ ಕೆರೆಗೆ ಬಂದು ಸೇರುತ್ತವೆ. ಇಂತಹ ವ್ಯವಸ್ಥೆಯ ಮೂಲಕ ಕೆರೆಯಲ್ಲಿ ಹೆಚ್ಚು ನೀರು ಸಂಗ್ರಹ ಮಾಡಲಾಗುತ್ತದೆ. ಆದರೆ ಇಂತಹ ವ್ಯವಸ್ಥಿತ ಕಾರ್ಯವನ್ನು ಇತ್ತೀಚಿನ ಯಾವ ದಿನಗಳಲ್ಲಿ ಹೀಗೆ ಸಂಗ್ರಹಿಸಲಾಗಲಿಲ್ಲ. ಏಕೆಂದರೆ ನೀರಿನ ಪ್ರಮಾಣ ಕಡಿಮೆಯಾಗಿಲ್ಲ. ಕೆರೆಯ ಸುತ್ತಲೂ ಇಂದು ಅನೇಕ ಕಟ್ಟಡಗಳ ತಲೆಯೆತ್ತಿ ನಿಂತಿವೆ. ಅಲ್ಲದೇ ನಗರ ಸುತ್ತು ಮುತ್ತಲೂ ಬೃಹದಾಕಾರದ ನಗರವು ಬೆಳೆದಿದೆ. ಇಲ್ಲಿನ ಜನರಿಗೆ ಕೊಳವೆ ಬಾವಿಗಗಳಿಗೆ ಅಂತರ್ಜಲ ಹಾಗೂ ಗಣೇಶ ಮೂರ್ತಿಯನ್ನು ವಿಸರ್ಜಿಸಲು, ಮೀನುಗಾರರಿಗೆ ಮೀನು ಹಿಡಿಯಲು, ಬಟ್ಟೆ ತೊಳೆಯಲು, ಅನೇಕ ಜಲಚರ ಪ್ರಾಣಿಗಳು ವಾಸಿಸಲು ಉಪಯೋಗವಾಗಿದೆ.

ಜಮಖಂಡಿ ನಗರದ ಜನರಿಗೆ ಸಾಂಸ್ಕೃತಿಕ ಉತ್ಸವವಾದ ಗಣೇಶ ವಿಸರ್ಜನೆಯನ್ನು ಮಾಡಲು ಉಪಂತೋಗವಾಗುತ್ತಿದೆ. ಆದರೆ ಇತ್ತೀಚಿನ ದಿನಗಳಲಿ ಈ ವಿಸರ್ಜನಾ ವ್ಯವಸ್ಥೆಂಯನ್ನು ರದ್ದುಗೊಳಿಸಲಾಗಿದೆ. ವಿಸರ್ಜನೆಯಿಂದಾಗಿ ಕೆರೆಯ ನೀರೆಲ್ಲವೂ ಹಾಳಾಗುವುದಲ್ಲದೆ, ಕೆರೆಯಲ್ಲಿನ ಜಲಚರ ಪ್ರಾಣಿಗಳು ಜೀವಿಸಲು ತೊಂದರೆಯಾಗುತ್ತದೆ. ಬಣ್ಣ ಬಣ್ಣಗಳಿಂದ ತಯಾರಿಸಿದ ಗಣೇಶ ಮೂರ್ತಿಯಲಿ ರಸಾಯನಿಕ ಅಂಶಗಳು ಇರುವುದರಿಂದ ಜಲಚರ ಪ್ರಾಣಿಗಳು ಸತ್ತು ಹೋಗುತ್ತವೆ. ಅವುಗಳಿಲ್ಲದೇ ಹೋದರೆ ಕೆರೆಗಳಲ್ಲಿನ ನೀರು ಶುದ್ಧವಾಗಿರಲಾರವು. ಆದ್ದರಿಂದ ಕೆರೆಯಲ್ಲಿನ ನೀರಿನ ಶುದ್ಧತೆಯನ್ನು ಹಾಗೂ ಜಲಚರ ಪ್ರಾಣಿಗಳ ಸಂರಕ್ಷಣೆಯನ್ನು ಮಾಡಲಾಗುತ್ತದೆ. ಇಲ್ಲಿ ಮೀನುಗಾರರು ತಮ್ಮ ಜೀವನಕ್ಕೆ ಸಾಕಾಗುವಷ್ಟು ಆರ್ಥಿಕ ವ್ಯವಸ್ಥೆಯು ಉತ್ತಮವಾಗಿ ಜೀವನ ಸಾಗಿಸಲು ಈ ಕೆರೆಯು ಸಹಾಯಕವಾಗಿದೆ. ಎಲ್ಲಾ ರೀತಿಯಾಗಿ ಉಪಯೋಗಕಾರಿಯಾಗಿದೆಯಾದರೂ ಇಲ್ಲಿ ಕೆಲವು ಜನರಿಗೆ

ಕನ್ನಡ ವಿಶ್ವವಿದ್ಯಾಲಯ. ಹಂಪಿ.

ಅಂದರೆ ಜೀವನದಲ್ಲಿ ಜಿಗುಪ್ಸೆಗೊಂಡವರಿಗೆ ತಮ್ಮ ಜೀವವನ್ನು ಕಳೆದುಕೊಳ್ಳಲು ಉಪಯೋಗವಾಗಿದೆ ಎನ್ನಬಹುದು. ಅಂದರೆ ಕೆಲವರು ಈ ಕೆರೆಗೆ ಹಾರಿ ಪ್ರಾಣ ಕಳೆದುಕೊಳುವುದನ್ನು ಕಾಣಬಹುದು. ಆದರೆ ಅಂತಹವರ ಸಂಖ್ಯೆ ಕಡಿಮೆ ಪ್ರಮಾಣದಲ್ಲಿದೆ. ಇತ್ತೀಚಿನ ದಿನಗಳಲ್ಲುಂತೂ ಇಂತಹ ಯಾವುದೇ ಘಟನೆಗಳು ನಡೆದಿಲ್ಲ.

ಈ ಕೆರೆಯ ಪೂರ್ವ ಭಾಗದಲ್ಲಿರುವ ಪಾವಟಿಗೆಗಳನ್ನು ನಿರ್ಮಿಸಲಾಗಿದ್ದು, ಕೆರೆಯ ಎಡಬದಿಗೆ ಕಟ್ಟೆಯ ಮೇಲ್ಭಾಗದಲ್ಲಿ ಸುಮಾರು ೮ ಅಡಿ ಎತ್ತರದ ತಂತಿ ಜಾಳಿಗೆಯನ್ನು ದಕ್ಷಿಣ ಭಾಗಕ್ಕೆ ಬಿಗಿಯಲಾಗಿದೆ. ಈ ಭಾಗದಲ್ಲಿ ಮನೆಗಳಿರುವುದರಿಂದ ಯಾವುದೇ ಅಪಾಯ ಉಂಟಾಗಬಾರದೆಂದು ಈ ವ್ಯವಸ್ಥೆ. ಬಲಬದಿಗೆ ಸಂತೆ ಮಾರುಕಟ್ಟೆಗಾಗಿ ನಿರ್ಮಿಸಿದ ಕಟ್ಟಿಗಳನ್ನು ಕಾಣಬಹುದು. ಇವುಗಳನ್ನು ನಿರ್ಮಾಣ ಮಾಡಿರುವ ಉದ್ದೇಶವೆಂದರೆ, ನಗರದ ಊರಿನ ಮಧ್ಯೆ ಅಂದರೆ, ಹನುಮಾನ ಮಂದಿರದ ಮುಂದಿನ ಸಂತೆ ಮಾರುಕಟ್ಟೆಯನ್ನು ಈ ಕೆರೆಯ ಪಕ್ಕದಲ್ಲಿ ನಿರ್ಮಿಸಿರುವ ಕಟ್ಟಿಗಳಿಗೆ ಸ್ಥಳಾಂತರಿಸುವ ಉದ್ದೇಶವನ್ನು ಹೊಂದಿದೆ. ನಗರದಲ್ಲಿ ಈ ಸದ್ಯದಲ್ಲಿ ನಡೆಯುತ್ತಿರುವ ಸಂತೆ ಮಾರುಕಟ್ಟೆಯು ತುಂಬಾ ಇಕ್ಕಾಟಾಗಿದ್ದು, ರಸ್ತೆಯು ಜನಜಂಗುಳಿಯಿಂದ ತುಂಬಿರುತ್ತದೆ. ಇಂತಹ ಅಸ್ತವ್ಯಸ್ಥ ಮಾರುಕಟ್ಟೆಯನ್ನು ವ್ಯವಸ್ಥಿತವಾಗಿ ನಡೆಸುವ ಉದ್ದೇಶದಿಂದ ಈ ಕೆರೆಯ ಮೇಲಿನ ಭಾಗವನ್ನು ಆಯ್ಕೆ ಮಾಡಿಕೊಂಡು ಈ ಕಟ್ಟೆಗಳನ್ನು ವ್ಯವಸ್ಥಿತವಾಗಿ ನಿರ್ಮಿಸಿವೆಯಾದರೂ, ಅದು ಇನ್ನೂ ಜಾರಿಗೆ ಬಂದಿಲ್ಲ. ಇಲ್ಲಿ ಸಂತೆಯು ನಡೆಯುತ್ತಿಲ್ಲ. ಆದರೆ ಈ ಪ್ರದೇಶದಲ್ಲಿ ಜಾನುವಾರುಗಳಿಗೆ ಮೇವು ಮಾರಾಟ ಮಾಡಿತ್ತಿರುವುದನ್ನು ಕಾಣಬಹುದು. ಈ ಸಂತೆ ಮಾರುಕಟ್ಟೆಗಾಗಿ ನಿರ್ಮಿಸಿದ ಕಟ್ಟಿಗಳ ಮೇಲೆ ನೆರಳಿಗಾಗಿ ತಗಡು ಹಾಕಿಸುವಂತೆ ವ್ಯವಸ್ಥೆ ಮಾಡಿದೆಯಾದರೂ, ಅಲ್ಲಿ ಯಾವುದೇ ತಗಡುಗಳನ್ನು ಹಾಕಿರುವುದು ಕಂಡು ಬರುವುದಿಲ್ಲ. ನಗರದಲ್ಲಿ ಮುಂದೊಂದು ದಿನ ಈ ಜಾಗದಲ್ಲಿಯೇ ಸಂತೆಯು ನಡೆಯಬಹುದು. ಒಟ್ಟಿನಲ್ಲಿ ಕೆರೆಯು ಜಮಖಂಡಿ ನಗರದ ಜನತೆಗೆ ಉಪಯುಕ್ತಕಾರಿಯಾಗಿದೆ.

130294

ಈ ಕೆರೆಯ ದಕ್ಷಿಣ ದಿಕ್ಕಿನ ಮೇಲ್ಭಾಗದಲ್ಲಿ ಹೊಕ್ಕಳ ಬಾವಿ ಇದೆ. ಇದು ಈ ಕೆರೆಯಲ್ಲಿರುವ ನೀರಿನಿಂದ ಈ ಬಾವಿಗೆ ಸದಾ ನೀರು ಇರುತ್ತಿತ್ತು. ಈ ಕೆರೆಯನ್ನು ಗುರುತಿಸಬೇಕಾದರೆ ನಗರದ ಜನರೆಲ್ಲರೂ ಹೊಕ್ಕಳ ಬಾವಿಯ ಮೇಲಿನ ಕೆರೆ ಎಂದು ಕರೆಯುತ್ತಾರೆ. ಈ ಬಾವಿಯಿಂದಲೇ ಕೆರೆಯನ್ನು ಗುರುತಿಸಲಾಗುತ್ತಿದೆ. ಪರಸ್ಪರ ಲಕ್ಷಣ ಕೆರೆಯಿಂದಾಗಿ ಹೊಕ್ಕಳ ಬಾವಿಯಲ್ಲಿ ನೀರು ಸದಾ ಅಂತರ್ಜಲವನ್ನು ಕಾಯ್ದುಕೊಂಡು ಬಾವಿಯಲ್ಲಿರುವ ನೀರನ್ನು ಜನರು ಕುಡಿಯಲು ಉಪಯೋಗಿಸುತ್ತಿದ್ದರು. ಈ ಕೆರೆಯ ವರ್ಣನೆಯನ್ನು ಹಾಗೂ ಕೆರೆಯ ಸಂಪೂರ್ಣ ಮಾಹಿತಿಯನ್ನು ಸಂಸ್ಥಾನಿಕರ ಕಾಲದಲ್ಲಿನ ಜನರು ವಿವರವಾಗಿ ಹೇಳುತ್ತಾರೆ.

ಈ ಕೆರೆಯು ವ್ಯವಸ್ಥಿತವಾಗಿ ಸದಾ ತುಂಬಿ ಜನರಿಗೆ ಕಣ್ಮನ ಸೆಳೆಯುವುದು. ನಗರದಲ್ಲಿಯೇ ಅತ್ಯಂತ ಸುಂದರ ಹಾಗೂ ಯೋಜನಾಬದ್ಧವಾಗಿ, ನೀರು ತುಂಬಿರುವ ಕೆರೆಯೆಂದರೆ ಇದಾಗಿದೆ. ಇದು ಸಾಮಾಜಿಕವಾಗಿ ಉಪಯುಕ್ತವಾಗಿದೆ. ಹಾಗೂ ರಾಜಕೀಯವಾಗಿ ಜನರಿಗೆ ನೀರಿನ ಸೌಲಭ್ಯ ಕಲ್ಪಿಸಲು ಸಂಸ್ಥಾನಿಕರು ರಚಿಸಿದ್ದರಿಂದ ರಾಜಕೀಯ ಅವರ ಹೆಸರು ಅಜರಾಮರವಾಗಿ ಉಳಿಯಿತು. ಹಾಗೂ ಗಣೇಶ ಉತ್ಸವದ ವಿಸರ್ಜನೆ ಮಾಡುವುದರಿಂದ ಸಾಂಸ್ಕೃತಿಕವಾಗಿಯೂ ಉಪಯೋಗವಾಗಿದೆ. ಹಾಗೂ ಕೆರೆಯ ಪೂರ್ವದ ದಂಡೆಯ ಮೇಲೆ ವೆಂಕಟೇಶ್ವರ ದೇವಾಲಯವಿರುವುದು ಧಾರ್ಮಿಕತೆಯನ್ನು ಎತ್ತಿ ತೋರಿಸುತ್ತದೆ. ಎಲ್ಲ ಆಯಾಮಗಳಿಂದಲೂ ಕೆರೆಯು ಉಪಯೋಗವಾಗಿದೆ ಎನ್ನಬಹುದು.

೪) ಆನೆಕೆರೆ (ಅಗಸರ ಕೆರೆ)

ಜಮಖಂಡಿಯ ಪಟವರ್ಧನ ಸಂಸ್ಥಾನಿಕರಾದ ರಾಮಚಂದ್ರರಾವ್ ಅಪ್ಪಾಸಾಹೇಬರು ತಮ್ಮ ಅರಮನೆಯ ಹಿಂಭಾಗದಲ್ಲಿರುವ ರಾಮತೀರ್ಥ ಕೆರೆಯಿಂದ, ರಾಮೇಶ್ವರ ದೇವಾಲಯದ ಬಲಬದಿಗಿರುವ ಹೊಂಡದಿಂದ ಹರಿದು ಬರುವ ಮಳೆಯ ನೀರಿನ್ನು ಸಂಗ್ರಹಿಸಲು ಈ ಕೆರೆಯನ್ನು ನಿರ್ಮಿಸಲಾಯಿತು. ಈ ಕೆರೆಯು ಅರಮನೆಯ ಬಲಬದಿಗೆ ಕಂಡುಬರುತ್ತಿದ್ದು ಅರಮನೆಯಿಂದ ಸುಮಾರು ೪೦೦ ಮೀ. ಗಳಷ್ಟು ದೂರವಿದೆ. ಅರಮನೆಯ ಮುಂದಿನಿಂದ ಉತ್ತರಕ್ಕೆ ನಡೆಯುತ್ತಾ ಬಂದರೆ ಈ ಕೆರೆಯನ್ನು ಕಾಣಬಹುದು. ಅಂದಿನ ಸಂಸ್ಥಾನಿಕರ ಕಾಲದಲ್ಲಿ ನಿರ್ಮಾಣಗೊಂಡ ಈ ಕೆರೆಯನ್ನು ಅರಮನೆಯಲ್ಲಿರುವ ಆನೆ, ಒಂಟೆ, ಕುದುರೆಗಳಿಗೆ ನೀರು ಕುಡಿಸಲು ಹಾಗೂ ಅವುಗಳು ತಮ್ಮ ದೇಹವನ್ನು ತಂಪುಗೊಳಿಸಿಕೊಳ್ಳಲು, ಈ ಕೆರೆಗಳನ್ನು ಉಪಯೋಗಿಸುತ್ತಿದ್ದು ಇದರಿಂದಾಗಿಯೇ ಇದಕ್ಕೆ ಆನೆಕೆರೆ ಎಂದು ಕರೆಯಲಾಯಿತು.

ಈ ಕೆರೆಯನ್ನು ಯೋಜನಾ ಬದ್ಧವಾಗಿ ಯಾವುದೇ ಕಲ್ಲಿನ ಗೋಡೆಯನ್ನಾಗಲಿ, ಏರಿಯನ್ನಾಗಲಿ ಕಟ್ಟಿಸಿ ನಿರ್ಮಾಣ ಮಾಡದೆ, ಗುಡ್ಡದಲ್ಲಿ ಸ್ವಾಭಾವಿಕವಾಗಿ ಈ ಕೆರೆಯು ರಚನೆಗೊಂಡಿದೆ. ಗುಡ್ಡದ ಈ ಭಾಗದಲ್ಲಿ ತಗ್ಗಾಗಿದ್ದು ಮೇಲಿನ ರಾಮತೀರ್ಥ ಕೆರೆಯಲ್ಲಿನ ನೀರೆಲ್ಲವೂ ಇಲ್ಲಿ ಬಂದು ಸಂಗ್ರಹಗೊಳ್ಳುತ್ತಿದ್ದರಿಂದ ಇದೊಂದು ಕೆರೆಯಾಗಿ ಮಾರ್ಪಾಟಾಯಿತು. ಹಾಗೂ ಇದು ಅಂದಿನ ಆನೆಗಳಿಗೆ ಹೆಚ್ಚು ಉಪಯೋಗವಾಗಿರುವುದರಿಂದ ಆನೆ ಕೆರೆ ಎಂದು ಕರೆಯಲಾಯಿತು. ಈ ಕೆರೆಯ ಬಗ್ಗೆ ಅಧ್ಯಯನ ಮಾಡುತ್ತಾ ಹೋದಾಗ ನಮಗೆ ತಿಳಿದು ಬರುವ ಒಂದು ಪ್ರಮುಖ ಅಂಶವೆಂದರೆ, ಪಟವರ್ಧನ ಮಹಾರಾಜರು ನಗರದಲ್ಲಿ ಪ್ರಮುಖವಾಗಿ ಪ್ರಜೆಗಳಿಗೆ ಮೂಲ ಸೌಲಭ್ಯ ಸೌಕರ್ಯಗಳನ್ನು ಕಲ್ಪಿಸುವುದಕ್ಕಾಗಿ ಯೋಜನಾಬದ್ಧವಾಗಿ ಕೆರೆಗಳನ್ನು ನಿರ್ಮಿಸಿರುವುದನ್ನು ಕಾಣುತ್ತೇವೆ. ಆದರೆ ಈ ಕೆರೆಗೆ ಅಂತಹ ವಿಶೇಷವಾಗಿ ಯಾವುದೇ ವ್ಯವಸ್ಥಿತ ನಿರ್ಮಾಣವನ್ನು ಪಟವರ್ಧನ ಮಹಾರಾಜರು ಕಲ್ಪಿಸಿರದೇ ಇದ್ದುದ್ದನ್ನು ಕಾಣುತ್ತೇವೆ. ಈ ಕೆರೆಗೆ ಏಕೆ ಗಮನ ಹರಿಸಿಲ್ಲ ಎಂಬುದನ್ನು ಹುಡುಕುತ್ತಾ ಹೋದಾಗ ನಮಗೆ ತಿಳಿಯಬರುವ ಒಂದು ಅಂಶವೆಂದರೆ ಇಲ್ಲಿ ಜನವಸತಿ ಇಲ್ಲದೇ ಇರುವುದು. ಹಾಗೂ ಇದರ ಸುತ್ತಲೂ ನಿಸರ್ಗದತ್ತವಾದ ಬೃಹತ್ ಕಲ್ಲು ಬಂಡೆಗಳೇ ಗೋಡೆಯಂತೆ ನಿರ್ಮಿತವಾಗಿರುವುದೇ ಕಾರಣವಾಗಿದೆ.

ಗುಡ್ಡದ ಭಾಗದಲ್ಲಿರುವ ಈ ಕೆರೆಯ ಸುತ್ತಲಿನ ಭಾಗವು ಸ್ವಾಭಾವಿಕವಾಗಿಯೇ ರಚನೆಗೊಂಡಿದೆ. ಇದರ ಆಳ ಅಗಲವನ್ನು ಅಂದಾಜಿಸಲಾಗಿಯೂ, ಸುಮಾರು ೧೦೦ ಮೀ ಅಗಲ, ೬೦ ಮೀ. ಉದ್ದ ಮತ್ತು ೧೦ ಅಡಿ ಆಳವನ್ನು ಹೊಂದಿರಬಹುದೆಂದು ಅಂದಾಜಿಸಲಾಗಿದೆ. ಆದರೆ ಕೆರೆಯ ಉದ್ದ ಅಗಲದ ಬಗ್ಗೆ ಎಲ್ಲಿಯೋ ನಿಖರವಾದ ಮಾಹಿತಿಯು ದೊರೆತಿಲ್ಲ. ಇತ್ತೀಚಿನ ದಿನಗಳಲ್ಲಿ ಈ ಕೆರೆಗೆ ಉತ್ತರ ಭಾಗದಲ್ಲಿ ಕಲ್ಲಿನ ಪಾವಟಿಗೆಗಳನ್ನು ನಿರ್ಮಿಸಲಾಗಿದೆ. ಮಳೆಗಾಲದಲ್ಲಿ ಈ ಕೆರೆಯು ಮೇಲಿನ ರಾಮತೀರ್ಥ ಕೆರೆಯಿಂದ ತುಂಬಿ ಹರಿಯುತ್ತದೆ. ಸಂಸ್ಥಾನದಲ್ಲಿ ಮೊದಲು ಕೇವಲ ಪ್ರಾಣಿಗಳಿಗೆ ಉಪಯೋಗವಾಗುತ್ತಿದ್ದು, ಜನರಿಗೆ ಯಾವುದೇ ತೆರನಾದ ಉಪಯೋಗವಾಗದ ಈ ಕೆರೆಯು ಇಂದು ನಗರದ ಭಾಗಶಃ ಜನರಿಗೆ ಉಪಯೋಗವಾಗುತ್ತಿದೆ. ಅದು ಹೆಚ್ಚಾಗಿ ಮಡಿವಾಳ ಜನರು ತಮ್ಮ ಆರ್ಥಿಕ ಜೀವನವನ್ನು ಉತ್ತಮಪಡಿಸಿಕೊಳ್ಳಲು ಉಪಯುಕ್ತವಾಗಿದೆ. ಅಖಿಲ ಭಾರತದ ಒಕ್ಕೂಟದಲ್ಲಿ

ಮಾರ್ಚ ೮, ೧೯೪೮ ರಂದು ಜಮಖಂಡಿ ಸಂಸ್ಥಾನವು ವಿಲೀನಗೊಂಡಿತು. ನಂತರದಲ್ಲಿ ಈ ಕೆರೆಯು ನೀರನ್ನು ಅಗಸರು ಬಟ್ಟೆ ತೊಳೆಯಲು ಉಪಯೋಗಿಸಲಾಗುತ್ತಿದೆ. ಸಂಸ್ಥಾನ ವಿಲೀನಗೊಂಡ ನಂತರ ನಗರವು ಬೆಳೆಯತೊಡಗಿತು. ವಿಶೇಷವಾಗಿ ಈ ಕೆರೆಯ ನೀರನ್ನು ಹೆಚ್ಚಾಗಿ ಅಗಸರ ಕೆರೆ ಎಂದು ಕರೆಯಲಾಗುತ್ತಿದ್ದೆ. ಇಂದು ಇದಕ್ಕೆ ಆನೆ ಕೆರೆ ಮತ್ತು ಅಗಸರ ಕೆರೆ ಎಂಬ ಹೆಸರಿನಿಂದಲೂ ಕರೆಯುತ್ತಾರೆ. ಆದರೆ ಹೆಚ್ಚಾಗಿ ಜನರು ಅಗಸರ ಕೆರೆ ಎಂದು ಕರೆಯುತ್ತಾರೆ.

ಈ ಕೆರೆಯ ಉತ್ತರ ಭಾಗದಲ್ಲಿ ಕಲ್ಲಿನ ಪಾವಟಿಗೆಗಳನ್ನು ನಿರ್ಮಿಸಿ ಕೆರೆಯಲ್ಲಿ ಜನರು ಇಳಿಯಲು ಅವಕಾಶವನ್ನು ಕಲ್ಪಿಸಲಾಗಿತ್ತು. ಕೆರೆಯ ಪೂರ್ವ ಭಾಗಕ್ಕೆ ಒಂದು ಕಟ್ಟೆಯನ್ನು ಕಟ್ಟಲಾಗಿದ್ದು, ಅದು ಕೋಡಿಯ ಕಾರ್ಯವನ್ನು ನಿರ್ವಹಿಸುತ್ತದೆ. ನಗರದ ಉತ್ತರ ಭಾಗದಲ್ಲಿ ಕಡಪಟ್ಟಿ ಎಂಬ ಗ್ರಾಮವಿದ್ದು, ಅಲ್ಲಿನ ಭಾಗಶಃ ಅಗಸರೆಲ್ಲರೂ ಈ ಕೆರೆಯಲ್ಲಿ ಬಟ್ಟೆ ತೊಳೆಯಲು ಉಪಯೋಗಿಸಿಕೊಂಡು ತಮ್ಮ ಮೂಲವೃತ್ತಿಯನ್ನು ಮುಂದುವರೆಸಿಕೊಂಡು ಬಂದಿದ್ದಾರೆ. ಇದರಿಂದ ಅವರಿಗೆ ಆರ್ಥಿಕ ಅನುಕೂಲವನ್ನು ಮಾಡಿಕೊಟ್ಟಿದೆ. ಹಾಗೂ ಗುಡ್ಡದ ಮೇಲೆ ಮೇಯಲು ಬಂದ ದನಕರುಗಳಿಗೆ ನೀರು ಕುಡಿಯಲು ಸಹಾಯಕವಾಗಿದೆ. ಈ ಎಲ್ಲ ರೀತಿ ಉಪಯೋಗವಾಗುತ್ತಿರುವ ಈ ಕೆರೆಯನ್ನು ಅಭಿವೃದ್ಧಿಗೊಳಪಡಿಸುವಂತೆ ಮಾಡುವುದು ನಗರದ ಪುರಸಭೆಯ ಜವಾಬ್ದಾರಿಯಾಗಿದೆ. ಮಳೆಗಾಲದಲ್ಲಿ ಮೇಲಿನ ರಾಮತೀರ್ಥ ಕೆರೆ, ಗಾಣಗಿತ್ತಿ ಕೆರೆ, ಪುಷ್ಕರಣಿ, ಹೊಂಡಗಳು ತುಂಬಿದ ಮೇಲೆ ಹೆಚ್ಚಿನ ನೀರೆಲ್ಲವೂ ಈ ಕೆರೆಗೆ ಬಂದು ಸೇರುತ್ತದೆ. ಈ ಕೆರೆಯೂ ತುಂಬಿ ಹೆಚ್ಚಾದ ನೀರು ಕೆಳಗಿನ ಎಡದಂತೆ ಕಾಲುವೆಗೆ ಬಂದು ಸೇರುತ್ತದೆ.

ಈ ಕೆರೆಯಲ್ಲಿ ಅತಿಹೆಚ್ಚು ನೀರಲ್ಲದೆ ಸಮ ಪ್ರಮಾಣದಲ್ಲಿದ್ದು, ಜನರ ಜೀವನಕ್ಕೆ ಸೆಲೆಯಾಗಿದೆ. ಇತ್ತೀಚೆಗೆ ೨೦೦೫ ರಲ್ಲಿ ಕೆರೆಯಲ್ಲಿ ಹೂಳೆತ್ತುವ ಕಾರ್ಯವನ್ನು ಕೈಗೊಂಡು ಕೆರೆಯ ಆಳವನ್ನು ಮತ್ತು ಅಗಲವನ್ನು ಇನ್ನಷ್ಟು ಹೆಚ್ಚಿನ ಪ್ರಮಾಣದಲ್ಲಿ ಹೆಚ್ಚಿಸಲಾಗಿದೆ. ಕಳೆದ ಎರಡು ಮೂರು ವರ್ಷಗಳ ಹಿಂದೆ ಬೇಸಿಗೆಯಲಿ ತೀರ ನೀರಿನ ಅಭಾವವುಂಟಾಗಿದ್ದರಿಂದ ಘಟಪ್ರಭಾ ಎಡದಂಡೆ ಕಾಲುವೆಯ ಮೂಲಕ ಈ ಕೆರೆಗೆ ನೀರನ್ನು ಬಿಡಲಾಗಿತ್ತು. ಈ ಕೆರೆಯ ಉತ್ತರ ಭಾಗದ ಕೆಳಗೆ ಇರುವ ಕಾಲುವೆಯಲ್ಲಿ ಘಟಪ್ರಭಾ ನದಿಯ ನೀರು ಸಂಗ್ರಹಗೊಂಡಿರುತ್ತದೆ. ಪಾಯಿಪದ ಮೂಲಕ ಕಾಲುವೆಯ ನೀರನ್ನು ಕೆರೆಗೆ ಬಿಡುವ ವ್ಯವಸ್ಥೆಯನ್ನು ಮಾಡಿ ಕೆರೆಯಲ್ಲಿ ನೀರು ಸಂಗ್ರಹಿಸಿದೆ. ಹೀಗೆ, ಇದರಿಂದ ಬಹಳಷ್ಟು ಜನರಿಗೆ ಉಪಯೋಗವಾಗುತ್ತಿದ್ದರಿಂದ ಇದು ಇಂದಿಗು ಸಹ ಸುಸ್ಥಿತಿಯಲ್ಲಿ ಇದೆ.

ಈ ಕೆರೆಯಿಂದ ಇನ್ನು ಹೆಚ್ಚಿನ ಜನತೆಗೆ ಸಹಕಾರಿಯಾಗಲಿ ಎಂಬ ಮನೋಭಾವದಿಂದ ಕರ್ನಾಟಕ ಸರ್ಕಾರ ಜಿಲ್ಲಾ ಪಂಚಾಯತ ಬಾಗಲಕೋಟೆ, ಮರಭೂಮಿ ಅಭಿವೃದ್ಧಿ ಯೋಜನೆಯಡಿ ಜಮಖಂಡಿಯ ಆನೆಕೆರೆಯ ಅಭಿವೃದ್ಧಿ ಕಾಮಗಾರಿಗೆ ೨೦೦೪ ರಲ್ಲಿ ಸಿದ್ದು ನ್ಯಾಮಗೌಡ ಅವರು ಶಂಕು ಸ್ಥಾಪನೆಯನ್ನು ಮಾಡಿದ್ದಾರೆ. ಇದರ ಯೋಜನೆಯಿಂದಲೇ ೨೦೦೫ ರಲ್ಲಿ ಹೂಳೆತ್ತುವ ಕಾರ್ಯವನ್ನು ಕೈಗೊಳ್ಳಲಾಗಿದೆ. ಆದರೆ ಇತ್ತೀಚೆಗೆ ಯಾವ ಅಭಿವೃದ್ಧಿ ಕಾಮಗಾರಿಗಳು ನಡೆದಿಲ್ಲ. ಆದರೆ ಅವುಗಳ ಕಾರ್ಯ ಆಮೆಗತಿಯಲ್ಲಿ ಸಾಗುತ್ತಿದೆ ಎನ್ನಬಹುದು. ಇದು ಕಲ್ಲಿನಿಂದ ಹಬ್ಬಿದ ಗುಡ್ಡದಲ್ಲಿದ್ದು ಇಲ್ಲಿ ಸಂಗ್ರಹವಾದ ನೀರು ಬೇಸಿಗೆಯ ಧಗೆಯಿಂದಾಗಿ ಅವು ಆವಿರೂಪದಲ್ಲಿ ಹೋಗಿ ಕಡಿಮೆ ಪ್ರಮಾಣದಲ್ಲಿ ಸಂಗ್ರಹಗೊಳ್ಳುತ್ತದೆ ಎನ್ನಬಹುದು.

ಈ ಕೆರೆಯು ಗುಡ್ಡದಲ್ಲಿದ್ದು ಇಲ್ಲಿ ಆಯಕಟ್ಟು ಪ್ರದೇಶವು ಕಂಡುಬರುವುದಿಲ್ಲ. ಇದು ಜಾನುವಾರಗಳಿಗೆ ಕೂಡ ಉಪಯೋಗವಾಗಿದೆ. ಅಲ್ಲದೇ ಕೆರೆಯು ಸಾಂಸ್ಕೃತಿಕವಾಗಿ ಮನರಂಜನೆಯನ್ನು ಒದಗಿಸುತ್ತವೆ ಎನ್ನಬಹುದು. ಈ ಕೆರೆಯ ಕೆಳಭಾಗದಲ್ಲಿ ಹಲವಾರು ಮನೆಗಳು ನಿರ್ಮಾಣಗೊಂಡಿವೆ. ಇದು ಗುಡ್ಡದ ಭಾಗದಲ್ಲಿರುವುದರಿಂದ ಜನರು ಸಾಯಂಕಾಲ ವಾಯುವಿಹಾರಕ್ಕೆಂದು ಬಂದು ಇಲ್ಲಿ ಕುಳಿತು ನಿಸರ್ಗದ ಸವಿಯನ್ನು ಸವೆದು ಮನವನ್ನು ಸಂತೋಷಪಡಿಸಿಕೊಂಡು ಮರಳುತ್ತಾರೆ. ಬೃಹತ ಕಲ್ಲು ಬಂಡೆಗಳ ಮಧ್ಯೆ ಇರುವ ಈ ಕೆರೆಯಲ್ಲಿ ಸದಾ ನೀರು ಇರುತ್ತದೆ. ಹೆಚ್ಚಿನ ಪ್ರಮಾಣ ಮಳೆಯಿಂದ ಈ ಕೆರೆಯು ತುಂಬಿ ಹೆಚ್ಚಾದ ನೀರು ಮುಂದಿನ ಗುಳ್ಳವನ ಕೆರೆಗೆ ಬಂದು ಸೇರುತ್ತವೆ.

೫) ರಾಮತೀರ್ಥ ಕೆರೆ :

ಇದು ಜವುಖಂಡಿಂಯಲ್ಲಿರುವ ಪ್ರಮುಖ ಕೆರೆಗಳಲ್ಲಿ ಒಂದಾಗಿದೆ. ಇದು ಸಂಸ್ಥಾನಿಕರ ಅರಮನೆಯ ಹಿಂಭಾಗದಲ್ಲಿ ಹಾಗೂ ರಾಮೇಶ್ವರ ದೇವಾಲಯ ಬಲಬದಿಗಿದ್ದ ಗುಡ್ಡದ ಮೇಲೆ ಈ ಕೆರೆಂಯು ಕಂಡು ಬರುತ್ತದೆ. ಇದನ್ನು ರಾಮಚಂದ್ರರಾವ್ ಅಪ್ಪಾಸಾಹೇಬರು ಕಟ್ಟಿಸಿದರು. ಇದು ಅಂದಿನ ಸಂಸ್ಥಾನಿಕರಿಗೆ ಅರಮನೆಗೆ ಹಾಗೂ ರಾಮತೀರ್ಥದಲ್ಲಿ ವಾಸಿಸುತ್ತಿರುವ ಅಂದಿನ ಜನರ ಉಪಂಯೋಗಕ್ಕೆಂದೇ ಈ ಕೆರೆಯನ್ನು ನಿರ್ಮಿಸಲಾಗಿತ್ತು. ರಾಮತೀರ್ಥದ ಜನಗಳಿಗೆ ಉಪಂಯೋಗವಾಗಿರುವ ಈ ಕೆರೆಂಯನ್ನು ರಾಮತೀರ್ಥ ಕೆರೆ ಎಂದು ಕರೆಂಯಲಾಗುತ್ತದೆ. ಈ ಕೆರೆಂಯು ಒಂದು ಕಿ.ಮೀ. ದೂರದಲ್ಲಿ ಸರಣಿಂಯಾಗಿ ಇನ್ನೂ ಎರಡು ಕೆರೆಗಳು ಕಂಡುಬರುತ್ತವೆ. ಇವೆರಡೂ ಕೆರೆಗಳಲ್ಲಿ ಹೆಚ್ಚಾದ ನೀರು ಹಾಗೂ ಸುತ್ತಲಿನ ಗುಡ್ಡದ ಮೇಲಿಂದ ಹರಿದು ಬರುವ ನೀರೆಲ್ಲವೂ ಇದರಲ್ಲಿ ಸಂಗ್ರಹವಾಗುತ್ತವೆ. ಮಳೆಗಾಲದಲ್ಲಿ ಭಾರೀ ಮಳೆಯಿಂದ ಗುಡ್ಡದ ಮೇಲಿನ ಝರಿಗಳಿಂದ ಹರಿದು ಬರುವ ಝರಿಗಳೆಲ್ಲವೂ ಈ ಕೆರೆಗೆ ಬಂದು ಸೇರುತ್ತದೆ. ಈ ಯಾವುದೇ ನೀರು ಪೋಲಾಗದಂತೆ ವ್ಯವಸ್ಥಿತವಾಗಿ ಕೆರೆಗೆ ಬಂದು ಸೇರುವಂತೆ ಕೆರೆಂಯನ್ನು ನಿರ್ಮಾಣ ಮಾಡಲಾಗಿದೆ. ಇದು ಎತ್ತರದ ಮೇಲಿರುವ ಕೆರೆಯಾಗಿದೆ.

ರಾಮತೀರ್ಥ ಕೆರೆಯನ್ನು ವ್ಯವಸ್ಥಿತವಾಗಿ ಯೋಜನಾಬದ್ಧವಾಗಿ ನಿರ್ಮಿಸಲಾಗಿದೆ. ಈ ಭಾಗದಲ್ಲಿ ವಿಜಯನಗರದ ಸಾಮ್ರಾಜ್ಯದಲ್ಲಿ ಕಂಡು ಬರುವ ಕೆರೆಗಳ ಶೃಂಖಲೆಯ ವ್ಯವಸ್ಥೆಯನ್ನು ನಾವು ಇಲ್ಲಿ ಕಾಣಬಹುದು. ಸರಣಿಯಾಗಿ ಮೂರು ಕೆರೆಗಳು ಕಂಡು ಬರುತ್ತದೆ. ಇವುಗಳ ನಿರ್ಮಾಣದ ವ್ಯವಸ್ಥೆಯನ್ನು ನೋಡಿದಾಗ ಅಂದಿನ ಕೆರೆ ನಿರ್ಮಾಣಕಾರರ ಕೌಶಲ್ಯವನ್ನು ಮೆಚ್ಚುವಂತಹದು, ಅರಮನೆಯ ಹಿಂಭಾಗದಲ್ಲಿ ವಿಶಾಲವಾಗಿ ಹರಡಿಕೊಂಡಿರುವ ಗುಡ್ಡವಿದ್ದು, ಮಳೆಗಾಲದಲ್ಲಿ ಹರಿದು ಬರುವ ಎಲ್ಲ ನೀರನ್ನು ಸಂಗ್ರಹಿಸಿ ಕೆರೆಯನ್ನು ಕಟ್ಟಲಾಯಿತು. ಅರಮನೆಯ ಹಿಂಬಾಗದಲ್ಲಿ ೧೦ ಅಡಿ ಎತ್ತರದ ಸುಮಾರು ೨೫೦ ಮೀ. ಉದ್ದದ ಗೋಡೆಯು ಕಂಡು ಬರುತ್ತದೆ. ಕೆರೆಯ ಕಲ್ಲಿನ ಕಟ್ಟೆಯು ೧೫೦ ಮೀ. ಉದ್ದವಿದೆ. ಈ ಗೋಡೆ ಹಾಗೂ ಕೆರೆಯ ಕಲ್ಲಿನ ಕಟ್ಟೆಯ ನಡುವೆ ೧೫ ಮೀ. ನಷ್ಟು ಅಗಲವಿದ್ದು ನಡುವಿನ ಭಾಗದಲ್ಲಿ ಗಚ್ಚನ್ನು ಅರಿಯುವ ಸ್ಥಳದ ಅವಶೇಷ ಕಂಡು ಬರುತ್ತದೆ. ಬಹುಶಃ ಇಲ್ಲಿಯ ಗಚ್ಚನ್ನು ಅರೆದು ಗಚ್ಚಿನಿಂದ ಕೆರೆಯ ಗೋಡೆ ನಿರ್ಮಿಸಿರಬಹುದೆಂದು ತಿಳಿದು ಬರುತ್ತದೆ.

ಈ ಗಚ್ಚನ್ನು ಕೆರೆಯ ತಳಭಾಗದಲ್ಲಿ ಹಾಕಲಾಗಿತ್ತೆಂದು ತಿಳಿಯಬಹುದು. ಕೆರೆಯ ಉತ್ತರ ಭಾಗಕ್ಕೆ ೩ ಫೂಟ್ ದಪ್ಪದ, ೧೫೦ ಮೀ. ಉದ್ದದ ಗೋಡೆ ಕಂಡುಬರುತ್ತದೆ. ದಕ್ಷಿಣಕ್ಕೆ ಯಾವ ಗೋಡೆಯು ಇಲ್ಲದೇ ಸ್ವಾಭಾವಿಕ ಕಲ್ಲಿನ ಗುಡ್ಡವೇ ಗೋಡೆಯಂತೆ ಆವೃತ್ತವಾಗಿದ್ದು, ಇಲ್ಲಿಂದಲೇ ಗಾಣಗಿತ್ತಿ ಕೆರೆ (ಗುಂಡ), ಹಾಗೂ ಗುಡ್ಡದ ಮೇಲಿನ ನೀರು ಹರಿದು ಬಂದು ಸೇರುತ್ತದೆ. ಪಶ್ಚಿಮಕ್ಕೆ ಕೆರೆಯಲ್ಲಿ ಇಳಿಯಲು ಮೆಟ್ಟಿಲುಗಳಿವೆ. ಪೂರ್ವಕ್ಕೆ ಈಶಾನ್ಯ ಭಾಗದಲ್ಲಿ ಮೂರು ನಾಲೆಗಳು ಕಂಡುಬರುತ್ತದೆ. ಹೀಗೆ ಯೋಜನಾ ಬದ್ಧವಾಗಿ ವ್ಯವಸ್ಥಿತವಾಗಿ ಈ ಕೆರೆಯನ್ನು ನಿರ್ಮಿಸಿದ್ದು, ಇದರ ನಿರ್ಮಾಣದ ಶೈಲಿಯನ್ನು, ವ್ಯವಸ್ಥಿತವನ್ನು ವಿವರಿಸಲು ಅಸಾಧ್ಯ. ಇಂದಿಗೂ ಸಹ ಇದರಲ್ಲಿ ನೀರು ಬತ್ತದೇ ಇರುವುದನನ್ನು ಕಾಣುತ್ತೇವೆ. ಕೆರೆಯು ಚೌಕಾಕಾರವಾಗಿದ್ದು ದಕ್ಷಿಣ ಭಾಗದಲ್ಲಿ ಗೋಡೆಗಳಿಲ್ಲದೆ. ಇಂಗ್ಲೀಷ ವರ್ಣಮಾಲೆಯ 'ಯು' (U) ಆಕಾರದ ನೈಸರ್ಗಿಕ ನಿರ್ಮಿತ ಕಲ್ಲಿನ ಗುಡ್ಡವಿದ್ದು ಗೋಡೆಯಂತೆ ಕಂಡುಬರುತ್ತದೆ. ಈ ಪ್ರದೇಶವನ್ನು ಕೆರೆಯ ಜಲಾನಯನ ಪ್ರದೇಶ ಎಂದು ಕರೆಯುಲಾಗುತ್ತದೆ.

ಈ ಕೆರೆಯು ಸಂಸ್ಥಾನಿಕರ ಕಾಲದಲ್ಲಿ ಸದಾ ತುಂಬಿ ಹರಿಯುತ್ತಿದ್ದು, ಇಂದಿಗೂ ಬತ್ತಿರುವುದನ್ನು ಕಾಣುವುದನ್ನು ಕಾಣುವುದಿಲ್ಲ. ಸ್ವಲ್ಪ ಪ್ರಮಾಣದಲ್ಲಿಯಾದರೂ ನೀರು ಕಂಡುಬರುತ್ತದೆ. ಯಾವಗಲಾದರೂ ಭಾರೀ ಪ್ರಮಾಣದ ಮಳೆಯುಂಟಾದಾಗ ಮಾತ್ರ ತುಂಬಿ ಹರಿಯುತ್ತದೆ. ಅದನ್ನು ನೋಡಲು ಕಣ್ಣಳೆರಡು ಸಾಲದು. ಜಲಪಾತದಂತೆ ನೀರು ಹರಿಯುವುದು ಈ ರಮಣೀಯ ದೃಶ್ಯವನ್ನು ನೋಡಲು ನಗರದ ಜನರೆಲ್ಲರೂ ತಮ್ಮ ಕುಟುಂಬದವರೊಡನೆ ಬರುವುದನ್ನು ಕಾಣಬಹುದು. ಹೀಗೆ ಈ ಕೆರೆ ಜನರಿಗೆ ಮನರಂಸುವ ಕೆರೆಯಾಗಿದೆ ಎನ್ನಬಹುದು. ಅದರಲ್ಲಿನ ಹೆಚ್ಚಾದ ನೀರು ರಾಮೇಶ್ವರ ದೇವಾಲಯದ ಮುಂದಿನ ಪುಷ್ಕರಣಿಗೆ ಬಂದು ಸೇರುತ್ತದೆ. ಅಲ್ಲಿಂದ ದೇವಾಲಯದ ಎಡಬದಿಗೆ ಇರುವ ಹೊಂಡಕ್ಕೆ ಬಂದು ಸೇರುತ್ತದೆ. ಅಲ್ಲಿನ ನೀರು ಹೊಂಡದ ಉತ್ತರ ದಿಕ್ಕಿನ ಕೆಳಭಾಗದಲ್ಲಿರುವ ಮಾವಿನ ತೋಪಿನಲ್ಲಿರುವ ಹೊಂಡ ಅಥವಾ ಕೊಳದಲ್ಲಿ ಬಂದು ಸೇರುತ್ತದೆ. ಈ ಹೊಂಡವನ್ನು ಸಂಸ್ಥಾನಿಕರು ನಿರ್ಮಿಸಿದ್ದಾರೆ. ಬಹುಶಃ ಮೇಲಿನ ಕೆರೆ, ಪುಷ್ಕರಣಿ, ಹಾಗೂ ಹೊಂಡದಿಂದ ಬರುವ ನೀರು ಪೋಲಾಗದಂತೆ, ಸಂಗ್ರಹಿಸಲೆಂದೇ ಇದನ್ನು ನಿರ್ಮಿಸಿರಬಹುದು. ಅರಮನೆಯ ಬಲಬದಿಗೆ ಒಂದು ಉದ್ಯಾನವನ್ನು ನಿರ್ಮಿಸಿ ಆ ಮೇಲಿನಿಂದ ಹರಿದು ಬರುವ ನೀರನ್ನು ಈ ಉದ್ಯಾನವನಕ್ಕೆ ಹರಿಸಲಾಗುತ್ತಿತ್ತು. ಇಲ್ಲಿ ಸಾಕಷ್ಟು ಮಾವಿನ ಮರಗಳು ಇಲ್ಲಿ ಇರುವುದು ಕಂಡುಬರುತ್ತವೆ. ಈ ಹೊಂಡದಲ್ಲಿ ತಾವರೆ ಹೂವನ್ನು ಬೆಳಸಲಾಗುತ್ತಿದೆ. ಆದರೆ ಈ ಉದ್ಯಾನವನ್ನು ನಮಗೆ ನೋಡಲು ಇಂದು ಸಿಗುವುದಿಲ್ಲ.

ಕೆರೆಯ ಉತ್ತರಕ್ಕೆ ಕಟ್ಟಲ್ಪಟ್ಟ ಕಲ್ಲಿನ ಗೋಡೆಯ ೩೦ ಅಡಿಯ ಎತ್ತರವಾಗಿದ್ದು, ಇದರಿಂದ ಕಲ್ಲಿನ ಜೋಡಣೆಯು ಕ್ರಮಬದ್ಧವಾಗಿದ್ದು, ಈ ಗೋಡೆಗೆ ಕಬ್ಬಿಣ ಬಳೆಗಳನ್ನು ಹಾಕಿರುವುದು ಕಂಡು ಬರುತ್ತದೆ. ಈ ಕೆರೆಯ ಆಳ ಸುಮಾರು ೩೦ ರಿಂದ ೩೫ ರಷ್ಟು ಅಡಿ ಆಳವಾಗಿದೆ. ಪೂರ್ವ–ಪಶ್ಚಿಮವಾಗಿ ೧೪೦ ಮೀ. ನಷ್ಟು ದಕ್ಷಿಣೋತ್ತರವಾಗಿ ೨೦೦ ಮೀ. ರಷ್ಟು ಉದ್ದವಾಗಿದೆ. ಉತ್ತರಕ್ಕಿರುವ ಕಲ್ಲಿನ ಗೋಡೆಯಿಂದ ೧೦ ಅಡಿಯಷ್ಟು ದೂರದಲ್ಲಿ ಗೋಡೆಯ ಒಳಮಗ್ಗಲಲ್ಲಿ ಗಡಿಗ ತೂಬನ್ನು ನಿರ್ಮಿಸಿದ್ದನ್ನು ಕಾಣುತ್ತೇವೆ. ಈ ತೂಬಿಗೆ ಲೋಹದ ಬಳೆಯನ್ನು ಅಳವಡಿಸಿದ್ದನ್ನು ಕಾಣಬಹುದು. ಈ ತೂಬಿಗೆ ಪೂರ್ವ–ಪಶ್ಚಿಮವಾಗಿ ೨೫ ಅಡಿ ಉದ್ದವಿರುವ ಕಬ್ಬಿಣದ ದಪ್ಪವಿರುವ ಸಲಾಕೆಯನ್ನು ಅಳವಡಿಸಲಾಗಿದೆ. ಇಲ್ಲಿಂದ ನೀರು ಹರಿದು ಹೋಗಿ ಸಂಗ್ರಹಗೊಳ್ಳಲು ಗೋಡೆಯಿಂದ ಉತ್ತರಕ್ಕೆ

೨೦ ಮೀ. ದೂರದಲ್ಲಿ, ೧೦ ಅಡಿ ಆಳದ ತೊಟ್ಟಿಯನ್ನು ನಿರ್ಮಿಸಲಾಗಿದೆ. ಇದರಿಂದ ಮುಂದಿನ ಪುಷ್ಕರಣಿಗೆ ನೀರು ಹಾಯ್ದು ಹೋಗುವಂತೆ ವ್ಯವಸ್ಥೆ ಮಾಡಲಾಗಿದೆ. ಪಶ್ಚಿಮ ಭಾಗದಲ್ಲಿ ೨೦೦ ಮೀ. ಉದ್ದದ ಗೋಡೆಯನ್ನು ನಿರ್ಮಿಸಲಾಗಿದೆ. ಇತ್ತೀಚಿಗೆ ಅದು ಬಿದ್ದು ಹೋಗಿದೆ. ಈ ಗೋಡೆಯ ಪಕ್ಕದಲ್ಲಿ ೧೦ ಅಡಿ ಉದ್ದ, ೧೦ ಅಡಿ ಅಗಲ ಆಕಾರದ ೨೫ ಅಡಿ ಆಳದ ಒಂದು ತೊಟ್ಟಿ ಇದೆ. ಆದರೆ ಈ ಕೆರೆಗೆ ಮತ್ತು ಇದಕ್ಕೆ ಯಾವುದೇ ಸಹಸಂಬಂಧವಿಲ್ಲ. ಯಾವುದೇ ಕೊಳವೆಗಳ ಜೋಡಣಾ ವ್ಯವಸ್ಥೆಯಿಲ್ಲ. ಪೂರ್ವದ ಈಶಾನ್ಯ ಭಾಗಕ್ಕೆ ಕಂಡು ಬರುವ ಈ ಮೂರು ನಾಲೆಗಳು ಮುಂದೆ ಎಲ್ಲಿಯೂ ಸೇರಿದೆ ಅಲ್ಲಿಗೆ ಹೊಂದಿಕೊಂಡಿರುವ ಗುಡ್ಡದ ಭಾಗಕ್ಕೆ ಕೊನೆಗೊಳ್ಳುತ್ತದೆ. ಇದರಿಂದ ನಮಗೆ ತಿಳಿಯುವುದೆನೆಂದರೆ, ಹೊರಗಿನ ನೀರನ್ನು ಕೆರೆಗೆ ಸೇರಿಸುವ ನಾಲೆಗಳಾಗಿವೆ. ನಾಲೆಗಳಲ್ಲಿ ಎರಡು ವಿಧಗಳನ್ನು ಕಾಣುತ್ತೇವೆ. ಒಂದು ಕೆರೆಯ ನೀರು ಹೊರಗೆ ಹೋಗುವ, ಹೊರಗಿನ ನೀರು ಒಳಗೆ ಬರುವ ನಾಲೆಗಳು. ಕಂಡು ಬರುವ ನಾಲೆಗಳು ಗುಡ್ಡದ ಮೇಲಿನ ನೀರೆಲ್ಲವೂ ಇವುಗಳ ಮೂಲಕ ಬಂದು ಕೆರೆಗೆ ಸೇರಲು ನಿರ್ಮಿಸಲಾಗಿದೆ.

ಈ ಕೆರೆಗೆ ಇರುವ ನಾಲೆಯ ಪಕ್ಕದಲ್ಲಿ ಮಣ್ಣಿನಿಂದ ಒಡ್ಡನ್ನು ನಿರ್ಮಿಸಲಾಗಿದೆ. ಇದು ನಾಲೆಯ ಪಕ್ಕದಲ್ಲಿ ಬಿದ್ದಿದ್ದು ಮುಂದಿನದು ಇಂದಿಗೂ ಕಂಡು ಬರುತ್ತದೆ. ಕೆರೆಯ ವಾಯುವ್ಯ ಭಾಗದಲ್ಲಿ ಕೊಳವೆಯನ್ನು ಅಳವಡಿಸಿದ್ದು ಅದು ಇತ್ತೀಚಿಗೆ ಕೆರೆಯಲ್ಲಿರುವ ನೀರನ್ನು ಕಟ್ಟಡಕ್ಕಾಗಿ, ಇನ್ನಿತರ ಕಾರ್ಯಗಳಿಗೆ ನೀರನ್ನು ಸರಬರಾಜು ಮಾಡಿಕೊಳ್ಳಲು ನಿರ್ಮಿಸಿರಬಹುದೆಂದು ಊಹಿಸಲಾಗಿದೆ. ಕೆರೆಂಟುಲ್ಲಿ ಕಟ್ಟಲಾಗಿರುವ ಮೆಟ್ಟಿಲುಗಳನ್ನು ಪೂರ್ವಂತೋಚಿತವಾಗಿ, ಕ್ರಮಬದ್ಧವಾಗಿ ನಿರ್ಮಿಸಲಾಗಿರುವುದನ್ನು ಕಾಣಬಹುದು. ಇವುಗಳ ನಿರ್ಮಾಣದ ರೀತಿಯ ಮೆಟ್ಟಿಲುಗಳು ವಿಜಯನಗರದ ಯಾವ ಕೆರೆಯಲ್ಲಿಯೂ ಕಂಡು ಬರುವುದಿಲ್ಲ. ೧೦ ಸಣ್ಣ ಪಾವಟಿಗೆಗಳಂತೆ ಹಂತ ಹಂತವಾಗಿ ಪಾವಟಿಗೆಗಳನ್ನು ನಿರ್ಮಿಸಲಾಗಿದೆ. ಇವುಗಳ ಕೆಳಭಾಗದಲ್ಲಿ ಕಮಾನಿನಾಕಾರಾದಲ್ಲಿರುವ ದ್ವಾರಗಳಿರುವುದನ್ನು ಕಾಣಬಹುದು. ಇವುಗಳ ಒಳಗೆ ೧೦ ಅಡಿಯಷ್ಟು ಉದ್ದವಿದ್ದು ಇಲ್ಲಿಯೂ ನೀರು ಸಂಗ್ರಹಗೊಳ್ಳುತ್ತದೆ. ಮುಖ್ಯವಾಗಿ ನಾಲ್ಕು ಕಮಾನಿನ ದ್ವಾರಗಳು ಕಂಡು ಬರುತ್ತವೆ.

ಮೊದಲನೆಯ ಕಮಾನು ಕುದುರೆ ಲಾಳಾಕೃತಿಯಂತೆ, ಎರಡನೆಯದು ಮೊದಲನೆಯದಕ್ಕಿಂತ ಸ್ವಲ್ಪ ಚಿಕ್ಕದು, ಆದರೆ ಇದರ ಮುಂದಿನ ಭಾಗ ತ್ರಿಕೋನವಾಗಿದ್ದು ಎರಡು ಗೋಡೆಯ ತುದಿ ಒಂದೇ ಕಡೆ ಸೇರುತ್ತದೆ. ಮೂರನೆಯದು ಎರಡನೆಯದಕ್ಕಿಂತ ಸ್ವಲ್ಪ ಚಿಕ್ಕದು ಹಾಗೂ ಇದು ಮೊದಲನೆಯ ಕಮಾನಿನ ದ್ವಾರವನ್ನು ಹೋಲುತ್ತದೆ. ನಾಲ್ಕನೆಯದು ಚೌಕಾಕಾರವಾಗಿದ್ದು ಮೊದಲನೆ ಮೂರುವುಗಳಿಗಿಂತ ಚಿಕ್ಕದಾಗಿದೆ. ಇವುಗಳ ಆಕಾರವು ಬೇರೆ ಬೇರೆಯಾಗಿ ಕಂಡುಬರುವುದರಿಂದ ನಮಗೆ ತಿಳಿಯುವ ಒಂದು ಮುಖ್ಯ ಅಂಶವೇನೆಂದರೆ, ಕೆರೆಯನ್ನು ನಿರ್ಮಿಸಿದವರು ತಮ್ಮ ಕೌಶಲ್ಯವನ್ನು ಹೀಗೆ ವಿವಿಧ ಆಕಾರಗಳಲ್ಲಿ ನಿರ್ಮಿಸುವ ಮೂಲಕ ತೋರಿಸಿದ್ದಾರೆನ್ನಬಹುದು. ಆದರೆ ಇವುಗಳನ್ನು ಹೀಗೇಕೆ ನಿರ್ಮಿಸಿದರು ಎಂಬುದಕ್ಕೆ, ವಿವಿಧ ವ್ಯಕ್ತಿಗಳು ತಮ್ಮದೇಯಾದ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಕೆರೆಯ ಅಂದವನ್ನು ಹೆಚ್ಚಿಸಲು, ಕುಶಲಕಾರರು ಕೆರೆಯನ್ನು ನಿರ್ಮಿಸುವಲ್ಲಿ ವಿವಿಧ ಕೌಶಲ್ಯವನ್ನು ತೋರಿಸುವ ಸಲುವಾಗಿ ಹಾಗೂ ಕೆರೆಯಲ್ಲಿರುವ ಜಲಚರ ಪ್ರಾಣಿಗಳಿಗೆ ಮುಕ್ತವಾಗಿ ಚಲಿಸಲು ಅವಕಾಶ ಕಲ್ಪಿಸುವುಕ್ಕಾಗಿ ಮತ್ತು ಪಾವಟಿಗೆಯನ್ನು ನಿರ್ಮಾಣಮಾಡುವಾಗ ಕೆರೆಯ ಅರ್ಧಭಾಗವು

ಸ್ಥಳವನ್ನು ಅಕ್ರಮಿಸಿವುದರಿಂದ ನೀರಿನ ಸಂಗ್ರಹದಲ್ಲಿ ಅವ್ಯವಸ್ಥೆ ಉಂಟಾಗಬಾರದು ಎಂಬ ಕಾರಣದಿಂದ ನಿರ್ಮಿಸಲಾಗಿದೆ. ಈ ಕಮಾನಿನೊಳಗೆ ನೀರು ಸೇರುವುದರಿಂದ ಕೆರೆಯಲ್ಲಿ ನೀರು ಸಂಗ್ರಹಕ್ಕೆ ಅಡಚಣೆಯಾಗದೆ. ಅನುಕೂಲವಾಗುವುದು.

ಇತ್ತೀಚಿಗೆ ಅರಣ್ಯ ಇಲಾಖೆಯವರು ಈ ಕೆರೆಯ ಉತ್ತರ ಭಾಗಕ್ಕೆ ಹಾಗೂ ಪಶ್ಚಿಮ ಭಾಗಕ್ಕೆ ಸಸಿಗಳನ್ನು ನೆಡಲಾಗಿದ್ದು, ಮರಗಳನ್ನು ಬೆಳೆಸುವ ಯೋಜನೆಯನ್ನು ಹಾಕಿಕೊಂಡಿದೆ. ಇದನ್ನು ಜಲಾನಯನ ಭಾಗ ಎನ್ನಲಾಗಿದೆ. ಇದನ್ನು ನೋಡಿದಾಗ ನಮಗೆ ತಿಳಿಯುವುದೆನೆಂದರೆ, ನಿರ್ಜನ ಪ್ರದೇಶದಿಂದಾಗಿ ಕೆರೆಗಳು ಹಾಳಾಗುವ ಸ್ಥಿತಿಯಲ್ಲಿರುವುದರಿಂದ ಅವುಗಳನ್ನು ಉಳಿಸುವ ನಿಟ್ಟಿನಲ್ಲಿ ಈ ಯೋಜನೆಯನ್ನು ಹಮ್ಮಿಕೊಂಡಿದೆ. ಅರಮನೆಯ ಎಡಭಾಗದಲ್ಲಿ ಈಜುಕೊಳವಿದ್ದು, ಇದಕ್ಕೆ ಈ ಕೆರೆಯಿಂದಲೇ ನೀರನ್ನು ಪೂರೈಸಲಾಗುತ್ತಿತ್ತು. ನೀರು ಸರಬರಾಜು ಮಡಲು ಕೊಳವೆ ವ್ಯವಸ್ಥೆಯನ್ನು ಅಳವಡಿಸಲಾಗಿದೆ. ಅಂದಿನ ಅರಮನೆಯ ಆವರಣದಲ್ಲಿ ವಾಸಿಸುತ್ತಿದ್ದ ಜನರಿಗಾಗಿ ಉಪಯೋಗವಾಗಲೆಂದು ಗುಡ್ಡದಲ್ಲಿ ನೀರನ್ನು ಸಂಗ್ರಹಿಸಿ ಕೆರೆಯನ್ನು ನಿರ್ಮಿಸಲಾಗಿತ್ತು. ಇಂತಹ ಯೋಜನಾಬದ್ಧವಾಗಿರುವ ಕೆರೆಯನ್ನು ಯಾವ ಅರಸರ ಕಾಲದಲ್ಲಿಯೂ ಕಂಡು ಬರುವುದಿಲ್ಲ.

೬) ಗಾಣಗಿತ್ತಿ ಕೆರೆ :

ಅರಮನೆಯ ಹಿಂಭಾಗದಲ್ಲಿರುವ ರಾಮತೀರ್ಥ ಈ ಕೆರೆಯಿಂದ ಅರ್ಧ ಕಿ.ಮೀ.ಕ್ಕೂ ಸ್ವಲ್ಪ ದೂರದಲ್ಲಿ ಹೋದರೆ ನಮಗೆ ಇನ್ನೊಂದು ಕೆರೆಯಿರುವುದು ಕಂಡುಬರುತ್ತದೆ. ಇದನ್ನು ವ್ಯವಸ್ಥಿತವಾಗಿ ನಿರ್ಮಿಸಿದ್ದು, ಇದನ್ನು ಗಾಣಗಿತ್ತಿ ಕೆರೆ ಎಂದು ಕರೆಯುವರು. ಈ ಕೆರೆಯು ಸಹ ಮೊದಲಿದ್ದ ರಾಮತೀರ್ಥ ಕೆರೆಯನ್ನೇ ಹೋಲುತಿದ್ದು, ರಾಮತೀರ್ಥ ಕೆರೆ ಹಾಗೂ ಗಾಣಗಿತ್ತಿ ಈ ಕೆರೆ ಎರಡೂ ಒಂದೇ ಕಣಿವೆ ಮಾರ್ಗದಲ್ಲಿದ್ದು ಎತ್ತರವಾಗಿರುವ ಈ ಕೆರೆಯಿಂದ ಹೆಚ್ಚಾದ ನೀರು ರಾಮತೀರ್ಥ ಕೆರೆಗೆ ಹರಿದು ಹೋಗುತ್ತದೆ. ಈ ಕೆರೆಯ ಕಟ್ಟೆಯ ಮೇಲ್ಭಾಗದಲ್ಲಿ ಕಲ್ಲು ಮಣ್ಣಿನಿಂದ ನಿರ್ಮಿಸಿದ ಏರಿಯನ್ನು ಕಾಣಬಹುದು. ಏರಿಯ ಪೂರ್ವಭಾಗದಲ್ಲಿ ಒಡೆದು ಹೋಗಿದೆ. ಕೆರೆಯನ್ನು ಅಚ್ಚುಕಟ್ಟಾಗಿ ಚೌಕಾಕಾರದ ಕಲ್ಲಿನಿಂದ ಕಟ್ಟಿದ ೨೦ ಮೀ. ಎತ್ತರ ಹಾಗೂ ೧೬೦ ಮೀ. ಉದ್ದದ ಕಟ್ಟೆಯಿದೆ. ಇದು ೬ ಅಡಿಯಷ್ಟು ದಪ್ಪವಿದೆ. ಕೆರೆಯ ಕಟ್ಟೆ ಮತ್ತು ಏರಿಯ ಮಧ್ಯೆ ೩೦ ರಿಂದ ೩೫ ಅಡಿಯಷ್ಟು ಅಂತರವಿದೆ. ಈ ಕಲ್ಲಿನ ಕಟ್ಟೆಗೆ ಆಧಾರವಾಗಿರಲೆಂದು ೩೦-೩೫ ಅಡಿಯಷ್ಟು ಅಂತರದಲ್ಲಿ ಏರಿಯನ್ನು ನಿರ್ಮಿಸಲಾಗಿದೆ. ಈ ಕೆರೆಯ ಉತ್ತರಕ್ಕೆ ಇರುವ ಕಟ್ಟೆಯ ಮಧ್ಯಭಾಗದಲ್ಲಿ ಅಚ್ಚುಕಟ್ಟಾದ ಚೌಕಾಕಾರದ ಕಲ್ಲಿನಿಂದ ಕಮಾನಿನಾಕಾರದ ದ್ವಾರವನ್ನು ನಿರ್ಮಿಸಿದ್ದು ಅದರಲ್ಲಿ ರಂಧ್ರ ತೂಬನ್ನು ನಿರ್ಮಿಸಲಾಗಿದೆ. ಈ ತೂಬಿನ ಮೂಲಕ ನೀರು ಕಟ್ಟೆಯಿಂದ ೨೫ ಮೀ. ದೂರದಲ್ಲಿ ತೂಬುಗಳಿಂದ ಹರಿದು ಬರುವ ನೀರನ್ನು ಕಸಕಡ್ಡಿಗಳಿಂದ ಮುಕ್ತಗೊಳಿಸಲು ನಿರ್ಮಿಸಿರುವ ತೊಟ್ಟಿಯು ಕಂಡು ಬರುತ್ತದೆ. ಇದನ್ನು ಮ್ಯಾನ್ ಹೋಲ್‌ಗಳೆಂದೇ ಕೆರಯಬಹುದು. ಉತ್ತರಕ್ಕೆ ಚೌಕಾಕಾರವಾಗಿರುವ ಈ ಕೆರೆಯು ದಕ್ಷಿಣಕ್ಕೆ ಹೋದಂತೆ ಇಕ್ಕಟಾಗಿದ್ದು, ನೈಸರ್ಗಿಕ ಕಲ್ಲಿನಿಂದ ನಿರ್ಮಿತವಾಗಿದೆ. ಇದರ ಮೇಲ್ಭಾಗವನ್ನು ತಿಳಿಯಬಹುದು. ಜಲಾನಯನ ಪ್ರದೇಶವಾಗಿದೆ. ಗುಡ್ಡದ ಮೇಲಿನ ನೀರೆಲ್ಲವೂ ಈ ಭಾಗದಿಂದ ಕೆರೆಗೆ ಬಂದು ಸೇರುತ್ತದೆ. ಈ ಕೆರೆಯಿಂದ ತೂಬಿನ ಮೂಲಕ ಮುಂದಿನ ರಾಮತೀರ್ಥ ಕೆರೆಗೆ ನೀರು

ಹರಿದು ಹೋಗುತ್ತದೆ. ಅಲ್ಲಿಂದ ದೇವಾಲಯದ ಮುಂದಿನ ಪುಷ್ಕರಣಿಗೆ, ನಂತರ ಹೊಂಡಕ್ಕೆ, ಅಲ್ಲಿಂದ ಮುಂದಿನ ಆನೆ ಕೆರೆಗೆ ಬಂದು ಸೇರುತ್ತವೆ. ಇಂದು ಈ ಕೆರೆಯ ನೀರು ಗುಡ್ಡದಲ್ಲಿ ಮೇಯಲು ಬಂದ ದನಕರುಗಳಿಗೆ, ಕುರಿಗಳಿಗೆ ಉಪಯೋಗವಾಗಿದೆ.

ಗಾಣಗಿತ್ತಿ ಕೆರೆಯು ತುಂಬಿದ ನಂತರ ಹೆಚ್ಚಾದ ನೀರೆಲ್ಲವನ್ನು ರಂಧ್ರ ತೂಬಿನ ಮೂಲಕ ರಾಮತೀರ್ಥ ಕೆರೆಗೆ ಹರಿಯ ಬಿಡಲಾಗುತ್ತಿತ್ತು. ಈ ಕೆರೆಗೆ ದಕ್ಷಿಣ ಭಾಗ ಹಾಗೂ ಪೂರ್ವ, ಪಶ್ಚಿಮ ಭಾಗದ ಗುಡ್ಡದಿಂದ ನೀರ ಝರಿಗಳು ಬಂದು ನೀರನ್ನು ಸಂಗ್ರಹಿಸುತ್ತಿದ್ದವು. ಇದರ ದಕ್ಷಿಣ ಭಾಗಕ್ಕೆ ಹೋದಂತೆ ಮತ್ತೊಂದು ಕೆರೆಯು ಕಂಡು ಬರುವುದು. ಆದರೆ ಅದನ್ನು ಯೋಜನಾಬದ್ಧವಾಗಿ ನಿರ್ಮಿಸಿಲ್ಲ. ಅಲ್ಲಿನ ನೀರೂ ಸಹ ಈ ಕೆರೆಗೆ ಬಂದು ಸೇರುತ್ತದೆ. ಈ ಕೆರೆಯು ಇಂದು ಕುರಿಗಳಿಗೆ, ಜಾನುವಾರುಗಳಿಗೆ ಉಪಯುಕ್ತವಾಗಿದೆ. ಇಂದು ಇಲ್ಲಿ ಜನವಸತಿ ಇಲ್ಲದ ಕಾರಣ ಇವುಗಳಲ್ಲಿನ ನೀರನ್ನು ಉಪಯೋಗವಾಗುತ್ತಿಲ್ಲ. ಆದರೆ ಈ ಕೆರೆ ಇಂದು ಇಂದಿನ ಪೀಳಿಗೆಯವರಿಗೆ ಅಂದಿನವರ ನಿರ್ಮಾಣ ಕೌಶಲ್ಯವನ್ನು ತಿಳಿಯಲು ಅವಕಾಶವನ್ನು ಒದಗಿಸಿಕೊಟ್ಟಿದೆ. ಇದು ರಾಮತೀರ್ಥ ಕೆರೆಗಿಂತಲೂ ಎತ್ತರದಲ್ಲಿದೆ. ಇದರಿಂದ ಅರ್ಧ ಕಿ.ಮೀ. ದೂರದಲ್ಲಿ ಕೃಷಿ ಭೂಮಿ ಇರುವುದು ಕಂಡು ಬರುತ್ತದೆ. ಇದು ಕೆರೆಯ ಆಯಕಟ್ಟು ಪ್ರದೇಶವಾಗಿದೆ.

೭) ಗುಳ್ಳವನ ಕೆರೆ :

ಜಮಖಂಡಿಯ ಪಾಯುವ್ಯ ಭಾಗಕ್ಕೆ ಈ ಮೇಲೆ ಚರ್ಚಿಸಿದ ಎಲ್ಲ ಕೆರೆಗಳಿಗಿಂತಲೂ ಅತ್ಯಂತ ಕೆಳಮಟ್ಟದಲ್ಲಿರುವ ಈ ಕೆರೆಯು ಕಡಪಟ್ಟಿ ಗ್ರಾಮದಲ್ಲಿ ಕಂಡುಬರುತ್ತದೆ. ಇತ್ತೀಚೆಗೆ ಕಡಪಟ್ಟಿಗೆ ಸೇರಿದ್ದಾಗಿದೆಯಾದರೂ ಮೊದಲಿಗೆ ಜಮಖಂಡಿಯ ಸರಹದ್ದಿನಲ್ಲೇ ಇರುವುದು ಕಂಡು ಬರುತ್ತದೆ. ಇದು ತ್ರಿಕೋನಾಕಾರದಲ್ಲಿ ಕಂಡುಬರುತ್ತದೆ. ಈ ಕೆರೆಯ ಉತ್ತರ ಭಾಗದಲ್ಲಿ ಕಡಪಟ್ಟಿ ಪವಾಡ (ಸಣ್ಣ) ಬಸವೇಶ್ವರ ದೇವಾಲಯವಿದೆ. ದಕ್ಷಿಣಕ್ಕೆ ಕುಡಚಿ ರಸ್ತೆಯಿದೆ. ಪೂರ್ವಕ್ಕೆ ಪ್ರಭಾತ ನಗರವಿದೆ. ಇನ್ನು ಪಶ್ಚಿಮಕ್ಕೆ ಕಡಪಟ್ಟಿಗೆ ಊರಳೊಳಗೆ ಹೋಗುವ ರಸ್ತೆಯಿದೆ. ಇವೆಲ್ಲವುಗಳಿಂದ ಸುತ್ತುವರಿದಿರುವ ಈ ಕೆರೆಯನ್ನು ಗುಳ್ಳವನ ಕೆರೆಯೆನ್ನಲು ಏನು ಕಾರಣವಿರಬಹುದು ಎಂಬುದನ್ನು ಮುಖ್ಯವಾಗಿ ಇಲ್ಲಿ ತಿಳಿಯಬಹುದು. ಅದೇನೆಂದರೆ, ಗ್ರಾಮೀಣ ಹಬ್ಬಗಳಲ್ಲಿ ಒಂದೆನಿಸಿಕೊಂಡಿರುವ ಗುಳ್ಳವನ ಹಬ್ಬದಂದು ಗುಳ್ಳವನನ್ನು ತಯಾರಿಸಲು ಬೇಕಾದ ಮಣ್ಣು ಈ ಕೆರೆಯ ಮೇಲ್ಕಂಡ ಕೆರೆಯಲ್ಲಿ ದೊರೆಯುತ್ತಿದ್ದು, ಇಲ್ಲಿಂಯೇ ಗುಳ್ಳವನನ್ನು ತಯಾರಿಸಲಾಗುತ್ತಿದ್ದರಿಂದ ಈ ಕೆರೆಯನ್ನು ಗುಳ್ಳವನ ಕೆರೆಯೆಂದು ಕರೆಯಲಾಗುತ್ತದೆ. ಈ ಹಬ್ಬವನ್ನು ಆಷಾಡ ಮಾಸದ ಪ್ರತಿ ಮಂಗಳವಾರ ದಿನದಂದು ಮಣ್ಣಿನಿಂದ ಗುಳ್ಳವ ಎಂಬ ಮೂರ್ತಿಯನ್ನು ತಯಾರಿಸಿ ಅದನ್ನು ಪೂಜೆ ಮಾಡಿ ಮರುದಿನ ಬುಧವಾರದಂದು ಬುತ್ತಿ ಕಟ್ಟಿಕೊಂಡು ಸ್ನೇಹಿತರೆಲ್ಲರೂ ಸೇರಿಕೊಂಡು ಯಾವುದಾದರೊಂದು ಸ್ಥಳಕ್ಕೆ ಹೋಗಿ ಊಟ ಮಾಡಿ, ಆಟ ಆಡಿ, ಸಂತೋಷದಿಂದ ಮನೆಗೆ ತೆರಳುತ್ತಾರೆ. ಆ ಒಂದು ಮಾಸ ಪೂರ್ತಿಯಾಗಿ ಈ ಹಬ್ಬವನ್ನು ಆಚರಿಸುತ್ತಾರೆ.

ಇದರ ಉತ್ತರಕ್ಕೆ ದೇಸಾಯಿಂಯವರ ತೋಟವಿದೆ. ಪೂರ್ವದಲ್ಲಿರುವ ಪ್ರಭಾತ ನಗರವು ಇತ್ತೀಚಿಗೆ ನಿರ್ಮಾಣವಾಗಿದ್ದು, ಮೊದಲು ಇಲ್ಲಿ ಕೃಷಿ ಭೂಮಿ ಇತ್ತೆಂದು ತಿಳಿಯಲಾಗಿದೆ. ಈ ವ್ಯವಸಾಂಯ ಪ್ರದೇಶಕ್ಕೆ ನೀರನ್ನು ಒದಗಿಸುತ್ತಿತ್ತು. ಆದರೆ ಇಂದು ಪೂರ್ವದಲ್ಲಿ ನಿವೇಶನಗಳು ನಿರ್ಮಾಣವಾಗುತ್ತಿದ್ದು, ಮಣ್ಣಿನಿಂದ ಏರಿಂಯನ್ನು ನಿರ್ಮಿಸಿ ಕೆರೆಂಯ ವ್ಯಾಪ್ತಿಂಯನ್ನು ಸೀಮಿತಗೊಳಿಸಲಾಗಿದೆ. ಉತ್ತರಕ್ಕೆ ಬಸವೇಶ್ವರ ದೇವಾಲಂಯದ ಅರ್ಚಕರು ನಿವೇಶನಗಳನ್ನು ನಿರ್ಮಿಸಿಕೊಳ್ಳಲು ಕೆರೆಂಯ ಭಾಗವನ್ನು ಒತ್ತುವರಿ ಮಾಡಿಕೊಂಡಿದ್ದಾರೆ. ಹಾಗೂ ಇಲ್ಲಿನ ಜನರಿಗೆ ಕೆರೆ ಂಯಾವುದೇ ರೀತಿಂಯ ಉಪಯುಕ್ತ ಕಾರ್ಯಕ್ಕೆ ಉಪಯೋಗವಾಗುತ್ತಿಲ್ಲ. ಆದರೆ ಪ್ರಭಾತ ನಗರದ ಜನರು ತಮ್ಮ ಮನೆಂಯಲ್ಲಿ ಹಾಕಿಸಿಕೊಂಡಿರುವ ಕೊಳವೆ ಬಾವಿಗಳಿಗೆ ಅಂತರ್ಜಲವನ್ನು ಒದಗಿಸುತ್ತದೆ. ಹಾಗೂ ದನಕರುಗಳಿಗೆ ಕುಡಿಯಲು ಸಹಾಯವಾಗುತ್ತದೆ.

ಈ ಕೆರೆಗೆ ನೀರಿನ ಪ್ರಮಾಣ ಮಳೆಯು ಹೆಚ್ಚಾದಾಗ ಹೆಚ್ಚಾಗುತ್ತದೆ. ಈ ಕೆರೆಯ ದಕ್ಷಿಣ ಭಾಗದಲ್ಲಿ ಹಾಗೂ ಪಶ್ಚಿಮ ಭಾಗದಲ್ಲಿ ಕೆಲವು ಅಂಗಡಿ ಮುಗ್ಗಟ್ಟಗಳನ್ನು ಹಾಕಲಾಗಿತ್ತು. ಇದರಿಂದ ಕೆರೆಯ ಸ್ವಲ್ಪ ಭಾಗವು ಕಡಿಮೆಯಾಗಿತ್ತು. ಆದರೆ ಇತ್ತೀಚಿಗೆ ಅಂದರೆ ೨೦೦೯ ರಲ್ಲಿ ನಗರಸಭೆಯು ಎಲ್ಲ ಅಂಗಡಿ ಮುಗ್ಗಟ್ಟಗಳನ್ನು ನೆಲಸಮಗೊಳಿಸಲಾಯಿತು. ಹಾಗೂ ಕಡಪಟ್ಟಿ ಗ್ರಾಮಕ್ಕೆ ಹೋಗುವ ರಸ್ತೆಯನ್ನು ಅಗಲೀಕರಣ ಮಾಡಿದ್ದರಿಂದಾಗಿ ಕೆರೆಯ ದಂಡೆಯ ಭಾಗವು ಕಡಿಮಯಾಗಿದೆ ಎನ್ನಬಹುದು. ಕೆರೆಯ ವಿರುದ್ದ ದಿಕ್ಕಿನಲ್ಲಿ ಪೂರ್ವ ಭಾಗದಲ್ಲಿ ಬಯಲು ಪ್ರದೇಶವಿದೆ. ಮೊದಲು ಅದು ಆಯಕಟ್ಟು ಪ್ರದೇಶವಾಗಿದ್ದು, ಅಲ್ಲಿ ವ್ಯಯಸಾಯ ಮಾಡಲಾಗುತ್ತಿತ್ತು ಎಂದು ತಿಳಿಯಲಾಗಿದೆ. ಈ ಕೆರೆಯನ್ನು ಜನರು ಯಾವ ಮಟ್ಟದಲ್ಲಿ ಉಪಯೋಗಿಸುತ್ತಾರೆ ಎಂಬುದಕ್ಕೆ ಇಲ್ಲೊಂದು ಮಾಹಿತಿ ದೊರೆಯುತ್ತದೆ. ಈ ಕೆರೆಯಲ್ಲಿ ಶೌಚಾಲಯದ ಕೊಳವೆಯನ್ನು ಹಾಯಿಸಲಾಗಿದ್ದು ಕೆರೆ ಎಷ್ಟು ತುಂಬಿದ್ದರು ಕೆಲವೇ ದಿನಗಳಲ್ಲಿ ಇಂಗಿ ಹೋಗುತ್ತದೆ. ಇದಕ್ಕೆ ಕಾರಣಗಳನ್ನು ಹುಡುಕಿದರೆ ತಿಳಿಯುವ ಒಂದು ಅಂಶವೆಂದರೆ, ಇದರಲ್ಲಿರುವ ಶೌಚಾಲಯ ನೀರು ಹರಿದು ಹೋಗಲು ಅಳವಡಿಸಿರುವ ಮ್ಯಾನಹೊಲಗಳನ್ನು ನಿರ್ಮಿಸಿದ್ದು ಕೆರೆಯು ತುಂಬಿದಾಗ ಜನರು ತಮ್ಮ ಮನೆಗಳಿಗೆ ಧಕ್ಕೆಯಾಗುವುದನ್ನು ತಡೆಯಲು ಈ ಮ್ಯಾನಹೋಲನ ಮೇಲೆ ಮುಚ್ಚಿದ ತೆಗೆದು ಬಿಡುತ್ತಾರೆ. ಇದರಿಂದಾಗಿ ಕೆರೆಯಲ್ಲಿ ಸಂಗ್ರಹವಾದ ನೀರು ಬಹುಬೇಗನೆ ಕಡಿಮೆಯಾಗುತ್ತದೆ. ಕೆರೆಯ ಆಗ್ನೇಯ ಭಾಗದಲ್ಲಿ ಕೊಳವೆಯ ಅಳವಡಿಕೆಯಿಂದ ಕೃಷಿ ಮಾರುಕಟ್ಟೆಯಲ್ಲಿನ ನೀರೆಲ್ಲವೂ ಕೊಳವೆಯ ಮೂಲಕ ಈ ಕೆರೆಗೆ ಬಂದು ಸೇರುತ್ತವೆ. ಆದರೆ ಇತ್ತೀಚಿನ ದಿನಗಳಲ್ಲಿ ಕೃಷಿ ಮಾರುಕಟ್ಟೆಯ ಪ್ರವೇಶ ದ್ವಾರದ ಎಡಬದಿಗೆ ಮಳಿಗೆಗಳನ್ನು ಸ್ಥಾಪಿಸಿದ್ದರಿಂದ ಈ ಕೆರೆಗೆ ನೀರು ಕಡಿಮೆ ಪ್ರಮಾಣದಲ್ಲಿ ಬಂದು ಸೇರುತ್ತದೆ. ವಾಯುವ್ಯ ಭಾಗದಲ್ಲಿ ಒಂದು ಕೊಳವೆಯನ್ನು ಅಳವಡಿಸಿದ್ದು, ಕಡಪಟ್ಟಿಗೆ ಹೋಗುವ ರಸ್ತೆಯನ್ನು ಈ ಕೊಳವೆಯ ಮೇಲೆಯೇ ನಿರ್ಮಿಸಲಾಗಿದೆ. ಇದನ್ನು ನಿರ್ಮಿಸಿದ ಉದ್ದೇಶವೆಂದರೆ, ಕೆರೆಯು ತುಂಬಿದಾಗ ಹೆಚ್ಚಾದ ನೀರೆಲ್ಲವೂ ಈ ಕೊಳವೆಯ ಮೂಲಕ ಹೊರಗೆ ಹೋಗುವಂತೆ ವ್ಯವಸ್ಥೆ ಮಾಡಲಾಗಿದೆ. ಕೆರೆ ತುಂಬಿದಾಗ ಅಲ್ಲಿರುವ ಮನೆಗಳಿಗೆ ಯಾವುದೇ ಹಾನಿಯಾಗಬಾರದೆಂಬ ಉದ್ದೇಶದಿಂದ ಈ ನೀರು ಹೊರಗೆ ಹೋಗುವಂತೆ ಮಾಡಲಾಗಿದೆ. ಆದರೆ ಅದು ಇಂದು ಕಾಣ ಬರುವುದಿಲ್ಲ.

ಅಂದು ವ್ಯವಸಾಯಕ್ಕೆ ಅನುಕೂಲವಾಗಲೆಂದು ನಿರ್ಮಾಣವಾದ ಈ ಕೆರೆಯು ನೀರಿಲ್ಲದೇ ಬತ್ತಿಹೋಗಿದೆ. ಅಲ್ಲದೇ ಇದಕ್ಕೆ ಸಂಬಂಧಪಟ್ಟ ಪಂಚಾಯತಿ ಇದನ್ನು ಹೂಳೆತ್ತಿ ದುರಸ್ತಿಗೊಳಿಸುವ ಕಾರ್ಯಕ್ಕೆ ಮುಂದಾಗಿಲ್ಲ. ಇದರಿಂದ ಇಲ್ಲಿ ನೀರು ಸಂಗ್ರಹವಾಗುವುದು ಕಡಿಮೆ ಪ್ರಮಾಣದಲ್ಲಿ ಒಮ್ಮೊಮ್ಮೆ ಭಾರಿ ಪ್ರಮಾಣದ ಮಳೆಯಿಂದಾಗಿ ತುಂಬಿ ಹರಿಯುತ್ತದೆ. ಇಲ್ಲಿಯೇ ಇರುವ ಕಡಪಟ್ಟಿ ಬಸವೇಶ್ವರ ಜಾತ್ರೆಯು ಅತಿ ವಿಭೃಂಬಣೆಯಿಂದ ಶ್ರಾವಣ ಮಾಸದ ಕೊನೆಯ ಸೋಮವಾರದ ನಂತರ ಬರುವ ಗುರುವಾರದಂದು ನಡೆಯುತ್ತದೆ. ಆಗ ಇಲ್ಲಿ ಅಪಾರ ಪ್ರಮಾಣದಲ್ಲಿ ಅಂಗಡಿ ಮುಗ್ಗಟ್ಟನ್ನು ಹಾಕಿಕೊಳ್ಳುವರು. ಇದರಿಂದಾಗಿ ಈ ೨೦೦೯ ರಲ್ಲಿ ಕೆರೆಯ ಪೂರ್ವಭಾಗದ ಪ್ರದೇಶವನ್ನು ಅಂದರೆ ಮಹಾದ್ವಾರ ಬಳಿಯಿಂದ ಮುಂದೆ ಸುಮಾರು ೧೫೦ ಮೀ ಉದ್ದ. ಪ್ರದೇಶವನ್ನು ಕಲ್ಲು ಮಣ್ಣು ಹಾಕಿ ರಸ್ತೆಗೆ ಸಮನಾಗಿ ಮಾಡಲಾಗಿದೆ. ಕೆರೆಯ ದಕ್ಷಿಣಕ್ಕೆ ಇದ್ದ ಅಂಗಡಿಗಳೆಲ್ಲವೂ ತೆಗೆದು ಹಾಕಿರುವುದರಿಂದ ಇಂದು ಕೆರೆಯು ಹರವು ವಿಶಾಲವಾಗಿದೆ. ಆದರೆ ಆಳವು ಮಾತ್ರ ದಿನದಿಂದ ದಿನಕ್ಕೆ ಕಡಿಮೆಯಾಗತೊಡಗಿದೆ.

ಈ ಕೆರೆಯನ್ನು ನಿರ್ಲಕ್ಷಿಸಿದರೆ ಇಂದು ಇದು ನೆಲಸಮವಾಗಿ ಬೃಹತ ನಿವೇಶನಗಳು ತಲೆಯೆತ್ತುವ ಸಾಧ್ಯತೆಗಳಿವೆ. ಪ್ರಭಾತ ನಗರವು ತಗ್ಗಾದ ಭಾಗದಲ್ಲಿದ್ದದನ್ನು ಗಮನಿಸಿದರೆ ಕೆರೆಯು ವಿಸ್ತೀರ್ಣವು ಇನ್ನೂ ವಿಶಾಲವಾಗಿದ್ದಿತ್ತೆಂದು ತಿಳಿದು ಬರುತ್ತದೆ. ನಗರದ ಜನಸಂಖ್ಯೆ ಬೆಳದಂತೆ ನಗರಗಳು ಬೆಳೆದು ಇಂದು ಕೆರೆಯು ಸುತ್ತಲಿನ ಪ್ರದೇಶವನ್ನು ಒತ್ತುವರಿ ಮಾಡಲಾಗಿದೆ. ಈ ಕೆರೆಯು ಇಲ್ಲವಾದರೆ ಸುತ್ತಲಿನ ಮನೆಗಳಲ್ಲಿರುವ ಕೊಳವೆ ಬಾವಿಗಳ ಅಂತರ್ಜಲ ಮಟ್ಟವು ಕುಸಿಯುತ್ತದೆ. ಇದು ನಗರದ ಇಳಿಜಾರು ಭಾಗದಲ್ಲಿರುವದರಿಂದ ಸುತ್ತಲಿನ ಎತ್ತರ ಭಾಗದಿಂದ ನೀರು ಈ ಕೆರೆಗೆ ಬಂದು ಸೇರುತ್ತದೆ. ಅತಿ ಕೆಳಭಾಗದಲ್ಲಿರುವ ಕೆರೆ ಇದಾಗಿದೆ.

ಜಮಖಂಡಿ ಕೆರೆಯ ಇಂದಿನ ಸ್ಥಿತಿ–ಗತಿಗಳು :

ಜಮಖಂಡಿಯಲ್ಲಿರುವ ಹೆಚ್ಚು ಕೆರೆಗಳು ಪಟವರ್ಧನ ಮನೆತನದ ಪ್ರಸಿದ್ಧ ಅರಸರೆನಿಸಿಕೊಂಡ ರಾಮಚಂದ್ರರಾವ್ ಅಪ್ಪಾಸಾಹೇಬರ ಕಾಲಾವಧಿಯಲ್ಲಿ ರಚನೆಗೊಂಡವುಗಳಾಗಿವೆ. ಕೆರೆಗಳು ರಚನೆಯಾಗುವ ಅವಧಿಯಲ್ಲಿ ಜಮಖಂಡಿ ನಗರದ ಜನಸಂಖ್ಯೆಯು ಕಡಿಮೆಯಿತ್ತು. ಹಾಗೂ ಮಳೆಯ ಪ್ರಮಾಣ ಹೆಚ್ಚಿತು. ಆದರೆ ಇವತ್ತಿನ ದಿನದಲ್ಲಿ ಮಳೆಯ ಪ್ರಮಾಣ ಕಡಿಮೆಯಿದ್ದು, ನಗರದ ಜನಸಂಖ್ಯೆಯು ಹೆಚ್ಚಾಗಿದೆ. ಅಂದು ನಗರದ ಜನರಿಗೆ ನೀರಿನ ಸೌಕರ್ಯ ಒದಗಿಸಲು ನಿರ್ಮಿಸಲಾದ ಕೆರೆಗಳನ್ನು ಇಂದು ನೆಲಸಮ ಮಾಡಿಕೊಂಡು ಬೃಹತ ನಿವೇಶನಗಳನ್ನು ನಿರ್ಮಿಸುವ ಯೋಚನೆಗಳು ಜನರಲ್ಲಿ ತಲೆದೋರಿದೆ. ಅಂದಿನವರು ನಿರ್ಮಿಸಿಕೊಟ್ಟ ಕೆರೆಗಳನ್ನು ಇಂದಿನವರು ಸಂರಕ್ಷಿಸಿಕೊಂಡು ಹೋಗುತ್ತಿರುವರೇ, ಹೋಗುತ್ತಾರೆಯೇ, ಎಂಬುದು ಸಂಶಯದ ಮಾತು. ನೀರಿನ ಅಭಾವವಿರುವ ಇಂದಿನ ದಿನಮಾನಗಳಲ್ಲಿ ಹಿಂದಿನವರು ನಗರದಲ್ಲಿ ನಿರ್ಮಿಸಿದ ಕೆರೆಗಳ ಇಂದಿನವರಿಗೆ ಜೀವನಾಡಿಗಳಾಗಿವೆ.

ಜಲ ಸಂರಕ್ಷಣೆಯ ಮಹತ್ವವನ್ನು ಹಿಂದಿನವರು ಚೆನ್ನಾಗಿ ಅರಿತುಕೊಂಡಿದ್ದರಿಂದಲೇ ಅಂದು ಕೆರೆಗಳನ್ನು ನಿರ್ಮಿಸಿ ಇಂದಿನ ಜನಾಂಗಕ್ಕೆ ಮಹದುಪಕಾರ ಮಾಡಿದ್ದಾರೆ. ಇಂದಿನ ಸರ್ಕಾರವು ಕೈಗೊಂಡ ಜಲ ಸಂರಕ್ಷಣಾ ಆಂದೋಲನವನ್ನು ಹುಟ್ಟು ಹಾಕಿದವರೇ ಹಿಂದಿನ ಜನರು. ಅಂದು ಅವರು ನಿರ್ಮಿಸಿದ ಕೆರೆಗಳನ್ನು ಹಾಳುಗೆಡುಹದೆ ಸುಸ್ಥಿತಿಯಲ್ಲಿಟ್ಟುಕೊಂಡು ಭೂಮಿಯ ಅಂತರ ಜಲಮಟ್ಟವನ್ನು ಕಾಯ್ದುಕೊಳ್ಳಬೇಕಾಗಿರುವುದು ಪ್ರತಿಯೊಬ್ಬರ ಆದ್ಯ ಕರ್ತವ್ಯ. ಆದರೆ ಇಂದಿನ ಜನರು ಆಧುನಿಕ ಬೆಳವಣಿಗೆಗೆ ಮಾರುಹೋಗಿ ಕೆರೆಗಳನ್ನು ನಿರ್ಲಕ್ಷಿಸುತ್ತಿರುವುದನ್ನು ಕಾಣಬಹುದು. ಇದರಿಂದ ಮುಂದಿನ ದಿನಮಾನಗಳಲ್ಲಿ ಮುಂದಿನ ಪೀಳಿಗೆಯವರಿಗೆ ಅಂತರ್ಜಲ ಕೊರತೆಯುಂಟಾಗಿ ನೀರಿನ ಅಭಾವ ಉಂಟಾಗುತ್ತದೆ. ಸಂಸ್ಥಾನಿಕರು ಜಮಖಂಡಿ ನಗರದ ಪ್ರಜೆಗಳಿಗೆ ಕುಡಿಯುವ ನೀರಿನ ಸೌಲಭ್ಯ ಕಲ್ಪಸುವುದರಿಂದಾಗಿ ಕೆರೆಗಳನ್ನು ನಿರ್ಮಿಸಿದ್ದರು. ಆದರೆ ಇವುಗಳ ಇಂದಿನ ಸ್ಥಿತಿ–ಗತಿಗಳು ಹೇಗಿವೆ ಎಂಬುದನ್ನು ತಿಳಿಯುವುದು ಅವಶ್ಯಕವಾಗಿದೆ.

ಜಮಖಂಡಿ ನಗರದ ದಕ್ಷಿಣ ಭಾಗಕ್ಕೆ ಇರುವ ಕೆಟ್ಟಿಕೆರೆಯು ಅಂದಿನ ಇಡೀ ಜಮಖಂಡಿ ನಗರಕ್ಕೆ ಕುಡಿಯುವ ನೀರನ್ನು ಒದಗಿಸುತ್ತಿತ್ತು. ಹಾಗೂ ಈ ಕೆರೆಯು ತುಂಬಿ ನಗರದ ಪೂರ್ವ ಭಾಗವೆಲ್ಲವೂ ಮುಳುಗಿ ಹೋಗುವಂತಿದ್ದ ಈ ಕೆರೆಯು ಇಂದು ಜೀವವಿಲ್ಲದಂತೆ, ಮಳೆ ಬಂದಾಗ ಮಾತ್ರ ಸ್ವಲ್ಪ ಪ್ರಮಾಣದಲ್ಲಿ ನೀರನ್ನು ಸಂಗ್ರಹಿಸಿಕೊಂಡಿರುತ್ತದೆ. ಕೆರೆಯ ಏರಿಯ ಅಲ್ಲಲ್ಲಿಯ ಕೆಲವು ಕಲ್ಲುಗಳು ಕಿತ್ತು ಹೋಗಿವೆ. ಹಾಗೂ ತೂಬುಗಳನ್ನು ಮುಚ್ಚಲಾಗಿದೆ. ನಗರದ ಜನಸಂಖ್ಯೆ ಹೆಚ್ಚಾದಂತೆ ಈ ಕೆರೆಯ ನೀರು ಸಾಲದಾಯಿತು. ಕೆರೆಯ ಪೂರ್ವ ಗುಡ್ಡದ ಮೇಲೆ ಇದ್ದ ಪಕ್ಷಿಧಾಮ ಎನಿಸಿಕೊಂಡಿದ್ದ ಇದರಲ್ಲಿ ಇಂದು ನೋಡಲು ಒಂದು ಪಕ್ಷಿಯೂ ದೊರೆಯುವುದಿಲ್ಲ. ಅಲ್ಲದೇ ಅಲ್ಲಿ ಮರಗಳನ್ನು ಬೆಳೆಸುವಲ್ಲಿಯೂ ಅರಣ್ಯ ಇಲಾಖೆಯು ನಿಷ್ಕಾಳಜಿಯನ್ನು ವಹಿಸದೆ ಎನ್ನಬಹುದು. ಅರಣ್ಯ ಇಲಾಖೆಯ ಸಂಬಂಧಪಟ್ಟ ಅಧಿಕಾರಗಳು ಇದರತ್ತ ಗಮನಹರಿಸಿ ಇನ್ನಷ್ಟು ಮರಗಳನ್ನು ನೆಟ್ಟು ಸುಂದರ ಉದ್ಯಾನವನವನ್ನಾಗಿ ಮಾಡಿ ನಗರದ ಜನರಿಗೆ ವಿಶ್ರಾಂತಿ ತೆಗೆದುಕೊಳ್ಳುವ ಸ್ಥಳವನ್ನಾಗಿ ಮಾಡಬೇಕು. ಈಗಲೂ ಕೂಡ ಜನರು ಮುಂಜಾನೆ ಹಾಗೂ ಸಾಯಂಕಾಲ ಸಮಯದಲ್ಲಿ ಜನರು ಈ ಕೆರೆಯ ಮೇಲ್ಭಾಗದಲ್ಲಿರುವ, ಕಣ್ಮರೆಯಾಗಿರುವ ಪಕ್ಷಿಧಾಮದ ಕಡೆಗೆ ವಾಯುವಿಹಾರಕ್ಕೆ ಹೋಗುವರು.

ನಗರಕ್ಕೆ ಈ ಕೆಟ್ಟಿಕೆರೆಯ ನಂತರ ಅತ್ಯಂತ ಉಪಯುಕ್ತವಾದ ಕೆರೆಯೆಂದರೆ, ಲಕ್ಷಣ ಕೆರೆ. ಇದು ಅಂದಿನ ಜನರಿಗೆ ಕುಡಿಯುವ ನೀರನ್ನು ಒದಗಿಸುತ್ತಿದ್ದು, ಇಂದು ಜನರಿಗೆ ಬಟ್ಟೆಯನ್ನು ಒಗೆಯಲು ಉಪಯೋಗವಾಗುತ್ತಿದೆ. ಇದರ ಇಂದಿನ ಸ್ಥಿತಿಯನ್ನು ಗಮನಿಸಿದರೆ, ಇದಕ್ಕೆ ಯಾವುದೇ ದುರಸ್ತಿ ಕಾರ್ಯವನ್ನು ಮಾಡುವಂತಿಲ್ಲ. ಆದರೆ ಇದರ ಒಂದು ಶೋಚನೀಯ ಸ್ಥಿತಿಯನ್ನು ತಿಳಿಯುವುದು ಅವಶ್ಯ. ಸಂತೆ ಮಾರುಕಟ್ಟೆಯನ್ನು ಇದರ ಮೇಲೆ ಸ್ಥಳಾಂತರಿಸಿದರೆ ಕೆರೆಗೆ ಯಾವುದಾದರೂ ಒಂದು ರೀತಿಯಲ್ಲಿ ಅಪಾಯವೊದಗಬಹುದಾಗಿದೆ. ಕೊಳತೆ ತರಕಾರಿಗಳನ್ನು ಕೆರೆಯಲ್ಲಿ ಅಥವಾ ಕೆರೆಯ ಮೇಲ್ಭಾಗದಲ್ಲಿ ಎಸೆಯುವುದರಿಂದ ಆ ಪ್ರದೇಶವು ಕೊಳಚೆಯಿಂದಾಗಿ ಕೆರೆಯ ಸೌಂದರ್ಯ ಹಾಳಾಗಬಹುದು. ಆದರೆ ಸದ್ಯಕ್ಕೆ ಇದು ಯಾವಾಗಲೂ ತುಂಬಿ ಸುತ್ತಲಿನ ಜನತೆಗೂ ಹಾಗೂ ನಗರದಲ್ಲಿರುವ ಬಾವಿಗಳಿಗೆ ಅಂತರ್ಜಲವನ್ನು ಹೆಚ್ಚಿಸಿದೆ.

ನಗರದಲ್ಲಿರುವ ಕುಂಬಾರ ಜನಾಂಗದವರ ವೃತ್ತಿಯನ್ನು ಮುಂದುವರೆಸಿಕೊಂಡು ಹೋಗಲು ಸ್ಫೂರ್ತಿಯ ಸೆಲೆಯಾಗಿದ್ದು, ಈ ಕುಂಬಾರ ಕೆರೆ ನಗರದ ಪ್ರಮುಖ ಕೆರೆಗಳಲ್ಲಿ ಒಂದಾಗಿದ್ದು, ಸ್ವಯಂ ಉದ್ಯೋಗಕ್ಕೆ, ಹಾಗೂ ಇತರ ಬಡಜನರಿಗೆ ಉದ್ಯೋಗವನ್ನು ಕಲ್ಪಿಸಿಕೊಡುತ್ತಿರುವ ಕೆರೆಯ ಸ್ಥಿತಿ ಶೋಚನೀಯ. ಸುಮಾರು ೨೫೦ ಮೀ.ಗಳಷ್ಟು ಉದ್ದವಿದ್ದು, ೨೫೦ ರಿಂದ ೩೦೦ ಮೀ.ಗಳಷ್ಟು ಅಗಲವಾಗಿದ್ದು ಈ ಕೆರೆಯು ಒತ್ತುವರಿಗೊಳಪಟ್ಟು ೮೦ ಮೀ. ಅಗಲದಷ್ಟು ಕಂಡು ಬರುತ್ತದೆ. ಕೆರೆಯ ಭಾಗದಲ್ಲಿ ಜನರು ಮನೆಗಳನ್ನು ನಿರ್ಮಿಸಿಕೊಂಡು ಕೆರೆಯ ಅಂಗಳ ಪ್ರದೇಶವನ್ನು ಇಕ್ಕಟ್ಟಾಗಿಸಿದ್ದಾರೆ. ಅದರಲ್ಲೂ ಈ ಕೆರೆಯನ್ನುನೆಲಸಮಗೊಳಿಸಿ ಬಸ್ ನಿಲ್ದಾಣವನ್ನಾಗಿ ಮಾಡುವ ಯೋಚನೆಯಲ್ಲಿದ್ದಾರೆ. ಇದರಿಂದಾಗಿಯೇ ಈ ಕೆರೆಯನ್ನು ದುರಸ್ತಿಗೊಳಿಸುವಲ್ಲಿ, ಕೆರೆ ದುರಸ್ತಿ ಕಾರ್ಯ ಕೈಗೊಳ್ಳುವಲ್ಲಿ ಪುರಸಭೆ ಇದರ ಕಡೆಗೆ ಗಮನ ಹರಿಸುತ್ತಿಲ್ಲ. ಇದರಿಂದಾಗಿ ಇದರಲ್ಲಿ ನೀರಿನ ಪ್ರಮಾಣ ಕಡಿಮೆಯಾಗ ತೊಡಗಿದೆ. ಇದರಿಂದ ಕುಂಬಾರ ಜನಾಂಗದವರಿಗೆ ತಮ್ಮ ಅವಿಗೆಗಳನ್ನು ನಿರ್ಮಿಸಿಕೊಳ್ಳಲು ತೊಂದರೆ ಉಂಟಾಗುತ್ತಿದೆ.

ರಾಮತೀರ್ಥದಲ್ಲಿರುವ ಅರಮನೆಯ ಹಿಂಭಾಗದಲ್ಲಿರುವ ರಾಮತೀರ್ಥ ಕೆರೆಯು ಅಂದಿನ ಸಂಸ್ಥಾನಿಕರು ಯೋಜನಾಬದ್ಧವಾಗಿ ಜನರಿಗೆ ಉಪಯೋಗವಾಗಲೆಂದು ನಿರ್ಮಿಸಿದ್ದಾರೆ. ಆದರೆ ಅದು ಇಂದು ಜನತೆಗೆ ಯಾವ ರೀತಿಯೂ ಉಪಯೋಗವಾಗುತ್ತಿಲ್ಲ. ಆದರೆ ಕುರಿಗಳಿಗೆ, ಧನಕರುಗಳಿಗೆ ಕುಡಿಯಲು ಉಪಯೋಗವಾಗುತ್ತಿದೆ. ಇದು ತುಂಬಿದಾಗ ಹೆಚ್ಚಾದ ನೀರನ್ನು ದೇವಾಲಯದ ಮುಂದಿನ ಪುಷ್ಕರಣಿಗೆ ಬಂದು ಸೇರುತ್ತಿತ್ತು. ಈ ಕೆರೆಯ ಕಟ್ಟಿದ ಯೋಜನೆಯನ್ನು ನೋಡಿದಾಗ ಇದನ್ನು ಇಂದು ದುರಸ್ತಿಗೊಳಿಸಿ ಉಪಯೋಗಕ್ಕೆ ತಂದುಕೊಳ್ಳುವಲ್ಲಿ ಪುರಸಭೆಗಳು, ಜಿಲ್ಲಾ ಪಂಚಾಯತಿಗಳು ಗಮನವಹಿಸಿಕೊಳ್ಳಬೇಕಾಗಿದೆ. ಇತ್ತೀಚೆಗೆ ರಾಮತೀರ್ಥ ಕೆಎಯ ಜಲಾನಯನ ಪ್ರದೇಶದಲ್ಲಿ ಅರಣ್ಯ ಇಲಾಖೆಯವರು ಸಸಿಗಳನ್ನು ನೆಟ್ಟಿದ್ದಾರೆ. ಇದರಿಂದ ಕೆರೆಯನ್ನು ಉಳಿಸುವ ಉದ್ದೇಶವನ್ನು ಹೊಂದಿದೆ. ಇವುಗಳ ನಿರ್ಲಕ್ಷೆಯಿಂದಾಗಿ ವ್ಯವಸ್ಥಿತ ಕೆರೆಗಳು ಅಳಿವಿನ ಅಂಚಿನಲ್ಲಿವೆ. ಗಾಣಗಿತ್ತಿ ಕೆರೆಯಿಂದ ನೀರು ರಾಮತೀರ್ಥ ಕೆರೆಗೆ, ಹಾಗೆ ಮುಂದಿನ ಆನೆ ಕೆರೆಗೆ ಬಂದು ಸೇರುತ್ತಿತ್ತು. ಇದರಿಂದ ಆನೆಕೆರೆಗೆ ಹೆಚ್ಚು ನೀರು ಸಂಗ್ರಹಗೊಳ್ಳುತ್ತಿತ್ತು. ಕೆಲವು ನಗರದ ಜನರಿಗೆ ಈ ಕೆರೆಯ ಪರಿಚಯವೇ ಇಲ್ಲ. ಇಂದಿಗೂ ಸಹ ಇದು ಮಳೆಯ ಪ್ರಮಾಣ ನೀರನ್ನು ಮುಂದಿನ ಪುಷ್ಕರಣಿಗೆ ಹೊಂಡಕ್ಕೆ ಹಾಗೂ ಆನೆಕೆರೆಗೆ ಹರಿದು ಹೋಗುತ್ತದೆ. ಈ ಕೆರೆಯಲ್ಲಿನ ನೀರು ಜಾನುವಾರುಗಳಿಗೆ ಉಪಯೋಗವಾಗುತ್ತಿದೆ. ರಾಮತೀರ್ಥ ಕೆರೆ ಮತ್ತು ಗಾಣಗಿತ್ತಿ ಕೆರೆಯಲ್ಲಿ ನೀರು ವರ್ಷವಿಡೀ ಬತ್ತದೆ ಇರುವುದನ್ನು ಕಾಣಬಹುದು.

ಅರಮನೆಯ ಮುಂಭಾಗದಲ್ಲಿ ಬಲಬದಿಗೆ ಇರುವ ಆನೆಕೆರೆಯು ಹಲವಾರು ಜನರಿಗೆ ಉಪಯೋಗವಾಗುತ್ತಾ ಬಂದಿದೆ. ಆದರೆ ಅದರ ದುರಸ್ತಿ ಕಾರ್ಯವು ಮಾತ್ರ ನೆನೆಗುದಿಗೆ ಬಿದ್ದಿದೆ. ೨೦೦೪ ರಲ್ಲಿ ದುರಸ್ತಿ ಕಾಮಗಾರಿಗೆ ಶಂಕು ಸ್ಥಾಪನೆಯಾಗಿದ್ದು, ಇನ್ನೂ ಯಾವ ಅಭಿವೃದ್ಧಿಯು ಕಂಡು ಬಂದಿಲ್ಲ. ಇದ್ದಂತಹ ಕೆರೆಯಲ್ಲಿಯೇ ಹೂಳನ್ನು ತೆಗೆದು, ಸುತ್ತಲೂ ಕಟ್ಟೆಯನ್ನು ನಿರ್ಮಿಸಿ ಸಂರಕ್ಷಿಸಿದರೆ ಮುಂದಿನ ಪೀಳಿಗೆಗೂ ಇದರ ಉಪಯೋಗ ದೊರೆಯುತ್ತದೆ. ಇಲ್ಲಿ ಅಗಸರೇ ಹೆಚ್ಚಾಗಿ ಈ ಕೆರೆಯ ಪ್ರಯೋಜನ ಪಡೆದುಕೊಳ್ಳುತ್ತಿರುವುದರಿಂದ ಇದನ್ನು ಕಾಮಗಾರಿಗೊಳಿಪಡಿಸಿದರೆ ಇನ್ನೂ ಹೆಚ್ಚು ಉಪಯುಕ್ತವಾಗಬಹುದು. ಇಲ್ಲಿ ಎಂದಿಗೂ ನೀರು ಬತ್ತದ ರೀತಿಯಲಿ ವ್ಯವಸ್ಥಿತವಾಗಿ ಕಟ್ಟೆಗಳನ್ನು

ನಿರ್ಮಿಸಿ ಇದರ ಆಳ ಅಗಲವನ್ನು ಹೆಚ್ಚಿಸಬೇಕು. ಇನ್ನೂ ಜಮಖಂಡಿ ನಗರಕ್ಕೆ ಒಳಪಡುವ ಕಡಪಟ್ಟಿ ಗ್ರಾಮದ ಹತ್ತಿರ ಇರುವ ಗುಳ್ಳವನ ಕೆರೆಯ ಸ್ಥಿತಿಯ ಕುರಿತು ಹೇಳುವುದಾದರೆ, ಇಂದು ಇದು ಕಾಣಸಿಗುವುದಿಲ್ಲ. ಇದನ್ನು ದುರಸ್ತಿ ಗೊಳಿಸುವ, ಹೂಳೆತ್ತಿಸುವ ಅವಶ್ಯಕತೆಯೇ ಇಲ್ಲ ಎನ್ನಬಹುದು. ಏಕೆಂದರೆ ಇದು ದೊಡ್ಡ ಪ್ರಮಾಣದ ಕೆರೆಯಾಗಿರದೆ ಸಣ್ಣ ಪ್ರಮಾಣದಲ್ಲಿದ್ದು, ಇದರಿಂದ ಜನರಿಗೆ ಯಾವುದೇ ತೆರನಾದ ಪ್ರಯೋಜನವಾಗುತ್ತಿಲ್ಲ. ಇಂದು ಈ ಕೆರೆ ನೆಲಸಮವಾಗಿದ್ದು ಕಾಣಸಿಗುವುದಿಲ್ಲ. ಆದರೆ ಅದನ್ನು ಕಣ್ಮರೆ ಮಾಡದೇ ಅಭಿವೃದ್ಧಿಗೊಳಿಸಿ ದುರಸ್ತಿಗೊಳಿಸಬೇಕಾಗಿದೆ.

ಹೀಗೆ ನಗರದ ಕೆರೆಗಳೆಲ್ಲವೂ ಒಂದಲ್ಲ ಒಂದು ರೀತಿಯಲ್ಲಿ ಜನರಿಗೆ ಉಪಯೋಗವಾಗಲೆಂದು, ನಗರದ ಜನರಿಗೆ ನೀರಿನ ಸೌಲಭ್ಯ ಕಲ್ಪಸುವುದಕ್ಕೊಸ್ಕರ, ನಗರದ ದನಕರುಗಳಿಗೆ ಹಾಗೂ ಇತರ ಉದ್ಯೋಗ ಮಾಡುವವರಿಗೂ ಉದ್ಯೋಗವನ್ನು ನಿರ್ಮಿಸಿಕೊಡಲೆಂದು ನಿರ್ಮಿಸಲಾದ ಈ ಕೆರೆಗಳು ಅಂದಿನ ಸಂಸ್ಥಾನಿಕರ ಹೆಸರು ಇಂದಿಗೂ ಅಜರಾಮರವಾಗಿರಿಸಿವೆ. ಇವುಗಳ ನಿರ್ಮಾಣದ ವ್ಯವಸ್ಥೆ, ನಿರ್ಮಾಣದಿಂದ ಜನರಿಗೆ ಆಗುತ್ತಿರುವ ಉಪಯೋಗಗಳನ್ನು ಈಗಾಗಲೇ ತಿಳಿದುಕೊಂಡಿದ್ದೇವೆ. ಇಂತಹ ಪ್ರಯೋಜನವಾದ ಕೆರೆಗಳ ಇಂದಿನ ಸ್ಥಿತಿ ಹೇಗೆ ಇದೆ ಎಂಬುದನ್ನು ತಿಳಿಸಲಾಗಿದೆ. ಹಾಗೂ ಅವುಗಳ ಹೆಚ್ಚಾಗಿ ಕೃಷಿಗೆ ಉಪಯೋಗವಾಗದಿದ್ದರೂ ಕೂಡ ಇನ್ನಿತರ ಕಾರ್ಯಗಳಿಗೆ ಉಪಯೋಗವಾಗಿದ್ದನ್ನು ನಾವು ತಿಳಿದಿದ್ದೇವೆ. ಇನ್ನೂ ಉಪಯೋಗವಾಗುವಲ್ಲಿ ಯಶಸ್ವಿಯಾಗದಿರಲು ಕಾರಣಗಳನ್ನು ಕಂಡುಕೊಂಡು ಯಶಸ್ವಿಗೊಳಿಸುವ ನಿಟ್ಟಿನಲ್ಲಿ ಎಲ್ಲರೂ ಪಾಲ್ಗೋಳ್ಳಬೇಕು. ಕೆರೆಗಳ ಇಂದಿನ ಸ್ಥಿತಿಗತಿಗಳನ್ನು ಸಂಕ್ಷಿಪ್ತವಾಗಿ ಇಲ್ಲಿ ತಿಳಿಸಲಾಗಿದೆ. ಆ ಸ್ಥಿತಿಯನ್ನು ಸುಧಾರಿಸಲು ಸುಧಾರಣಾ ಕ್ರಮಗಳನ್ನು ಕೈಗೊಳ್ಳಬೇಕಾಗಿರುವುದು ಅವಶ್ಯಕ.

ನಗರದ ಎಲ್ಲಾ ಕೆರೆಗಳನ್ನು ಅಧ್ಯಯನ ಮಾಡಲಾಗಿ, ಅತ್ಯಂತ ಯೋಜನಾಬದ್ಧವಾಗಿ, ವ್ಯವಸ್ಥಿತವಾಗಿ, ಕೌಶಲ್ಯತೆಯಿಂದ ನಿರ್ಮಿತವಾದ ಕೆರೆಗಳೆಂದರೆ, ರಾಮತೀರ್ಥ, ಗಾಣಗಿತ್ತಿ ಕೆರೆ ಎಂದು ಹೇಳಬಹುದು. ಈ ಕೆರೆಗಳನ್ನು ಸಂರಕ್ಷಿಸಿ ಉಳಿಸಿಕೊಳ್ಳುವುದು ನಮ್ಮೆಲ್ಲರ ಪ್ರತಿಯೊಬ್ಬರ ಆದ್ಯ ಕರ್ತವ್ಯವಾಗಿದೆ. ಇವುಗಳ ರಕ್ಷಣೆಗಾಗಿ ಸಂಘ ಸಂಸ್ಥೆಗಳು ಕಾಳಜಿವಹಿಸುವುದನ್ನು ಕಾಣುತ್ತೇವೆ. ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಇವುಗಳ ಉಳಿವಿಗಾಗಿ ಯೋಜನೆಗಳು ಜಾರಿಗೆ ಬರಬೇಕಾಗಿದೆ.

ಇತ್ತೀಚೆಗೆ ಕರ್ನಾಟಕ ಸರ್ಕಾರವು ಜಲಸಂವರ್ಧನಾ ಯೋಜನಾ ಸಂಘ (ಜೆ.ಎಸ್.ವಾಯ.ಎಸ್) ವನ್ನು ಸ್ಥಾಪಿಸಿ ಪ್ರತಿಯೊಂದು ಗ್ರಾಮಗಳಲ್ಲಿರುವ ಕೆರೆಗಳನ್ನು ದುರಸ್ತಿಗೊಳಿಸಿ ಜಲಸಂರಕ್ಷಣಾ ಕಾರ್ಯವನ್ನು ಹಮ್ಮಿಕೊಂಡು ಅಂತರ್ಜಲ ಮಟ್ಟವನ್ನು ಹೆಚ್ಚಿಸುವ ನಿಟ್ಟಿನಲ್ಲಿ ಕಾರ್ಯಮಾಡುತ್ತಿದೆ. ಇಂತಹ ಸಂಘಗಳು ಪ್ರತಿಯೊಂದು ಕೆರೆಗಳ ನಿರ್ವಹಣೆಯನ್ನು ಮಾಡುತ್ತಾ ಹೋದರೆ ಕೆರೆಗಳು ಸುರಕ್ಷಿತವಾಗಿ ಮುಂದಿನ ಪೀಳಿಗೆಗೆ ಉಳಿಸಬಹುದು. ಕೇವಲ ಇದೊಂದೇ ಅಲ್ಲದೇ ಇನ್ನಿತರ ಹಲವಾರು ಕೆರೆ ಅಭಿವೃದ್ಧಿ ಕಾರ್ಯಗಳು ಜಾರಿಗೆ ಬಂದು, ಇವುಗಳ ಸಂರಕ್ಷಿಸುವ ಜವಾಬ್ದಾರಿಯನ್ನು ಹೊತ್ತುಕೊಂಡು ಹೋಗಬೇಕು. ಇವುಗಳ ಜೊತೆಗೆ ಕೆರೆಗಳನ್ನು ಉಳಿಸುವ, ರಕ್ಷಿಸುವಲ್ಲಿ ಜನರ ಪಾತ್ರವೂ ಅಪಾರ.

* * *

ಅಧ್ಯಾಯ – ೪

ಕೆರೆಗಳ ವಿವಿಧ ಆಯಾಮಗಳು

ಅಧ್ಯಾಯ – ೪

ಕೆರೆಗಳು – ಸಾಮಾಜಿಕ, ಧಾರ್ಮಿಕ, ಸಾಂಸ್ಕೃತಿಕ, ಆರ್ಥಿಕ, ರಾಜಕೀಯ

ವ್ಯವಸಾಯವೇ ದೇಶದ ಆರ್ಥಿಕ ಪ್ರಗತಿಗೆ ಮುಖ್ಯ ಕಾರಣವಾದ ಅಂಶ, ರೈತನೇ ದೇಶದ ಬೆನ್ನೆಲಬು ಎಂಬೆಲ್ಲಾ ವಾಕ್ಯವನ್ನು ಹೇಳುತ್ತೇವೆ. ಆದರೆ ಇಂದು ರೈತನು ವ್ಯವಸಾಯ ಮಾಡಲು ಅವನಿಗೆ ಬೆನ್ನೆಲುಬಾಗಿ ನಿಂತಿರುವ ಪ್ರಮುಖ ಅಂಶವೆಂದರೆ, 'ನೀರು'. ವ್ಯವಸಾಯಕ್ಕೆ ಬೇಕಾದ ನೀರು ಮಳೆಯಿಂದಲಾದರೂ ಬರಬಹುದು, ಅಥವಾ ಇತರ ಮೂಲಗಳಾದ ನದಿ, ಬಾವಿ, ಕೆರೆ, ಕಾಲುವೆಗಳಿಂದಲೂ ಪಡೆದು ವ್ಯವಸಾಯ ಮಾಡಲಾಗುತ್ತದೆ. ಆದರೆ ಈ ಪ್ರಬಂಧದಲ್ಲಿ ಪ್ರತ್ಯೇಕವಾಗಿ ಕೆರೆಗಳ ಬಗ್ಗೆ ಅಧ್ಯಯನ ಕೈಗೊಳ್ಳಲಾಗಿದೆ. ಇದರಿಂದ ಕೇವಲ ಕೆರೆಗಳು ಜನತೆಗೆ ಯಾವ ಯಾವ ರೀತಿಯಲ್ಲಿ ಉಪಯೋಗವಾಗುತ್ತಿದೆ ಎಂಬುದನ್ನು ವಿಸ್ತಾರವಾಗಿ ಇದರಲ್ಲಿ ತಿಳಿಯಬಹುದಾಗಿದೆ.

ಅರಸರ ಭವ್ಯ ಸಾಧನೆಗಳು, ಸಾಂಸ್ಕೃತಿಕ, ಆರ್ಥಿಕ ಹಾಗೂ ಸಾಮಾಜಿಕ ರಂಗಗಳಲ್ಲಿ ಅಗಾಧವಾಗಿದ್ದು, ಅವು ಇಂದಿನವರೆಗೂ ಜನತೆಯ ಮನದಲ್ಲಿ ಹಚ್ಚ ಹಸಿರಾಗಿ ಉಳಿದಿವೆ. ಕೆರೆಗಳು ಸಮಾಜದ ವಿವಿಧ ರಂಗಗಳಲ್ಲಿ ಪ್ರಮುಖ ಪಾತ್ರವಹಿಸುತ್ತವೆ. ಕೆರೆಗಳಿಂದ ಗ್ರಾಮಗಳ ಪ್ರಗತಿ ಮತ್ತು ವಿಕಾಸಗಳನ್ನು ಸಾಧಿಸಲಾಗಿತ್ತು. ಕೆರೆಗಳ ಉಪಯೋಗವನ್ನು ಅವು ನಿರ್ಮಾಣಗೊಂಡ ಸಮಕಾಲೀನ ಸಾಹಿತ್ಯ. ಶಾಸನಗಳು ಮತ್ತು ತಾಮ್ರಪಟಗಳ ದಾಖಲೆಗಳಿಂದ ತಿಳಿದು ಬರುತ್ತದೆ. ಈ ಅಧ್ಯಯನದ ವಿಷಯವಾದ ಕೆರೆ ನೀರಾವರಿ ವ್ಯವಸ್ಥೆಯು, ಅಂದಿನ ಆರ್ಥಿಕ ವಿಕಾಸಕ್ಕೆ ನೀಡಿದ ಕಾಣಿಕೆಯ ಅಗಾಧ ಹಾಗೂ ಅದ್ಭುತ ಮತ್ತು ಮಹತ್ವದ ವಿಷಯವಾಗಿದೆ. ಈ ಒಂದು ನೀರಾವರಿ ವ್ಯವಸ್ಥೆಯ ವಿವರವಾದ ಅಧ್ಯಂಯನವು ಆಧುನಿಕ ಸಮಾಜದ ನೀರಾವರಿ ವ್ಯವಸ್ಥೆ ನಿರ್ಮಾಣಮಾಡುವವರಿಗೂ ಸಹಕಾರಿಯಾಗಬಲ್ಲದು. ಕೆರೆಗಳ ನಿರ್ಮಾಣ ಕಾರ್ಯಗಳು ಸಮಾಜದಲ್ಲಿ ನೂತನ ಯುಗವೊಂದಕ್ಕೆ ಸಹಕಾರಿಯಾದುದಲ್ಲದೆ, ವ್ಯವಸಾಯ ಉತ್ಪನ್ನಗಳ ಅಗಾಧ ವಿಕಾಸಕ್ಕೆ ಎಡೆಮಾಡಿ ರಾಜ್ಯದ ಸಂಪತ್ತಿನ ಅಭ್ಯುದಯಕ್ಕೆ ನಾಂದಿಯಾದವು. ಇದರಿಂದ ಸ್ವಾವಲಂಬನೆ, ಸ್ವಯಂಪೂರ್ಣತೆಯನ್ನು ಸಾಧಿಸಲು ಆಸ್ಪದ ದೊರೆಯಿತು. ಇದರಿಂದಾಗಿಯೇ ಅಂದಿನ ಅರಸರು ಸಾಹಿತ್ಯ ಮತ್ತು ಸಾಂಸ್ಕೃತಿಕ ವೈಭವವನ್ನು ಸಾಧಿಸಲು ಕೆರೆಗಳು ಸಹಕಾರಿಯಾದವು.

ದೇಶದ ಅಧಿಕ ಜನರ ವೃತ್ತಿ ವ್ಯವಸಾಯವಾಗಿದ್ದು, ದೇಶದ ಆರ್ಥಿಕ ವಿಕಾಸಕ್ಕೆ ಕೆರೆ ನಿರ್ಮಾಣ ಅನಿವಾರ್ಯವಾಗಿತ್ತು. ಇದನ್ನು ಅಭಿವೃದ್ಧಿ ಪಡೆಸಲು ಕೆರೆಗಳನ್ನು ನಿರ್ಮಿಸಲಾಯಿತು. ಇದರಿಂದ ಆರ್ಥಿಕ ಸಂಪತ್ತು ಹೆಚ್ಚಿತು. ಈ ಸಂದರ್ಭದಲ್ಲಿ ನೀರಾವರಿ ಕಾರ್ಯಗಳಿಗೆ ಸ್ಫೂರ್ತಿಯಾಗಿ ರಾಜಕೀಯ, ಧಾರ್ಮಿಕ, ಸಾಮಾಜಿಕ, ಆರ್ಥಿಕ ಹಾಗೂ ಇತರೆ ಅಂಶಗಳ ಪ್ರಭಾವ ಬೀರಿದೆ. ಅವುಗಳ ಬಗ್ಗೆ ತಿಳಿಯುವುದು ಅವಶ್ಯಕ.

ಸಾಮಾಜಿಕ :

ಜೀವಿಗಳ ವಿಕಾಸ ಎಂದ ಕೂಡಲೇ ನೆನಪಾಗುವುದು ನೀರು. ಏಕೆಂದರೆ ನೀರಿಲ್ಲದೆ ಜೀವ ಎಂಬ ಪದಕ್ಕೆ ಅರ್ಥವಿಲ್ಲದಂತಾಗುತ್ತದೆ. ಮಾನವನು ವಿಕಾಸವಾದಂತೆ ನಿಸರ್ಗದಿಂದ ತನ್ನ ಅವಶ್ಯಕತೆಗಳನ್ನು ಕ್ರಮೇಣವಾಗಿ ಬಳಸಿಕೊಳ್ಳುತ್ತಾ ಜೀವನವನ್ನು ಸಾಗಿಸುತ್ತಿದ್ದನು. ಒಂದೇ ಸ್ಥಳದಲ್ಲಿ ನೆಲೆನಿಂತು ಜೀವನ ಪ್ರಾರಂಭಿಸಿದ್ದು, ನೂತನ ಶಿಲಾಯುಗದಲ್ಲಿ. ಆದಿಮಾನವರು ಕಾಡು ಪ್ರಾಣಿಯಂತೆ ಅರಣ್ಯದಲ್ಲಿ ಗಡ್ಡೆ–ಗೆಣಸುಗಳನ್ನು ತಿನ್ನುತ್ತಾ, ಪ್ರಾಣಿಯಂತೆ ಬದುಕುತ್ತಿದ್ದ. ಇಂತಹ ಮಾನವನು ಸಮಾಜ ಜೀವಿಯಾಗಿದ್ದು ಬದುಕಲು ಕಲಿತಿದ್ದು, ನೂತನ ಶಿಲಾಯುಗದ ಅವಧಿಯಲ್ಲಿ. ಮಾನವನ ದಿನನಿತ್ಯದ ಸಾಮಾಜಿಕ ಜೀವನ ಪ್ರಾರಂಭವಾಗುವುದೇ ನೀರಿನಿಂದ. ಅಂತಹ ನೀರಿನ ಉಪಯೋಗವನ್ನು ಮಾನವನು ನೂತನ ಶಿಲಾಯುಗದಲ್ಲಿ ಮಳೆಯ ನೀರಿನಿಂದ ಪ್ರಾರಂಭಿಸಿದನು. ಭೂಮಿಯ ಮೇಲೆ ಪ್ರಾಣಿಗಳ ತುಳಿತಕ್ಕೆ ಗುರಿಯಾದ ತಗ್ಗುಗಳಲ್ಲಿ ನೀರು ನಿಲ್ಲುವುದನ್ನು ಕಂಡ ಮಾನವನು, ಮಳೆ ಇಲ್ಲದೆ ಸಮಯದಲ್ಲಿ ಆ ನೀರನ್ನು ಉಪಯೋಗಿಸತೊಡಗಿದ. ಮಾನವನ ನಾಗರಿಕತೆಯು ನೀರಿನಿಂದಲೇ ಆರಂಭಗೊಂಡಿತು ಎಂದರೆ ತಪ್ಪಾಗಲಾರದು. ನೀರಾವರಿ ಮೊದಲು ಆಗಿ ನಂತರ ನಾಗರಿಕತೆ ಆರಂಭವಾಯಿತು, ಎಂದರೆ ಅತಿಶಯೋಕ್ತಿಯೆನಿಸಲಾರದು. ಹೀಗೆ ತಗ್ಗು ಪ್ರದೇಶಗಳಲ್ಲಿ ಸಂಗ್ರಹಗೊಂಡ ಮಳೆ ನೀರಿನಿಂದ, ಆ ಪ್ರದೇಶಗಳಲ್ಲಿ ಸಮೃದ್ಧಿಯಾಗಿ ಬೆಳೆದ ಸಸ್ಯರಾಶಿಯನ್ನು ಕಂಡಂತ ಮಾನವನು ತರಕಾರಿಗಳನ್ನು ಬೆಳೆಯಲು ಯೋಚಿಸಿದ. ಈ ವಿಧವಾಗಿ ನೂತನ ಶಿಲಾಯುಗದ ಮಾನವ, ವ್ಯವಸಾಯಕ್ಕೆ ನೀರಾವರಿ ವಿಧಾನವನ್ನು ಅಳವಡಿಸಿಕೊಂಡು ಆಹಾರ ಉತ್ಪಾದನೆ ಪ್ರಾರಂಭಿಸಿದ. ಇದರಿಂದ ಮಾನವನು ಸಾಮಾಜಿಕ ಜೀವನದ ಕಡೆಗೆ ಸಾಗಲು ಈ ನೀರು ಕಾರಣವಾಯಿತು. ಈ ನೀರು ಇನ್ನೂ ಮಾನವನ ಸಮಾಜ ಜೀವನಕ್ಕೆ ಹೇಗೆ ಉಪಕಾರಿಯಾಗಿದೆ ಎಂಬುದನ್ನು ತಿಳಿಯಬಹುದು.

ಸಮಾಜದಲ್ಲಿ ಜನರಿಗೆ ಉಪಯೋಗಕ್ಕಾಗಿ ಸಮಾಜದ ಅಧಿಕಾರಿಗಳು ಹಾಗೂ ಅಲ್ಲಿನ ಅರಸರು ಕೆರೆ, ಬಾವಿಗಳನ್ನು ತೋಡಿಸಿದರು. ಇದರಿಂದ ಅವರಿಗೆ ವ್ಯವಸಾಯಕ್ಕೆ, ಕುಡಿಯುವ ನೀರಿಗೆ, ಹಾಗೂ ದನಕರುಗಳಿಗೆ ಕುಡಿಯಲು ಸಹಾಯವಾಗಲೆಂದೇ ಕೆರೆಗಳು ನಿರ್ಮಾಣಗೊಂಡವು. ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ, ನೂತನವಾಗಿ ನಿರ್ಮಾಣಗೊಂಡಿರುವ ಹಳ್ಳಿಗಳಿಗೆ ಕುಡಿಯುವ ನೀರಿನ ಸೌಲಭ್ಯಕ್ಕಾಗಿ ಕೆರೆಗಳನ್ನು ನಿರ್ಮಿಸಿದ್ದರು ಎಂದು ಪ್ರಸ್ತಾಪಿಸಲಾಗಿದೆ. ಖಾಸಗಿ ವಲಯದವರಿಂದ ಸಮಾಜದ ಸೌಖ್ಯಕ್ಕೆಂದೇ ನಿರ್ಮಿಸಲಾದ ಕೆರೆ ಹಾಗೂ ನೀರಾವರಿ ವ್ಯವಸ್ಥೆಯ ಬಗೆಗೆ ಸರ್ಕಾರವು ವಿವಿಧ ಸೌಕರ್ಯಗಳನ್ನು ಕಲ್ಪಸಿಕೊಡುತ್ತಿತ್ತು. ಶುಕ್ರ ನೀತಿ ಸಾರದಲ್ಲಿ 'ರಾಜನು ಪ್ರಜೆಗಳ ಹಿತಕ್ಕೆಂದೇ ಕೆರೆ, ಬಾವಿಗಳನ್ನು ನಿರ್ಮಿಸಬೇಕೆಂದು ಸೂಚಿಸಿದ್ದಾನೆ' ಎಂದು ತಿಳಿಸಲಾಗಿದೆ. ಇದರಿಂದ ಅಂದಿನ ರಾಜರು ಸಾಮಾಜಿಕ ಜೀವನದ ಬಗ್ಗೆ ಇರುವ ಕಳಕಳಿಯನ್ನು, ಕಾಳಜಿಯನ್ನು ವ್ಯಕ್ತಪಡಿಸುತ್ತದೆ. ದನಕರುಗಳಿಗೆ ಹಾಗೂ ವ್ಯವಸಾಯಕ್ಕೆ ಜನರಿಗೆ ಉಪಯೋಗವಾಗಿದೆ.

ಸಮಾಜದಲ್ಲಿ ಕೆರೆಗಳನ್ನು ನಿರ್ಮಿಸುತ್ತಿದ್ದರಿಂದ ಅನೇಕ ನಿರುದ್ಯೋಗಿಗಳಿಗೆ ಉದ್ಯೋಗ ದೊರೆಯುತ್ತಿತ್ತು. ಹಾಗೂ ಇದರಿಂದ ಉದ್ಯೋಗ ಪಡೆದ ಕುಟುಂಬಗಳು ಸಮಾಜದಲ್ಲಿ ಆರ್ಥಿಕವಾಗಿ ಪ್ರಬಲರಾಗಿ ಉನ್ನತ ಮಟ್ಟದ ಸ್ಥಾನಮಾನಗಳನ್ನು ಹೊಂದಿರುತ್ತಿದ್ದರು. ಇದರಿಂದ ಸಮಾಜದಲ್ಲಿ ವಿವಿಧ ವೃತ್ತಿಗಳು ಉದ್ಭವವಾಗುತ್ತವೆ. ಅಂದಿನ ಶಾಸನಗಳಲ್ಲಿ ಅರಸರು ಜನತೆಯ ಸಾರ್ವಜನಿಕರ

ಹಿತಕ್ಕಾಗಿ ಹೇಗೆ ಶ್ರಮಿಸುತ್ತಿದ್ದರು ಎಂಬ ಸಂಗತಿಯನ್ನು ಎತ್ತಿ ತೋರಿಸುತ್ತವೆ. ಕೆರೆ ನಿರ್ಮಿಸುವುವವರಿಗೆ ಸಂಭಾವನೆ ರೂಪದಲ್ಲಿ ಕೆರೆಯ ಹತ್ತಿರದ ಆಯಕಟ್ಟಿನ ವ್ಯವಸಾಯ ಭೂಮಿಯನ್ನು ಉಂಬಳಿಯಾಗಿ ನೀಡಲಾಗುತ್ತಿತ್ತು. ಇದರಿಂದ ಕೆಲವು ಕೃಷಿ ಭೂಮಿ ಪಡೆದುಕೊಂಡು ವ್ಯವಸಾಯ ಮಾಡಲು ಅವಕಾಶ ಕಲ್ಪಿಸಿಕೊಡುತ್ತಿತ್ತು. ಹಾಗೂ ಕೆರೆಗಳನ್ನು ನಿರ್ಮಿಸಲೆಂದು ಅರಣ್ಯವನ್ನು ಕಡಿಯುತ್ತಿದ್ದರಿಂದ ಅಲ್ಲಿನ ಕಟ್ಟಿಗೆಗಳನ್ನು ಜನರು ಉರುವಲನ್ನಾಗಿ ಉಪಯೋಗಿಸುತ್ತಿದ್ದರು. ಕೆರೆಗಳ ನಿರ್ಮಾಣದ ಅವಧಿಗಳಲ್ಲಿ ಅತಿ ಕುತೂಹಲಕಾರಿ ವಿಷಯವೆಂದರೆ, ನೀರಾವರಿ ಕಾರ್ಯಗಳಿಗೆಂದೇ ಸಾಮಾಜಿಕ 'ಸ್ವಯಂ ಸೇವಾ ಸಂಘಗಳು' ಕಾರ್ಯಾಚರಣೆಯನ್ನು ಕೈಗೊಳ್ಳುತ್ತಿದ್ದವು. ಇವುಗಳನ್ನು 'ಮಹಾಸಭೆ' ಅಥವಾ 'ವರಿಯಮ್' ಎಂದು ಕರೆಯಲಾಗುತ್ತಿತ್ತು. ಇವುಗಳ ಕೆರೆಗಳಿದ್ದ ಎಲ್ಲಾ ಹಳ್ಳಿಯಲ್ಲಿಯೂ ಜಾರಿಯಲ್ಲಿದ್ದವು. ಇವುಗಳ ಉದ್ದೇಶ ಸಮಾಜದ ಜನರಿಗೆ ಕೆರೆಗಳ ಸೌಲಭ್ಯಗಳನ್ನು ಕಲ್ಪಿಸಿಕೊಡುವುದಾಗಿತ್ತು. ಇವುಗಳು ಕೆರೆಗಳ ಮೇಲ್ವಿಚಾರಣೆ, ಏರಿಗಳನ್ನು ಬಲಪಡಿಸುವುದು, ಕೆರೆ ಕಾಲುವೆಗಳ ಹೂಳನ್ನು ಎತ್ತಿಸುವ, ಕ್ರಮಬದ್ಧವಾಗಿ ನೀರನ್ನು ಹರಿಸುವ, ಕಾಲುವೆ ದುರಸ್ತಿ ಮಾಡಿ ಗದ್ದೆಗಳಿಗೆ ನೀರು ಹಾಯಿಸುವ, ನೀರು ಪೋಲಾಗದಂತೆ ನೋಡಿಕೊಳ್ಳುವ, ಕರವಸೂಲಿ ಮತ್ತು ದಂಡಹೇರುವ ಕಾರ್ಯಗಳು ಹಾಗೂ ಇತರ ಕಾರ್ಯಗಳನ್ನು ಈ ಮಹಾಸಭೆಗಳು ಶ್ರದ್ಧೆಯಿಂದ ನಡೆಸಿಕೊಂಡು ಹೋಗುತ್ತಿದ್ದವು. ಈ ಮೇಲೆ ವಿವರಿಸಿದಂತೆ ಅವುಗಳನ್ನು ಸಮಾಜಕ್ಕೆ ಉಪಯುಕ್ತವಾಗುವ ರಕ್ಷಿಸಬೇಕಾಗಿತ್ತು.

ಸಾಮಾನ್ಯವಾಗಿ ಕೆರೆಗಳು ನಿರ್ಮಾಣಗೊಳ್ಳುತ್ತಿದ್ದು ಅರಸರುಗಳ ಕಾಲಾವಧಿಯಲ್ಲಿ, ಅವರ ಅವಧಿಯಲ್ಲಿಯೇ ಏಕೆ ನಿರ್ಮಾಣಗೊಳ್ಳುತ್ತಿದ್ದವು, ಎಂಬುದನ್ನು ಶಾಸನಗಳನ್ನು ಅಧ್ಯಯನ ಮಾಡಿದಾಗ ತಿಳಿದು ಬರುತ್ತದೆ. ಅರಸರು ಜನೋಪಕಾರಿಗಳಾಗಿದ್ದು, ಜನರ ಒಳತಿಗಾಗಿ ಕೆರೆಗಳನ್ನು ನಿರ್ಮಿಸುತ್ತಿದ್ದರು. ಹಾಗೂ ದೇವಾಲಯಗಳನ್ನು ನಿರ್ಮಿಸುತ್ತಿದ್ದರು. ಸಮಾಜದಲ್ಲಿ ಕೆಲವು ಸಾಮಾಜಿಕ ಆಚರಣೆಗಳಿಂದಾಗಿಯೂ ಕೆರೆಗಳು ನಿರ್ಮಿತಗೊಂಡಿವೆ. ದೇವರಿಗೆ ಸಲ್ಲಿಸುವ ಬಲಿ, ದಾನ, ಪೂಜೆ ಮತ್ತು ಬ್ರಾಹ್ಮಣರಿಗೆ ನೀಡುವ ದಾನಗಳಿಗಿಂತ, ಸಾರ್ವಜನಿಕರ ಸುಖ, ಶಾಂತಿ ಮತ್ತು ಆರ್ಥಿಕ ಅಭ್ಯುದಯಕ್ಕೆ ನೆರವಾಗುವ ನೀರಾವರಿ ಕಾರ್ಯಕ್ರಮಗಳನ್ನು ಕೈಗೆತ್ತಿಕೊಳ್ಳುವುದು ಹಿತಕಾರಿ ಎಂದು ಭಾವಿಸಿದ್ದರು. ಹಾಗೂ ಮುಂದಿನ ಸಂತತಿಗೆ ಸಮೃದ್ಧಿ ಶಾಂತಿ ದೊರೆಯುತ್ತದೆ ಎಂಬ ಆಧಾರದ ಮೇಲೆ ರಚಿಸಲಾಗುತ್ತಿತ್ತು.

ನೀರಾವರಿ ಕಾರ್ಯಕ್ರಮಗಳಿಂದ ವ್ಯವಸಾಯ ಉತ್ಪಾದನೆಯನ್ನು ಮಾತ್ರ ಅಧಿಕಗೊಳಿಸುವುದೊಂದೇ ಈ ಕೆರೆಗಳನ್ನು ನಿರ್ಮಿಸುವ ಗುರಿಯಾಗಿರದೆ, ಅದರ ವಿವಿಧ ಸಮಸ್ಯೆಗಳನ್ನು ಎದುರಿಸಬೇಕಾಗುತ್ತಿತ್ತು. ಇವುಗಳಿಂದ ಹಲವಾರು ಬಾರಿ ಕೈಗೆತ್ತಿಕೊಂಡು ಕಾರ್ಯಗಳು ಕೈಗೂಡದೇ ಹೋಗುತ್ತಿದ್ದವು. ಆದರೆ ಅದಕ್ಕಾಗಿ ಪುರುಷ ಪ್ರಯತ್ನ ನಡೆಯುತ್ತಿತ್ತು. ಲಕ್ಷ್ಮೀಧರನ ತಾಯಿ ಹೇಳಿದ್ದನ್ನು ಶಾಸನದಲ್ಲಿ ನೋಡಿದಾಗ ಸಮಾಜದ ಕೆರೆ ಬಾವಿಗಳಿಗೆ ಎಷ್ಟು ಮಹತ್ವವಿತ್ತು ಮತ್ತು ಸಮಾಜದಲ್ಲಿ ಜನರು ಅವುಗಳನ್ನು ಹೇಗೆ ರಕ್ಷಿಸಿ, ಪೋಷಿಸಿ ಬಳಸಿಕೊಳ್ಳುತ್ತಿದ್ದರು ಎಂಬುದನ್ನು ತಿಳಿಯಬಹುದಾಗಿದೆ. ಕೆರೆಯ ನೀರನ್ನು ಕುಡಿಯಲಷ್ಟೇ ಅಲ್ಲದೆ, ಮೀನುಸಾಕಾಣಿಕೆಯ ಅತ್ಯವಶ್ಯಕ ಕಾರ್ಯಗಳಿಗಾಗಿ ಕೆರೆಗಳನ್ನು ನಿರ್ಮಿಸುತ್ತಿದ್ದರೆಂದು ಶಿಲಾಶಾಸನಗಳ ಆಧಾರಗಳಿಂದ ತಿಳಿದು ಬರುತ್ತದೆ. ಕೆರೆಗಳ ಶೃಂಖಲೆಯನ್ನು ನಿರ್ಮಿಸುತ್ತಿದ್ದರು. ಇಂತಹ ಶೃಂಖಲೆಯನ್ನು ನಾವು ವಿಜಯನಗರ ಅರಸರ ಕಾಲದಲ್ಲಿ

ನಿರ್ಮಾಣಗೊಂಡಿರುವುದನ್ನು ಕಾಣಬಹುದು. ಇಂತಹ ಕೆರೆಗಳನ್ನು ನಿರ್ಮಿಸಲು ಕಾರಣಗಳೆಂದರೆ, ನಿಸರ್ಗದ ಭೌಗೋಳಿಕ ಲಕ್ಷಣ, ಮಳೆಯ ಅತೀವೃಷ್ಟಿ ಮತ್ತು ಅನಾವೃಷ್ಟಿಯ ಸ್ವಭಾವವನ್ನು ಅರಿತು ಕೆರೆಗಳನ್ನು ವಿವಿಧ ಭೂಮಟ್ಟದಲ್ಲಿ ಒಂದಕ್ಕೊಂದು ಹೊಂದಿಕೊಂಡಿರುವಂತೆ ನಿರ್ಮಿಸುತ್ತಾರೆ. ಇದರಿಂದಾಗಿ ಮೊದಲ ಕೆರೆಯು ಮೇಲ್ಪಟ್ಟದಲ್ಲಿದ್ದು, ಮಳೆಯ ನೀರು ಅದರಲ್ಲಿ ಸಂಗ್ರಹಗೊಳ್ಳುತ್ತದೆ. ಹೆಚ್ಚುವರಿ ನೀರು ಬಂದಲ್ಲಿ ಆ ನೀರು ಕೋಡಿಯ ಮೂಲಕ ಹರಿದು ಬಂದು ಎರಡನೆಯ ಕೆರೆಯಲ್ಲಿ ಸಂಗ್ರಹವಾಗುತ್ತದೆ. ಈ ವಿಶಿಷ್ಟ ಪದ್ಧತಿಯಿಂದ ಒಮ್ಮೆ ಹೆಚ್ಚುವರಿ ನೀರು ಮೊದಲ ಕೆರೆಗೆ ಬಂದರೂ, ಕೆರೆಯು ಒಡೆಯದಂತೆ ಇರುತ್ತದೆ. ಹಾಗೂ ನೀರು ಪೋಲಾಗುವುದನ್ನು ಸಹ ಎರಡನೆ ಕೆರೆಯು ತಪ್ಪಿಸುತ್ತದೆ ಹಾಗೂ ಜಲಚರ ಪ್ರಾಣಿಗಳಿಗೂ ರಕ್ಷಣೆ ಸಿಗುತ್ತದೆ. ಮೊದಲಿನ ಈ ಕೆರೆಯಿಂದ ಹೊರಬಿದ್ದ ಜಲಚರ ಪ್ರಾಣಿಗಳು ಹೊರತೆ ಬಿದ್ದ ಸಾಯಸದೆ, ಮುಂದಿನ ಕೆರೆಗೆ ಸೇರಿ ಬದುಕುಳಿಯುತ್ತಿದ್ದವು. ಇಂತಹ ಕೆರೆಗಳ ಸಮೂಹವನ್ನು ಕಾಣುವುದರಿಂದ, ಹೀಗಾಗಿಯೇ ಹೆಚ್ಚು ಕೆರೆಗಳು ನಿರ್ಮಾಣಗೊಳ್ಳುತ್ತಿದ್ದವು ಎಂಬುದು ತಿಳಿದು ಬರುತ್ತದೆ. ಪರಿಸರಕ್ಕನುಗುಣವಾಗಿ ಕೆರೆಗಳನ್ನು ನಿರ್ಮಿಸುವುದು ಸಹಜವಾಗಿತ್ತು. ಆದರೆ ಒಂದು ಕೆರೆಯನ್ನು ನಿರ್ಮಿಸುವ ಕಾಲದಲ್ಲಿ ಆದ ಅಡಚಣೆಗಳನ್ನು ನಿವಾರಿಸಲು ನರಬಲಿ, ಪ್ರಾಣಿಬಲಿಗಳನ್ನು ನೀಡಿರುವುದು ಜನಪದ ಕಥೆಗಳಾಗಿ ಜೀವಂತವಾಗಿರುವುದನ್ನು ಕಾಣಬಹುದು. ಕೆರೆಗೆ ಹಾರ ಎಂಬ ಜನಪದಕತೆ ತಿಳಿದುಬರುತ್ತದೆ. ಕೆರೆಯಲ್ಲಿ ನೀರು ಬರುತ್ತಿಲ್ಲವೆಂಬ ಕಾರಣಕ್ಕಾಗಿ ಭಾಗೀರಥಿ ಎಂಬ ಪತವ್ರತೆಯನ್ನು ಕೆರೆಗೆ ಬಲಿಕೊಟ್ಟರು. ಆಗ ಆ ಊರಲ್ಲಿ ಕೆರೆಗೆ ನೀರು ಬಂತೆಂದು ಹೇಳುವರು. ಹೀಗೆ ಸಮಾಜದ ಜನರು ಕೆರೆಗಳಿಗೆ ಪೂಜ್ಯ ಭಾವನೆಯಿಂದ ಕಾಣುತ್ತಿದ್ದರು.

ವಿಜಯನಗರದ ಮಲಪನಗುಡಿಯಲ್ಲಿರುವ ಶಾಸನವು ಹೇಳುವಂತೆ ಮಾಳಿಗೆ–ಕೂಪ–ಆರಾಮ ಅಂದರೆ, ಬಾವಿತೋಟದಿಂದೊಡಗೂಡಿದ ವಿಶ್ರಾಂತಿ ಧಾಮ. ಇದನ್ನು ನಾವು ಇಂದಿಗೂ ಈ ಹಳ್ಳಿಯ ಹೊರವಲಯದಲ್ಲಿ ಕಾಣಬಹುದು. ಇದರ ಉದ್ದೇಶವೆಂದರೆ, ವಿಜಯನಗರದ ಹೆದ್ದಾರಿಯಲ್ಲಿ ಹೋಗುವ ಪ್ರಯಾಣಿಕರಿಗೆ ಅರವಟ್ಟಿಗೆಯನ್ನು ರಚಿಸಿ ಬಾಯಾರಿಕೆಯನ್ನು ಹಿಂಗಿಸುವುದು ಹಾಗೂ ಅದರ ಮಾರ್ಗಾಯಾಸ ಪರಿಹಾರಕ್ಕೆ ತೋಟ ನಿರ್ಮಿಸಿದ್ದರು. ಹೀಗಾಗಿ ಇದರ ಬಳಿ ಗಿಡಮರಗಳ ತೋಪು ನಿರ್ಮಿಸಲಾಗಿತ್ತು. ಹೀಗೆ ಈ ಅರವಟ್ಟಿಗೆ ಹಾಗೂ ತೋಟದ ಉಸ್ತುವಾರಿಗೆಂದೇ ಬುಳ್ಳಯ್ಯ ನಾಯಕನ ಮಗನಾದ ಹೆಗಡೆ ಸೋವನ್ನನೆಂಬ ದಾನಿಯು ಭೂಮಿಯನ್ನು ನೀಡಿದ್ದನು. ಇದರಿಂದ ನಮಗೆ ತಿಳಿದು ಬರುವುದೆನೆಂದರೆ ಅಂದಿನ ದಿನಗಳಲ್ಲಿ ಸಮಾಜದಲ್ಲಿ ದಾರಿಹೋಕರಿಗೂ, ಪ್ರಯಾಣಿಕರ ಬಗೆಗೂ ಇದ್ದ ಸದ್ಭಾವನೆಯನ್ನು ಸೂಚಿಸುತ್ತದೆ. ಜನರಿಗೆ ದಾಹ ತೀರಿಸಲೆಂದು ಬಹುದೂರದ ಊರ ದಾರಿಗಳಲ್ಲಿ ಕೆರೆಗಳನ್ನು ನಿರ್ಮಿಸಿ ಅಲ್ಲಿ ತೋಟಗಳನ್ನು ನಿರ್ಮಿಸುತ್ತಿದ್ದರು. ಹಾಗೂ ತೋಟಗಳು ಕಂಡುಬರುತ್ತವೆಯೋ ಅಲ್ಲಿ ಕೆರೆಗಳನ್ನು ನಿರ್ಮಿಸಿ ಜನರಿಗೆ ನೀರಿನ ಅರವಟ್ಟಿಗೆ ಸೌಲಭ್ಯ ಕಲ್ಪಿಸುತ್ತಿದ್ದರು. ಸಮಾಜದ ಜನರಿಗೆ ಉಪಯೋಗವಾಗಲೆಂದು ಕೆರೆಗಳು ನಿರ್ಮಾಣಗೊಳ್ಳುತ್ತಿದ್ದರು. ಕೆರೆಗಳನ್ನು ಪುಷ್ಕರಣಿಗಳನ್ನಾಗಿ ದೇವಾಲಯದ ಮುಂದೆಯೇ ನಿರ್ಮಿಸಲಾಗುತ್ತಿತ್ತು. ಇಂತಹ ಪುಷ್ಕರಣಿಯ ನೀರನ್ನು ಅಭಿಷೇಕಕ್ಕೆ, ದರ್ಶನಾರ್ಥಿಗಳು ಮೀಯಲಿಕ್ಕೆ ಹಾಗೂ ದೇವಸ್ಥಾನದ ಉದ್ಯಾನಗಳಿಗೆ ನೀರು ಹಾಯಿಸುವ ಮುಂತಾದ ಅನೇಕ ಕಾರ್ಯಗಳಿಗೆ ನೇರವಾಗಿದ್ದವು. ಕೆಲವನ್ನು ಪ್ರತ್ಯೇಕವಾಗಿ ದೇವಾಲಯದ ಹೂದೋಟದ ಉಪಯೋಗಕ್ಕೆಂದೇ ನಿರ್ಮಿಸಲಾಗುತ್ತಿತ್ತು. ಸಾಮಾನ್ಯವಾಗಿ ಕೆರೆಯ ನೀರನ್ನು ಅರಮನೆಯ

ಉಪಯೋಗಕ್ಕೆ ಸರಬರಾಜು ಮಾಡುತ್ತಿದ್ದರು ಎಂಬುದನ್ನು ವಿಜಯನಗರದ ಕೆರೆಗಳ ನಿರ್ಮಾಣದಲ್ಲಿ ಕಾಣಬಹುದು. ನಗರಕ್ಕೆ ಬೇಕಾದ ನೀರಿನ ಸರಬರಾಜಿನ ಏರ್ಪಾಡು ಮಾಡುವುದು ಅವಶ್ಯಕವೆನಿಸಿತು. ಆ ನೀರು ಕುಡಿಂಯುವುದಕ್ಕೂ, ಜಾನುವಾರಗಳ ಉಪಂಯೋಗಕ್ಕೂ ಮತ್ತಿತ್ತರ ಬಳಕೆಗಳಿಗೂ ಬೇಕಾಗಿದ್ದುದರಿಂದ ಹೆಚ್ಚಿನ ಪ್ರಮಾಣದಲ್ಲಿ ಕೆರೆ ಕುಂಟೆಗಳು ನಿರ್ಮಾಣಗೊಂಡವು. ವಿಜಯನಗರದಿಂದ ಕಮಲಾಪುರಕ್ಕೆ ರಾಯರ ಕೆರೆಯಿಂದ ನೀರು ಬಂದು ಯಾವಾಗಲೂ ತುಂಬಿರುತ್ತದೆ. ಇಲ್ಲಿ ಶೇಖರವಾದ ನೀರು ಈಗಲೂ ಜನರಿಗೂ, ಬೇಸಾಯಕ್ಕೂ ಮತ್ತು ಪಶುಪಕ್ಷಿಗಳಿಗೂ ಉಪಯೋಗವಾಗುತ್ತಲಿದೆ.

ಇಡೀ ಸಮಾಜದ ಅಭ್ಯುದಯಕ್ಕೆ ಮೂಲಭೂತ ಪ್ರಾಮುಖ್ಯತೆ ಉಳ್ಳದ್ದು ಕೆರೆಯ ನಿರ್ಮಾಣ ಎಂಬ ಅಂಶವನ್ನು ವಿಜ್ಞಾನೇಶ್ವರನು ತಿಳಿಸುತ್ತಾನೆ. ಮಾನವನ ಜೀವನ ಸಾಗಬೇಕಾದರೆ ಅವನ ಆರ್ಥಿಕತೆಯು ಪ್ರಮುಖವಾಗಿರುತ್ತದೆ. ಹೀಗೆ ಪ್ರತಿ ವ್ಯಕ್ತಿಯ ಆರ್ಥಿಕತೆಯಿಂದಾಗಿ ದೇಶದ ಆರ್ಥಿಕ ಸ್ಥಿತಿಯು ಉತ್ತಮಗೊಳ್ಳುತ್ತದೆ. ನಮ್ಮ ಆರ್ಥಿಕ ವ್ಯವಸ್ಥೆಯ ಮೂಲವೇ ಕೃಷಿ. ಇದಕ್ಕಾಗಿ ಕೆರೆಗಳು ನಿರ್ಮಾಣಗೊಂಡವು. ಆದರೆ ಕೃಷಿ ಭೂಮಿಯು ಒಂದೇ ತೆರನಾಗಿ ಇರದೆ, ಕೃಷಿ ಹವಾಮಾನಕ್ಕೆ ತಕ್ಕಂತೆ ವಿವಿಧ ಪ್ರದೇಶಗಳಲ್ಲಿ ಕೆರೆಗಳು ಹೆಚ್ಚು, ಕಡಿಮೆ ಪ್ರಮಾಣದಲ್ಲಿ ನಿರ್ಮಾಣಗೊಂಡವು. ಅರಸರ ಅವಧಿಯಲ್ಲಿ ರಾಜ್ಯದ ಪ್ರಜೆಗಳಲ್ಲಿ ಏಕತೆಯನ್ನು, ರಾಷ್ಟ್ರ ಪ್ರೇಮವನ್ನು ಬೆಳೆಸಿದ್ದರಿಂದ ಹಿಂದೂ, ಮುಸ್ಲಿಂರೆಲ್ಲರೂ ಸಾಮೂಹಿಕವಾಗಿ ಕಲ್ಯಾಣ ಕಾರ್ಯಗಳಾದ ನೀರಾವರಿ ಕ್ರಮಗಳನ್ನು ಕೈಗೆತ್ತಿಕೊಳ್ಳಲು ಕೆರೆಗಳನ್ನು ನಿರ್ಮಿಸಿದರು. ಇದರಿಂದ ಆರ್ಥಿಕ ಪ್ರಗತಿಯು ಅಭಿವೃದ್ಧಿಯಾಯಿತು. ಇಂದು ಕೆರೆಗಳು ಬತ್ತಿ ಹೋಗಿದ್ದು ಅವುಗಳನ್ನು ನೆಲಸಮ ಮಾಡಿ ಬೃಹತ ನಿವೇಶನಗಳನ್ನು ಹಾಗೂ ಗದ್ದೆಗಳನ್ನಾಗಿ ಮಾಡಿಕೊಂಡು ಜನರು ಉಪಂಯೋಗಿಸಿಕೊಳ್ಳುತ್ತಿರುವರು. ಹೀಗೆ ಕೆರೆಗಳು ಸಮಾಜಕ್ಕೆ ಉಪಯೋಗವಾಗುತ್ತಿರುವುದನ್ನು ಕಾಣಬಹುದು. ಕೆರೆಗಳಿದ್ದ ಜಾಗದಲ್ಲಿ ಇಂದು ಹೊಲಗಳಾಗಿ ಮಾರ್ಪಟಾಗಿದ್ದನ್ನು ವಿಜಯನಗರದ ಅರಸರ ಕಾಲದಲ್ಲಿ ಕಾಣಬಹುದು. ಕಮಲಾಪುರದ ಪೂರ್ವಕ್ಕೆ ಸೀತಾರಾಮ ತಂಡದ ಹತ್ತಿರವಿರುವ ಕ್ರಿ.ಶ. ೧೫೭೯ ರ ಶಾಸನವು ನಲತಿಂಮಬೋಯಿಯು ಅಚ್ಯುತರಾಯನ ಮಗ ವೆಂಕಟಾದ್ರಿ ಚಿಕ್ಕರಾಯನಿಗೆ ಪುಣ್ಯವಾಗಲೆಂದು ಕೆರೆಯನ್ನು ಕಟ್ಟಿಸಿದನೆಂದು ತಿಳಿಸುತ್ತದೆ.[೧] ಆದರೆ ಈಗ ಈ ಕೆರೆ ಇರಬೇಕಾಗಿದ್ದ ಸ್ಥಳದಲ್ಲಿ ಈಗ ಹೊಲಗಳಿವೆ, ಗದ್ದೆಗಳಿವೆ. ಕೆಲವು ಕಣಿವೆಗಳ ಪ್ರದೇಶಗಳಲ್ಲಿ ಸಣ್ಣ ಕೆರೆ ಕಟ್ಟೆಗಳನ್ನು ಕಟ್ಟಿ ನೀರನ್ನು ಶೇಖರಿಸಲಾಗುತ್ತಿತ್ತು. ಹೀಗೆ ಶೇಖರಿಸಿದ ನೀರನ್ನು ಸಣ್ಣ ಕಾಲುವೆಗಳ ಮೂಲಕ ಹಾಯಿಸಿ ಆಯಕಟ್ಟಿನ ಕೆಳಭಾಗದ ಪ್ರದೇಶದಲ್ಲಿ ವಾಸಿಸುವ ಜನರಿಗೆ ಒದಗಿಸಲಾಗುತ್ತಿತ್ತು. ಕೆಲವು ಪ್ರದೇಶಗಳಲ್ಲಿ ಸರಣಿ ಕಟ್ಟೆಗಳನ್ನು ನಿರ್ಮಿಸಿದ್ದನ್ನು ಕಾಣಬಹುದು. ಇಂದಿನ ಅದೆಷ್ಟೋ ಕೆರೆಗಳು ಹೂಳು ತುಂಬಿದ್ದು, ಹೆಚ್ಚಿನ ಕೆರೆಗಳನ್ನು ಗುರುತಿಸವುದು ಕಷ್ಟಕರವಾಗಿದೆ. ಅಲ್ಲದೆ ಕೆರೆಯ ಪ್ರದೇಶಗಳನ್ನು ಗದ್ದೆ ಹಾಗೂ ನಿವೇಶನಗಳನ್ನಾಗಿ ಪರಿವರ್ತಿಸಲಾಗಿದೆ. ಕೆರೆಗಳಿಂದ ಅಂತರ್ಜಲ ವೃದ್ಧಿಯಾಗಿ ನಗರದ ಸುತ್ತುಮುತ್ತಲಿನ ಪ್ರದೇಶಗಳಲ್ಲಿರುವ ಕೈಪಂಪುಗಳಿಗೆ ಸಹಾಯಕವಾಗುತ್ತದೆ. ಒಂದಲ್ಲಾ ಒಂದು ಕಾರಣದಿಂದ ಉಪಯೋಗವಾಗಲೆಂದೇ ಕೆರೆಗಳು ನಿರ್ಮಾಣಗೊಳ್ಳುತ್ತಿವೆ. ಅವು ಸಾಮಾಜಿಕವಾಗಿ ಕೂಡಾ ಉಪಯೋಗವಾಗುತ್ತಲಿದೆ.

---

೧. ಹಂಪಿ ಸಂಪುಟ : ಡಾ॥ ದೇವಕೊಂಡಾರೆಡ್ಡಿ.

ಧಾರ್ಮಿಕ :

ಕೆರೆಗಳನ್ನು ಜನರ ಒಳತಿಗಾಗಿ, ಪೂಜೆಗಳಿಗಾಗಿ ನಿರ್ಮಿಸಲಾಗುತ್ತಿತ್ತು ಎಂದು ತಿಳಿದಿದ್ದೇವೆ. ಇನ್ನೂ ಮುಖ್ಯವಾಗಿ ಇವುಗಳನ್ನು ಧಾರ್ಮಿಕ ಆಚರಣೆಗಳಿಂದಲೂ ನಿರ್ಮಿಸುತ್ತಿದ್ದರು, ಎಂಬುದನ್ನು ಶಾಸನಗಳಿಂದ ತಿಳಿಯಬಹುದು. ಸಾಮಾಜಿಕ ಜನರಲ್ಲಿ ನೀರು ಎಂದರೆ ದೇವರು ಎಂಬ ನಂಬಿಕೆಯಿಂದ ನೀರನ್ನು ಸಂಗ್ರಹಿಸಿ ಕೆರೆಗಳನ್ನು ನಿರ್ಮಿಸಿ ಅವುಗಳನ್ನು ಪೂಜ್ಯಭಾವನೆಯಿಂದ ಕಾಣುತ್ತಿದ್ದರು. ದೇವಾಲಯವನ್ನು ನಿರ್ಮಾಣ ಮಾಡುವುದು ಎಷ್ಟು ಪುಣ್ಯದ ಕಾರ್ಯವಾಗಿತ್ತೊ ಕೆರೆಗಳನ್ನು ನಿರ್ಮಿಸುವುದು ಅಷ್ಟೇ ಪುಣ್ಯದ ಕಾರ್ಯವಾಗಿತ್ತು. ನಂಬಿದ ಎಲ್ಲ ಅರಸರು, ಅಧಿಕಾರಿಗಳು, ಕೆರೆಗಳನ್ನು ನಿರ್ಮಿಸುತ್ತಿದ್ದರು. ಅವರಲ್ಲಿರುವ ದೈವತ್ವದ ಭಾವನೆಯಿಂದ ಕೆರೆಗಳು ನಿರ್ಮಾಣಗೊಂಡವು ಎಂದರೆ ತಪ್ಪಾಗಲಾರದು. ಅರಸರು ತಮ್ಮ ಪ್ರತಿಷ್ಠೆಯನ್ನು ಹೆಚ್ಚಿಸಿಕೊಳ್ಳಲು ದೇವಾಲಯಗಳನ್ನು ನಿರ್ಮಿಸುತ್ತಿದ್ದರು ಹಾಗೂ ಆ ದೇವಾಲಯದ ಮುಂದೆ ಹಾಗೂ ಎದುರಿಗೆ ದೇವರ ಮೂರ್ತಿಗಳ ಪೂಜೆಗೆ ನೀರಿನ ಅವಶ್ಯಕತೆಯಿಂದಾಗಿ ದೇವಾಲಯದ ಮುಂದೆ ಕೆರೆಗಳನ್ನು ನಿರ್ಮಿಸುತ್ತಿದ್ದರೆಂದು ಶಾಸನಗಳಿಂದ ತಿಳಿದುಬರುತ್ತದೆ. ವಿಜಯನಗರದ ರಾಜ್ಯದ ಅಧಿಪತಿಯಾಗಿದ್ದ ರಾಮಪ್ಪನು ಕೆಲವು ಅಗ್ರಹಾರಗಳನ್ನು ಸ್ಥಾಪಿಸಿ ದೇವಾಲಯಗಳನ್ನು ನಿರ್ಮಿಸಿ ಕೆರೆಗಳನ್ನು ಕಟ್ಟಿಸಿದನೆಂದು ತನ್ನ ಶಾಸನಗಳಲ್ಲಿ ಹೇಳಿಕೊಂಡಿದ್ದಾನೆ. ದೇವಾಲಯವನ್ನು ನಿರ್ಮಿಸುವುದರ ಜೊತೆಗೆ ಪ್ರತಿಯೊಂದು ಕೆರೆಯನ್ನು ನಿರ್ಮಿಸುತ್ತಿದ್ದರು. ದೇವಾಲಯವೂ ಸಹ ಕೆರೆಗಳ ಸಂರಕ್ಷಣಾ ಕೆಲಸದಲ್ಲಿ ನಿರತರಾಗಿದ್ದವು.

ಕೆರೆಗಳನ್ನು ಕಟ್ಟಿಸುವುದಕ್ಕೆ ಒಂದು ಪ್ರಮುಖ ಕಾರಣ ಜಲವನ್ನು ಸಂಗ್ರಹಿಸಿ ತಮಗೆ ಬೇಕೆಂದಾಗ ಬಳಸಿಕೊಂಡು ವ್ಯವಸಾಯವನ್ನು ಮಾಡುವುದು, ಕೆರೆಗಳನ್ನು ಕಟ್ಟಿಸುವುದು ಪ್ರಜಾಹಿತಾತ್ಮಕ ಕಾರ್ಯವೆಂದು ಪರಿಗಣಿಸಿ ಈ ಕಾರ್ಯವನ್ನು ಮಾಡಿದವನಿಗೆ ಇಹಲೋಕ ಮತ್ತು ಪರಲೋಕದಲ್ಲಿ ಸದ್ಗತಿಯು ದೊರೆಯುವುದು ಎಂದು ಪ್ರಾಚೀನ ಭಾರತದ ಜನರಲ್ಲಿ ಇದ್ದ ನಂಬಿಕೆಯೇ ಕೆರೆಗಳನ್ನು ನಿರ್ಮಿಸಲು ಒಂದು ಕಾರಣವಾಗಿದೆ. ಕೆರೆ ಕಟ್ಟುವುದು ಹಲವು ಪುಣ್ಯ ಕೆಲಸಗಳಲ್ಲಿ ಒಂದು ಎಂದು ಅಂದಿನ ಜನಸಾಮಾನ್ಯರ ಮನಸ್ಸಿನಲ್ಲಿ ಬೇರೂರಿದ್ದು ಕೆರೆಗಳನ್ನು ಹೆಚ್ಚು ನಿರ್ಮಿಸುವಂತಾಯಿತು. ದೈವತ್ವದ ಮನೋಭಾವನೆಯುಳ್ಳ ಜನರು ಈ ಕಾರ್ಯದಲ್ಲಿ ಸಕ್ರಿಯವಾಗಿ ತಮ್ಮನ್ನು ತೊಡಗಿಸಿಕೊಳ್ಳುತ್ತಿದ್ದರು. ಈ ಕಾರಣಗಳಿಂದಾಗಿ ಧರ್ಮದ ಜಾಡಿನಲ್ಲಿ ನಡೆದು ಧಾರ್ಮಿಕ ಕ್ಷೇತ್ರಕ್ಕೆ ತಮ್ಮ ಕೊಡುಗೆಯನ್ನು ನೀಡಿದ್ದಾರೆ. ಅವರಿಗೆ ಅರಿವಿಲ್ಲದೆಯೇ ಕೆಲವು ನಂಬಿಕೆಗಳು ಮತ್ತು ಆಚರಣೆಗಳು ಅವರ ದೈನಂದಿನ ಜೀವನದಲ್ಲಿ ಹೊಸೆದುಕೊಂಡಿರುವುದನ್ನು ಅಂದಿನ ಸಾಮಾಜಿಕ ಮತ್ತು ಧಾರ್ಮಿಕ ಜೀವನವನ್ನು ಗಮನಿಸಿದಾಗ ನಮಗೆ ತಿಳಿದುಬರುತ್ತದೆ.

ಕೆರೆಯ ಬಗೆಗೆ ಇರುವ ಭಾರತದ ಅತ್ಯಂತ ಪ್ರಾಚೀನವಾದ ಉಲ್ಲೇಖವು ಸಂಖ್ಯಾಯನ ಗೃಹ್ಯಸೂತ್ರದಲ್ಲಿದೆ. ಬಾವಿಯನ್ನು ಅಥವಾ ಕೊಳವನ್ನು ಬಳಸುವ ಮುನ್ನ ವೈದಿಕ ಆಚರಣೆಗಳನ್ನು ನಡೆಸಿ ಋಗ್ವೇದದ ಮಂತ್ರಗಳನ್ನು ಉಚ್ಚರಿಸಿ ಮಳೆಯ ಅಧಿದೇವತೆಯಾದ ವರುಣನನ್ನು ಮತ್ತು ಇತರ ದೇವತೆಗಳನ್ನು ಸ್ತುತಿಸಿದ ನಂತರದಲ್ಲಿಯೇ ಕೊಳ ಮತ್ತು ಬಾವಿಗಳನ್ನು ಉಪಯೋಗಿಸಬೇಕು ಎಂದು ಗ್ರಂಥವು ತಿಳಿಸುತ್ತದೆ. ಅಗ್ನಿ ಪುರಾಣವು ಸಹ ಈ ಅಭಿಪ್ರಾಯವನ್ನು ಪ್ರಸ್ತಾಪಿಸುತ್ತದೆ.[೨]

೨. ವಿಜಯನಗರ ಸಾಮ್ರಾಜ್ಯದ ನೀರಾವರಿ ವ್ಯವಸ್ಥೆ – ಸಿ. ಟಿ. ಎಂ. ಕೋಟ್ರಯ್ಯ

ಭಾರತದಲ್ಲಿ ಅಂದಿನಿಂದ ಇಂದಿನವರೆಗೆ ಯಾವುದೇ ಮುಖ್ಯ ಕೆಲಸವನ್ನು ಮಾಡಬೇಕಾದಲ್ಲಿ ಪ್ರಶಸ್ತ ದಿನ ಮತ್ತು ಸಮಯವನ್ನು ಆಯ್ಕೆಮಾಡಿ ಕೆಲಸವನ್ನು ಕೈಗೊಳ್ಳುವುದು ವಾಡಿಕೆಯಲ್ಲಿದೆ. ಕೆರೆಗಳನ್ನು ಕಟ್ಟಲು ಮತ್ತು ಅದನ್ನು ಬಳಸಲು ಸಹ ಒಳ್ಳೆಯ ದಿನ ಮತ್ತು ಮುಹೂರ್ತವನ್ನು ನೋಡುತ್ತಿದ್ದರು. ಇಂತಹ ವಿವರಣೆಗೆ ಸೂಕ್ತ ಮಾಹಿತಿಯನ್ನು ಪೋರುಮಾಮಿಲ್ಲ ಶಾಸನದಿಂದ ತಿಳಿಯಬಹುದು. ಇದರಲ್ಲಿ ಶಕವರ್ಷ ೧೨೯೧ ರ ಸೌಮ್ಯ ಸಂವತ್ಸರ. ಕಾರ್ತಿಕ ಶುದ್ಧ ೧೪ನೆಯ ದಿನ ಗುರುವಾರದ ಪುಷ್ಯ ನಕ್ಷತ್ರ, ಕರ್ಕಾಟಕ ಲಗ್ನದ ದಿನದಂದು, ಎಲ್ಲಾ ಗ್ರಹಗಳು ಅನುಕೂಲಕರವಾಗಿರುವಂದು ಈ ಕೆರೆಯನ್ನು ಕಟ್ಟಲಾಯಿತು ಎಂದು ಶಾಸನಗಳಿಂದ ತಿಳಿದು ಬಂದಿದೆ.[೩]

ಕೆರೆಯ ನಿರ್ಮಾಣದಲ್ಲಿ ಧಾರ್ಮಿಕ ಆಚರಣೆಗೆ ಬಹಳ ನಂಬಿಕೆಯಿಟ್ಟು ಕೆಲವು ಬಲಿ ಕೊಡುವುದನ್ನು ನಾವು ಕೆರೆಗೆ ಹಾರ ಎಂಬ ಜನಪದ ಗೀತೆಯಿಂದ ತಿಳಿಯಬಹುದು. ಇದರಿಂದ ತಿಳಿಯುವುದೆನೆಂದರೆ ಧಾರ್ಮಿಕವಾಗಿ ದೇವಾಲಯಗಳನ್ನು ಎಲ್ಲಲ್ಲಿ ಸ್ಥಾಪಿಸಿದ್ದಾರೋ ಅಲ್ಲಿ ಕೆರೆಗಳನ್ನು ನಿರ್ಮಿಸಿದ್ದನ್ನು ನೋಡಬಹುದು. ದೇವಾಲಯದ ಮುಂದೆ ಪುಷ್ಕರಣಿಯಂತಹ ಹೊಂಡಗಳನ್ನು ನಿರ್ಮಿಸುತ್ತಿದ್ದನ್ನು ಕಾಣಬಹುದು. ಈ ಹೊಂಡಕ್ಕೆ ನೀರು ಸಂಗ್ರಹಿಸಬೇಕಾದರೆ ಕೆರೆಯನ್ನು ನಿರ್ಮಿಸುವುದು ಅವಶ್ಯಕವಾಗಿತ್ತು. ಆದ್ದರಿಂದ ದೇವಾಲಯದ ಅನತಿ ದೂರದಲ್ಲಿ ಕರೆಯನ್ನು ನಿರ್ಮಿಸಿ, ಅದರಿಂದ ಈ ದೇವಾಲಯದ ಮುಂದಿನ ಹೊಂಡಕ್ಕೆ ನೀರನ್ನು ಬಿಡಲಾಗುತ್ತಿತ್ತು. ದೇವಾಲಯಗಳು ಕೆರೆ ನಿರ್ಮಾಣದ ಕಾರ್ಯಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುತ್ತಿದ್ದವು. ದೇವಾಲಯಗಳಿಗೆ ಸಲ್ಲುವ ಅನೇಕ ದಾನ ದತ್ತಿಗಳು ಮತ್ತು ಧನವನ್ನು ಕೆರೆಯ ನಿರ್ಮಾಣಕ್ಕೆ ಹಾಗೂ ರಕ್ಷಣೆಗೆ ಬಳಸಿಕೊಂಡದ್ದನ್ನು ಶಾಸನಗಳಲ್ಲಿ ಕಂಡುಬಂದಿದೆ. ಇದನ್ನು ನೋಡಿದಾಗ ನಮಗೆ ತಿಳಿದು ಬರುವುದೆನೆಂದರೆ ದೇವಾಲಯ ನಿರ್ಮಾಣಕ್ಕೆ ಕೊಟ್ಟಷ್ಟೇ ಮಹತ್ವವನ್ನು ಕೆರೆ ನಿರ್ಮಾಣಕ್ಕೆ ಕೊಟ್ಟಿದ್ದರು. ಅದೊಂದು ಪುಣ್ಯದ ಕಾರ್ಯವೆಂದು ತಿಳಿದಿದ್ದರು. ಇವುಗಳ ನಿರ್ಮಾಣ ಮತ್ತು ರಕ್ಷಣೆಯ ಕೆಲಸಗಳೆಲ್ಲವು ಧಾರ್ಮಿಕ ಜಾಡಿನಲ್ಲೇ ನಡೆಯುತ್ತಿದ್ದವು. ನೆಲ್ಲೂರು ಜಿಲ್ಲೆಯ ಉದಯಗಿರಿಯ ದಾಖಲೆ ಹೇಳುವಂತೆ ಹರಿಹರನ ಆಡಳಿತ ಸಮಯದಲ್ಲಿ ಒಂದು ಕೆರೆ ಮತ್ತು ದೇವಸ್ಥಾನಗಳನ್ನು ಸಿದ್ದೇಶ್ವರ ದೇವರಿಗೆಂದೇ ನಿರ್ಮಿಸಲಾಯಿತು. ಈ ಸರೋವರವು, ಮಾನಸ ಸರೋವರದಂತೆ ಇದು. ಸಾಧುಗಳ ಸ್ನಾನಕ್ಕೆಂದು ನಿರ್ಮಿಸಲಾಗಿತ್ತು. ಇಲ್ಲಿ ಕೆರೆಯನ್ನು ಸರೋವರವೆಂದು ಬೋದಿಸಲಾಗಿದ್ದನ್ನು ಕಾಣಬಹುದು. ಕೆರೆಯನ್ನು ಕುಂಟೆ, ಸರೋವರ, ತಟಾಕ, ಸಮುದ್ರ, ಗೋಕಟ್ಟೆ ಎಂಬ ಬೇರೆ ಬೇರೆ ಹೆಸರಿನಿಂದ ಕರೆಯುತ್ತಿದ್ದನ್ನು ನಾವು ಈಗಾಗಲೇ ತಿಳಿದಿದ್ದೇವೆ.

ಕೆರೆಯನ್ನು ನಿರ್ಮಿಸುವುದು ದೇವಸ್ಥಾನವನ್ನು ನಿರ್ಮಿಸಿದಂತೆ ಪುಣ್ಯದ ಕಾರ್ಯ ಎಂದು ಭಾವಿಸಲಾಗಿತ್ತು. ಕ್ರಿ.ಶ. ೧೩೭೬ರ ಒಂದು ಶಾಸನವು ಅರಸು ಬುಕ್ಕರಾಯನ ಭಾವ ಮೈದುನನಾದ ಸೋಮಪ್ಪ ನಾಯಕನು ಒಟ್ಟಿಗೆ ಒಂದು ಕೆರೆ ಹಾಗೂ ದೇವಸ್ಥಾನವನ್ನು ನಿರ್ಮಿಸಿದ್ದನ್ನು ತಿಳಿಸುತ್ತದೆ.[೪] ಹಲವು ಬಾರಿ ಅನೇಕ ಕುಟುಂಬಗಳು ಸೇರಿ ಕೆರೆಗಳನ್ನು ನಿರ್ಮಿಸುತ್ತಿದ್ದರು. ಕೆರೆಗಳನ್ನು ಕೇವಲ ಧಾರ್ಮಿಕವಾಗಿ ರಚನೆಗೊಂಡಿವೆ ಎಂಬುದನ್ನು ತಿಳಿದುಕೊಂಡಿದ್ದೇವೆ. ಆದರೆ ಅದೇ ತೆರನಾಗಿ ನಿರ್ಮಾಣಗೊಂಡ ಕೆರೆಗಳು ಧಾರ್ಮಿಕವಾಗಿ ಹೇಗೆ ಉಪಯೋಗವಾಗಿವೆ ಎಂಬುದನ್ನು

---

೩. ವಿಜಯನಗರ ಸಾಮ್ರಾಜ್ಯದ ನೀರಾವರಿ ವ್ಯವಸ್ಥೆ – ಸಿ. ಟಿ. ಎಂ. ಕೋಟ್ರಯ್ಯ

೪. ವಿಜಯನಗರ ಸಾಮ್ರಾಜ್ಯ ನೀರಾವರಿ ವ್ಯವಸ್ಥೆ – ಸಿ. ಟಿ. ಎಂ. ಕೊಟ್ರಯ್ಯ

ವಿಜಯನಗರದಲ್ಲಿನ ಕೆಲವು ಕೆರೆಗಳು ಶಾಸನಗಳ ತಿಳಿಸುತ್ತವೆ. ದೇವಾಲಯಗಳು ಧಾರ್ಮಿಕ ಜೀವನದ ಕೇಂದ್ರಗಳಾಗಿದ್ದು ಧಾರ್ಮಿಕ ಚಟುವಟಿಕೆಗಳಲ್ಲಿ ಪ್ರಭಾವಶಾಲಿ ಪಾತ್ರ ನಿರ್ವಹಿಸುತ್ತಿದ್ದವು. ಕ್ರಿ.ಶ. ೧೪೮೫ ರ ಶ್ರೀಶೈಲ ಶಿಕ್ಷೇತ್ರದ ಒಂದು ಶಿಲಾ ಲೇಖನವು ಸ್ಥಳೀಯ ಆಡಳಿತಾಧಿಕಾರಿ ಸಾಳುವ ಪೆದ್ದಮಲ್ಲರಾಜು ಎಂಬುವನು ಶ್ರೀಶೈಲ ದೇವಸ್ಥಾನದ ಪೂಜೆಗೆಂದೇ ಒಂದು ಕೆರೆ ಹಾಗೂ ಭೂಮಿಯನ್ನು ದಾನ ನೀಡಿದ ವಿವರಗಳನ್ನು ತಿಳಿಸಿದೆ. ಕ್ರಿ. ಶ. ೧೪೭೩ ರರಲ್ಲಿ ಸಾಳುವ ನರಸಿಂಹರಾಜ ಒಡೆಯರ್ ತಿರುಪತಿಯಲ್ಲಿ ಕೆರೆಯನ್ನು ನಿರ್ಮಿಸಿ ನರಸಿಂಗರಾಯ ಕೊನೇರಿ ಎಂದು ಹೆಸರಿಟ್ಟು ಅದೇ ಹೆಸರಿನಿಂದಲೇ ಕರೆಯಲಾಯಿತು.[೫] ಕೊನೇರಿ ಎಂದರೆ ಕೊಳದ ನಾಲ್ಕು ಬದಿಗಳಲ್ಲಿ ಪಾವಟಿಗೆಗಳಿರುತ್ತವೆ. ಆದುದರಿಂದ ಈ ಮಾದರೀಯ ಕೆರೆಯಲ್ಲಿ ದೇವಸ್ಥಾನದ ಮತ್ತು ಇತರ ಧಾರ್ಮಿಕ ಕಾರ್ಯಗಳನ್ನು ನಡೆಸಲೆಂದೇ ನಿರ್ಮಿಸಲಾಗುತ್ತದೆ. ಇದು ನೀರಾವರಿ ಕೆರೆಯಲ್ಲಿ ಧಾರ್ಮಿಕ ಕೆರೆ ಎಂದು ತಿಳಿಯಬಹುದು. ಇಂತಹ ಕೊನೇರಿಗಳನ್ನು ನಾವು ಇಂದು ಪುಷ್ಕರಣಿಗಳೆಂದು ಕರೆಯಲಾಗುತ್ತಿದೆ.

ಈಗಾಗಲೇ ಈ ಮೇಲೆ ವಿವರಿಸಿದ ಕೆರೆಗಳು ಸಾಮಾಜಿಕ ಮತ್ತು ಧಾರ್ಮಿಕವಾಗಿ ತನ್ನದೇ ಆದ ಸ್ಥಾನ ಹೊಂದಿದೆ ಎಂಬುದನ್ನು ಮರೆಯಲಾಗದು. ಏಕೆಂದರೆ ವಿಷ್ಣೋಧರ್ಮೋತ್ತರದಲ್ಲಿ ಸಾರ್ವಜನಿಕರ ಹಿತಕ್ಕಾಗಿ ಕೆರೆಗಳನ್ನು ಕಟ್ಟಿಸಿದವನು, ವರುಣ ಲೋಕದಲ್ಲಿ ಸ್ಥಾನ ಪಡೆಯುತ್ತಾನೆ ಎಂದು ತಿಳಿಸಿದೆ. ಅವು ದೇವಾಲಯದ ಹಾಗೂ ದೇವರಗಳು ವಿವಿಧ ಕಾರ್ಯಗಳಿಗೆಂದೇ ನಿರ್ಮಿಸಲಾಗಿದ್ದವು. ಬಾವಿಯಲ್ಲಿ ಗಂಗಮ್ಮ ಇರುತ್ತಾಳೆ ಎಂಬ ಧಾರ್ಮಿಕ ಭಾವನೆಯಿಂದ ಕೆರೆಗಳನ್ನು ಪೂಜಿಸಿ ಗೌರವಿಸುವುದನ್ನು ಕಾಣುತ್ತೇವೆ. ಇಂದಿಗೂ ಕೂಡ ಈ ಪೂಜಾ ವಿಧಾನ ಜಾರಿಯಲ್ಲಿರುವುದು ಕಂಡು ಬರುತ್ತದೆ. ನೀರಾವರಿ ಕಾಮಗಾರಿಗಳ ದಿಸೆಯಲ್ಲಿ ನಡೆದ ಸತತ ಪ್ರಯತ್ನಗಳಿಗೆ ಹಿಂದೂ ಸಮಾಜದಲ್ಲಿ ಪ್ರಚಲಿತದಲ್ಲಿದ್ದ ಮತ್ತು ಈಗಾಲೂ ಇರುವ ಧಾರ್ಮಿಕ, ಸಂಸ್ಕೃತಿ ನಂಬಿಕೆಗಳೂ ಸಹ ಮುಖ್ಯ ಕಾರಣಗಳಾಗಿವೆ. ನೀರನ್ನು ಸಂಗ್ರಹಿಸುವುದಕ್ಕಾಗಿ ಕೆರೆ ಕಟ್ಟೆಗಳನ್ನು ಕಟ್ಟಿಸುವುದರಿಂದ ವಿಶೇಷ ಪುಣ್ಯ ಲಭಿಸುತ್ತದೆಂದು ನಮ್ಮ ಧಾರ್ಮಿಕ ಗ್ರಂಥಗಳು ಸಾರುತ್ತವೆ. ಕೆರೆಯನ್ನು ಕಟ್ಟಿಸುವುದು ಏಳು ಮಹಾಪುಣ್ಯ ಕಾರ್ಯಗಳಲ್ಲಿ ಅತಿಮುಖ್ಯವಾದುದೆಂದು ಹೇಳಲಾಗಿದೆ. ಏಕೆಂದರೆ, ಈ ನಿರ್ಮಾಣ ಕಾರ್ಯಗಳಿಂದ ಶೇಖರಿಸಲ್ಪಟ್ಟ ನೀರು ಭೂಮಿಯ ಮೇಲೆ ವಾಸಿಸುವ ಚರಾಚರ ಪ್ರಾಣಿಗಳೆಲ್ಲವುಗಳಿಂದಲೂ ಉಪಯೋಗಿಸಲ್ಪಡುತ್ತದೆ. ಆದುದರಿಂದ ಇಂಥ ಕಾರ್ಯಗಳನ್ನು ಕೈಗೊಳ್ಳುವುದರಿಂದ ಲಭ್ಯವಾಗುವ ಪುಣ್ಯ ವಿಶೇಷ. ಬ್ರಾಹ್ಮನೂ ಸಹಾ ಎಣಿಕೆ ಮಾಡಲು ಅಶಕ್ತನೆಂದು ಕಡಪಾ ಜಿಲ್ಲೆಯ ಶಿಲಾಶಾಸನದಿಂದ ತಿಳಿದು ಬರುತ್ತದೆ. ಹನ್ನೆರಡನೇ ಶತಮಾನದವನಾದ ಸೊನ್ನಲಾಪುರದ ಸಿದ್ಧರಾಮನಂತಹ ಶಿವಯೋಗಿಯು ತನ್ನ ಅನುಚರರೊಂದಿಗೆ ಕೆರೆಗಳ ನಿರ್ಮಾಣ ಕಾರ್ಯದಲ್ಲಿ ತೊಡಗಿ ಆ ಮೂಲಕ ಜನಾಂಗದ ಶ್ರೇಯೋಭಿವೃದ್ಧಿ ಕಾರಣಕ್ಕಾಗಿ ಮೋಕ್ಷವನ್ನು ಕಂಡುಕೊಂಡರು.[೬] ಹೀಗೆ ನೀರಾವರಿ ಕಾಮಗಾರಿಗಳಲ್ಲಿ ಧಾರ್ಮಿಕ ಭಾವನೆಗಳೂ ಸಹ ಅಡಗಿದ್ದುದರಿಂದಾಗಿ, ಅವುಗಳ ನಿರ್ಮಾಣ ಕಾರ್ಯದಲ್ಲಿ ಸಮಾಜದ ಎಲ್ಲಾ ವರ್ಗಗಳ ಜನರಿಂದ ಪ್ರೋತ್ಸಾಹ ದೊರೆಯುತ್ತಿತ್ತು. ಇದರಿಂದ ನಮಗೆ ಧಾರ್ಮಿಕವಾಗಿ ಕೆರೆಗಳ ಬಗ್ಗೆ ಇರುವ ಪ್ರಸ್ತಾಪವನ್ನು ತಿಳಿಯಬಹುದು. ಕೆರೆಗಳು ನಗರಕ್ಕೆ ಬೇಕಾದ ನೀರಿನ ಸರಬರಾಜು

---

೫. ವಿಜಯನಗರ ಸಾಮ್ರಾಜ್ಯ ನೀರಾವರಿ ವ್ಯವಸ್ಥೆ – ಸಿ. ಟಿ. ಎಂ. ಕೊಟ್ರಯ್ಯ

೬. ಹಂಪಿ ಸಂಪುಟ – ಡಾ॥ ದೇವರ ಕೊಂಡಾರೆಡ್ಡಿ

ಮಾಡುತ್ತಿತ್ತು. ಅಂದಿನ ಅರಸರು ಮತ್ತು ಜನರು ಧಾರ್ಮಿಕತೆಯಿಂದ ಅಪಾರವಾಗಿ ಕಾಣುವವರಾಗಿದ್ದರು ಎಂಬುದನ್ನು ತಿಳಿಯಬಹುದು. ಚಿತ್ರದುರ್ಗ ಜಿಲ್ಲೆಯ ನಾಯಕನಹಟ್ಟಿಯ ತಿಪ್ಪೇ ರುದ್ರಸ್ವಾಮಿಯವರ ಪ್ರಭಾವದಿಂದ ಜನರ ಸುಖಕ್ಕಾಗಿ ಏಳು ಕೆರೆಗಳನ್ನು ಕಟ್ಟಿಸಲಾಯಿತು.[೭] ಎಂಬುದನ್ನು ಕಾಣಬಹುದು. ಇಲ್ಲಿ ಸಿದ್ಧಿಪುರುಷರ ಮೇಲಿನ ಅಪಾರ ನಂಬಿಕೆಯಿಂದ ಕೆರೆಗಳು ನಿರ್ಮಾಣಗೊಂಡವು ಎಂದರೆ ತಪ್ಪಾಗಲಾರದು.

ಸಾಂಸ್ಕೃತಿಕ :

ನೀರು ಜಗತ್ತಿನಲ್ಲಿರುವ ಕೋಟ್ಯಂತರ ಜೀವರಾಶಿಗಳಿಗೆ ಅತ್ಯಂತ ಅವಶ್ಯವು ಹಾಗೂ ಎಲ್ಲ ಜೀವರಾಶಿಗಳಿಗೆ ಜೀವಾಧಾರವು. ಇಂತಹ ವಸ್ತುವು ದೈನಂದಿನ ಚಟುವಟಿಕೆಗಳಲ್ಲಿ ಪ್ರತಿ ಪ್ರಾಣಿಗೂ ಅತಿ ಮುಖ್ಯವು. ಮಾನವನು ಮೊಟ್ಟಮೊದಲಿಗೆ ಈ ಭೂಮಿಯ ಮೇಲೆ ಕಾಣಿಸಿಕೊಂಡಂದಿನಿಂದ ಇಂದಿನವರೆಗೆ ನೀರಿನೊಡನೆ ನಿಕಟ ಸಂಬಂಧವನ್ನು ಹೊಂದಿದ್ದಾನೆ. ಅಂದಿನಿಂದ ಇಂದಿನವರೆಗೂ ಮಾನವನ ಎಲ್ಲಾ ಚಟುವಟಿಕೆಗಳು ನೀರಿನ ಸಮೀಪವೇ ಕೇಂದ್ರೀಕೃತವಾಗಿರುವುದನ್ನು ನಾವು ನೋಡಬಹುದು. ಕೆರೆಗಳನ್ನು ವ್ಯವಸಾಯಕ್ಕೆ ಉಪಯೋಗವಾಗುವಂತೆ ನಿರ್ಮಿಸಿಕೊಂಡೆವಾದರೂ ಅವುಗಳು ಜನರಿಗೆ ಸಮಾಜದಲ್ಲಿ ಹೇಗೆ ಉಪಯೋಗಗಳನ್ನುಂಟು ಮಾಡಿದೆ ಎಂಬುದನ್ನು ತಿಳಿಯುವುದಾಗಿದೆ ಮತ್ತು ಕೃಷಿಯಲಿ ಸುಧಾರಣೆ ತಂದು ದೇಶದ ಆರ್ಥಿಕತೆಯನ್ನು ಬಲಪಡಿಸುವುದರೊಂದಿಗೆ ಜನರು ತಮ್ಮ ಆರ್ಥಿಕತೆಯ ಜೀವನವನ್ನು ಸುಧಾರಿಸಿಕೊಂಡಿದ್ದಾರೆ. ಈ ಕೆರೆಗಳು ಆರ್ಥಿಕತೆಯ ಜೊತೆ ಜೊತೆಗೆ ಜನರಿಗೆ ಸಾಂಸ್ಕೃತಿಕತೆಯನ್ನು ಮುಂದುವರೆಸಿಕೊಂಡು ಹೋಗುವ ಕೆಲವು ಹಿಂದಿನ ಆಚರಣೆಗಳನ್ನು ಪರಿಚಯಿಸುತ್ತವೆ. ಕೆರೆಗಳು ಪ್ರಾಚೀನ ಕಾಲದಲ್ಲಿ ಕಡಿಮೆ ಸಂಖ್ಯೆಯಲ್ಲಿದ್ದು ಅವುಗಳ ನಿರ್ಮಾಣ ಸಂಖ್ಯೆ ಅಧಿಕಗೊಂಡಿದ್ದು ಅರಸರ ಕಾಲಾವಧಿಗಳಲ್ಲಿ ಏಕೆಂದರೆ ಕೆರೆಗಳನ್ನು ನಿರ್ಮಿಸಿ ನೀರಿನಿಂದ ರಾಜಪ್ರಾಂಗಣದಲ್ಲಿ ಮನರಂಜನೆ ನೀಡುವಂತಹ ಕೆಲವು ಜಲಕ್ರೀಡೆಗಳ ಏರ್ಪಾಟನ್ನು ಮಾಡಲಾಗುತ್ತಿತ್ತು. ಅರಸರ ಅರಮನೆಯಲ್ಲಿ ಜಲಸಂಗ್ರಾಹಕಗಳಾದ ಈಜುಕೊಳವನ್ನು, ಮನಸ್ಸಿಗೆ ಮುದ ನೀಡುವಂತಹ ಕಾರಂಜಿಗಳನ್ನು ನಿರ್ಮಿಸುತ್ತಿದ್ದರು. ವಿಜಯನಗರ ಅರಸರ ಆಳ್ವಿಕೆ ಅವಧಿಯಲ್ಲಿ ನಿರ್ಮಾಣವಾಗಿದ್ದ ರಾಣಿಯರ ಸ್ನಾನಗೃಹಗಳಿಂದ ಇದನ್ನು ತಿಳಿಯಬಹುದು. ಈ ಈಜುಕೋಳಕ್ಕೆ ಕೆರೆಯಿಂದಲೇ ನೀರನ್ನು ಬೀಡಲಾಗುತ್ತಿತ್ತು. ಕೆರೆಗಳನ್ನು ನಿರ್ಮಿಸಿ ಅದರ ದಂಡೆಯಲ್ಲಿ ಉದ್ಯಾನಗಳನ್ನು ನಿರ್ಮಿಸಿದ್ದನ್ನು ಕಾಣಬಹುದು. ಇದರಿಂದ ಜನರಿಗೆ ಉತ್ತಮ ಮನರಂಜನೆಯನ್ನು ನೀಡುತ್ತವೆ. ಇದರಿಂದ ಮಕ್ಕಳಿಂದ ಹಿಡಿದು ವಯೋವೃದ್ಧರವರೆಗೂ ಮನರಂಜನೆಯನ್ನು ನೀಡುವ ತಾಣಗಳಾಗಿವೆ. ಈ ಕೆರೆಗಳಲ್ಲಿ ಹಲವಾರು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಏರ್ಪಡಿಸುವುದರ ಮೂಲಕವೂ ಜನರು ಸಂತೋಷವನ್ನು ಅನುಭವಿಸುವರು ಹಾಗೂ ಅನೇಕ ಕ್ರೀಡೆಗಳನ್ನು ಕೆರೆಗಳ ಮೂಲಕ ಆಡುವರು. ಇದರಿಂದ ಮನವನ್ನು ರಂಜಿಸಿಕೊಳ್ಳುವರು.

---

೭. ಹಂಪಿ ಸಂಪುಟ – ಡಾ॥ ದೇವರ ಕೊಂಡಾರೆಡ್ಡಿ

ಕೆರೆಯು ನೀರು ಜನರಿಗಷ್ಟೇ ಅಲ್ಲದೇ ಅರಮನೆಯಲ್ಲಿನ ಜನರಿಗೆ ಹೇಗೆ ಮನರಂಜನಾಕಾರಿಯಾಗಿದ್ದವು ಎಂಬುದನ್ನು ವಿಜಯನಗರ ಕೆರೆ ವ್ಯವಸ್ಥೆಯಲ್ಲಿ ಕಾಣಬಹುದು. ಅರಮನೆಯಲ್ಲಿ ರಾಣಿಯರ ಸ್ನಾನಗೃಹ, ಅಷ್ಟಕೋನ ಸ್ನಾನಗೃಹ, ಸಾರ್ವಜನಿಕ ಸ್ನಾನಗೃಹ, ಇಳಿಯುವ ಬಾವಿ, ಜಲಮಂಟಪ, ವಿಹಾರ ಮಂಟಪಗಳಿಗೆಲ್ಲದಕ್ಕೂ ಕಮಲಾಪುರದ ಕೆರೆಯಿಂದಲೇ ನೀರನ್ನು ಸರಬರಾಜು ಮಾಡಲಾಗುತ್ತಿತ್ತು. ಇದನ್ನು ಗಮನಿಸಿದಾಗ ನಮಗೆ ತಿಳಿದುಬರುವ ಅಂಶವೇನೆಂದರೆ, ಅರಮನೆಯವರು ಕೆರೆಗಳನ್ನು ಹೇಗೆ ಮನರಂಜನೆಗಾಗಿ ಉಪಯೋಗಿಸುತ್ತಿದ್ದರು ಎಂಬುದನ್ನು, ತಿಳಿಯಬಹುದು. ಕೆರೆಗಳಿಂದ ಅರಸರ ಕಾಲಾವಧಿಯಲ್ಲಿ ಹೇಗೆ ಸಾಂಸ್ಕೃತಿಕತೆಗಾಗಿ ನಿರ್ಮಾಣವಾಗುತ್ತಿದ್ದವು ಎಂಬುದನ್ನು ತಿಳಿಸಿದ್ದೇವೆ. ಆದರೆ ಇತ್ತೀಚಿನ ದಿನಗಳಲ್ಲಿ ಹೇಗೆ ಸಾಂಸ್ಕೃತಿವಾಗಿ ಉಪಯುಕ್ತವಾಗಿದೆ ಎಂಬುದನ್ನು ಈ ಕೆಳಗಿನ ಅಂಶಗಳಿಂದ ತಿಳಿಯಬಹುದು. ಸಾರ್ವಜನಿಕ ಉತ್ಸವಗಳೆಲ್ಲೇ ಅತ್ಯಂತ ವಿಜೃಂಭಣೆಯಿಂದ ಎಲ್ಲರೂ ಆಚರಿಸುವ ಹಬ್ಬವೆಂದರೇ ಗಣೇಶ ಉತ್ಸವ. ಗಣೇಶನನ್ನು ಚತುರ್ಥಿಯ ದಿನದಿಂದ ಹಿಡಿದು ಐದು, ಹನ್ನೊಂದು, ಇಪ್ಪತ್ತೊಂದು ದಿನಗಳವರೆಗೆ ಪ್ರತಿಷ್ಠಾಪಿಸಿ ಕೊನೆಯದಿನದಂದು ಅತ್ಯಂತ ವಿಜೃಂಭಣೆಯಿಂದ ಮೆರವಣಿಗೆ ಮಾಡಿಕೊಂಡು ಬಂದು ಕೆರೆಯಲ್ಲಿ ಗಣೇಶ ಮೂರ್ತಿಯನ್ನು ವಿಸರ್ಜನೆ ಮಾಡುತ್ತಿದ್ದರು. ಇಂತಹ ಮನರಂಜನೆ ಹಬ್ಬಗಳನ್ನು ಆಚರಿಸುವುದನ್ನು ನಾವು ನೋಡಬಹುದು. ಇವುಗಳು ಮೊದಲಿನಿಂದಲೂ ನಡೆದು ಬಂದ ಸಂಪ್ರದಾಯಗಳಾಗಿದ್ದು ಅವು ಇಂದಿಗೂ ಮುಂದುವರೆದುಕೊಂಡು ಬರಲು ಈ ಕೆರೆಗಳೇ ಕಾರಣವಾಗಿವೆ ಎನ್ನಬಹುದು. ಕೇವಲ ಗಣೇಶ ಮೂರ್ತಿ ವಿಸರ್ಜನೆ ಅಷ್ಟೇ ಅಲ್ಲದೆ ಕೆರೆಗಳಲ್ಲಿ ಮನರಂಜನೆಯನ್ನುಂಟು ಮಾಡುವಂತಹ ಕೆಲವು ಸಾಂಸ್ಕೃತಿಕ ಆಚರಣೆಗಳನ್ನು ಇಂದಿಗೂ ಕಾಣಬಹುದು. ಅವುಗಳೆಂದರೆ, ತೆಪ್ಪೋತ್ಸವ ಹಾಗೂ ಗಂಗಾ ಪೂಜೆಗಳಂತಹ ಆಚರಣೆಗಳು ಕೆರೆಗಳಲ್ಲಿ ಗಂಗಾ ಪೂಜೆಯು ಆಚರಣೆಗಳು ಕಂಡು ಬರುತ್ತವೆ. ಇಂದಿಗೂ ಸಹ ತುಂಬಿ ಹರಿಯುವ ನದಿಗಳಿಗೆ ಬಾಗಿನ ಕೊಡುವ ವ್ಯವಸ್ಥೆಯನ್ನು ಕಾಣುತ್ತೇವೆ. ತೆಪ್ಪೋತ್ಸವೆಂದರೆ, ಹಣತೆಯನ್ನು ಬಾಳೆಯಲ್ಲಿರಿಸಿ ನೀರಿನಲ್ಲಿ ತೇಲಿ ಬಿಡುವ ಹಾಗೂ ಮುತ್ತಿಗೆ ಎಲೆಯಲ್ಲಿ ಗೋಧಿ ಹಿಟ್ಟಿನಿಂದ ತಯಾರಿಸಿದ ದೀಪಗಳನ್ನು ಇಟ್ಟು ನೀರಿನಲ್ಲಿ ತೇಲಿ ಬಿಡುವ ಒಂದು ವಿಶೇಷ ಪೂಜಾ ವಿಧಾನ ಹಾಗೂ ಕೆರೆಗಳು ತುಂಬಿ ಹರಿಯುವಾಗ ಗಂಗೆ ಬಾಗಿನ ಅರ್ಪಿಸುವಂತಹ ಕಾರ್ಯವನ್ನು ಮಾಡುವರು. ಇವೆಲ್ಲವೂ ಒಂದು ವಿಶೇಷ ದಿನದಂದು ಜರುಗುತವೆ. ಆ ದಿನದಂದು ಜನರು ಮನರಂಜನೆಯಿಂದ ಹಬ್ಬವನ್ನು ಆಚರಿಸುವ ತಯಾರಿಯಲ್ಲಿರುತ್ತಾರೆ. ಸಂಭ್ರಮ, ಸಡಗರದಿಂದ ನಲಿಯುತ್ತಾರೆ.

ಸಾಂಸ್ಕೃತಿಕವಾಗಿ ಕೆರೆಗಳ ರಚನೆ ಮತ್ತು ಉಪಯೋಗವನ್ನು ತಿಳಿಯುವುದಾದರೆ ವಿಜಯನಗರ ಕಾಲದಲ್ಲಿನ ಕೆರೆಗಳನ್ನು ಹಾಗೂ ಅಲ್ಲಿನ ನೀರಾವರಿ ಕಾಮಗಾರಿಗಳನ್ನು ಅಧ್ಯಯನ ಮಾಡುವುದರ ಮೂಲಕ ತಿಳಿಯಬಹುದು. ಅಲ್ಲಿನ ರಾಣಿಯರ ಸ್ನಾನಗೃಹ,

ಕಾರಂಜಿ, ಜಲಕ್ರೀಡಾ ಸೌಧಗಳು ನಿರ್ಮಾಣಗೊಂಡವು. ಇವುಗಳಿಗೆ ನೀರು ಸರಬರಾಜುವಾಗುವುದೇ ಕೆರೆಗಳಿಂದ. ಇಂತಹ ಮನರಂಜನಾ ಕಟ್ಟಡಗಳಿಂದ ಅರಮನೆಯಲ್ಲಿ ಸಂತೋಷದಿಂದ ಎಲ್ಲರ ಮನಸ್ಸನ್ನು ಕೆರೆಗಳು ತಲ್ಲಣಗೊಳಿಸುತ್ತಿದ್ದವು ಎಂಬುದನ್ನು ತಿಳಿಯಬಹುದು. ಅರಮನೆಯ ರಾಜಪ್ರಾಂಗಣದಲ್ಲಿರುವ ಸಣ್ಣ ಸಣ್ಣ ತೊಟ್ಟಿಗಳಿದ್ದು ಅವುಗಳು ಹೂ ಬಳ್ಳಿಯು ಅಲಂಕರಣವಾಗಿದ್ದವು. ಈ ತೊಟ್ಟಿಗಳಿಗೆ ಕೆರೆಗಳಿಂದಲೇ ನೀರನ್ನು ತುಂಬಲಾಗುತ್ತಿತ್ತು. ಇಂತಹ ಮನರಂಜನೆಯನ್ನು ಒದಗಿಸುವ ಆಧುನಿಕ ತೊಟ್ಟಿಗಳು ಕಂಡು ಬರುತ್ತವೆ. ಇದರಿಂದ ಕೆರೆಗಳು ಹೆಚ್ಚು ನಗರದಲ್ಲಿ ಕಂಡುಬರುತ್ತವೆ. ನಗರಗಳಲ್ಲಿನ ಕೆರೆಗಳಲ್ಲಿ ಬೋಟಿಂಗ್ ಮಾಡುವ ವ್ಯವಸ್ಥೆಯಿಂದಾಗಿ ನಗರದ ಜನರು ಸಂತೋಷವನ್ನು ಅನುಭವಿಸುವಂತಾಗುತ್ತದೆ. ಇದಕ್ಕೊಂದು ಉತ್ತಮ ನಿದರ್ಶನವೆಂದರೆ, ಹುಬ್ಬಳ್ಳಿ–ಧಾರವಾಡ ಅವಳಿ ನಗರದ ಮಧ್ಯದಲ್ಲಿರುವ ಅತ್ಯಂತ ದೊಡ್ಡ ಕೆರೆ ಇಡೀ ನಗರಗಳಿಗೆ ನೀರು ಸರಬರಾಜು ಮಾಡುತ್ತದೆ ಅಲ್ಲದೇ, ಬೋಟಿಂಗ್ ವ್ಯವಸ್ಥೆ ಮಾಡಿದೆ. ಈ ಕೆರೆಯಂತು ದಡದಲ್ಲಿ ಸುಂದರ ಉದ್ಯಾನವನ್ನು ನಿರ್ಮಿಸಲಾಗಿದೆ. ಇದರಿಂದಾಗಿ ನಗರದ ಜನರೆಲ್ಲರೂ ತಮ್ಮ ಕೆಲಸದ ರಜಾ ದಿನಗಳಲ್ಲಿ ಕುಟುಂಬ ವರ್ಗದವರೊಡನೆ ಬಂದು ತಮ್ಮ ಮನೆಯುವರೊಂದಿಗೆ ಎಲ್ಲಾ ಆಯಾಸವನ್ನು ಮರೆತು ಸಂತೋಷದಿಂದ ಕಾಲಕಳೆಯುವುದನ್ನು ನಾವು ಕಾಣುತ್ತೇವೆ. ಹೀಗೆ ಇಂತಹ ಮನಸ್ಸಿಗೆ ಸಂತಸವನ್ನುಂಟು ಮಾಡುವ ಕಾರ್ಯವನ್ನು ಕೆರೆಗಳು ಮಾಡುತ್ತಿವೆ. ಒತ್ತಡ ಹಾಗೂ ಗುರುತ್ವಾಕರ್ಷಣೆಯಿಂದ ರಭಸವಾಗಿ ಹರಿಯುವ ನೀರನ್ನು ಕಾರಂಜಿ ಮತ್ತು ಕೃತಕ ನೀರಿನ ಹರಿವುಗಳನ್ನು ನಿರ್ಮಿಸಲು ಉಪಯೋಗಿಸಲಾಗುತ್ತಿತ್ತು. ಜಲಕ್ರೀಡಾ ಸೌಧಗಳಿಗೆ ನೀರು ಪೂರೈಸುತ್ತಿದ್ದವು. ಅರಸರ ಈ ಮಾದರಿಯನ್ನಾಗಿ ಇಟ್ಟುಕೊಂಡು, ಕೆರೆಗಳು ಇಂದು ನಗರದಲ್ಲಿ ಜನರಿಗೆ ಮನರಂಜನೆಯನ್ನು ಒದಗಿಸುವಂತಾಗಿದೆ.

ಇಂದಿನ ಗ್ರಾಮದ ಜನರಿಗಿಂತ ಹೆಚ್ಚಾಗಿ ನಗರ ಪ್ರದೇಶಗಳಲ್ಲಿನ ಜನರಿಗೆ ಕೆರೆಗಳು ಹೆಚ್ಚು ಮನರಂಜನೆಯನ್ನುಂಟು ಮಾಡುವ ತಾಣಗಳಾಗಿವೆ. ನಗರದಲ್ಲಿನ ಕೆರೆಗಳು ಉದ್ಯಾನವನ್ನು ನಿರ್ಮಿಸಿ ಮನರಂಜನೆ ಕೈಗೊಂಡರೆ, ಗ್ರಾಮದಲ್ಲಿನ ಜನರು ಕೆರೆ ತುಂಬಿದಾಗ ಗಂಗಾ ಪೂಜೆ ಮಾಡಿ, ಬಾಳೆ ಎಲೆಯಂತು ಮೇಲೆ ದೀಪಗಳನ್ನು ಇಟ್ಟು ಪೂಜಿಸುತ್ತಾ ಎಲ್ಲ ಹೆಣ್ಣುಮಕ್ಕಳು ಸಂಭ್ರಮ ಸಡಗರದಿಂದ ಆಚರಿಸುವರು. ನಗರದವರೊಂದು ರೀತಿ ಕೆರೆಯನ್ನು ಉಪಯೋಗಿಸಿಕೊಂಡರೆ, ಗ್ರಾಮೀಣ ಪ್ರದೇಶದವರು ಒಂದು ರೀತಿಯಲ್ಲಿ ಮನರಂಜನೆಯನ್ನು ಒದಗಿಸುವ ಪ್ರಮುಖ ಸ್ಥಳಾಗಳಾಗಿವೆ. ಕೆರೆಗಳು ನಿರ್ಮಾಣಗೊಂಡಿರುವುದು ರಾಜಕೀಯವಾಗಿ, ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ, ಆರ್ಥಿಕವಾಗಿ, ಧಾರ್ಮಿಕವಾಗಿ ಒಂದಕ್ಕೊಂದು ಪರಸ್ಪರ ಸಂಬಂಧವನ್ನು ಇವೆಲ್ಲವುಗಳಿಂದಾಗಿಯೇ ಹೊಂದಿಕೊಂಡೇ ಕೆರೆಗಳು ನಿರ್ಮಾಣಗೊಳ್ಳುತ್ತಿವೆ.

ಆರ್ಥಿಕ :

ಅರ್ಥಶಾಸ್ತ್ರದ ಕರ್ತೃವಾದ ಕೌಟಿಲ್ಯ (ಚಾಣುಕ್ಯ)ನು ಸಹ ನೀರಾವರಿ ಬೇಸಾಯಕ್ಕೆ ಹೆಚ್ಚಿನ ಪ್ರಾಮುಖ್ಯತೆಯನ್ನು ಕೊಟ್ಟಿರುತ್ತಾನೆ. ಕೃಷಿಯು ದೇಶದ ಆರ್ಥಿಕ ಪ್ರಗತಿಯ ಮೂಲವಾದ ಅಂಶವಾಗಿದೆ. ಅವನ ಸಮಕಾಲೀನನೂ ಹಾಗೂ ಮೌರ್ಯವಂಶದ ಪ್ರಸಿದ್ಧ ಅರಸರಲ್ಲೊಬನಾದ ಚಂದ್ರಗುಪ್ತನು ಗುಜರಾತಿನ ಗಿರಿನಾರದ ಬಳಿ ಕೆಲವು ಹಳ್ಳಿಗಳಿಗೆ ಅಡ್ಡಲಾಗಿ ಏರಿಯನ್ನು ಹಾಕಿಸುವುದರಿಂದ ಸುದರ್ಶನ ಕೆರೆಯನ್ನು ನಿರ್ಮಿಸಿದನು. ಅಶೋಕನು ಸಹ ತನ್ನ ಅವಧಿಯಲ್ಲಿ ದುರಸ್ತಿ ಮಾಡಿಸಿದನೆಂದು ಶಾಸನದಿಂದ ತಿಳಿದುಬರುತ್ತದೆ. ಇವುಗಳಿಂದ ನಮಗೆ ನೀರಾವರಿ ಬೇಸಾಯದ ಬಗ್ಗೆ ಪ್ರಯತ್ನಗಳು ಮೊದಲಿನಿಂದಲೂ ನಡೆಯುತ್ತಾ ಬಂದು, ಚರಿತ್ರೆಯ ಮಧ್ಯಯುಗದಲ್ಲಿ ಈ ಪ್ರಯತ್ನಗಳಿಗೆ ಹೆಚ್ಚಿನ ಪ್ರಾಧಾನ್ಯತೆಯನ್ನು ನೀಡಬೇಕಾಯಿತು. ಆ ವೇಳೆಗಾಗಲೇ ಜನಸಂಖ್ಯೆಯಲ್ಲಿ ಗಮನಾರ್ಹ ಬೆಳವಣಿಗೆಯಾಗಿ ಅಧಿಕ ವ್ಯವಸಾಯೋತ್ಪನ್ನಗಳ ಅವಶ್ಯಕತೆ ಹೆಚ್ಚಾಗಿ ಕೆರೆಗಳು ಹೆಚ್ಚು ನಿರ್ಮಾಣಗೊಂಡವು. ಪ್ರಾಚೀನ ಕಾಲದಲ್ಲಿನ ಮಾನವನು ವ್ಯವಸಾಯ ಕೈಗೊಂಡಾಗ ನೀರು ಸಂಗ್ರಹಮಾಡುವುದರಿಂದ ಕೆರೆಗಳು ಉಗಮಗೊಳ್ಳತೊಡಗಿದವು. ಚರಿತ್ರೆಯ ಮಧ್ಯಯುಗದಲ್ಲಿ ಈ ಪ್ರಯತ್ನಗಳಿಗೆ ಬಾದಾಮಿಯ ಚಾಲುಕ್ಯರು, ರಾಷ್ಟ್ರಕೂಟರು, ಕಲ್ಯಾಣಿಯ ಚಾಲುಕ್ಯರು, ಹೊಯ್ಸಳರು ಮುಂತಾದ ಅರಸು ಮನೆತನಗಳು, ನೀರಾವರಿ ಬೇಸಾಯಕ್ಕೆ ಆದ್ಯತೆ ನೀಡಿ ಈ ಭಾಗದಲ್ಲಿ ಕೆರೆಗಳನ್ನು ನಿರ್ಮಿಸಿದರು. ಈಗಲೂ ಆ ಕೆರೆಗಳು ಕಂಡುಬರುತ್ತವೆ. ಇವು ಅಲ್ಲಿಯ ಅರಸರು ನೀರಾವರಿ ಕಾಮಗಾರಿಗಳಿಗೆ ನೀಡಿದ ಆದ್ಯತೆಯ ಮುಖ್ಯ ನಿದರ್ಶನಗಳಾಗಿವೆ. ಹೀಗಾಗಿ ಕಾಮಗಾರಿಗಳಿಗೆ ನೀಡಿದ ಆದ್ಯತೆಯನ್ನು ಮುಖ್ಯವಾಗಿ ತಿಳಿದುಕೊಳ್ಳಬಹುದು. ಹೀಗಾಗಿ ದಕ್ಷಿಣ ಭಾರತವೇ, ಅತಿ ಪುರಾತನ ಕಾಲದಿಂದಲೂ ನೀರಾವರಿ ಬೇಸಾಯ ಕ್ರಮಗಳನ್ನು ಅನುಸರಿಸಿದ ಪ್ರದೇಶವೆಂದು ಪರಿಗಣಿಸಲಾಗಿದೆ.

ಮಾನವನು ಒಂದೆಡೆ ಸ್ಥಿರವಾಗಿ ನೆಲೆ ನಿಲ್ಲುವಂತಹ ಪ್ರಯತ್ನವು ಅವನ ಜೀವನದಲ್ಲಿ ಬಂದದ್ದು ವ್ಯವಸಾಯದಿಂದಲೇ. ಈ ಪದ್ಧತಿಯು ಅವನ ಜೀವನದಲ್ಲಿ ಒಂದು ಕ್ರಮಬದ್ಧತೆಯನ್ನು ತಂದಿತು. ಮಾನವನು ಮೊದಲಿಗೆ ವ್ಯವಸಾಯವನ್ನು ಪ್ರಾರಂಭಿಸಿದಾಗ ಅವನು ಮಳೆಯನ್ನೇ ನಂಬಿದ್ದ. ಅವನು ವಿಪುಲವಾಗಿ ನೀರು ಸಿಗುವ ಜಾಗವಾಗಿದ್ದ ನದಿಯನ್ನು ಆಶ್ರಯಿಸಿದ್ದನು. ಪರಿಸರದಲ್ಲಿ ಆಗುತ್ತಿದ್ದ ಬದಲಾವಣೆಗಳು ಮತ್ತು ಸಕಾಲದ ಮಳೆಯ ವೈಫಲ್ಯತೆಯು ಅವನನ್ನು ಆಗ್ಗಿಂದಾಗ್ಗೆ ಕಷ್ಟಕ್ಕೆ ಒಳಪಡಿಸುತ್ತಿತ್ತು. ಇದರಿಂದ ಅವನು ನೀರನ್ನು ಸಂಗ್ರಹ ಮಾಡಿ ತನ್ನ ಹತೋಟಿಯಲ್ಲಿಟ್ಟುಕೊಳ್ಳುವ ಪ್ರಯತ್ನದಲ್ಲಿ ತೊಡಗಿದ. ಮಳೆಗಾಲವು ವರ್ಷದಲ್ಲಿ ಕೆಲವು ಮಾಸಗಳು ಮಾತ್ರ ಇರುತ್ತಿತ್ತು. ನದಿಯಿಂದ ಕೆಲವು ಸಾವಿರ ಎಕರೆಗಳಷ್ಟು ಭೂಪ್ರದೇಶವು ವ್ಯವಸಾಯಕ್ಕೆ ಒಳಪಟ್ಟಿದ್ದವು. ಆದುದರಿಂದ ಅವನು ಎಲ್ಲಾ ಮೂಲಗಳಿಂದ ನೀರನ್ನು ಸಂಗ್ರಹಿಸಿಟ್ಟುಕೊಂಡು, ಅಗತ್ಯವಿದ್ದಾಗ ಅತ್ಯಂತ ಸಮರ್ಪಕವಾಗಿ ಬಳಸಿಕೊಳ್ಳತೊಡಗಿದನು. ಇಂತಹ ಕೃತಕ ನೀರು ಸಂಗ್ರಾಹಕಗಳೇ ಕೆರೆಗಳು. ಕೆರೆಗಳ ನಿರ್ಮಾಣದಿಂದ ತನಗೆ ಬೇಕೆಂದಾಗ ನೀರನ್ನು ಉಪಯೋಗಿಸಿಕೊಂಡು ವ್ಯವಸಾಯ ಮಾಡತೊಡಗಿದನು. ಅಲ್ಲಲ್ಲಿ ದೊರೆತಿರುವ ಶಾಸನಗಳಿಂದ, ಸಾಕ್ಷಿ ಪುರಾವೆಗಳಿಂದ ಸುಮಾರು ವರ್ಷಗಳಿಂದ ಕೃಷಿ ಜೀವನ ಆರಂಭವಾಯಿತು. ವೇದಗಳು ಸಹ ಕೆರೆ ಬೇಸಾಯ ಪದ್ಧತಿಯನ್ನು ಉಲ್ಲೇಖಿಸುತ್ತದೆ. ಕೆರೆಗಳಿಂದ ಬಂದ ಕರವನ್ನು ಸಂಗ್ರಹಿಸಿ ಕೆರೆಗಳಿಗಾಗಿ ಹಾಗೂ ಜನರ ಕಲ್ಯಾಣಕ್ಕಾಗಿ ಬಳಸಿಕೊಳ್ಳುತ್ತಿದ್ದರು. ಕೆರೆಗಳ

ಮೇಲೆ ವಿವಿಧ ತೆರಿಗೆಗಳನ್ನು ಹೇರುತ್ತಿದ್ದರು. ಇದರಿಂದ ರಾಜ್ಯಬೊಕ್ಕಸದಲ್ಲಿ ಅಪಾರ ಹಣ ಸಂಗ್ರಹವಾಗುತ್ತಿತ್ತು. ಆರ್ಥಿಕವಾಗಿ ಪ್ರಬಲರಾಗುವಂತೆ ಮಾಡಲು ಕೆರೆಗಳು ಪ್ರಮುಖ ಪಾತ್ರವಹಿಸುತ್ತಿದ್ದವು. ವ್ಯವಸಾಯವು ಹಿಂದಿನ ಮತ್ತು ಇಂದಿನ ಪ್ರಮುಖ ವೃತ್ತಿಯಾಗಿದ್ದರಿಂದ ಕೆರೆಗಳ ನೀರಾವರಿಯಿಂದ ಅಧಿಕ ಉತ್ಪನ್ನ ದೊರೆಯುತ್ತಿತ್ತು. ಕೆರೆಗಳ ಅಚ್ಚುಕಟ್ಟು ಪ್ರದೇಶದಲ್ಲಿ ವ್ಯವಸಾಯ ಮಾಡಿ ಅಲ್ಲಿಂದ ಉತ್ತಮ ಫಸಲನ್ನು ಪಡೆದುಕೊಳ್ಳುತ್ತಿದ್ದರು. ಇದರಿಂದ ಹಣ ಹೆಚ್ಚು ಸಂಗ್ರಹವಾಗುತ್ತಿತ್ತು. ಹಾಗೂ ಕೆರೆಯಂಚು ಅಂಚು ಪ್ರದೇಶದಲ್ಲಿ ಗೋಮಾಳವನ್ನು ನಿರ್ಮಿಸುತ್ತಿದ್ದರು. ಇದರಲ್ಲಿ ದನಕರುಗಳಿಗೆ ಮೇಯಿಸಲು ಅಧಿಕಾರ ನೀಡುತ್ತಿದ್ದರು. ಇದರಿಂದ ಬರುತ್ತಿದ್ದ ಕರಗಳನ್ನು ಸಂಗ್ರಹಿಸಲಾಗುತ್ತಿತ್ತು.

ಅರಸರು ತಮ್ಮ ಅವಧಿಯಲ್ಲಿ ಉತ್ಸಾಹದಿಂದ ಕೈಗೆತ್ತಿಕೊಂಡುದ್ದನ್ನು ನೀರಾವರಿ ಕಾರ್ಯಗಳ ಬಗ್ಗೆ ಶಿಲಾಶಾಸನಗಳಿಂದ ದೊರೆತಿರುವ ಮಾಹಿತಿಯನ್ನು ಈಗಾಗಲೇ ಅಭ್ಯಸಿಸಲಾಗಿದೆ. ಕೆರೆ ನಿರ್ಮಾಣಕಾರ್ಯದಲ್ಲಿ ವಿವಿಧ ಕಾರ್ಯ ಮಾಡಿದವರಿಗೆ ಸಾಮಾನ್ಯವಾಗಿ ಭೂಮಿಯನ್ನು ದಾನವಾಗಿಯೋ ಅಥವಾ ಕಾರ್ಯವನ್ನು ಪೂರೈಸಿದ್ದರ ಸಂಭಾವನೆ ಎಂದೋ ನೀಡಲಾಗುತ್ತಿತ್ತು. ಹೀಗೆ ನೀಡಿದ ಭೂಮಿಯೊಂದಿಗೆ ಇತರ ಭೂಮಿ ಮೇಲಿನ ತೆರಿಗೆಯನ್ನು ಸೂಟಿ ಬಿಡುವ ಸೌಕರ್ಯಗಳನ್ನು ಒದಗಿಸಲಾಗುತ್ತಿತ್ತು. ಇದನ್ನು 'ದಸವಂದ', 'ಉಂಬಳಿ' ಎಂದು ಕರೆಯಲಾಗುತ್ತಿತ್ತು. ಇಂತಹ ವಿವಿಧ ಕರಗಳನ್ನು ಕೊಡುವುದರಿಂದ ಕೆರೆ ನಿರ್ಮಿಸಿದವರಿಗೆ ಜಮೀನು ಕೊಡುವುದರ ಜೊತೆಗೆ ಅವರಿಗೆ ಆರ್ಥಿಕ ಪ್ಯಾಕೋಟಿಯನ್ನು ಕೆರೆಗಳು ನೀಡುತ್ತಿದ್ದವು. ಹಾಗೂ ಮೀನುಗಾರರಿಗೆ ಜೀವನವನ್ನು ರೂಪಿಸಿಕೊಟ್ಟವುಗಳೆಂದರೆ ಕೆರೆಗಳೇ ಎನ್ನಬಹುದು. ಮೀನುಗಾರರ ಬದುಕು ಕೆರೆಗಳೊಂದಿಗೆ ನಿಕಟ ಏಕೆಂದರೆ ಅವುಗಳ ಪೋಷಣೆ ಮತ್ತು ಪರಿಪಾಲನೆಯಲ್ಲಿ ಕೆರೆಯ ಪಾತ್ರ ಅವಿಭಾಜ್ಯ ಅಂಗವಾಗಿದೆ. ಆದುದರಿಂದ ಕೆರೆಗಳು ಮೀನುಗಾರರಿಗೆ ಆಧಾರ. ಕೆರೆಗಳಿಂದ ಮೀನು, ಮೀನುಗಳಿಂದ ಮೀನುಗಾರರು ಹೀಗಾಗಿ ಅವರಲ್ಲಿ ಒಂದು ಬಗೆಯ ತ್ರಿಕೋನ ಬಾಂಧವ್ಯ. ಇವರು ಕೆರೆಯಿಂದ ತಮಗೆ ಉದ್ಯೋಗವನ್ನು ಪಡೆದುಕೊಳ್ಳುತ್ತಿದ್ದರು ಹಾಗೂ ಕೆರೆಗಳ ಸಂರಕ್ಷಣೆಯ ಜವಾಬ್ದಾರಿಯನ್ನು ಅವರಿಗೆ ಕೊಡಲಾಗಿತ್ತು. ಮೀನುಗಾರರು ಕೆರೆಯ ಒಡ್ಡಿನ ಭದ್ರತೆಯನ್ನು ಕಾಪಾಡಿಕೊಳ್ಳುವುದರೊಂದಿಗೆ ಅದರ ನೀರಿನ ಮಟ್ಟವನ್ನು ಕಾಪಾಡಬೇಕಾಗಿತ್ತು. ಯಾವ ವಿಧವಾಗಿ ನೀರು ಸೋರಿ ಹೋಗದಂತೆ, ಕೋಡಿ, ಒಡ್ಡುಗಳು ಬಿರಕು ಬಿಡದಂತೆ ನೀರಿನ ಮಟ್ಟವನ್ನು ರಕ್ಷಿಸಬೇಕಾದುದು ಅವನ ಜವಾಬ್ದಾರಿಯಾಗಿತ್ತು. ಹಳ್ಳಿಗರಿಂದ ಕರ ವಸೂಲಿ ಹಾಗೂ ಹೂಳನ್ನು ಎತ್ತುವ ಕಾರ್ಯಗಳನ್ನು ಮೀನುಗಾರರಿಗೂ ವಹಿಸಲಾಗಿತ್ತು. ಕೆರೆಯಲ್ಲಿ ಅಧಿಕ ನೀರು ಇಲ್ಲದ ಸಮಯದಲ್ಲಿ ಕೆರೆಯಲ್ಲಿಯ ಹೊಂಡು ಅಂದರೆ ಹೂಳನ್ನು ಎತ್ತುವಾಗ ಅಧಿಕ ಮೀನುಗಳನ್ನು ಹಿಡಿಯುವುದರಿಂದ ಅವರಿಗೆ ಅಧಿಕ ಆದಾಯ ದೊರೆಯುತ್ತಿತ್ತು. ಇದರಿಂದ ಕೆರೆಯ ಸಲುವಾಗಿ ಕೈಗೊಳ್ಳಲಾಗುತ್ತಿದ್ದ ಖರ್ಚು ವೆಚ್ಚವನ್ನು ಕಡಿಮೆಗೊಳಸಲಾಗುತ್ತಿತ್ತು. ಕ್ರಿ.ಶ. ೧೪೬೬ ರಲ್ಲಿ ಅಕ್ಕದೇವಿ ಎಂಬ ಉತ್ತಮ ಕುಲದ ಸ್ತ್ರೀ, ಉಡೈಯಾರ ದೇವರಸ ಉಡೈಯರರ ಆದೇಶದಂತೆ ತನ್ನ ಮಹದೇಮಂಗಳಂ ಕೆರೆಯ ಹೂಳನ್ನು ತೆಗೆಯಿಸಿ ಮತ್ತೊಂದು ಬ್ರಾಹ್ಮಣ ನಿವೇಶನಕ್ಕೆಂದೇ ಸರ್ವಕಾಲಿನ ವ್ಯವಸ್ಥೆ ಮಾಡಿದ್ದಳು. ಈ ಕಾರ್ಯದ ವೆಚ್ಚಕ್ಕೆ ಮೂರು ಬಗೆಯಲ್ಲಿ ಧನ ಸಂಗ್ರಹಿಸಬೇಕು ಎಂಬ ಏರ್ಪಾಡಿನಂತೆ ಹಳ್ಳಿಗರಿಂದ ಅಲ್ಪ ಪ್ರಮಾಣದಲ್ಲಿ ನೆಲ್ಲು ಸಂಗ್ರಹ, ಎರಡನೆಯದಾಗಿ ಏರಿ ಮೀನು

ವಲ್ಯೆಪ್ಪಣಂ ಅಂದರೆ ಮೀನು ಮಾರಾಟದಿಂದ ಬಂದ ಹಣ ಹಾಗೂ ಮೀನುಗಾರಿಕೆಯ ಗುತ್ತಿಗೆ ಪಡೆದವರಿಂದ ಹಣ ಸಂಗ್ರಹ.[೯] ಇದರಿಂದ ನಾವು ತಿಳಿಯುವುದೆನೆಂದರೆ ಕೆರೆಯಿಂದಲೂ ನಿರ್ವಾಣದ ವೆಚ್ಚವನ್ನು ಬರಿಸಲಾಗುತ್ತಿತ್ತು ಎಂಬುದನ್ನು ತಿಳಿಯಬಹುದು. ಹಿಂದಿನವರು ಕೈಗೆತ್ತಿಕೊಂಡ ನೀರಾವರಿ ಕ್ರಮಗಳಲ್ಲಿಯ ವೆಚ್ಚವನ್ನು ಭರಿಸಲು, ಉಪಭೋಗಿಗಳಿಂದ ಲೆವ್ಹಿ ಕರವನ್ನು ವಸೂಲಿ ಮಾಡುತ್ತಿದ್ದರು. ಹೀಗೆ ಎಲ್ಲ ಮೂಲಗಳಿಂದ ಕರವನ್ನು ಸಂಗ್ರಹಿಸುತ್ತಿದ್ದರು. ಗ್ರಾಮದ ಜನರು ಈ ಎಲ್ಲ ಮೂಲಗಳಿಂದ ಆದಾಯವನ್ನು ಪಡೆಯುತ್ತಿದ್ದರು.

ಕೆರೆಗಳು ಜನರ ಆರ್ಥಿಕತೆಯನ್ನು ಉತ್ತಮಪಡಿಸುತ್ತಿವೆ ಎಂಬುದನ್ನು ತಿಳಿದಿದ್ದೇವೆ. ಇವು ಸಣ್ಣ ಪ್ರಮಾಣ ಗುಡಿಕೈಗಾರಿಕೆಯಂತಹ ಕಾರ್ಯಗಳಿಗೂ ಸಹಾಯಕವಾಗಿದೆ. ಕೆರೆಯ ದಡವು ಇಟ್ಟಿಗೆ ನಿರ್ಮಿಸುವುದಕ್ಕೆ ಅನುಕೂಲಕರವಾದ ಸ್ಥಳವನ್ನು ಒದಗಿಸುತ್ತದೆ. ಹಾಗೂ ಕುಂಬಾರರು ಇವುಗಳ ದಡದಲ್ಲಿಂಯೇ ಆವಿಗೆಗಳನ್ನು ನಿರ್ಮಿಸಿ ತಮ್ಮ ಉದ್ಯೋಗವನ್ನು ಮಾಡುತ್ತಿರುವುದನ್ನು ಕಾಣಬಹುದು. ಹಾಗೂ ಕೆರೆಯಲ್ಲಿನ ಮರಳನ್ನು ತೆಗೆದು ಮಾರಾಟ ಮಾಡುವರು. ಇದರಿಂದ ಉದ್ಯೋಗ ದೊರೆಯುವುದಲ್ಲದೇ, ಮರಳು ತುಂಬುವರು ಕರವನ್ನು ಸಲ್ಲಿಸಬೇಕಾಗುತ್ತಿತ್ತು. ಇದರಿಂದ ಸರ್ಕಾರಕ್ಕೆ ಆದಾಯವಾಗುತ್ತಿತ್ತು. ಮೀನುಗಾರರೂ ಸಹ ಸಣ್ಣ ಪ್ರಮಾಣದ ಮೀನುಗಾರಿಕೆಯನ್ನು ಕೈಗೊಂಡು ತಮ್ಮ ಜೀವನ ಸಾಗಿಸುತ್ತಿದ್ದರು. ಹಾಗೂ ಮಡಿವಾಳರು ಕೆರೆಯ ನೀರನ್ನು ಒಗೆಯಲು ಬಳಸಿಕೊಳ್ಳುತ್ತಿದ್ದರು. ಇದರಿಂದ ಅವರಿಗೆ ಕೆರೆಯು ಆರ್ಥಿಕ ಸಹಾಯವನ್ನು ನೀಡುತ್ತಿತ್ತು. ಕೆರೆಗಳು ಒಂದಲ್ಲಾ ಒಂದು ರೀತಿಯಲ್ಲಿ ಜನರ ಜೀವನಕ್ಕೆ ಆರ್ಥಿಕ ಸಹಾಯವನ್ನು ಒದಗಿಸುವ ಮೂಲವಾಗಿವೆ ಎಂದರೆ ತಪ್ಪಾಗಲಾರದು. ನಗರದಲ್ಲಿರುವ ಹಾಗೂ ಗ್ರಾಮದಲ್ಲಿರುವ ಕೆರೆಗಳು ಆಯಾ ಜನರಿಗೆ ತಕ್ಕಂತೆ ಆರ್ಥಿಕ ಸಹಾಯವನ್ನು ಒದಗಿಸುತ್ತಾ ಬರುತ್ತಲಿವೆ. ವಿಜಯ ನಗರದ ಅರಸರ ಆಳ್ವಿಕೆಯ ಅವಧಿಯಲ್ಲಿ ಕೈಗೆತ್ತಿಕೊಂಡ ನೀರಾವರಿ ಹಾಗೂ ಇತರ ಕಾರ್ಯಗಳಿಂದಾಗಿ ಅವರ ಆರ್ಥಿಕ ಪ್ರಗತಿ ಯಾವ ಹಂತವನ್ನು ತಲುಪಿತ್ತೆಂಬುದನ್ನು ನಾವು ಕ್ರಿ.ಶ. ೧೫೧೪ ರಲ್ಲಿ ಭೇಟಿ ನೀಡಿದ ಡ್ಯೂರೇಟ್ ಬಾರ್‌ಬೋಸನ ಹೇಳಿಕೆಯಿಂದ ಅರಿಯಬಹುದು. ಇದರಿಂದ ನಮಗೆ ಅಲ್ಲಿನ ಕೆರೆಗಳಿಂದ ಆರ್ಥಿಕ ಪ್ರಗತಿಯು ಒಂದು ಹಂತವನ್ನು ತಲುಪಿತ್ತು ಎಂಬುದನ್ನು ತಿಳಿಯಬಹುದು. ಈ ದೇಶದ ಬಹುಭಾಗದ ಹಿಂದಿನ ಅರಸರು ದೇಶದ ಆರ್ಥಿಕ ವಿಕಾಸಕ್ಕೆ ವ್ಯವಸಾಯ ಅನಿವಾರ್ಯ ಎಂಬ ಸಂಗತಿಯನ್ನು ಅರಿತಿದ್ದರು. ಏಕೆಂದರೆ ನಮ್ಮ ದೇಶದ ಅಧಿಕಾಂಶ ಜನರ ವೃತ್ತಿ ಎಂದರೆ ವ್ಯವಸಾಯವೇ ಆಗಿತ್ತು. ಅಲ್ಲದೇ ದಕ್ಷಿಣ ಭಾರತದ ಭೌಗೋಳಿಕ ಪರಿಸ್ಥಿತಿಯು ತನ್ನ ವ್ಯವಸಾಯಕ್ಕೆ ಕೇವಲ ಮಳೆಯೊಂದನ್ನೇ ಆಧರಿಸಿದ್ದು, ಅದು ಅನಿಶ್ಚಿತವಾಗಿತ್ತು. ಈ ಒಂದು ಅವಧಿಯಲ್ಲಿ ಮಾನವರು ತಮ್ಮ ಬುದ್ಧಿಶಕ್ತಿಯನ್ನು ಸದುಪಯೋಗ ಮಾಡಿಕೊಂಡು ಕೆರೆಗಳನ್ನು ನಿರ್ಮಿಸತೊಡಗಿದರು. ಇದರಿಂದ ನೀರಾವರಿ ಕಾರ್ಯಗಳು ಸುಗಮವಾಗಿ ಸಾಗುತ್ತಲಿದ್ದು, ಅಂದಿನ ಜನರ ಆರ್ಥಿಕ ಸಂಪತ್ತನ್ನು ಹೆಚ್ಚಿಸುತ್ತಲಿತ್ತು.

---

೯. ವಿಜಯನಗರ ಸಾಮ್ರಾಜ್ಯದ ನೀರಾವರಿ ವ್ಯವಸ್ಥೆ – ಸಿ.ಟಿ.ಎಂ. ಕೊಟ್ರಯ್ಯ

ರಾಜಕೀಯ :

ಕೆರೆಗಳನ್ನು ನಾವು ಈಗಾಗಲೇ ಸಾಮಾಜಿಕವಾಗಿ, ಧಾರ್ಮಿಕವಾಗಿ, ಸಾಂಸ್ಕೃತಿಕವಾಗಿ ಹಾಗೂ ಆರ್ಥಿಕವಾಗಿ ಹೇಗೆ ಉಪಯೋಗವಾಗುತ್ತಿವೆ, ಹಾಗೂ ಇವುಗಳ ನಿಟ್ಟಿನಲ್ಲೇ ಹೇಗೆ ರಚನೆಗೊಂಡವು ಎಂಬುದನ್ನು ತಿಳಿದಿದ್ದೇವೆ. ಹಾಗೂ ಇವು ರಾಜಕೀಯವಾಗಿ ಹೇಗೆ ನಿರ್ಮಾಣಗೊಂಡವು, ರಾಜಕೀಯವಾಗಿ ಹೇಗೆ ಉಪಯೋಗವಾಗುತ್ತಿವೆ ಎಂಬುದನ್ನು ತಿಳಿಯೋಣ. ಮುಖ್ಯವಾಗಿ ಅರಸರು ತಮ್ಮ ಪುಜೆಗಳ ಕಲ್ಯಾಣಕ್ಕಾಗಿ, ಜನರ ಒಳತಿಗಾಗಿ ಕೆರೆಗಳನ್ನು ನಿರ್ಮಿಸುತ್ತಿದ್ದರು. ಹಾಗೂ ತಮ್ಮ ಘನತೆ, ಗೌರವಗಳನ್ನು ಹೆಚ್ಚಿಸಿಕೊಳ್ಳಲು ತಮ್ಮ ಹೆಸರಿನಲ್ಲಿ ಕೆರೆಗಳನ್ನು ನಿರ್ಮಿಸುತ್ತಿದ್ದರು. ತಮ್ಮ ಸಾಧನೆಗಳನ್ನು ಶಾಸನಗಳಲ್ಲಿ ಕೆತ್ತಿಸಿ ಕೆರೆಗಳನ್ನು ನಿರ್ಮಿಸಿ ಅದರ ದಡದಲ್ಲಿ ಶಾಸನಗಳನ್ನು ಸ್ಥಾಪಿಸುತ್ತಿದ್ದರು. ಹಾಗೂ ಅವುಗಳಿಗೆ ಆಡಳಿತ ಸಮಯದಲ್ಲಿ ನಿರ್ಮಿಸಲಾದ ನೀರಾವರಿ ಕಾರ್ಯಗಳು ಇಂದಿಗೂ ಜಾರಿಯಲ್ಲಿವೆ. ಅವುಗಳು ನಿರ್ಮಾಣವಾಗಿ ಶತಮಾನಗಳಾಗಿದ್ದರೂ ಉಸ್ತುವಾರಿ ಹಾಗೂ ದುರಸ್ತಿ ಕ್ರಮಗಳಿಂದಾಗಿ ಉಳಿದುಕೊಂಡು ಬಂದು ಕಾಲ ಕಾಲದ ಜನರಿಗೆ ಉಪಯುಕ್ತವಾಗಿವೆ. ಅರಸರು ತಮ್ಮ ಅವಧಿಯಲ್ಲಿನ ಮಹಾತ್ಮ ಪುಣ್ಯ ಪುರುಷರು ಹಾಗೂ ಅವರ ತಾಯಿಯುಂದಿರ ಸ್ಮರಣಾರ್ಥವಾಗಿ ಕೆರೆಗಳು ನಿರ್ಮಾಣಗೊಳ್ಳುತಿದ್ದವು. ಹೊಸಪೇಟೆಯ ಈಶಾನ್ಯಕ್ಕಿರುವ ನಾಗೇನಹಳ್ಳಿಯ ಬಳಿ ಒಂದು ದೊಡ್ಡ ಕೆರೆಯಿದೆ. ಇದರ ಹೆಸರು ನಾಗಲಾಂಬಿಕಾ ಸಮುದ್ರ. ಇದನ್ನು ಕೃಷ್ಣದೇವರಾಯನ ತಾಯಿ ನಾಗಲಾದೇವಿಯ ಹೆಸರಿನಲ್ಲಿ ಕ್ರಿ. ಶ. ೧೫೧೬ ರಲ್ಲಿ ರಂಗನಾಥ ದೀಕ್ಷಿತನು ಕಟ್ಟಿಸಿದನೆಂದು ನಾಗೇನಹಳ್ಳಿಯ ರಂಗನಾಥ ದೇವಾಲಯದಲ್ಲಿನ ಶಾಸನದಿಂದ ತಿಳಿಯುತ್ತದೆ. ಅಲ್ಲದೇ ತಮ್ಮ ರಾಜಪ್ರಾಂಗಣದಲ್ಲಿ ದೈನಂದಿನ ಬಳಕೆಗೆ ವ್ಯವಸ್ಥಿತವಾದ ನೀರಿನ ಸಂಪರ್ಕವನ್ನು ಏರ್ಪಡಿಸುವ ಸಲುವಾಗಿ ಕೆರೆಗಳನ್ನು ನಿರ್ಮಿಸುತ್ತಿದ್ದರು. ಹಾಗೂ ದೇವಾಲಯಗಳನ್ನು ನಿರ್ಮಿಸಿ ಶಾಸನಗಳನ್ನು ಕೆತ್ತಿಸುತ್ತಿದ್ದರು. ಇದರಿಂದ ತಮ್ಮ ಪ್ರತಿಷ್ಠೆಯನ್ನು ಹೆಚ್ಚಿಸಿಕೊಳ್ಳುತ್ತಿದ್ದರು.

ಆರನೆಯ ಶತಮಾನದ ಅವನೀತನ ಕಾಲದ ಹೊಸಕೋಟೆ ಶಾಸನ ಕೆರೆ ಕೆಳಗೆ ಕಬ್ಬು ಬೆಳೆಯುವ ತೋಟ ಇದ್ದುದನ್ನು ಸೂಚಿಸುತ್ತದೆ.[೯] ಚಾಲುಕ್ಯರ ದೊರೆ ವಿಕ್ರಮಾದಿತ್ಯನ ಅನುಗೋಡು ಶಾಸನವು ಒಂದು ಕೆರೆಯ ಭತ್ತದ ಗದ್ದೆಗಳನ್ನು ದಾನವಿತ್ತುದನ್ನು ದಾಖಲಿಸುತ್ತದೆ. ಕ್ರಿ.ಶ. ೮೩೭ ರಲ್ಲಿ ಅಮೋಘವರ್ಷನಿಂದ ಅವನ ಆಳ್ವಿಕೆಯಲ್ಲಿ ಒಂದು ಕೆರೆ ಮತ್ತು ತೂಬುಗಳನ್ನು ನಿರ್ಮಿಸಿದ್ದನ್ನು ಬಿಜಾಪುರ ಜಿಲ್ಲೆಯ ಹುನಗುಂದ ತಾಲ್ಲೂಕಿನ ಕೇಸರಭಾವಿ ಶಾಸನವು ತಿಳಿಸುತ್ತದೆ.[೧೦] ಕೆರೆಗಳು ಹೆಚ್ಚು ಹೆಚ್ಚು ನಿರ್ಮಾಣವಾದಂತೆ ಆ ಅರಸರ ಅವಧಿಯಲ್ಲಿ ಶಾಸನಗಳು ಹೆಚ್ಚು ರಚನೆಯಾಗುತ್ತಿದ್ದವು. ಹತ್ತನೇ ಶತಮಾನದಿಂದ ಹದಿನಾಲ್ಕನೆ ಶತಮಾನದವರೆಗಿನ ಕಾಲ ಕೆರೆಗಳ ಸ್ವರ್ಣಯುಗವಾಗಿತ್ತು. ಅರಸರು ಹೊಸ ನಗರಗಳನ್ನು ನಿರ್ಮಿಸುತ್ತಿದ್ದರು. ಅವುಗಳ ಜೊತೆಗೆ ಒಂದು ಕೆರೆಯನ್ನು ಹಾಗೂ ದೇವಾಲಯವನ್ನು ನಿರ್ಮಿಸುತ್ತಿದ್ದರು. ಕಲ್ಯಾಣದ ಚಾಲುಕ್ಯರ ಯುಗದಲ್ಲಿ ೬ನೇ ವಿಕ್ರಮಾದಿತ್ಯನ ಆಳ್ವಿಕೆ ಅತ್ಯಂತ ಹೆಚ್ಚಿನ ಸಂಖ್ಯೆಯ ಕೆರೆಗಳ ನಿರ್ಮಾಣವನ್ನು ಕಂಡಿತು. ಹಾಗೂ ಕೆರೆಗಳ ಸಂರಕ್ಷಣೆಗಾಗಿ ಭೂಮಿಯನ್ನು ದಾನವಿತ್ತು ಎಂದು ಶಾಸನವು ತಿಳಿಸುತ್ತದೆ.[೧೧] ಇದರಿಂದ ನಮಗೆ ತಿಳಿಯುವುದೆನೆಂದರೆ, ತಮ್ಮ ಹೆಸರನ್ನು ಪ್ರಜೆಗಳಲ್ಲಿ ಅಜರಾಮರವಾಗಿ ಉಳಿಸುತ್ತಿದ್ದರು.

---

೧೦. ಕರ್ನಾಟಕದಲ್ಲಿ ಕೆರೆ ನೀರಾವರಿ – ನೀಲಹತ್ತಳ್ಳಿ ಕಸ್ತೂರಿ

೧೧. ಅದೇ.

ಒಂದನೇ ಸೋಮೇಶ್ವರ ತನ್ನ ನಿರ್ಮಾಣ ಕಾರ್ಯವನ್ನು ಧಾರವಾಡ ಜಿಲ್ಲೆಗೆ ಮಿತಿಗೊಳಿಸಿದ್ದ. ಅವನ ಮಗನೂ ಉತ್ತರಾಧಿಕಾರಿಯೂ ಆದ ಅರಸ ವಿಕ್ರಮಾದಿತ್ಯ ಕೆರೆ ನಿರ್ಮಾಣದಲ್ಲಿ ಅವನನ್ನು ಮೀರಿಸಿದ. ಇದರಿಂದ ಅವರು ಜನ ಒಳಿತನದ ಕಾರ್ಯಗಳನ್ನು ಮಾಡುತ್ತಿದ್ದರು. ಈ ಕೆರೆಗಳು ಹೆಚ್ಚು ಮಧ್ಯಯುಗದಲ್ಲಿ ನಿರ್ಮಾಣಗೊಂಡಿದ್ದನ್ನು ನಾವು ವಿವಿಧ ಅರಸರುಗಳ ಕಾಲಾವಧಿಯಲ್ಲಿ ನಿರ್ಮಾಣಗೊಂಡ ಕೆರೆಗಳನ್ನು ಅಧ್ಯಯನ ಮಾಡಿದಾಗ ಕೆರೆಗಳು ಹೇಗೆ ರಾಜಕೀಯವಾಗಿ ನಿರ್ಮಾಣಗೊಂಡವು ಎಂಬುದನ್ನು ತಿಳಿಯಬಹುದು. ರಾಷ್ಟ್ರಕೂಟರ ಹಾಗೂ ಅವರ ಸಾಮಂತರರಾದ ಚಾಲುಕ್ಯರು ಮತ್ತು ಗಂಗರಿಂದ ಕೆರೆ ನಿರ್ಮಾಣ ಇನ್ನೂ ಹೆಚ್ಚಿದುದನ್ನು ೧೦ನೇ ಶತಮಾನದ ಶಾಸನಗಳು ದಾಖಲು ಮಾಡಿವೆ. ಅರಸರು ತಮ್ಮ ಕಾಲೀನ ಅರಸರುಗಳ ಮಧ್ಯೆ ಇರುವ ರಾಜಕೀಯ ಕಲಹಗಳಿಂದ ಹೆಚ್ಚು ಜನರನ್ನು ತಮ್ಮ ಕಡೆಗೆ ಮನವೊಲಿಸಿಕೊಳ್ಳಲು ಒಂದು ಸುವರ್ಣ ಅವಕಾಶಕ್ಕಾಗಿ ಕಾಯುತ್ತಿರುತ್ತಿದ್ದರು. ತಮ್ಮ ಹೆಸರನ್ನು ಜನರ ಮನಸ್ಸಿನಲ್ಲಿ ಅಚ್ಚಳಿಯದಂತೆ ಉಳಿಸಲು ಇಂತಹ ಕೆರೆಗಳ ನಿರ್ಮಾಣಕ್ಕೆ ಕೈ ಹಾಕುತ್ತಿದ್ದರು. ಹಾಗೂ ಅರಸರಾಗಿರಬಹುದು ಅಥವಾ ಕೆರೆಗಳನ್ನು ನಿರ್ಮಿಸುತ್ತಿರುವ ಇನ್ಯಾವುದೇ ಅಧಿಕಾರಿಗಳಾಗಿರಬಹುದು ತಾವು ಮಾಡಿದ ಪಾಪದ ಕಾರ್ಯಗಳಿಗೆ ಪ್ರಾಯಶ್ಚಿತವಾಗಿ, ಪುಣ್ಯ ಕಾರ್ಯದ ಫಲವಾಗಿ ಕೆರೆಗಳನ್ನು ನಿರ್ಮಿಸುತ್ತಿದ್ದರು. ಕೆರೆಗಳನ್ನು ನಿರ್ಮಿಸುವುದು ಪುಣ್ಯದ ಕಾರ್ಯವೆಂದು ಶಾಸನಗಳಲ್ಲಿ ತಿಳಿಸಿರುವುದರಿಂದ ರಾಜಕೀಯವಾಗಿಯೂ ಕೆರೆಗಳು ನಿರ್ಮಾಣಗೊಳ್ಳುತ್ತಿದ್ದವು ಎಂಬುದನ್ನು ಅಲ್ಲಗಳೆಯುವಂತಿಲ್ಲ.

ಹೀಗೆ ರಾಜಕೀಯವಾಗಿ ಉಗಮಗೊಂಡ ಕೆರೆಗಳು ಜನರಿಗೆ ಉಪಯುಕ್ತವಾಗಿವೆ. ರಾಜಕೀಯವಾಗಿ ಕೆರೆಗಳಿಂದ ಹೇಗೆ ಉಪಯುಕ್ತವಾಗಿವೆ ಎಂಬುದಕ್ಕೆ ಈ ಕೆಳಗಿನ ಒಂದು ನಿದರ್ಶನದಿಂದ ತಿಳಿಯಬಹುದು. ನಗರದಲ್ಲಿದ್ದ ಒಂದು ಕೆರೆಯ ದುರಸ್ತಿ ಕಾರ್ಯವು ನಗರದಲ್ಲಿ ಆಡಳಿತದಲ್ಲಿದ್ದ ಶಾಸಕರ ಅವಧಿಯಲ್ಲಿ ಅಥವಾ ನಗರದ ಒಬ್ಬ ಗಣ್ಯ ವ್ಯಕ್ತಿಯ ಮುಂದಾಳತ್ವದಲ್ಲಿ ಜರುಗಿದರೆ ಅಲ್ಲಿ ಅವರ ಹೆಸರು ಕಳಸಪ್ರಾಯವಾಗುತ್ತದೆ. ಮತ್ತೊಮ್ಮೆ ಆ ಕೆರೆಯು ಇನ್ನೊಬ್ಬ ವ್ಯಕ್ತಿಯಿಂದ ದುರಸ್ತಿಗೊಳ್ಳವವರೆಗೆ ಅವರ ಹೆಸರು ಜನರ ಮನಸ್ಸಿನಲ್ಲಿ ಅಜರಾಮರವಾಗಿ ಉಳಿಯುತ್ತದೆ. ಅವನು ಮುಂದೆ ಕೈಗೊಳ್ಳಬಹುದಾದ ಜನಕಲ್ಯಾಣ ಕಾರ್ಯಗಳಿಗೆ ಜನರ ಸಂಪೂರ್ಣ ಬೆಂಬಲ ಅವರಿಗೆ ದೊರೆಯುತ್ತದೆ. ಇದರಿಂದ ಅವರು ದೀರ್ಘಕಾಲದವರೆಗೆ ಜನಬೆಂಬಲದೊಂದಿಗೆ ಉತ್ತಮ ಆಡಳಿತವನ್ನು ನಡೆಸಿ ತನ್ನ ಹೆಸರು ಕೀರ್ತಿಯನ್ನು ಇತಿಹಾಸದ ಪುಟದಲ್ಲಿ ಶಾಶ್ವತವಾಗಿ ಉಳಿಯುತ್ತದೆ.

* * *

ಅಧ್ಯಾಯ – 5

ಸಮಾರೋಪ

ಅಧ್ಯಾಯ – 5

ಸಮಾರೋಪ

ಕೆರೆಯಂ ಕಟ್ಟಿಸು, ಬಾವಿಯಂ ಸವೆಸು, ದೇವಾಗಾರಮಂ ಮಾಡಿ, ಸ
ಜ್ಜೆರೆಯೋಳ್ ಸಿಲ್ಕಿದನಾಥರಂ ಬಿಡಿಸು, ಮಿತ್ರರ್ಗಿಂಬುಗೆಯ್ ನಂಬಿದ
ರ್ಗೆರವೆಟ್ಟಾಗಿರು, ಶಿಷ್ಯರಂ ಪೊರೆ, ಎನ್ನುತ್ತಿಂತೆಲ್ಲಮಂ, ಪಿಂತೆ, ತಾ
ನೆರೆದಳ್, ಪಾಲೆರೆವಂದು ತೊಟ್ಟು ಕಿವಿಯೋಳ್ ಲಕ್ಷ್ಮೀಧರಾಮಾತ್ಯನಾ॥೧

ಈ ಮೇಲಿನ ಪದ್ಯದಲ್ಲಿ ಹೇಳಿರುವಂತೆ ಜನತೆಯ ಸುಖ ಸೌಲಭ್ಯಗಳನ್ನು ಅರಿತು ಅರಸರು ಕೆರೆ, ಬಾವಿಗಳನ್ನು ಕಟ್ಟಿಸಿ, ಕಾಲುವೆಗಳನ್ನು ನಿರ್ಮಿಸಿ ನೀರಿನ ಪೂರೈಕೆ ಮಾಡುತ್ತಿದ್ದರು. ಅಂದಿನ ಕೆರೆ ಬಾವಿಗಳು ಇಂದಿನ ಜನರಿಗೂ ಸಹ ಉಪಯೋಗಕಾರಿಯಾಗಿವೆ ಎಂಬುದನ್ನು ತಿಳಿಯಬಹುದು. ಅಲ್ಲದೇ ಅರಸರ ಕಾಲವಧಿಗಿಂತಲೂ ಮುಂಚೆ ಕೆರೆಗಳು ಹೇಗೆ ಉಗಮಗೊಂಡವು. ಹೇಗೆ ಜನರಿಗೆ ಉಪಯೋಗವಾಗುತ್ತಿದ್ದವು ಎಂಬುದನ್ನು ಸಂಪ್ರಬಂಧದಲ್ಲಿ ತಿಳಿಸಲಾಗಿದೆ.

ಮಾನವನು ಆದಿಕಾಲದಿಂದಲೂ ಇಂದಿನ ಕಾಲದವರೆಗೂ ನಾವು ಅವನಲ್ಲಿ ಒಂದಲ್ಲ ಒಂದು ರೀತಿಯಲ್ಲಿ ಬದಲಾವಣೆಯಾಗುತ್ತಿರುವುದನ್ನು ನೋಡಬಹುದು. ಹಳೆ ಶಿಲಾಯುಗದಲ್ಲಿ ಮಾನವ ಬೇಟೆಯಾಡಿ ಪ್ರಾಣಿಗಳ ಹಸಿ ಮಾಂಸಗಳನ್ನು ತನ್ನ ಆಹಾರವನ್ನಾಗಿ ಮಾಡಿಕೊಂಡು ಜೀವನ ಸಾಗಿಸುತ್ತಿದ್ದ. ನಂತರ ತನ್ನ ಜೀವನಕ್ಕೆ ಅವಶ್ಯಕವಾದ ನೀರಿಗಾಗಿ ಮಳೆಯನ್ನೇ ಅವಲಂಬಿಸಿದ್ದ. ಆದರೆ ಆ ನೀರನ್ನು ಸಂಗ್ರಹಿಸಿ ಉಪಯೋಗಿಸುವ ಕಲೆಯನ್ನು ತಿಳಿದಿದ್ದ. ಪ್ರಾಣಿಗಳಿಂದಾದ ಹೆಜ್ಜೆ ಗುರುತುಗಳಲ್ಲಿ, ಹಾಗೂ ಅಲ್ಲಲ್ಲಿ ತಗ್ಗಾದ ಗುಂಡಿಗಳಲ್ಲಿ ನಿಂತ ನೀರನ್ನು ತನಗೆ ಅವಶ್ಯಕತೆ ಬಿದ್ದಾಗ ಅವನ್ನು ಬಳಕೆ ಮಾಡಿಕೊಳ್ಳುವುದನ್ನು ಕಲಿತ. ನಂತರ ಅವುಗಳನ್ನು ಸ್ವಲ್ಪ ಸುಧಾರಿಸಿ ಕಟ್ಟೆಗಳನ್ನು ನಿರ್ಮಿಸಿ ಅವುಗಳಿಗೆ ಕಟೆ, ಕೆರೆ, ಕುಂಟೆ ಎಂದೆಲ್ಲಾ ಕರೆದ. ಇವುಗಳಿಂದ ನೀರಿನ ಬಳಕೆ ಮಾಡುತ್ತಾ ವ್ಯವಸಾಯಕ್ಕೂ ಬಳಸಿಕೊಂಡು ಬೆಳೆ ಬೆಳೆಯಲು ಪ್ರಾರಂಭಿಸಿದ. ಹೀಗೆ ಪ್ರಾಚೀನ ಕಾಲದಲ್ಲಿ ರಚನೆಗೊಂಡ ಹಾಗೂ ನಂತರ ಕಾಲಾವಧಿಗಳಲ್ಲಿ ರಚನೆಗೊಂಡ ಕೆರೆಗಳನ್ನು ಇಲ್ಲಿ ಅಧ್ಯಯನ ಮಾಡಲಾಗಿದೆ.

ಮಧ್ಯಯುಗದ ಕಾಲಘಟ್ಟಗಳಲ್ಲಿ ಅನೇಕ ಅರಸು ಮನೆತನಗಳು ಆಳ್ವಿಕೆಯನ್ನು ನಡೆಸಿದ್ದು ಅವರುಗಳು ಕಾಲಾವಧಿಯಲ್ಲಿ ರಚನೆಗೊಂಡ ಮಾಹಿತಿಯನ್ನು ಈ ಪ್ರಬಂಧದಲಲಿ ತಿಳಿಸಲಾಗಿದೆ. ಪ್ರಮುಖ ಅರಸರು ತಮ್ಮ ಕಾಲಾವಧಿಯಲ್ಲಿ ನಿರ್ಮಿಸಿದ ಕೆರೆಗಳು ಹಾಗೂ ಅವುಗಳನ್ನು ನಿರ್ಮಿಸಿದ ನಿರ್ಮಾಣಕಾರರು ಹಾಗೂ ಅವುಗಳಿಂದ ಜನರಿಗೆ ಆಗುತ್ತಿರುವ ಉಪಯೋಗವನ್ನು ಇಲ್ಲಿ

---

೧. ಜಮಖಂಡಿಯ ಇತಿಹಾಸ ದರ್ಪಣ – ಪ್ರೊ. ಎಸ್. ಬಿ. ಮಟೋಳಿ.

ಅಭ್ಯಸಿಸಲಾಗಿದೆ. ಕೆರೆಗಳ ಉಗಮ. ಕೆರೆ ನಿರ್ಮಾಣ ಮಾಡಲು ಅನುಸರಿಸಬೇಕಾದ ಮುನ್ನೇಚ್ಚರಿಕೆ ಕ್ರಮಗಳು, ಅವುಗಳ ಉಪಯೋಗ, ಅವುಗಳ ಸಂರಕ್ಷಣೆಯನ್ನು ಇಲ್ಲಿ ತಿಳಿಸಲಾಗಿದೆ. ಕೆರೆಗಳನ್ನು ನಿರ್ಮಿಸಲು ಪ್ರತ್ಯೇಕ ಜನಾಂಗವಿದ್ದು ಅವರಿಗೆ ಭೂಮಿಯನ್ನು ದಾನವಾಗಿ ಪಡೆಯುತ್ತಿದ್ದರೆಂದು ತಿಳಿಯಲಾಗಿದೆ. ಹಾಗೂ ಕೆರೆಗಳನ್ನು ಕುಂಟೆ, ಗೋಕಟ್ಟೆ, ಸಮುದ್ರಂ, ತಟಾಕ, ಕಟ್ಟೆ ಎಂಬೆಲ್ಲಾ ಬೇರೆ ಬೇರೆ ಹೆಸರಿನಿಂದ ಕರೆಯಲಾಗುತ್ತಿತ್ತು. ಆದರೆ ಇಂದಿನ ಜನರಿಗೆ ಇವು ಯಾವ ಪದಗಳು ಬಳಕೆಯಿಲ್ಲದೆ. ಕೆರೆ ಒಂದನ್ನು ಬಳಸುತ್ತಿದ್ದಾರೆ. ಈ ಪ್ರಬಂಧದಲ್ಲಿ ಕೆರೆಗಳ ಉಗಮದಿಂದ ಹಿಡಿದು ವಿವಿಧ ಕಾಲದಲ್ಲಿ ರಚನೆಯಾದ ಅವುಗಳ ಇಂದಿನ ಸ್ಥಿತಿಗತಿಯನ್ನು ತಿಳಿಸುವ ಪ್ರಯತ್ನ ಮಾಡಲಾಗಿದೆ.

ಇಂದಿನ ಆಧುನಿಕ ಬೆಳವಣಿಗೆಯಿಂದಾಗಿ ಕೆರೆಗಳ ಪಾತ್ರ ಕಡಿಮೆಯಾಗತೊಡಗಿವೆ ಎಂದರೆ ತಪ್ಪಾಗಲಾರದು. ತಂತ್ರಜ್ಞಾನದ ಅಳವಡಿಕೆಯಿಂದ ನದಿಗಳಿಗೆ ಆಣೆಕಟ್ಟನ್ನು ನಿರ್ಮಿಸಿ, ಕಾಲುವೆಗಳನ್ನು ನಿರ್ಮಿಸಿಕೊಂಡು ಅವುಗಳ ಮೂಲಕ ಕೃಷಿ ಭೂಮಿಗೆ ಉಪಂತೋಗಿಸಿಕೊಂಡು ಬಳಕೆ ಮಾಡುತ್ತಿರುವುದರಿಂದ ಕೆರೆಗಳ ಪಾತ್ರ ಕೃಷಿಯಲ್ಲಿ ಕಡಿಮೆಯಾಗುತ್ತಿದೆ. ಆದರೂ ಸಹಿತ ನದಿಗಳು ಹರಿಯದ ಕೆಲವು ಪ್ರದೇಶಗಳಲ್ಲಿ ಹಾಗೂ ಗ್ರಾಮೀಣ ಭಾಗಗಳಲ್ಲಿ ಕೆಲವು ಕೆರೆಗಳು ಕಂಡು ಬರುತ್ತವೆ. ಜಮಖಂಡಿ ನಗರ ಪ್ರದೇಶವಾದರೂ ಸಹ ಇಲ್ಲಿ ಪ್ರಮುಖವಾಗಿ ಕೆರೆಗಳು ರಚನೆಗೊಂಡಿವೆ. ಜಮಖಂಡಿ ನಗರದಲ್ಲಿ ಕೃಷ್ಣಾ ನದಿ ಹರಿಯುತ್ತಿದ್ದರೂ ನಗರಗಳಿಗೆ ಇವುಗಳ ಪಾತ್ರವು ಎಷ್ಟರ ಮಟ್ಟಿಗೆ ಅನುಕೂಲಕರವಾಗಿದೆ ಎಂಬುದನ್ನು ಇಲ್ಲಿ ತಿಳಿಯಬಹುದು.

ಕೆರೆಗಳನ್ನು ಎಲ್ಲಿ ಬೇಕೆಂದಾಗ ಅಲ್ಲಿ ನಿರ್ಮಿಸಲು ಸಾಧ್ಯವಿಲ್ಲ. ಕೆರೆಗಳು ನಿರ್ಮಾಣವಾಗಬೇಕಾದಾಗ ಕೆಲವು ಮುಖ್ಯ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಉತ್ತಮ ಕೆರೆಯನ್ನು ನಿರ್ಮಿಸಲಾಗುತ್ತಿತ್ತು. ಉತ್ತಮ ಭೌಗೋಳಿಕ ಲಕ್ಷಣವನ್ನು ಗಮನದಲ್ಲಿಟ್ಟುಕೊಂಡು ಕೆರೆಗಳನ್ನು ರಚಿಸುವುದನ್ನು ನಾವು ಇಗಾಗಲೇ ಈ ಪ್ರಬಂಧದ ಎರಡನೇ ಅಧ್ಯಾಯದಲ್ಲಿ ತಿಳಿಸಲಾಗಿದೆ. ಅಂತಹ ಸ್ಥಿತಿಯಲ್ಲಿ ವಿಶೇಷವಾಗಿ ಜಮಖಂಡಿ ನಗರದಲ್ಲಿ ನಿರ್ಮಾಣವಾದ ಕೆರೆಗಳು ಸಹ ಇವೆಲ್ಲವನ್ನು ಗಮನದಲ್ಲಿಟ್ಟುಕೊಂಡು ನಿರ್ಮಾಣವಾಗಿವೆಯೇ ಎಂಬುದನ್ನು ಸಂಪ್ರಬಂಧದಲ್ಲಿ ತಿಳಿಸಲಾಗಿದೆ.

ನಗರದ ಹೊರಭಾಗದಲ್ಲಿರುವ ಕೆಟ್ಟಿಕೆರೆಯು ಎರಡು ಗುಡ್ಡಗಳ ನಡುವೆ ನಿರ್ಮಾಣವಾಗಿದೆ. ಊರಿನ ಮಧ್ಯೆ ಇರುವ ಲಕ್ಕಣ ಕೆರೆಯು ನಗರದ ಅರ್ಧಭಾಗದ ಜನರಿಗೆ ಉಪಯೋಗವಾಗಿದೆ. ಇದರಿಂದ ನಗರದಲ್ಲಿರುವ ಎಲ್ಲಾ ಕೊಳವೆ ಬಾವಿಗಳಿಗೆ ಅಂತರ್ಜಲ ಮಟ್ಟವನ್ನು ಹೆಚ್ಚಿಸುತ್ತದೆ. ಇದರಿಂದ ನಗರಕ್ಕೆ ನೀರಿನ ಅಭಾವವೇ ಉಂಟಾಗುವುದಿಲ್ಲ. ಹಾಗೂ ನಗರದ ಪೂರ್ವ ಭಾಗದಲ್ಲಿ ಇರುವ ಕುಂಬಾರ ಕೆರೆಯು ನಗರದ ಗುಡಿ ಕೈಗಾರಿಕೆಯನ್ನು ಬೆಳೆಸುವಲ್ಲಿ ಸಹಾಯಕವಾಗಿದೆ. ಕುಂಬಾರ ಕೆರೆಯೆಂದು ಕರೆಯಲ್ಪಡುವ ಇದು ಅವರಿಗೆ ಜೀವನವನ್ನು ರೂಪಿಸಿಕೊಟ್ಟಿದೆ. ಇನ್ನೊಂದು ಪ್ರಮುಖ ಕೆರೆಯೆನಿಸಿಕೊಂಡಿರುವ ಅರಮನೆಯ ಮುಂದಿನ ಬಲಭಾಗಕ್ಕಿರುವ ಆನೆ ಕೆರೆಯು ಅಂದಿನ ಸಂಸ್ಥಾನಿಕರ ಆನೆ, ಒಂಟೆ, ಕುದುರೆಗಳು ತಮ್ಮ ದಾಹವನ್ನು ಹಾಗೂ ದೇಹವನ್ನು ತಂಪುಗೊಳಿಸಿಕೊಳ್ಳಲು ಸಹಾಯಕವಾಗಿದ್ದು. ಈಗಿನ ದಿನಗಳಲ್ಲಿ ಸಂಸ್ಥಾನ ಮೀನಗೊಂಡ ನಂತರ ಅವು ಅಗಸರಿಗೆ ಜೀವನ ನಿರ್ವಹಣೆಗೆ ಈ ಕೆರೆಯು ಉಪಯೋಗವಾಗುತ್ತಿದೆ. ಅರಮನೆಯ ಹಿಂಬಾಗದಲ್ಲಿರುವ ರಾಮತೀರ್ಥ

ಕೆರೆಯು ಜನರಿಗೆ ಯಾವುದೇ ತೆರನಾಗಿ ಇಂದು ಉಪಯೋಗವಾಗುತ್ತಿಲ್ಲವಾದರೂ ಸಹ ಮಳೆಗಾಲದಲ್ಲಿನ ಸುತ್ತಲಿನ ಗುಡ್ಡದಿಂದ ಹರಿದು ಬರುವ ನೀರೆಲ್ಲವೂ ಇಲ್ಲಿಯೇ ಸಂಗ್ರಹಗೊಂಡು ಈ ಕೆರೆ ತುಂಬಿದಾಗ ಇದರಲ್ಲಿನ ಹೆಚ್ಚಾದ ನೀರೆಲ್ಲವೂ ರಾಮತೀರ್ಥ ದೇವಾಲಯದ ಮುಂದಿನ ಪುಷ್ಕರಣಿಗೆ ಬಂದು ತುಂಬುತ್ತಿತ್ತು. ಹಾಗೂ ಮುಂದಿನ ಕೆರೆಗಳಿಗೂ ನೀರು ಹರಿದು ಬರುತ್ತದೆ. ಈ ಕೆರೆಯ ಹಿಂಬಾಗದಲ್ಲಿ ಎರಡು ಕೆರೆಗಳಿದ್ದು ಸರಣಿ ಕೆರೆಗಳ ಶೃಂಖಲೆಯ ಮಾದರಿಯಲ್ಲಿ ನಿರ್ಮಿಸಿದ್ದನ್ನು ನೋಡಿದರೆ, ನಾವು ಅದರ ಕೌಶಲ್ಯವನ್ನು ಮೆಚ್ಚುವಂತಹ ಅಂಶವಾಗಿದೆ. ಇದು ಅಂದಿನ ಅರಮನೆಗೆ ಹಾಗೂ ಅರಮನೆಯ ಎಡಬದಿಗೆ ಇರುವ ಈಜುಕೊಳ್ಳಕ್ಕೆ ಹಾಗೂ ಅಂದಿನ ಸಂಸ್ಥಾನದ ಅರಮನೆಯ ಆವರಣದಲ್ಲಿ ವಾಸವಾಗಿದ್ದ ಜನರಿಗೆ ಕುಡಿಯಲು ಸಹಾಯಕವಾಗಿತ್ತು. ಇನ್ನೂ ಇತ್ತೀಚೆಗೆ ನಿರ್ಮಾಣವಾದ ಕೆರೆಯೆಂದರೆ ಗುಳ್ಳವನ ಕೆರೆ ಎನ್ನಬಹುದು. ಹೀಗೆ ನಗರದಲ್ಲಿ ಕೆರೆಗಳ ಪಾತ್ರವನ್ನು ನೋಡಬಹುದಾಗಿದೆ.

ಈ ಸಂಪ್ರಬಂಧದಲ್ಲಿ ಕೆರೆಗಳು ಹೇಗೆ ಜನರಿಗೆ ಉಪಯೋಗವಾಗಿವೆಂಬುದನ್ನು ನಾವು ಇಲ್ಲಿ ತಿಳಿಯಬಹುದಾಗಿದೆ. ಕೆರೆಗಳು ಜನರಿಗೆ ಸಾಮಾಜಿಕ, ಧಾರ್ಮಿಕ, ರಾಜಕೀಯ, ಸಾಂಸ್ಕೃತಿಕ ಹಾಗೂ ಆರ್ಥಿಕವಾಗಿ ಎಷ್ಟು ಉಪಯೋಗಕಾರಿಯಾಗಿವೆ ಎಂಬುದನ್ನು ಇಲ್ಲಿ ಗಮನಿಸಬೇಕಾದಂತಹ ಮುಖ್ಯ ಅಂಶವಾಗಿದೆ. ಅಷ್ಟೇ ಅಲ್ಲದೇ ಈ ಕೆರೆಗಳು ರಾಜಕೀಯ, ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಹಾಗೂ ಧಾರ್ಮಿಕತೆಗಳಿಂದಾಗಿ ನಿರ್ಮಾಣಗೊಳ್ಳಲ್ಪಟ್ಟವು ಎಂಬುದನ್ನು ತಿಳಿಯಬಹುದು. ಈ ವಿಷಯಕ್ಕೆ ಸಂಬಂಧಿಸಿದ ಸಂಪೂರ್ಣ ಮಾಹಿತಿಯನ್ನು ನಾಲ್ಕನೇ ಅಧ್ಯಾಯದಲ್ಲಿ ತಿಳಿಯಪಡಿಸಲಾಗಿದೆ. ಅರಸರು ತಮ್ಮ ಗೌರವ ಪ್ರತಿಷ್ಠೆಯನ್ನು ಹೆಚ್ಚಿಸಿಕೊಳ್ಳಲು ಕೆರೆಗಳನ್ನು ನಿರ್ಮಿಸುತ್ತಿದ್ದರು. ಅದರ ಪಕ್ಕದಲ್ಲಿಯೇ ದೇವಾಲಯಗಳನ್ನು ನಿರ್ಮಿಸುತ್ತಿದ್ದರು. ತಮ್ಮ ತಾಯಿಯವರ ಹಾಗೂ ತಾವು ಯುದ್ಧದಲ್ಲಿ ಗಳಿಸಿದ ವಿಜಯದ ಸ್ಮರಣಾರ್ಥವಾಗಿ ಕೆರೆಗಳನ್ನು ನಿರ್ಮಿಸುತ್ತಿದ್ದರು. ಹೀಗೆ ನಿರ್ಮಾಣಗೊಂಡ ಕೆರೆಗಳು ಸಮಾಜಕ್ಕೆ ಬೇಕಾದ ಮೂಲ ಸೌಕರ್ಯಗಳನ್ನು ಒದಗಿಸುತ್ತಿದ್ದವು. ಕೆರೆಗಳ ನಿರ್ಮಾಣದಿಂದ ಬಂದ ಕೃಷಿ ಭೂಮಿಯಿಂದ ಹಾಗೂ ಕೆಲವು ಕೆರೆಯ ಮೇಲೆ ಹೇರಿರುವ ಕರಗಳಿಂದ ಜನರ ಹಾಗೂ ನಗರದ ಆರ್ಥಿಕ ಪ್ರಗತಿಯು ಉತ್ತಮಗೊಳ್ಳುತ್ತಿದ್ದವು. ಇಷ್ಟೆಲ್ಲಾ ಉಪಯುಕ್ತಕಾರಿ ಕಾರ್ಯಗಳಿಂದ ಕೆರೆಗಳು ಜನರಿಗೆ ಸಹಾಯಕವಾಗಿದ್ದವು ಎಂಬುದು ಮುಖ್ಯವಾದ ಅಂಶ.

ನದಿಯ ಸೌಕರ್ಯವು ಸಮೃದ್ಧವಾಗಿ ದೊರೆಯುತ್ತಿದ್ದರೂ ಕೆಲವು ಪ್ರದೇಶಗಳಿಗೆ ಅವುಗಳ ಸೌಲಭ್ಯಗಳು ದೊರೆಯದಂತಾಯಿತು. ಆದ್ದರಿಂದ ಕೆರೆಗಳ ನಿರ್ಮಾಣ ಅನಿವಾರ್ಯವಾಯಿತು. ಹೀಗಾಗಿ ಜಮಖಂಡಿ ನಗರಕ್ಕೆ ನದಿಯ ಸೌಕರ್ಯ ಸಂಪೂರ್ಣವಾಗಿ ದೊರೆಯದ ಕಾರಣದಿಂದ ನಗರದಲ್ಲಿ ಕೆರೆಗಳು ನಿರ್ಮಾಣಗೊಂಡವು ಎನ್ನಬಹುದು. ಜಮಖಂಡಿಯ ಉತ್ತರಕ್ಕೆ ಕೃಷ್ಣಾ ನದಿ ಹರಿಯುತ್ತಿದ್ದರೂ ನಗರದಲ್ಲಿ ಕೆರೆಗಳು ನಿರ್ಮಾಣವಾಗಲು ಕಾರಣವನ್ನು ಹುಡುಕುತ್ತಾ ಹೋದರೆ ನಮಗೆ ತಿಳಿಯುವ ಒಂದು ಮುಖ್ಯ ಅಂಶವೆಂದರೆ ನಗರವು ಬೃಹತ ಬಂಡೆಗಲ್ಲಿನಿಂದ ಆವೃತ್ತವಾಗಿದ್ದು ನದಿಯ ಸೌಕರ್ಯವು ಸಮೃದ್ಧವಾಗಿ ದೊರೆಯದಂತಾಯಿತು. ಅಂದಿನ ಸಂಸ್ಥಾನದ ಜನತೆಗೆ ನೀರಿನ ಅಭಾವದ ಕೊರತೆಯನ್ನು ನೀಗಿಸಲು ಸಂಸ್ಥಾನಿಕರಾದ ರಾಮಚಂದ್ರರಾವ್ ಅಪ್ಪಾಸಾಹೇಬರು ಪ್ರಜೆಗಳಿಗೆ ಮೂಲ ಸೌಕರ್ಯಗಳನ್ನು ಒದಗಿಸಲು ಕೆರೆಗಳನ್ನು ನಿರ್ಮಿಸಿದರು. ಹೀಗೆ ಜಮಖಂಡಿ ನಗರದಲ್ಲಿ ಕೆರೆಗಳು ಉಗಮಗೊಂಡವು. ಈ ಕೆರೆಗಳು ಸಂಸ್ಥಾನಿಕರರಿಂದ ನಿರ್ಮಾಣಗೊಂಡು ಅವುಗಳ ಪ್ರಜಾ ಒಳತಿಗಾಗಿ ಬೇಕಾದ ಎಲ್ಲ

ಸೌಕರ್ಯಗಳನ್ನು ಒದಗಿಸುತ್ತಿದ್ದವು. ಕೆರೆಗಳು ನಗರದ ಗುಡಿ ಕೈಗಾರಿಕೆಗೆ, ಮೀನುಗಾರರಿಗೆ ಮತ್ತು ಅಗಸರಿಗೆ ಉದ್ಯೋಗವನ್ನು ಕಲ್ಪಿಸಿಕೊಟ್ಟು ಅವರ ಜೀವನ ಪ್ರಗತಿಗೆ ಸಹಾಯಕವಾಗಿದ್ದನ್ನು ನೋಡಬಹುದು. ಇಷ್ಟೆಲ್ಲಾ ಅವಕಾಶವನ್ನು ಕಲ್ಪಿಸಿಕೊಟ್ಟ ಕೆರೆಗಳು ಬರಿದಾದಾಗ ಅಥವಾ ನೀರಿನ ಸಂಗ್ರಹ ಕಡಿಮೆಯಾದಾಗ ಘಟಪ್ರಭಾ ಎಡದಂತೆ ಕಾಲುವೆಗಳ ಮೂಲಕ ಕೆರೆಗೆ ನೀರು ಪೂರೈಕೆ ಮಾಡುವ ವ್ಯವಸ್ಥೆ ಕಲ್ಪಿಸಕೊಡಲಾಗಿದೆ.

ಹೀಗೆ ಕೆರೆಗಳು ಮಾನವನ ವಿಕಾಸದ ಘಟ್ಟದಲ್ಲಿ ಮಾನವನಿಂದ ಉಗಮಗೊಂಡ ಕೆರೆಗಳೂ ಇಂದಿಗೂ ಪ್ರಚಲಿತವಾಗಿ ಜನತೆಗೆ ಅನುಕೂಲ ಒದಗಿಸುತ್ತಿರುವುದನ್ನು ನಾವು ಹಂಪೆ ಮತ್ತು ಕಮಲಾಪುರದಲ್ಲಿ ಕಾಣಬಹುದು. ಆದರೆ ಕೆಲವು ಕೆರೆಗಳು ನೆಲಸಮಗೊಂಡು ಕಣ್ಮರೆಯಾಗುತ್ತಿದೆ. ಇದಕ್ಕೆ ಕಾರಣಗಳೆಂದರೆ, ಆಧುನಿಕ ಜಗತ್ತಿನ ತಂತ್ರಜ್ಞಾನ ಬೆಳವಣಿಗೆಯಿಂದ ಭಾರಿ ಜಲಾಶಯಗಳು ನಿರ್ಮಾಣಗೊಂಡು ವ್ಯವಸಾಯಕ್ಕೆ, ಜನರಿಗೆ, ಮೀನುಗಾರಿಕೆಗೆ ಉಪಯುಕ್ತವಾಗಿವೆ. ಇಂದು ಕೆರೆಗಳು ಅಪರೂಪಕ್ಕೆ ಎಂಬಂತೆ ಅಲ್ಲೊಂದು, ಇಲ್ಲೊಂದು ನಿರ್ಮಾಣಗೊಳ್ಳುತ್ತಿದೆ. ಇವೆಲ್ಲವುಗಳ ಸಂಪೂರ್ಣ ಮಾಹಿತಿಯನ್ನು ಈ ಸಂಪ್ರಬಂಧದಲ್ಲಿ ತಿಳಿಸುವ ಪ್ರಯತ್ನದೊಂದಿಗೆ, ಮುಂದಿನ ಪೀಳಿಗೆಗೂ ಕೆರೆಗಳ ಮಾಹಿತಿಯನ್ನು ದೊರಕಿಸಿಕೊಡುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ.

ಕೆರೆಗಳಿಗೆ ಪುನರ್ ಜನ್ಮವನ್ನು ಕೊಡುವ ನಿಟ್ಟಿನಲ್ಲಿ ಅದಕ್ಕೆ ಸಂಬಂಧಿಸಿದ ಸರ್ಕಾರ, ಪಂಚಾಯತಿ, ಸಂಘಗಳು, ಅಧಿಕಾರಿಗಳು, ಕೆರೆಗಳನ್ನು ಹೊಂದಿರುವ ನಗರ, ಗ್ರಾಮದ ಜನರು ವಹಿಸಿಬೇಕಾದ ಸುಧಾರಣಾ ಕ್ರಮಗಳನ್ನು ಇಲ್ಲಿ ತಿಳಿಸಲಾಗಿದೆ. ಹಾಗೂ ಕೆರೆಗಳ ಒಂದು ಅಧ್ಯಯನದಿಂದ ಅವುಗಳ ರಕ್ಷಣೆಯ ಹಾಗೂ ಉಳಿಸುವ ಕರ್ತವ್ಯವನ್ನು ತಿಳಿಯಬಹುದಾಗಿದೆ. ಕೆರೆಗಳನ್ನು ರಕ್ಷಿಸುವಲ್ಲಿ ನಾವು ಗಮನ ವಹಿಸದೇ ಹೋದರೆ ಅವುಗಳು ಕಣ್ಮರೆಯಾಗಿ ಮುಂದಿನ ಪೀಳಿಗೆಗೆ ಕೆರೆಗಳ ಪರಿಚಯವೇ ಇಲ್ಲದಂತಾಗಬಹುದು. ಆದ್ದರಿಂದ ಈ ಕೆರೆಗಳ ಉಗಮದಿಂದ ಹಿಡಿದು ವಿವಿಧ ಕಾಲಘಟ್ಟಗಳಲ್ಲಿನ ಕೆರೆಗಳು ಹಾಗೂ ಅವುಗಳ ಸಂರಕ್ಷಣಾ ಕ್ರಮಗಳನ್ನು ತಿಳಿಸುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ. ಮುಖ್ಯವಾಗಿ ಜಮಖಂಡಿಯಂತಹ ನಗರಗಳಲ್ಲಿ ರಚನೆಗೊಂಡ ಕೆರೆಗಳ ಸಂಕ್ಷಿಪ್ತ ಪರಿಚಯವನ್ನು ತಿಳಿಸಿಕೊಡುವ ಪ್ರಯತ್ನವನ್ನು ಈ ಸಂಪ್ರಬಂಧದಲ್ಲಿ ಮಾಡಿದ್ದೇನೆ.

* * *

ಪರಮಾರ್ಶನ ಗ್ರಂಥಗಳು

೧) ವಿಜಯ ನಗರ ಸಾಮ್ರಾಜ್ಯದ ನೀರಾವರಿ ವ್ಯವಸ್ಥೆ – ಸಿ.ಟಿ.ಎಂ. ಕೋಟ್ರಯ್ಯ

೨) ಸುವರ್ಣ ಸಂಭ್ರಮ ಸ್ಮರಣ ಸಂಚಿಕೆ – ೨೦೦೬

೩) ಹಂಪಿ ಪರಿಸರದ ಕೆರೆಗಳು – ಸಿ.ಎಸ್. ವಾಸುದೇವನ್

೪) ಕರ್ನಾಟಕದಲ್ಲಿ ಕೆರೆ ನೀರಾವರಿ – ಜಿ.ಎಸ್.ದೀಕ್ಷಿತ್,
ಜಿ.ಆರ್.ಕುಪ್ಪುಸ್ವಾಮಿ,
ಎಸ್.ಕೆ.ಮೋಹನ,
ಕನ್ನಡ ಅನುವಾದ – ನೀಲತ್ತಹಳ್ಳಿ ಕಸ್ತೂರಿ

೫) ಜಮಖಂಡಿಯ ಇತಿಹಾಸ ದರ್ಪಣ – ಪ್ರೊ. ಎಸ್. ಬಿ. ಮಟೋಳಿ

೬) ಹಂಪಿ ಸಂಪುಟ – ಡಾ॥ ದೇವರಕೊಂಡಾರೆಡ್ಡಿ

೭) ಬಿಜಾಪುರ ಜಿಲ್ಲಾ ಗೆಜೆಟಿಯರ್

ಛಾಯಾ ಚಿತ್ರಗಳು

ಜಮಖಂಡಿಯ ಕೆರೆಗಳು

೧. ಕಟ್ಟಿಕೆರೆ

೨. ಕುಂಬಾರ ಕೆರೆ
(ಮಾದಪ್ಪನ ಕೆರೆ)

೩. ಲಕ್ಕಣ ಕೆರೆ

೪.ಆನೆಕೆರೆ
(ಅಗಸರ ಕೆರೆ)

೫. ರಾಮತೀರ್ಥ ಕೆರೆ

೬. ಗಾಣಗಿತ್ತಿ ಕೆರೆ

೭. ಗುಳ್ಳವನ ಕೆರೆ

೮. ಅರಮನೆಯ ಬಲಬದಿಗಿರುವ ಹೊಂಡ (ಮಾವಿನ ತೋಟಿನಲ್ಲಿರುವುದು)

೯. ರಾಮೇಶ್ವರ ದೇವಾಲಯ ಮುಂದಿರುವ ಪುಷ್ಕರಣಿ

ನಕ್ಷೆಗಳು


ಕರ್ನಾಟಕ

Bagalkot Districts Sub Divisions
Jamkhandi Sub Division
Bagalkot Sub Division
JAMKHANDI
BILGI
MUDHOL
BAGALKOTE
HUNGUND
BADAMI

JAMKHANDI

AKSHARA GRANTHALAYA
ACC.NO. 130294